ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಅರಳುತ್ತಿವೆ ವಿಜಯೇಂದ್ರ ಕ್ಯಾಂಪಿನ ಕನಸುಗಳು
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಮನೆ ಬಿಟ್ಟು ಓಡಿ ಹೋದರೇನಂತೆ?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಮಾತಂದ್ರೆ ಮಾತು

ಪ್ರತಿಪಕ್ಷ ನಾಯಕ ಹೇಗೆ ಕೆಲಸ ಮಾಡಬೇಕು ಎಂಬುವುದು ಆರ್.ಅಶೋಕ್ ಅವರಿಗೆ ಗೊತ್ತಿಲ್ಲ. ಅವರಿಗೆ ಗೊತ್ತಿಲ್ಲ ಎಂದರೆ ಸಿದ್ದರಾಮಯ್ಯ ಅವರ ಬಳಿ ಕೋಚಿಂಗ್ ತೆಗೆದುಕೊಳ್ಳಲಿ. ಪ್ರತಿಪಕ್ಷದ ನಾಯಕನ ಸ್ಥಾನದಲ್ಲಿ ಬಿಜೆಪಿಯಲ್ಲಿ ಬೇರೆ ನಾಯಕ ಗತಿ ಇರಲಿಲ್ಲ ಎನಿಸುತ್ತೆ, ಯಾರೂ ಗತಿ ಇಲ್ಲದ ಕಾರಣ ಅಶೋಕ್ ಅವರನ್ನು ಕೂರಿಸಿದ್ದಾರೆ.

- ಪ್ರದೀಪ್ ಈಶ್ವರ್
ಚಿಕ್ಕಬಳ್ಳಾಪುರ ಶಾಸಕ

ದಾರಿದೀಪೋಕ್ತಿ

ನಮ್ಮ ಜೀವನದಲ್ಲಿ ನೆನಪಿನಲ್ಲಿ ಉಳಿಯುವ ಪಾಠಗಳನ್ನು ನಾವು ಶಾಲಾ, ಕಾಲೇಜುಗಳ ಕ್ಲಾಸ್ ರೂಮುಗಳಲ್ಲಿ ಕಲಿಯುವುದಿಲ್ಲ. ನಾವು ಮಾಡಿದ ಪ್ರಮಾದಗಳಿಂದ ಕಲಿಯುತ್ತೇವೆ. ಜೀವನದಲ್ಲಿ ಪ್ರಮಾದ ಮಾಡಿದಾಗ ಕುಗ್ಗಬೇಡಿ. ಅದರಿಂದ ಪಾಠ ಕಲಿತು, ಇನ್ನಷ್ಟು ಆತ್ಮವಿಶ್ವಾಸದಿಂದ ಮುನ್ನಡೆಯಿರಿ.

ವಕ್ರತುಂಡೋಕ್ತಿ

'ಜೀವನದಲ್ಲಿ ಯಾರನ್ನೂ ನಂಬಬೇಡಿ' ಎಂದು ಹಚ್ಚೆ ಬರೆಯಿಸಿಕೊಂಡವರನ್ನು ನಂಬಬಾರದು. ಕಾರಣ ಹಾಗೆ ಬರೆಯಿಸಿ ಕೊಂಡವರು ಹಚ್ಚೆ ಹಾಕುವವರನ್ನು ನಂಬಿರುತ್ತಾರೆ.

ಮದ್ಯದ ದರ ಇಳಿಕೆಗೆ ತಾತ್ಕಾಲಿಕ ತಡೆ

ಬೆಂಗಳೂರು: ಉತ್ಪಾದನಾ ವೆಚ್ಚದ ಮಾಹಿತಿ ಹಂಚಿಕೊಳ್ಳಲು ಮದ್ಯ ಉತ್ಪಾದಕರು ತಕರಾರು ಎತ್ತಿರುವ ಕಾರಣದಿಂದ ಮದ್ಯದ ದರಗಳ ಇಳಿಕೆ ಪ್ರಕ್ರಿಯೆಯನ್ನು ಅಬಕಾರಿ ಇಲಾಖೆಯು ತಾತ್ಕಾಲಿಕವಾಗಿ ತಡೆ ಹಿಡಿದಿದೆ. ಸೋಮವಾರದಿಂದ ದರ ಇಳಿಕೆ ಜಾರಿಗೆ ಬರಬೇಕಿತ್ತು ನೆರೆಯ ರಾಜ್ಯಗಳಲ್ಲಿನ ಮದ್ಯದ ದರಗಳಿಗೆ ಸಮಾನವಾಗಿ ರಾಜ್ಯದಲ್ಲೂ ಮದ್ಯದ ದರ ಇಳಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಈಗ ಎದುರಾಗಿರುವ ತೊಡಕುಗಳ ಕುರಿತು ಸಿಎಂ ಜತೆ ಗೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರಕ್ಕೆ ಬರಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೈಜೀರಿಯಾದಲ್ಲಿ ಸ್ಫೋಟ: 18 ಸಾವು

ಬಾರ್ನೋ: ನೈಜೀರಿಯಾದ ಈಶಾನ್ಯ ರಾಜ್ಯ ಬಾರ್ನೋದಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟದಲ್ಲಿ ಕನಿಷ್ಠ 18 ಮಂದಿ ಮೃತಪಟ್ಟಿದ್ದು, 48 ಮಂದಿ ಗಾಯಗೊಂಡಿದ್ದಾರೆ. ಮದುವೆ ಸಮಾರಂಭ ನಡೆಯುತ್ತಿದ್ದ ಸಂದರ್ಭ ಶನಿವಾರ 3 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದೆ. ಗ್ವೋಜಾ ಸರಕಾರಿ ಆಸ್ಪತ್ರೆಯಲ್ಲಿ 2ನೇ ಸ್ಫೋಟ ಮತ್ತು ಅಂತ್ಯಸಂಸ್ಕಾರದ ವೇಳೆ 3ನೇ ಸ್ಫೋಟ ಸಂಭವಿಸಿದೆ. ಮೃತರಲ್ಲಿ ಮಹಿಳೆಯರು, ಪುರುಷರು ಮತ್ತು ಮಕ್ಕಳು ಸೇರಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಹೆಚ್ಚುವರಿ 50 ಎಂಎಲ್ ಹಾಲಿನೊಂದಿಗೆ 2 ರೂಪಾಯಿ ಹೆಚ್ಚಳ
ಸುದ್ದಿ



ದೇಶಾದ್ಯಂತ ಮುಗಿಲು ಮುಟ್ಟಿದ ಸಂಭ್ರಮಾಚರಣೆ | ಗೆಲುವಿನ ತಂಡಕ್ಕೆ 125 ಕೋಟಿ ರು. ಉಡುಗೊರೆ ಘೋಷಿಸಿದ ಬಿಸಿಸಿಐ | ಕಿಂಗ್ ಕೊಹ್ಲಿ ಹಿಟ್‌ಮ್ಯಾನ್ ಬಳಿಕ 'ಸರ್' ಜಡೇಜಾ ಕೂಡ ನಿವೃತ್ತಿ ಘೋಷಣೆ

ವಿಜಯದೊಂದಿಗೆ ಚಾಂಪಿಯನ್ಸ್ ವಿದಾಯ

ಮುಂಬೈ: ವಿಶ್ವ ಕ್ರಿಕೆಟ್‌ಗೆ ಹೊಸ ಭಾಷ್ಯ ಬರೆದರೂ ದಶಕಗಳಿಂದ ಐಸಿಸಿ ಟ್ರೋಫಿಗಳ ಬರ ಎದುರಿಸುತ್ತಿದ್ದ ಭಾರತವು ಟಿ20 ವಿಶ್ವಕಪ್‌ನ ಗೆಲುವಿನ ಬೆನ್ನಲ್ಲೇ, ದೇಶಾದ್ಯಂತ ಸಂಭ್ರಮಾಚರಣೆ ಮುಗಿಲು ಮುಟ್ಟಿದೆ. ಈ ಸಂಭ್ರಮಾಚರಣೆಯ ಜತೆಜತೆಗೆ ಸ್ಟಾರ್ ಆಟಗಾರರ ವಿದಾಯ ಪರ್ವ ಮುಂದುವರಿದಿದೆ.

ವೆಸ್ಟ್ ಇಂಡೀಸ್‌ನ ಬರ್ಬೋಡಾಸ್‌ನಲ್ಲಿ ನಡೆದ ಟಿ20 ವಿಶ್ವಕಪ್‌ನ ಅಂತಿಮ ಪಂದ್ಯದಲ್ಲಿ ಭಾರತ ರೋಚಕ ಜಯಸಾಧಿಸುತ್ತಿದ್ದಂತೆ, ದೇಶದ ಹಲವು ಭಾಗದಲ್ಲಿ ಪಟಾಕಿ ಹೊಡೆದು, ರಸ್ತೆಯಲ್ಲಿಯೇ ನೃತ್ಯ ಮಾಡಿ ಕ್ರೀಡಾಭಿಮಾನಿಗಳು ಸಂಭ್ರಮಾಚರಣೆ ನಡೆಸಿದರು. ದೇಶಕ್ಕೆ ಗೆಲುವಿನ ಗಿಫ್ಟ್ ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ ಆಟಗಾರರನ್ನು ಹಾಡಿ ಹೊಗಳಿದರು. ಈ ನಡುವೆ ದೇಶಕ್ಕೆ ವಿಶ್ವಕಪ್ಪಿನ ಗಿಫ್ಟ್ ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಮುಖ್ಯ ತರಬೇತುದಾರ ರಾಹುಲ್ ದ್ರಾವಿಡ್‌ಗೆ ಕೋಚ್ ಆಗಿ ಇದು ಕೊನೆಯ ಪಂದ್ಯವಾಗಿತ್ತು. ಇದೇ ರೀತಿ ನಾಯಕ ರೋಹಿತ್ ಶರ್ಮಾ, ಕಿಂಗ್ ವಿರಾಟ್ ಕೊಹ್ಲಿ ಹಾಗೂ ಸರ್ ರವೀಂದ್ರ ಜಡೇಜಾ ಸಹ ಈ 'ಸಿಹಿ' ಕ್ಷಣದೊಂದಿಗೆ ತಮ್ಮ ಅಂತಾರಾಷ್ಟ್ರೀಯ ಟಿ20 ಪಂದ್ಯಗಳಿಗೆ ನಿವೃತ್ತಿ ಘೋಷಿಸುವ ಮೂಲಕ 'ಗೌರವಯುತ' ವಿದಾಯ ಹೇಳಿದ್ದಾರೆ.

ಬರೋಬ್ಬರಿ 125 ಕೋಟಿ ಬಹುಮಾನ ಘೋಷಣೆ

ಫೈನಲ್ ಪಂದ್ಯಾವಳಿಯಲ್ಲಿ ಭಾರತ ಗೆದ್ದು 24 ತಾಸು ಕಳೆದರೂ ದೇಶದ ಹಲವು ಭಾಗದಲ್ಲಿ ಸಂಭ್ರಮಾಚರಣೆ ಮುಗಿದಿಲ್ಲ. ಈ ನಡುವೆ ಚಾಂಪಿಯನ್ ತಂಡಕ್ಕೆ ಬಿಸಿಸಿಐ ಪ್ರಧಾನ ಕಾರ್ಯದರ್ಶಿ ಜಯ್ ಶಾ ಬರೋಬ್ಬರಿ 125 ಕೋಟಿ ರು. ಬಹುಮಾನವನ್ನು ಘೋಷಿಸಿದ್ದಾರೆ. ಈ ಮೊತ್ತದಲ್ಲಿ ಆಟಗಾರರು, ತರಬೇತುದಾರು ಹಾಗೂ ಸಹಾಯಕ ಸಿಬ್ಬಂದಿಗಳಿಗೆ ಎಷ್ಟು ಹಣ ನೀಡಲಾಗುವುದು ಎನ್ನುವ ಗುಟ್ಟನ್ನು ಬಿಸಿಸಿಐ ಬಿಟ್ಟುಕೊಟ್ಟಿಲ್ಲ.

ಕರೆ ಮಾಡಿ ಶುಭ ಕೋರಿದ ಮೋದಿ

ಶನಿವಾರ ಗೆಲುವಿನ ಸಂಭ್ರಮದಲ್ಲಿದ್ದ ಭಾರತೀಯ ಕ್ರಿಕೆಟ್ ತಂಡದ ಹೆಡ್ ಕೋಚ್ ರಾಹುಲ್ ದ್ರಾವಿಡ್ ಸೇರಿದಂತೆ ಕೆಲ ಪ್ರಮುಖ ಆಟಗಾರರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ಮಾಡಿ ಶುಭಾಶಯ ಕೋರಿದರು. ಪ್ರಮುಖವಾಗಿ ನಿವೃತ್ತಿ ಘೋಷಿಸಿದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ರವೀಂದ್ರ ಜಡೇಜಾ ಅವರೊಂದಿಗೆ ಮಾತನಾಡಿದ ಮೋದಿ, ಶುಭ ಕೋರಿದರು.

ಟಿ20ಗೆ ಜಡ್ಡು ನಿವೃತ್ತಿ

ವಿರಾಟ್ ಕೊಹ್ಲಿ ಪಂದ್ಯ ಮುಗಿಯುತ್ತಿದ್ದಂತೆ ನಿವೃತ್ತಿ ಘೋಷಣೆ ಮಾಡಿದ್ದರು.

ಸುದ್ದಿಗೋಷ್ಠಿಯಲ್ಲಿ ರೋಹಿತ್ ಶರ್ಮಾ ನಿವೃತ್ತಿ ಘೋಷಿಸಿದರೆ, ಪಂದ್ಯ ಮುಗಿದ ಒಂದು ದಿನದ ಬಳಿಕ ಸ್ಟಾರ್ ಆಲ್‌ರೌಂಡರ್ ರವೀಂದ್ರ ಜಡೇಜಾ ಅಂತಾರಾಷ್ಟ್ರೀಯ ಟಿ20ಗೆ ನಿವೃತ್ತಿ ಘೋಷಿಸಿದ್ದಾರೆ. ಆದರೆ ಐಪಿಎಲ್, ಟೆಸ್ಟ್ ಹಾಗೂ ಏಕದಿನ ಪಂದ್ಯಗಳಲ್ಲಿ ಮುಂದುವರಿಯುವುದಾಗಿ ಹೇಳಿದ್ದಾರೆ.

ಹೆಚ್ಚುವರಿ ಡಿಸಿಎಂ, ಸಿಎಂ ಬದಲಾವಣೆ ಬಗ್ಗೆ ಮಾತನಾಡದಂತೆ ಸಂದೇಶ ರವಾನೆ

ಕುರ್ಚಿ ಚರ್ಚೆ ಬೇಡ

- ಅನಗತ್ಯ ಗೊಂದಲ ಸೃಷ್ಟಿಸುವ ಹೇಳಿಕೆ ನೀಡಿದರೆ ಕ್ರಮವಹಿಸಿ
- ಹುದ್ದೆಗಳ ಸೃಷ್ಟಿ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದೆ
- ಸಚಿವರು ತಮ್ಮ ಇಲಾಖೆ ಬಗ್ಗೆ ಮಾತ್ರವೇ ಹೇಳಿಕೆ ನೀಡಬೇಕು

ಬೆಂಗಳೂರು: ಸಿಎಂ ಬದಲಾವಣೆ ಅಥವಾ ಡಿಸಿಎಂ ಹುದ್ದೆ ಸೃಷ್ಟಿಗೆ ಸಂಬಂಧಿಸಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಆಪ್ತರು ಮಾತನಾಡುತ್ತಿರುವುದರಿಂದ, ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ಅನಗತ್ಯ ಗೊಂದಲದ ವಾತಾವರಣ ಸೃಷ್ಟಿಯಾಗುತ್ತಿದ್ದು, ಈ ಬಗ್ಗೆ ಯಾರೂ ಮಾತನಾಡುವಂತಿಲ್ಲ ಎಂದು ಕಾಂಗ್ರೆಸ್ ಹೈಕಮಾಂಡ್ ಸ್ಪಷ್ಟ ಸಂದೇಶ ರವಾನಿಸಿದೆ.

ಮೂರು ದಿನಗಳ ಪ್ರವಾಸದ ಬಳಿಕ ಸಿಎಂ ಸಿದ್ದರಾಮಯ್ಯ ಅವರು ಬೆಂಗಳೂರಿಗೆ ವಾಪಸಾದರೂ, ದೆಹಲಿಯಲ್ಲಿ ವಾಸ್ತವ್ಯ ಹೂಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಭಾನುವಾರ ಬೆಳಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಈ ವೇಳೆ ರಾಜ್ಯ ನಾಯಕರ ಹೇಳಿಕೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಖರ್ಗೆ ಅವರು, ಇನ್ನು ಮುಂದೆ ಯಾರೇ ಹೇಳಿಕೆ ನೀಡಿದರೂ ಅವರ ವಿರುದ್ಧ ಶಿಸ್ತು ಕ್ರಮವಹಿಸಲು ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಡಿಕೆಶಿ ಬಣವಿರಲಿ, ಸಿದ್ದರಾಮಯ್ಯ ಆಪ್ತರಿರಲಿ ಯಾರೇ ಆದರೂ ಡಿಸಿಎಂ ಹುದ್ದೆ ಸೃಷ್ಟಿ, ಸಿಎಂ ಬದಲಾವಣೆ ಬಗ್ಗೆ ಮಾತನಾಡುವಂತಿಲ್ಲ. ಒಂದು ವೇಳೆ ಯಾವುದೇ ಹುದ್ದೆ ಬದಲಾವಣೆ ಅಥವಾ ಹುದ್ದೆ ಸೃಷ್ಟಿ ಬೇಕೆನಿಸಿದರೆ, ಅದನ್ನು ಹೈಕಮಾಂಡ್ ಮಾಡಲಿದೆ. ಶಾಸಕರು, ಸಚಿವರು ಯಾರೇ ಹೇಳಿಕೆ ನೀಡಿದರೂ ನೋಟಿಸ್ ನೀಡುವಂತೆ ಸೂಚನೆ ನೀಡಿದ್ದಾರೆ.ವಿಶೇಷವಾಗಿ ಸಚಿವರು ತಮಗೆ ವಹಿಸಿರುವ ಇಲಾಖೆಗಳ ಜವಾಬ್ದಾರಿಗಳಿಗೆ ಮಾತ್ರವೇ ಮಾಧ್ಯಮಗಳಿಗೆ ಹೇಳಿಕೆ ನೀಡಬೇಕು. ಅದನ್ನು ಹೊರತುಪಡಿಸಿ ಪಕ್ಷದ ವಿಚಾರವಾಗಿ ಅನಗತ್ಯವಾಗಿ ಗೊಂದಲ ಸೃಷ್ಟಿಸಿದರೆ ಕಠಿಣ ಕ್ರಮ ಜರುಗಿಸುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಪಚುನಾವಣೆ ಬಗ್ಗೆ ಚರ್ಚೆ: ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭೇಟಿಯಾದ ಸಮಯದಲ್ಲಿ ಮುಂದಿನ ಕೆಲದಿನದಲ್ಲಿ ಮೂರು ಕ್ಷೇತ್ರಗಳಿಗೆ ಎದುರಾಗಲಿರುವ ಉಪಚುನಾವಣೆಗೆ ಸಂಬಂಧಿ ಸಿದಂತೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಶಿಗ್ಗಾಂವಿ, ಚನ್ನಪಟ್ಟಣ ಹಾಗೂ ಸಂಡೂರು ಮೂರು ಕ್ಷೇತ್ರಗಳಲ್ಲಿ ಚುನಾವಣೆ ನಡೆಯಬೇಕಿದೆ. ಈ ಮೂರರಲ್ಲಿ ಒಂದರಲ್ಲಿ ಮಾತ್ರ ಕಾಂಗ್ರೆಸ್ ಶಾಸಕರಿದ್ದರು. ಆದ್ದರಿಂದ ಇದೀಗ ಮೂರಕ್ಕೆ ಮೂರು ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಸಂಖ್ಯಾಬಲವನ್ನು 138ಕ್ಕೆ ಹೆಚ್ಚಿಸಿಕೊಳ್ಳುವ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಡಿಸಿಎಂ ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭಾನುವಾರ ಬೆಳಗ್ಗೆ ಭೇಟಿಯಾಗಿ ಚರ್ಚೆ ನಡೆಸಿದರು.

ಸಿಎಂ, ಡಿಸಿಎಂ ಜತೆ ಪ್ರತ್ಯೇಕ ಚರ್ಚೆ

ಕಳೆದ ಎರಡು ವಾರಗಳಿಂದ ಹೆಚ್ಚಾಗಿರುವ ಸಿಎಂ, ಡಿಸಿಎಂ ವಿವಾದಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಇಬ್ಬರಿಗೂ ಭಿನ್ನ ನಿಲುವುಗಳಿವೆ. ಆದ್ದರಿಂದ ಈ ಇಬ್ಬರ ಜತೆಗೂ ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆ.ಸಿ.ವೇಣುಗೋಪಾಲ್ ಪ್ರತ್ಯೇಕ ಸಭೆ ನಡೆಸಿದ್ದಾರೆ. ರಾಷ್ಟ್ರಮಟ್ಟದಲ್ಲಿ ಈಗಷ್ಟೇ ಕಾಂಗ್ರೆಸ್ 'ಹೇಳಿಕೊಳ್ಳುವ' ಸೀಟುಗಳನ್ನು ಪಡೆದಿದೆ. ಈ ಹಂತದಲ್ಲಿ ಕುರ್ಚಿ ಗಲಾಟೆ ಶುರುವಾದರೆ, ಪಕ್ಷಕ್ಕೆ ಡ್ಯಾಮೇಜ್ ಆಗಲಿದೆ. ಆದ್ದರಿಂದ ಇಬ್ಬರೊಂದಿಗೆ ಪ್ರತ್ಯೇಕವಾಗಿ ಚರ್ಚೆ ನಡೆಸಿದ ಹೈಕಮಾಂಡ್, ಈ ವಿಷಯದಲ್ಲಿ ನಿಮ್ಮ ನಿಮ್ಮ ಬೆಂಬಲಿಗರಿಗೆ ಮೌನವಾಗಿರಲು ಹೇಳುವಂತೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ರಾಹುಲ್-ಸಿಎಂ ಪ್ರತ್ಯೇಕ ಸಭೆ

ಶನಿವಾರ ರಾತ್ರಿ ರಾಹುಲ್ ಗಾಂಧಿ ಅವರನ್ನು ಭೇಟಿ ಯಾದ ಸಿಎಂ ಸಿಎಂ ಜತೆ ಹಲವು ನಾಯಕರಿದ್ದರು. ಆದರೆ ಸಿಎಂ ಜತೆ ಸುಮಾರು 10ರಿಂದ 15 ನಿಮಿಷ ಪ್ರತ್ಯೇಕ ಸಭೆ ನಡೆಸಿರುವ ರಾಹುಲ್, ರಾಜ್ಯ ರಾಜಕೀಯದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ. ಈ ವೇಳೆ ಸಿಎಂ ಬದಲಾವಣೆಯ ಕೂಗಿನ ಪರವಾಗಿರುವ ನಾಯಕರ ವಿರುದ್ಧ ಸಿಎಂ ಅಸಮಾಧಾನ ವ್ಯಕ್ತಪಡಿಸಿದ್ದು, ಈ ರೀತಿ ಮಾಡಿದರೆ ಆಡಳಿತ ನಡೆಸುದು ಕಷ್ಟವಾಗುತ್ತದೆ ಎಂದು ಬೇಸರ

ಕರ್ನಾಟಕದಲ್ಲಿ ಕನ್ನಡಿಗರಿಗೇ ಉದ್ಯೋಗ ಎಂಬ ಘೋಷಣೆಯೊಂದಿಗೆ ಚಳವಳಿ

ಕರುನಾಡಲ್ಲಿ ಕರವೇ ಕಹಳೆ ಇಂದು

ಬೆಂಗಳೂರು: ಕನ್ನಡಿಗರಿಗೆ ಉದ್ಯೋಗ ಕ್ಕಾಗಿ ಆಗ್ರಹಿಸಿ ರಾಜ್ಯಾದ್ಯಂತ ಚಳವ ಳಿಗೆ ಕರ್ನಾಟಕ ರಕ್ಷಣಾ ವೇದಿಕೆ ಕರೆ ನೀಡಿದ್ದು, ಬೃಹತ್ ಪ್ರತಿಭಟನೆಗೆ ರಾಜಧಾನಿ ಬೆಂಗಳೂರು ಸೇರಿದಂತೆ ಎಲ್ಲ ಜಿಲ್ಲಾ ಕೇಂದ್ರಗಳು ಸಾಕ್ಷಿಯಾಗಲಿವೆ.

ಕನ್ನಡಿಗರಿಗೆ ಖಾಸಗಿ ವಲಯದಲ್ಲಿ ಕಡ್ಡಾಯ ಉದ್ಯೋಗ ಮೀಸಲು ಕಲ್ಪಿಸಲು ಸರೋಜಿನಿ ಮಹಿಷಿ ವರದಿ ಜಾರಿಗೆ ಆಗ್ರಹಿಸಿ ಕರವೇ ಅಧ್ಯಕ್ಷ ಟಿ.ಎ. ನಾರಾಯಣಗೌಡ ನೇತೃತ್ವದಲ್ಲಿ ಬೃಹತ್ ಹೋರಾಟಕ್ಕೆ ಕರೆ ನೀಡಲಾಗಿದೆ. ಸೋಮವಾರ ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆವರೆಗೂ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಲಿದ್ದು, ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ಏಕಕಾಲದಲ್ಲಿ ಪ್ರತಿಭಟನೆ ಗಳು ಜರುಗಲಿವೆ. ಇತರೆ ರಾಜ್ಯಗಳಿಂದ ಉದ್ಯೋಗ ಅರಸಿ ಬೆಂಗಳೂರಿ ನತ್ತ ವಲಸೆ ಬರುವವರ ಸಂಖ್ಯೆ ಹೆಚ್ಚಳವಾಗಿದ್ದು, ಇದರಿಂದ ಖಾಸಗಿ ವಲಯದಲ್ಲಿ ಕನ್ನಡೇತರರಿಗೆ ಹೆಚ್ಚಿನ ಉದ್ಯೋಗ ಅವಕಾಶ ನೀಡಲಾಗುತ್ತಿದೆ. ಹೀಗಾಗಿ ಕನ್ನಡಿಗರಿಗೆ ಅನ್ಯಾಯ ವಾಗುತ್ತಿದೆ. ಖಾಸಗಿ ವಲಯದಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳು ಶೇ.100 ರಷ್ಟು ಕನ್ನಡಿಗರಿಗೆ ಮೀಸಲು ನೀಡಬೇಕು. ಇತರೆ ಗ್ರೂಪ್‌ಗಳಲ್ಲಿ ಶೇ.80 ರಷ್ಟು ಮೀಸಲು ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಗುತ್ತದೆ.

ಪ್ರಮುಖ ಬೇಡಿಕೆಗಳು → 4

'ಕರ್ನಾಟಕದ ನೆಲದಲ್ಲಿ ಕನ್ನಡಿಗರಿಗೇ ಉದ್ಯೋಗ' ಎಂಬ ಘೋಷಣೆಯೊಂದಿಗೆ ಕರವೇ ವತಿಯಿಂದ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಜುಲೈ 1ರಂದು ಬೃಹತ್ ಧರಣಿ ಸತ್ಯಾಗ್ರಹ ನಡೆಸಲಿದ್ದು, ಸಾವಿರಾರು ಕರವೇ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕರ್ತರನ್ನು ಹತ್ತಿಕ್ಕುವ ಕೆಲಸ ಪೊಲೀಸ್ ಇಲಾಖೆ ಮಾಡಿದರೆ ಮತ್ತೊಂದು ಡಿಸೆಂಬರ್ 27 ಆಗುತ್ತದೆ.

- ಟಿ.ಎ.ನಾರಾಯಣಗೌಡ ಕರವೇ ಅಧ್ಯಕ್ಷ

50,000 ಕಾರ್ಯಕರ್ತರು ಭಾಗಿಯಾಗುವ ಸಾಧ್ಯತೆ

ಡಾ.ಸರೋಜಿನಿ ಮಹಿಷಿ ವರದಿ ಜಾರಿಗೆ ಸರಕಾರದ ಮೇಲೆ ಒತ್ತಡ ಹೆಚ್ಚಾಗಿದ್ದು, ಸೋಮವಾರ ಫ್ರೀಡಂಪಾರ್ಕಿನಲ್ಲಿ ಕರವೇ ನಡೆಸುವ ಪ್ರತಿಭಟನೆಯಲ್ಲಿ 50 ಸಾವಿರ ಕಾರ್ಯಕರ್ತರು ಭಾಗಿ ಆಗುವ ಸಾಧ್ಯತೆ ಇದೆ. ನಗರದ 28 ವಿಧಾನಸಭಾ ಕ್ಷೇತ್ರಗಳಿಂದ ಮೆರವಣಿಗೆ ಮೂಲಕ ಕಾರ್ಯಕರ್ತರು ಆಗಮಿಸಲಿದ್ದಾರೆ.

ಬೆಂಬಲ ವ್ಯಕ್ತಪಡಿಸಿದ ಹಲವು ಸಂಘಟನೆಗಳು

ಕರವೇ ಹೋರಾಟಕ್ಕೆ ಹಲವು ಸಂಘಟನೆ, ಸಂಘ-ಸಂಸ್ಥೆಗಳು ಬೆಂಬಲ ನೀಡಿವೆ. ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್ ಬೆಂಬಲ ಘೋಷಣೆ ಮಾಡಿದ್ದು, ಕೈಗಾರಿಕಾ ವಲಯದಲ್ಲಿ ಕೆಲಸ ಮಾಡುತ್ತಿರುವ ಕನ್ನಡ ನೌಕರರು, ರೈತ ಸಂಘದ ಪದಾಧಿಕಾರಿಗಳು ಹಾಗೂ ಮುಖಂಡರು, ಚಿತ್ರರಂಗದ ಹಲವು ಮಂದಿ ನಟ ಹಾಗೂ ತಂತ್ರಜ್ಞರಿಂದಲೂ ಬೆಂಬಲ ವ್ಯಕ್ತವಾಗಿದೆ. ನಟ ನೆನಪಿರಲಿ ಪ್ರೇಮ್, ಚಿತ್ರ ಸಾಹಿತಿ ವಿ ನಾಗೇಂದ್ರ ಪ್ರಸಾದ್, ನಿರ್ದೇಶಕ ರವಿ ಶ್ರೀವತ್ಸ, ಸಾಹಿತಿಗಳಾದ ದೊಡ್ಡ ರಂಗೇಗೌಡ, ಮನು ಬಳಿಗಾರ್ ಸೇರಿ ಹಲವರು ಬೆಂಬಲ ವ್ಯಕ್ತಪಡಿಸಿದ್ದಾರೆ.



ಬೆಂಗಳೂರಿನ ಶಿವಾನಂದ್ ಸರ್ಕಲ್‌ನಲ್ಲಿ ನಿರ್ಮಾಣವಾಗಿರುವ ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು. ನಟರಾದ ಶಿವರಾಜ್‌ಕುಮಾರ್, ಸಾಧುಕೋಕಿಲ, ರಾಜ್ಯಸಭಾ ಸದಸ್ಯ ಜಗ್ಗೇಶ್, ನಿರ್ಮಾಪಕ ಸಾ.ರಾ.ಗೋವಿಂದು ಸೇರಿದಂತೆ ಹಲವರಿದ್ದರು.

ರಾಜ್ಯ ಬಿಜೆಪಿ ಕಾರ್ಯಕಾರಿಣಿ 4ಕ್ಕೆ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧ ಹೋರಾಟ ಮುಂದುವರಿಸುವ ಹಾಗೂ ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧಿಕಾರದ ಗದ್ದುಗೆ ಏರಿದ ಹಿನ್ನಲೆಯಲ್ಲಿ ಜು.4ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ಕರೆದಿದೆ. ಮೊದಲ ನಿರ್ಣಯದಲ್ಲಿ ಮೋದಿ ಸರಕಾರಕ್ಕೆ ಅಭಿನಂದನೆ ಸಲ್ಲಿಸಿದರೆ, ಎರಡನೇ ನಿರ್ಣಯದಲ್ಲಿ ರಾಜ್ಯ ಸರಕಾರದ ವೈಫಲ್ಯ, ಪಕ್ಷದ ಚಟುವಟಿಕೆ ಬಗ್ಗೆ ಚರ್ಚೆಯಾಗಲಿದೆ ಎಂದು ತಿಳಿದುಬಂದಿದೆ.

ಜೋ ಬೈಡೆನ್ ಬದಲು ಮಿಶೆಲ್ ಅಮೆರಿಕ ಅಧ್ಯಕ್ಷೀಯ ಅಭ್ಯರ್ಥಿ?

ವಾಷಿಂಗ್ಟನ್: ವರ್ಷಾಂತ್ಯದ ಅಮೆರಿಕ ಅಧ್ಯಕ್ಷೀಯ ಚುನಾವಣೆ ರಂಗೇರುತ್ತಿದ್ದು, ಸಿಎನ್ಎನ್ ಸುದ್ದಿಸಂಸ್ಥೆ ಶುಕ್ರವಾರ ಆಯೋಜಿಸಿದ್ದ ಚರ್ಚಾಕೂಟದಲ್ಲಿ ರಿಪಬ್ಲಿಕ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಪ್ರಶ್ನೆಗಳಿಗೆ ಉತ್ತರಿಸಲು ಡೆಮಾಕ್ರಟಿಕ್ ಅಭ್ಯರ್ಥಿ ಜೋ ಬೈಡೆನ್ ತಡವರಿಸಿದರು. ಇದು ಭಾರೀ ಚರ್ಚೆಗೆ ಕಾರಣವಾ ಗಿದೆ. ಹಾಗಾಗಿ, ಬೈಡೆನ್ ಬದಲು ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ಪತ್ನಿ ಮಿಶೆಲ್ ಒಬಾಮಾರನ್ನು ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಸಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆ: ₹26,565 ಕೋಟಿ ಒಳಹರಿವು

ದೆಹಲಿ: ಷೇರುಪೇಟೆಗಳಲ್ಲಿ ಜೂನ್‌ನಲ್ಲಿ ಒಟ್ಟು ₹26,565 ಕೋಟಿ ವಿದೇಶಿ ಬಂಡವಾಳ ಹೂಡಿಕೆಯಾಗಿದೆ. 2 ತಿಂಗಳಿನಲ್ಲಿ ವಿದೇಶಿ ಬಂಡವಾಳ ಹೂಡಿಕೆ ಕಡಿಮೆಯಾಗಿತ್ತು. ರಾಜಕೀಯ ಸ್ಥಿರತೆ, ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿರುವುದರಿಂದ ಹೂಡಿಕೆ ಪ್ರಮಾಣದಲ್ಲಿ ಏರಿಕೆಯಾಗಿದೆ ಎನ್ನಲಾಗಿದೆ. ಲೋಕಸಭಾ ಚುನಾವಣೆ ಫಲಿತಾಂಶದ ಅನಿಶ್ಚಿತತೆಯಿಂದಾಗಿ ವಿದೇಶಿ ಹೂಡಿಕೆದಾರರು ಏಪ್ರಿಲ್‌ನಲ್ಲಿ ₹8,700 ಕೋಟಿ ಹಾಗೂ ₹25,586 ಕೋಟಿ ಬಂಡವಾಳ ಹಿಂಪಡೆದಿದ್ದರು.

ಆಂಧ್ರಕ್ಕೆ ಹೆಚ್ಚಿನ ಅನುದಾನ ನೀಡಲು ಟಿಡಿಪಿ ಬೇಡಿಕೆ

ದೆಹಲಿ: ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡುವಂತೆ ಜೆಡಿಯು ಪಟ್ಟು ಹಿಡಿದಿದ್ದರೆ, ಆಂಧ್ರಕ್ಕೆ ಹೆಚ್ಚು ಅನುದಾನ ಕೋರಿ ಟಿಡಿಪಿ ಒತ್ತಾಯಿಸಿದೆ. ರಾಜ್ಯಕ್ಕೆ ಹೆಚ್ಚಿನ ನೆರವು ಪಡೆಯುವುದು, ರಾಜ್ಯದ ಅಭಿವೃದ್ಧಿಯಷ್ಟೇ ಮುಖ್ಯ. ಅಭಿವೃದ್ಧಿ ಖಚಿತಪಡಿಸಿಕೊಳ್ಳಲು ಎನ್‌ಡಿಎ ಜತೆಗೂಡಿ ಕೆಲಸ ಮಾಡುತ್ತೇವೆ. ಆಂಧ್ರ ಅಭಿವೃದ್ಧಿಗೆ ಕೇಂದ್ರದಿಂದ ಸಾಧ್ಯವಾದಷ್ಟು ಹೆಚ್ಚು ಹಣ ಪಡೆಯಲು ಪಕ್ಷ ಯತ್ನಿಸುತ್ತದೆ ಎಂದು ಟಿಡಿಪಿ ಸಂಸದೀಯ ನಾಯಕ ಕೃಷ್ಣ ದೇವ ರಾಯಲು ಹೇಳಿದ್ದಾರೆ.

ಭಾರತದಲ್ಲಿ ಶಿಕ್ಷಣಕ್ಕಿಂತಲೂ 2 ಪಟ್ಟು ಮದುವೆಗೆ ಖರ್ಚು

ದೆಹಲಿ: ಭಾರತದಲ್ಲಿ ಪ್ರಾಥಮಿಕದಿಂದ ಪದವಿವರೆಗೆ ವಧು ಅಥವಾ ವರನ ಶಿಕ್ಷಣಕ್ಕೆ ವ್ಯಯಿಸುವ ಖರ್ಚಿಗಿಂತಲೂ ವಿವಾಹದ ವೆಚ್ಚವು ಎರಡು ಪಟ್ಟು ಹೆಚ್ಚಿದೆ ಎಂದು ಜಾಗತಿಕ ಬ್ರೋಕರೇಜ್ ಸಂಸ್ಥೆ ಜೆಫರಿಸ್ ವರದಿ ತಿಳಿಸಿದೆ. ಮದುವೆಯೊಂದರ ಸರಾಸರಿ ವೆಚ್ಚ ₹12.50 ಲಕ್ಷ ಆಗಿದೆ. ವಿವಾಹ ಮಾರುಕಟ್ಟೆ ಮೌಲ್ಯವು ಅಂದಾಜು ₹10 ಲಕ್ಷ ಕೋಟಿಯಷ್ಟಿದೆ. ವಾರ್ಷಿಕ 80 ಲಕ್ಷದಿಂದ 1 ಕೋಟಿ ಮದುವೆಗಳು ನಡೆಯುತ್ತವೆ. ಚೀನಾ, ಅಮೆರಿಕದಲ್ಲಿನ ಮದುವೆಗಳಿಂತಲೂ ಹೆಚ್ಚಿದೆ ಎಂದು ಹೇಳಿದೆ.

ಮನ್ ಕಿ ಬಾತ್ 111ನೇ ಸಂಚಿಕೆಯಲ್ಲಿ ಮಾತನಾಡಿದ ಪ್ರಧಾನಿ

ಪ್ರಜಾಪ್ರಭುತ್ವದಲ್ಲಿ ನಂಬಿಕೆಗೆ ಕೃತಜ್ಞತೆ

ದೆಹಲಿ: ಮೂರನೇ ಬಾರಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊಲದ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಲವು ವಿಚಾರಗಳನ್ನು ಹಂಚಿಕೊಂಡ ಅವರು, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಬೆಂಬಲ ನೀಡಿದ ದೇಶದ ಎಲ್ಲ ಜನರಿಗೆ ಕೃತಜ್ಞತೆ ಸಲ್ಲಿಸಿದರು. ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಕೇರಳದ ಪಾಲಕ್ಕಾಡ್‌ನಲ್ಲಿ ಆದಿವಾಸಿ ಮಹಿಳೆಯರು ತಯಾರಿಸುವ ಛತ್ರಿಗಳ ಬಗ್ಗೆಯೂ ಮಾತನಾಡಿದರು. ಒಲಿಂಪಿಕ್ ಕ್ರೀಡಾಕೂಟದಲ್ಲಿ ಭಾರತೀಯ ಆಟಗಾರರನ್ನು ಹುರಿದುಂಬಿಸಬೇಕು ಎಂದು ಭಾರತೀಯ ಆಟಗಾರರಿಗೆ ಪ್ರಧಾನಿಗಳು ಶುಭಾಶಯಗಳನ್ನು ತಿಳಿಸಿದರು. ಇದೇ ವೇಳೆ ಲೋಕಸಭಾ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಿಕೊಟ್ಟ ಎಲ್ಲ ಭಾರತೀಯರಿಗೂ ಧನ್ಯವಾದಗಳನ್ನು ತಿಳಿಸಿದರು. 65 ಕೋಟಿ ಜನರು ಮತ ಚಲಾಯಿಸಿದ ಜಗತ್ತಿನ ಯಾವುದೇ ದೇಶದಲ್ಲಿ ಇಷ್ಟು ದೊಡ್ಡ ಚುನಾವಣೆ ನಡೆದಿಲ್ಲ. ನಾನು ಚುನಾವಣಾ ಆಯೋಗ ಮತ್ತು ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ಪ್ರತಿಯೊಬ್ಬರನ್ನು ಅಭಿನಂದಿಸುತ್ತೇನೆ ಎಂದರು.

ಮನ್ ಕಿ ಬಾತ್ ಮುಖ್ಯಾಂಶಗಳು

- ಆಕಾಶವಾಣಿಯ ಸಂಸ್ಕೃತ ಸುದ್ದಿಯು ಇಂದಿಗೆ 50 ವರ್ಷ ಪೂರೈಸಿದೆ. ಇದು ಅನೇಕ ಜನರನ್ನು ಸಂಸ್ಕೃತದ ಜತೆ ಬೆಸೆದಿದೆ. ಬೆಂಗಳೂರಿನಲ್ಲಿ ಪಾರ್ಕ್ ಒಂದಿದೆ- ಕಬ್ಬನ್ ಪಾರ್ಕ್. ಇಲ್ಲಿ ಜನರು ಪಾರ್ಕ್‌ನಲ್ಲಿ ಹೊಸ ಸಂಪ್ರದಾಯ ಆರಂಭಿಸಿದ್ದಾರೆ. ದಿನದಲ್ಲಿ ಒಂದು ದಿನ, ಪ್ರತಿ ಭಾನುವಾರ ಯುವಜನರು ಮತ್ತು ವಯಸ್ಕರು ಸಂಸ್ಕೃತದಲ್ಲಿ ಮಾತನಾಡುತ್ತಿದ್ದಾರೆ. ಇಷ್ಟೇ ಅಲ್ಲದೆ, ಇಲ್ಲಿ ಅನೇಕ ಸಂಸ್ಕೃತ ಸಂವಾದಗಳನ್ನು ನಡೆಸಲಾಗಿದೆ. ಇದಕ್ಕೆ 'ಸಂಸ್ಕೃತ ವಾರಾಂತ್ಯ' ಎಂದು ಹೆಸರಿಸಲಾಗಿದೆ.

→ 4

ಭಾರತ ಸೇನೆ ಮುಖ್ಯಸ್ಥರಾಗಿ ಲೆ.ಜ.ಉಪೇಂದ್ರ ಪದಗ್ರಹಣ

ಅಂದು ಬಾಲ್ಯದ ಸಹಪಾಠಿಗಳು ಇಂದು ಎರಡು ರಕ್ಷಣಾಪಡೆಗಳ ಮುಖ್ಯಸ್ಥರು

ದೆಹಲಿ: ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಭಾರತೀಯ ಸೇನೆ ಮುಖ್ಯಸ್ಥರಾಗಿ ಭಾನುವಾರ ಅಧಿಕಾರ ವಹಿಸಿಕೊಂಡರು. 27 ತಿಂಗಳು ಸೇನಾಪಡೆ ಮುಖ್ಯಸ್ಥ ರಾಗಿದ್ದ ಮನೋಜ್ ಪಾಂಡೆ ಅವರ ನಿವೃತ್ತಿ ಬಳಿಕ ದ್ವಿವೇದಿ ಅಧಿಕಾರ ಸ್ವೀಕರಿಸಿದ್ದಾರೆ. ಇದಕ್ಕೂ ಮುನ್ನ ಫೆ.19ರಿಂದ ದ್ವಿವೇದಿ ಸೇನೆಯ ಉಪ ಮುಖ್ಯಸ್ಥರಾಗಿದ್ದರು. ದ್ವಿವೇದಿ ಚೀನಾ, ಪಾಕಿಸ್ತಾನ ಗಡಿ ಭಾಗಗಳಲ್ಲಿನ ಕಾರ್ಯಾಚರಣೆಗಳಲ್ಲಿ ಅಪಾರ ಅನುಭವ ಹೊಂದಿದ್ದಾರೆ.

2022-24ರಲ್ಲಿ ಉತ್ತರ ಕಮಾಂಡ್ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿದ್ದರು. ದ್ವಿವೇದಿ 18ನೇ ಜಮ್ಮು-ಕಾಶ್ಮೀರ ರೈಫಲ್ಸ್ ರೆಜಿಮೆಂಟ್ ಮತ್ತು 26ನೇ ವಲಯ ಅಸ್ಸಾಂ ರೈಫಲ್ಸ್ ಬ್ರಿಗೇಡ್ ಮುಖ್ಯಸ್ಥ, ಅಸ್ಸಾಂ ರೈಫಲ್ಸ್ (ಪೂರ್ವ) ಮತ್ತು 9ನೇ ಕಾರ್ಪ್ಸ್ ಇನ್ಸ್ಪೆಕ್ಟರ್ ಜನರಲ್ ಆಗಿ ಕಾರ್ಯನಿರ್ವಹಿಸಿದ್ದಾರೆ.



ಅಡ್ಮಿರಲ್ ತ್ರಿಪಾಠಿ ಮೇ 1ಕ್ಕೆ ಭಾರತೀಯ ನೌಕಾಪಡೆ ಕಮಾಂಡ್, ಲೆ.ಜ.ದ್ವಿವೇದಿ ಜೂ.30 ಸೇನಾಪಡೆ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ದೇಶದ ಸೇನಾ ಇತಿಹಾಸದಲ್ಲೇ ಮೊದಲ ಬಾರಿಗೆ ಸಹಪಾಠಿಗಳೇ ನೌಕಾಪಡೆ ಮತ್ತು ಸೇನಾಪಡೆ ಮುಖ್ಯಸ್ಥರಾಗಿದ್ದಾರೆ. ಅದ್ಭುತ ವಿದ್ಯಾರ್ಥಿಗಳು ಅತ್ಯುನ್ನತ ಹುದ್ದೆ ಅಲಂಕರಿಸಿದ್ದಾರೆ. 50 ವರ್ಷಗಳ ನಂತರ ಜತೆಯಾಗಿ ಕಾರ್ಯ ನಿರ್ವಹಿಸಲಿದ್ದಾರೆ.

- ಎ.ಭರತ್ ಭೂಷಣ್ ಬಾಬು, ರಕ್ಷಣಾ ಸಚಿವರ ವಕ್ತಾರ

ಸೈನಿಕ ಶಾಲೆ ಹುಡುಗರು

ಆಸಕ್ತಿದಾಯಕ ಸಂಗತಿ ಏನೆಂದರೆ ಭಾರತೀಯ ಸೇನೆ ಮತ್ತು ನೌಕಾಪಡೆ ಮುಖ್ಯಸ್ಥರು ಸ್ನೇಹಿತರು, ಶಾಲಾ ದಿನಗಳಿಂದಲೂ ಸಹಪಾಠಿಗಳು. 70ರ ದಶಕದಲ್ಲಿ ಮಧ್ಯಪ್ರದೇಶದ ರೇವಾ ಸೈನಿಕ ಶಾಲೆಯಲ್ಲಿ 5ಎ ತರಗತಿಯಲ್ಲಿದ್ದರು. ಲೆ.ಜ. ದ್ವಿವೇದಿ ಶಾಲಾ ದಿನಗಳ ರೋಲ್ ನಂ.931, ಅಡ್ಮಿರಲ್ ತ್ರಿಪಾಠಿ ರೋಲ್ ನಂ.938. ಬಾಲ್ಯ ಸ್ನೇಹಿತರು ಜತೆಯಾಗಿಯೇ ವೃತ್ತಿಜೀವನ ಆರಂಭಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಖೈದಿ ನಂ.6106 ಸ್ಟಿಕ್ಕರ್ ಅಂಟಿಸಿದವರಿಗೆ ಸಂಕಷ್ಟ

ಬೆಂಗಳೂರು: ಅಭಿಮಾನಿಗಳ ಗಾಡಿಗಳಲ್ಲಿ ದರ್ಶನ್ ಖೈದಿ ನಂಬರ್ 6106 ಸ್ಟಿಕ್ಕರ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ. ದರ್ಶನ್ ಅಭಿಮಾನಿಗಳಿಗೆ ಕಾನೂನು ಕಂಟಕ ಎದುರಾಗಿದ್ದು, ನಿಯಮ ಉಲ್ಲಂಘನೆ ಮಾಡಿದರೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆಯನ್ನು ಬೆಂಗಳೂರು ಸಂಚಾರ ಪೊಲೀಸರು ನೀಡಿದ್ದಾರೆ. ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಜೈಲುಪಾಲಾಗಿದ್ದಾರೆ. ದರ್ಶನ್‌ಗೆ ಜೈಲಿನಲ್ಲಿ ಖೈದಿ ನಂಬರ್ 6106 ಅನ್ನು ನೀಡಲಾಗಿದೆ. ಈ ನಂಬರ್ ಅನ್ನೇ ಸ್ಟಿಕ್ಕರ್ ಮಾಡಿ ಕೊಂಡಿರುವ ಅಭಿಮಾನಿಗಳು ತಮ್ಮ ವಾಹನಗಳಿಗೆ ಅಂಟಿಸಿಕೊಳ್ಳುತ್ತಿದ್ದಾರೆ. ಇದೀಗ ನಂಬರ್ ಪ್ಲೇಟ್ ಮರೆಮಾಚಿ ಸ್ಟಿಕ್ಕರ್ ಅಂಟಿಸಿದವರಿಗೆ ಸಂಕಷ್ಟ ಎದುರಾಗಿದೆ. ಯಾವುದೇ ಕಾರಣಕ್ಕೂ ವಾಹನಗಳ ನಂಬರ್ ಪ್ಲೇಟ್ ಮರೆಮಾಚುವಂತಿಲ್ಲ. ನಂಬರ್ ಪ್ಲೇಟ್ ಇರುವ ಕಡೆ ಸ್ಟಿಕ್ಕರ್‌ಗಳನ್ನು ಅಂಟಿಸುವಂತಿಲ್ಲ. ಈ ರೀತಿ ಮಾಡಿದರೆ ಸಂಚಾರಿ ನಿಯಮ ಉಲ್ಲಂಘನೆ ಮಾಡಿದಂತೆ ಆಗುತ್ತದೆ. ಖೈದಿ ನಂಬರ್ ಸ್ಟಿಕ್ಕರ್ ಅಂಟಿಸಿ ನಂಬರ್ ಪ್ಲೇಟ್ ಮರೆ ಮಾಚಿರುವವರ ವಿರುದ್ಧ ಪ್ರಕರಣ ದಾಖಲಿಸಲು ಟ್ರಾಫಿಕ್ ಪೊಲೀಸರು ಮುಂದಾಗಿದ್ದಾರೆ. ಡಿಫೆಕ್ಟಿವ್ ನಂಬರ್ ಪ್ಲೇಟ್ ಅಡಿ ಕೇಸ್ ದಾಖಲಾಗುತ್ತದೆ ಎಂದು ಪೊಲೀಸರು ಎಚ್ಚರಿಸಿದ್ದಾರೆ.

ಶಾಸ್ತ್ರೀಯ ಗಾಯಕರಿಗೆ ರಾಷ್ಟ್ರೀಯ ಸ್ಪರ್ಧೆ

ಬೆಂಗಳೂರು: ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರ, ಪದ್ಮಭೂಷಣ ಪಂಡಿತ್ ಸಿ.ಆರ್.ವ್ಯಾಸ್ ಅವರ ಜನ್ಮಶತಮಾನೋತ್ಸವ ಹಿನ್ನೆಲೆಯಲ್ಲಿ ಗ್ರೇಸ್ ಫೌಂಡೇಶನ್ ಗುಣಿಜಾನ್ ಬಂದಿಶ್ ಪ್ರತಿಯೋಗಿತ ಎಂಬ ಅಖಿಲ ಭಾರತ ಶಾಸ್ತ್ರೀಯ ಗಾಯನ ಸ್ಪರ್ಧೆ ಹಮ್ಮಿಕೊಂಡಿದೆ. ಪಂಡಿತ್ ಸಿ.ಆರ್.ವ್ಯಾಸ್ ಪುತ್ರ ಶಶಿ ವ್ಯಾಸ್ ಪ್ರತಿಭಾ ಶೋಧ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. 16 ರಿಂದ 30 ವರ್ಷದೊಳಗಿನ ವಯಸ್ಸಿನ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಸಾಧನೆ ಮಾಡಲು ಬಯಸುವವರಿಗೆ ಈ ಸ್ಪರ್ಧೆಯು ಒಂದು ವೇದಿಕೆಯಾಗಲಿದೆ. ಅಭ್ಯರ್ಥಿಗಳು ಪುರುಷ ಮತ್ತು ಮಹಿಳೆ ಎಂಬ ವಿಭಾಗದಲ್ಲಿ ಸ್ಪರ್ಧಿಸಲಿದ್ದು, ಗಣ್ಯ ಕಲಾವಿದರು ರಚಿಸಿದ ಬಂದಿಷ್‌ಗಳನ್ನು ಪ್ರಸ್ತುತಪಡಿಸಲಿದ್ದಾರೆ. ಪ್ರತಿ ವಿಭಾಗದಲ್ಲಿ ಗೆಲ್ಲುವವರಿಗೆ ನಗದು ಬಹುಮಾನ ನೀಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಹಾಗಿ https://www.gunijaanbandish.in. ನೊಂದಿಗೆ ಜು.15ರಂದು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ 8484012431 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಕಸಾಪ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕಸಾಪವು 2024-25ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿದೆ. 2024ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಮೇಲ್ಕಂಡ ಪರೀಕ್ಷೆಗಳಿಗೆ ಅರ್ಜಿಯನ್ನು ಸಲ್ಲಿಸಲು 2024ರ ಆಗಸ್ಟ್ 31 ಕೊನೆಯ ದಿನಾಂಕವಾಗಿದ್ದು, 2024ರ ಸೆಪ್ಟೆಂಬರ್ 15ರವರೆಗೆ ದಂಡದ ಶುಲ್ಕ 50 ರು. ಹೆಚ್ಚುವರಿಯಾಗಿ ನೀಡಿ ಅರ್ಜಿ ಸಲ್ಲಿಸಬಹುದು. ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿಯನ್ನು 25 ರು.ಗಳ ಶುಲ್ಕ ಪಾವತಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಮಾರಾಟ ಮಳಿಗೆಯಲ್ಲಿ (ಬೆಂಗಳೂರು) ದಿನಾಂಕ 01-07-2024 ರಿಂದ ಪಡೆಯಬಹುದು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಹೆಸರಿಗೆ ಮೂವತ್ತು ರೂಪಾಯಿಗಳನ್ನು ಮನಿಯಾರ್ಡರ್ ಮಾಡಿದರೆ ಅರ್ಜಿಯನ್ನು ತಾವು ನೀಡಿರುವ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಲಾಗುವುದು. ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದು ಕೊಳ್ಳಬಹುದು. ಇವರು ನಿಗದಿತ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಶುಲ್ಕ 25 ರು. ಗಳನ್ನು ಪ್ರತ್ಯೇಕವಾಗಿ ಪಾವತಿಸುವುದು. ಹೆಚ್ಚಿನ ಮಾಹಿತಿಗೆ : 080-26612991, 22423867, 26623584 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಕರಕುಶಲ ವಸ್ತುಗಳ ಮಾರಾಟ ಮೇಳ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ ನಲ್ಲಿ ಜುಲೈ 7 ರ ವರೆಗೆ ಕರಕುಶಲ ವಸ್ತುಗಳ ಮಾರಾಟ ಮೇಳವನ್ನು ಆಯೋಜಿಸಲಾಗಿದೆ. ಅಲಂಕಾರಿಕ ವಸ್ತುಗಳು, ಕೈಗಳಿಂದಲೇ ನೇಯ್ದಿರುವ, ವಡವೆ - ವಸ್ತ್ರಗಳು, ಬೆಂಗಳೂರಿನ ಜನರ ಅಭಿರುಚಿಗೆ ಒಪ್ಪುವ, ಮುದ ನೀಡುವಂತಹ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯುತ್ತವೆ. ಪ್ರತಿದಿನ ಬೆಳಗ್ಗೆ 11 ರಿಂದ ಸಂಜೆ 7ರವರೆಗೆ ಪ್ರದರ್ಶನ ಇರಲಿದ್ದು, ಪ್ರವೇಶ ಉಚಿತವಾಗಿದೆ. ಊಹೆಗೂ ನಿಲುಕದ ರೀತಿಯಲ್ಲಿ ಅತೀ ಕಡಿಮೆ ಬೆಲೆಯಲ್ಲಿ ನಾನಾ ರೀತಿಯ ಕಲೆ, ಶಿಲ್ಪಕಲಾ ಕೃತಿಗಳು ದೊರೆಯುತ್ತಿದ್ದು, ಈ ಮೇಳ ಗ್ರಾಹಕ ಸ್ನೇಹಿಯಾಗಿ ಪರಿವರ್ತನೆಯಾಗಿದೆ.

{ ಸಲೀಂ ಅಹ್ಮದ್ } ವಿಧಾನ ಪರಿಷತ್ ಮುಖ್ಯ ಸಚೇತಕ

ನಾವು ಅಧಿಕಾರದಲ್ಲಿದ್ದೇವೆ, ಪ್ರತಿಯೊಬ್ಬರು ಜವಾಬ್ದಾರಿಯುತವಾಗಿ ಹೇಳಿಕೆ ನೀಡಬೇಕು. ಯಾವ್ಯಾವುದೋ ಹೇಳಿಕೆ ನೀಡಿ ಸರಕಾರಕ್ಕೆ ಮುಜುಗರ ಮಾಡಬಾರದು. ಲೋಕಸಭೆ ಫಲಿತಾಂಶದ ಬಳಿಕ ರಾಜ್ಯದಲ್ಲಿ ಸರಕಾರ ಪತನವಾಗುತ್ತೆ ಎನ್ನುತ್ತಿರುವ ಬಿಜೆಪಿಗರ ಹಗಲುಗನಸು. ಚುನಾವಣೆಯಲ್ಲಿ ಬಿಜೆಪಿಯವರು 240 ಸ್ಥಾನಗಳ ಮೇಲೆ ಏರಲಿಲ್ಲ. ಮೊದಲು ಅವರು ಸರಕಾರವನ್ನು ರಕ್ಷಣೆ ಮಾಡಿಕೊಳ್ಳಲಿ.

193 ಖಾತೆಗಳನ್ನು ಬಳಸಿಕೊಂಡಿದ್ದ ವಿಚಾರ ಬಯಲು | ಮತ್ತಷ್ಟು ಮಂದಿಯ ಬುಡಕ್ಕೆ ಬಿಸಿತಟ್ಟುವ ಸಾಧ್ಯತೆ

ವಾಲ್ಮೀಕಿ ನಿಗಮದ ಹಗರಣ ಲೆಕ್ಕಕ್ಕೆ ಸಿಗದ 39 ಕೋಟಿ ರು.?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಲ್ಮೀಕಿ ನಿಗಮದ ಹಗರಣ ಬಗೆದಷ್ಟೂ ಬಯಲಾಗುತ್ತಿದ್ದು, ಕಂಪನಿ ಮಾಲೀಕರ ಹೆಸರಲ್ಲಿ ನಕಲಿ ಖಾತೆ ತೆರೆದು ಹಣ ವರ್ಗಾವಣೆ ಮಾಡಿರುವ ವಿಚಾರ ಬೆಳಕಿಗೆ ಬಂದಿದೆ. ಮತ್ತೊಂದೆಡೆ ಎಸ್‌ಐಟಿ ತಂಡ ಲೆಕ್ಕಕ್ಕೆ ಸಿಗದ 39 ಕೋಟಿ ಹಣದ ಬೆನ್ನುಬಿದ್ದಿದೆ.

ವಾಲ್ಮೀಕಿ ನಿಗಮದಲ್ಲಿ ನಡೆದಿರುವ 187 ಕೋಟಿ ಹಗರಣ ರಾಜ್ಯ ರಾಜಕೀಯದಲ್ಲಿ ಸಂಚಲನಕ್ಕೆ ಕಾರಣವಾಗಿರುವ ಪ್ರಕರಣವಾಗಿದೆ. ಈ ಹಗರಣದಿಂದ ಸಚಿವರೊಬ್ಬರ ತಲೆದಂಡವೇ ಆಗಿದ್ದು, ಈಗ ತನಿಖೆಯ ದಿಕ್ಕು ಸಾಗಿದಂತೆ ಸ್ಫೋಟಕ ವಿಚಾರಗಳು ಬಯಲಾಗುತ್ತಿವೆ. ನಿಗಮದ ಅಭಿವೃದ್ಧಿಗೆ ಇಟ್ಟಿದ್ದ ಬಹುಕೋಟಿ ಹಣ ಯಾರ ಜೇಬು ಸೇರಿದೆ. ಹೇಗೆಲ್ಲಾ ಹಣ ವರ್ಗಾವಣೆಯಾಗಿದೆ ಎಂಬ ಒಂದೊಂದೇ ಮಾಹಿತಿಗಳು ಹೊರ ಬರುತ್ತಿವೆ. ಸದ್ಯ ಬಿ.ನಾಗೇಂದ್ರ, ಹಾಗೂ ಅಧಿಕಾರಿಗಳ ತಲೆದಂಡ ಆಗಿದ್ದು ಮತ್ತಷ್ಟು ಮಂದಿಯ ಬುಡಕ್ಕೆ ಬಿಸಿ ತಟ್ಟುವ ಸಾಧ್ಯತೆ ಹೆಚ್ಚಾಗಿದೆ.

ವಾಲ್ಮೀಕಿ ನಿಗಮದ ಕೋಟ್ಯಂತರ ಹಣ ವಹಿವಾಟು ಮಾಡಲು 193 ಖಾತೆಗಳನ್ನು ಬಳಸಿಕೊಂಡಿದ್ದ ವಿಚಾರ ಬಯಲಾಗಿದೆ. ಹೈದರಾಬಾದ್ ಮೂಲದ ಸತ್ಯನಾರಾಯಣವರ್ಮ ಈ ಎಲ್ಲಾ ಅಕ್ರಮಕ್ಕೆ ಮಾಸ್ಟರ್ ಮೈಂಡ್ ಆಗಿದ್ದ. ಯಾರದ್ದೋ ಕಂಪನಿ ಹೆಸರಿನಲ್ಲಿ ಬೇರೆಯವರ ಖಾತೆ ತೆರೆದು ಕೋಟ್ಯಂತರ ರು. ಹಣ ವರ್ಗಾವಣೆ ಮಾಡಿರುವುದು ಗೊತ್ತಾಗಿದೆ. ಮಾಲೀಕರನ್ನು ಕರೆಸಿ ವಿಚಾರಣೆ ನಡೆಸಿದ ವೇಳೆ ಅಸಲಿ ಸತ್ಯ ಬೆಳಕಿಗೆ ಬಂದಿದೆ. ಅಸಲಿ ಕಂಪನಿಗಳ ಮಾಲೀಕರ ಗಮನಕ್ಕೆ ಬಾರದ ರೀತಿಯಲ್ಲಿ ವಂಚನೆ ಮಾಡಲಾಗಿದೆ. ಅದೇ ಕಂಪನಿ ಹೆಸರಿನಲ್ಲಿ ನಕಲಿ ಖಾತೆ ತೆರೆದು ಕೋಟ್ಯಂತರ ರು. ಹಣ ವಹಿವಾಟು ಮಾಡಲಾಗಿದೆ ಎಂಬ ವಿಚಾರ ಬೆಳಕಿಗೆ ಬಂದಿದೆ.

ಕಂಪನಿ ಮಾಲೀಕನ ಹೆಸರಲ್ಲಿ ನಕಲಿ ಖಾತೆ ತೆರೆದು ಹಣ ವರ್ಗಾವಣೆ ಮಾಡಲಾಗಿದೆ. ಈ ಸಂಬಂಧ ಅಸಲಿ ಕಂಪನಿ ಮಾಲೀಕರಿಂದ ನಾಲ್ಕು ಊಐಕ ದಾಖಲು ಮಾಡಲಾಗಿದೆ. ವಿಜಯ್ ಕೃಷ್ಣ ಅಂಡ್ ನವೀನ್ ಎಂಬುವರಿಂದ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಇನ್ನು ವಿಜಯನಗರ ಠಾಣೆಯಲ್ಲಿ ರಾಘವೇಂದ್ರ, ರೇಖಾರಿಂದ ದೂರು ದಾಖಲಾಗಿದೆ. ಈ ಖಾತೆಯಲ್ಲಿ 5 ಕೋಟಿಯಂತೆ 20 ಕೋಟಿಗೂ ಅಧಿಕ ಹಣ ವರ್ಗಾವಣೆ ಆಗಿದ್ದು ಹಣ ವರ್ಗಾವಣೆ ಮಾಡಿ ಮತ್ತೆ ಆ ಖಾತೆಗಳಿಂದ ಡ್ರಾ ಮಾಡಿಕೊಂಡಿರುವ ವಿಚಾರ ಬಯಲಾಗಿದೆ. ಮತ್ತೊಂದೆಡೆ ಹಗರಣದಲ್ಲಿ 89 ಕೋಟಿಯಲ್ಲಿ ಸದ್ಯ ಸಿಕ್ಕಿರುವುದು 50 ಕೋಟಿ ಮಾತ್ರ. ಆರ್‌ಬಿಎಲ್ ಬ್ಯಾಂಕ್‌ನಲ್ಲಿದ್ದ 30 ಕೋಟಿ ರೂಪಾಯಿ ಪತ್ತೆ ಮಾಡಲಾಗಿದ್ದು ಬಂಧಿತರಿಂದ 20 ಕೋಟಿ ಮೌಲ್ಯದ ಹಣ, ಕೆಲ ವಸ್ತುಗಳನ್ನ ಜಪ್ತಿ ಮಾಡಲಾಗಿದೆ. ಬಾಕಿ 39 ಕೋಟಿ ಎಲ್ಲಿ ಹೋಯಿತು ಎನ್ನುವ ಬಗ್ಗೆ ಅಧಿಕಾರಿಗಳು ಶೋಧ ನಡೆಸುತ್ತಿದ್ದಾರೆ.

ಹಗರಣಕ್ಕೆ ಹವಾಲಾ ಲಿಂಕ್!

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ವರ್ಗಾವಣೆಯಾಗಿದ್ದ ಬಹುಕೋಟಿ ಹಣ ಹವಾಲಾ ಮಾರ್ಗದ ಮೂಲಕ ಹೈದರಾಬಾದ್ ಗ್ಯಾಂಗ್ ಕೈಸೇರಿದೆ ಎಂಬ ಮಾಹಿತಿ ಎಸ್‌ಐಟಿ ತನಿಖೆ ವೇಳೆ ತಿಳಿದು ಬಂದಿದೆ. ಹಣ ವರ್ಗಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬೆಂಗಳೂರಿನ ತೇಜ ತಮ್ಮಯ್ಯ, ಹೈದರಾಬಾದ್‌ನ ಚಂದ್ರಮೋಹನ್, ಶ್ರೀನಿವಾಸ್, ಜಗದೀಶ್ ವಿಚಾರಣೆ ವೇಳೆ ನಿಗಮದ ಹಣ ಹವಾಲಾ ಮೂಲಕ ವರ್ಗಾವಣೆಯಾಗಿರುವ ಬಗ್ಗೆ ಬಾಯಿಬಿಟ್ಟಿದ್ದಾರೆ. ಇದೀಗ ಎಸ್‌ಐಟಿ ಅಧಿಕಾರಿಗಳು ಹವಾಲಾ ದಂಧೆಕೋರ ಕಾರ್ತೀಕ್, ಶ್ರೀನಿವಾಸ್‌ಗಾಗಿ ಹುಡುಕಾಟ ನಡೆಸಿದ್ದಾರೆ. ಹವಾಲಾ ದಂಧೆ ಮಾಹಿತಿ ಆಧರಿಸಿ ಅಕ್ರಮ ಹಣ ವರ್ಗವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಪ್ರವೇಶಿಸಿದೆ. ಈ ಅಕ್ರಮ ಹಣದ ವಿಚಾರವಾಗಿ ಇಡಿ ಅಧಿಕಾರಿಗಳಿಗೆ ಎಸ್‌ಐಟಿ ಅಧಿಕಾರಿಗಳು ಅಧಿಕೃತವಾಗಿ ಮಾಹಿತಿ ನೀಡಿದ್ದು, ಅದರಂತೆ ಪ್ರತ್ಯೇಕವಾಗಿ ಇಡಿ ತನಿಖೆ ಆರಂಭಿಸಿದೆ.

ಮುಂದುವರಿದ ಬಿಜೆಪಿ ಪ್ರತಿಭಟನೆ

ಬಾರ್, ಚಿನ್ನದ ಅಂಗಡಿಗಳಿಗೆ ವರ್ಗಾವಣೆ ಆಗಿದ್ದ 10 ಕೋಟಿ ಹಣವನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶದ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಆಗಿದ್ದ ಹಣವನ್ನು ಪಡೆದು ಎಸ್‌ಐಟಿ ತನಿಖೆ ಚುರುಕುಗೊಳಿಸಿದೆ. ಹಗರಣದಲ್ಲಿ ಇದುವರೆಗೆ 28 ಕೋಟಿ ಹಣವನ್ನ ಎಸ್‌ಐಟಿ ವಶಕ್ಕೆ ಪಡೆದಿದೆ. ಈ ನಡುವೆ ವಾಲ್ಮೀಕಿ ಹಗರಣ ಖಂಡಿಸಿ ಬಿಜೆಪಿ ಪ್ರತಿಭಟನೆ ಮುಂದುವರಿಸಿದೆ. ಬೆಂಗಳೂರು, ಕೊಪ್ಪಳ, ಕೋಲಾರ ಸೇರಿ ಹಲವೆಡೆ ಪ್ರತಿಭಟನೆಯ ಕಹಳೆ ಮೊಳಗಿದೆ, ಬಿ.ನಾಗೇಂದ್ರ ಬಂಧನ ಹಾಗೂ ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿದೆ. ಒಟ್ಟಾರೆ, ವಾಲ್ಮೀಕಿ ನಿಗಮದ ಹಗರಣ ಸರಕಾರಕ್ಕೆ ತೀವ್ರ ಮುಜುಗರ ತರಿಸಿದ್ದು, ತನಿಖೆ ವೇಳೆ ಮತ್ತಷ್ಟು ಸ್ಫೋಟಕ ಮಾಹಿತಿ ಹೊರಬರುವ ಲಕ್ಷಣ ಗೋಚರಿಸಿದೆ.

ಕಾರ್ಯಕರ್ತರಿಗೆ ಸದಾ ಚಿರಋಣಿ: ಶೋಭಾ

ಸಂಸದೆ ಶೋಭಾ ಕರಂದ್ಲಾಜೆ ಅವರನ್ನು ಬಿಜೆಪಿ ಕಾರ್ಯಕರ್ತರು ಅಭಿನಂದಿಸಿದರು. ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್ ಹರೀಶ್, ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಮುಖಂಡ, ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ ಇದ್ದರು.

ಬೆಂಗಳೂರು: 2.65 ಲಕ್ಷ ಮತಗಳ ಭಾರೀ ಅಂತರದಲ್ಲಿ, ನಿರೀಕ್ಷೆಗೂ ಮೀರಿದ ಹೆಚ್ಚಿನ ಬಹುಮತ ನೀಡಿ ನನ್ನನ್ನು ಗೆಲ್ಲಿಸಿರುವ ಕಾರ್ಯಕರ್ತರಿಗೆ ಸದಾ ಚಿರಋಣಿ ಎಂದು ಕೇಂದ್ರ ಅತಿಸಣ್ಣ ಸಣ್ಣ ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಖಾತೆಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಅಭಿನಂದನಾ ಸಮಾರಂಭದಲ್ಲಿ ಕಾರ್ಯಕರ್ತರಿಂದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಬ್ಯಾಟರಾಯನಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ, ಅದರಲ್ಲೂ ಕಂದಾಯ ಇಲಾಖೆಯಂಥ ಪ್ರಮುಖ ಖಾತೆಯ ಸಚಿವರಿರುವ ಕ್ಷೇತ್ರದಲ್ಲಿ 35 ಸಾವಿರಕ್ಕೂ ಹೆಚ್ಚಿನ ಬಹಮತ ನೀಡಿರುವುದು ನಿಜಕ್ಕೂ ಅದ್ಭುತ ಸಾಧನೆ. ಈ ಸಾಧನೆಗಾಗಿ ಶ್ರಮಿಸಿರುವ ಕ್ಷೇತ್ರದ ಬಿಜೆಪಿ ಮುಖಂಡರು, ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ಗ ಗೌಡರಿಗೆ ಹಾಗೂ ನನ್ನ ನೆಚ್ಚಿನ ಮುಖಂಡರು, ಕಾರ್ಯಕರ್ತರು, ಮತ ಬಾಂಧವರಿಗೆ ಅಭಾರಿ ಎಂದರು.

ಶೀಘ್ರದಲ್ಲೇ ರಾಜ್ಯದಲ್ಲಿ ಉಪಚುನಾವಣೆ, ಬಿಬಿಎಂಪಿ ಚುನಾವಣೆ, ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳು ನಡೆಯಲಿದ್ದು, ಅದರಲ್ಲೂ ಸಹ ನಮ್ಮ ಮೈತ್ರಿ ಪಕ್ಷಗಳು ಇದಕ್ಕಿಂತ ಹೆಚ್ಚಿನ ಗೆಲುವು ಸಾಧಿಸಲು ಸಜ್ಜಾಗಬೇಕಿದೆ. ಈ ಎಲ್ಲಾ ಚುನಾವಣೆಗಳು ಕಾರ್ಯಕರ್ತರ ಚುನಾವಣೆ ಗಳಾಗಿದ್ದು, ಕಾರ್ಯಕರ್ತರೊಟ್ಟಿಗೆ ಮತಯಾಚನೆಗೆ ಬಂದು ಅವರ ಗೆಲುವಿಗೆ ಶ್ರಮಿಸುತ್ತೇನೆ. ಕೇಂದ್ರದಿಂದ ದೊರೆಯುವ ಅನುದಾನವನ್ನು ತಂದು ಬ್ಯಾಟರಾಯನಪುರ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

> ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ಅಭಿವೃದ್ಧಿಗಿಂತ ಹಗರಣಗಳ ಸಂಖ್ಯೆಯೇ ಹೆಚ್ಚಾಗಿದ್ದು, ಹಗರಣಗಳನ್ನು ಮರೆಮಾಚಲು ರಾಜ್ಯದ ಮುಖ್ಯಮಂತ್ರಿ ಮತ್ತು ಉಪಮುಖ್ಯ ಮಂತ್ರಿ ಯಾವ್ಯಾವುದೋ ವಿಷಯಗಳನ್ನು ಅಡ್ಡ ತಂದು, ತರಹೇವಾರಿ ಹೇಳಿಕೆಗಳನ್ನು ನೀಡುತ್ತಾ, ವಿಷಯಾಂತರ ಮಾಡುವ ಮೂಲಕ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಮುಂಬರುವ ಎಲ್ಲಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಪಕ್ಷಗಳು ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ತಕ್ಕ ಪಾಠ ಕಲಿಸಬೇಕಿದೆ.
> -ಶೋಭಾ ಕರಂದ್ಲಾಜೆ, ಸಂಸದೆ

ಪ್ರತ್ಯೇಕ ಅಪಘಾತ ಪ್ರಕರಣ; ಇಬ್ಬರು ಸಾವು

ಅಪರಾಧ ಸುದ್ದಿಗಳು

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಇಬ್ಬರು ಬೈಕ್ ಸವಾರರು ರಸ್ತೆ ಅಪಘಾತದಲ್ಲಿ ಪ್ರಾಣವನ್ನು ಕಳೆದುಕೊಂಡಿರುವ ಘಟನೆ ಹೆಬ್ಬಾಳ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಜರ್ನಾದನ (25) ಮೃತ ದುರ್ದೈವಿ. ತಡರಾತ್ರಿ 2.30ರ ಸಮಯಕ್ಕೆ ಈ ಅಪಘಾತ ಸಂಭವಿಸಿದೆ. ಬೈಕ್‌ನಲ್ಲಿ ಬರುತ್ತಿದ್ದ ಜರ್ನಾ ಧನ ರಸ್ತೆ ಬದಿ ನಿಂತಿದ್ದ ಕಾಂಕ್ರೀಟ್ ಮಿಕ್ಸಿಂಟ್ ಲಾರಿಗೆ ಹಿಂಬದಿಯಿಂದ ಗುದ್ದಿದ್ದಾನೆ. ಗುದ್ದಿದ ರಭಸಕ್ಕೆ ಹಾರಿ ಕೆಳಗೆ ಬಿದ್ದ ಜರ್ನಾಧನನ ತಲೆಗೆ ಗಂಭೀರ ಪೆಟ್ಟಾಗಿದೆ. ಅಪಘಾತ ದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಜನಾರ್ದನನನ್ನು ಆಸ್ಪತ್ರೆಗೆ ಸಾಗಿಸುವ ವೇಳೆ ಮೃತ ಪಟ್ಟಿದ್ದಾನೆ. ಮುತ್ಯಾಲ ನಗರ ನಿವಾಸಿಯಾ ಗಿರುವ ಜರ್ನಾಧನ ರಾತ್ರಿ ಕೆಲಸ ಮುಗಿಸಿ ಮನೆಗೆ ವಾಪಸ್ ಆಗುತ್ತಿದ್ದಾಗ ಈ ಘಟನೆ ನಡೆದಿದೆ. ಹೆಬ್ಬಾಳ ಸಂಚಾರಿ ಪೊಲೀಸ್ ಠಾಣೆ ಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಬೈಕ್‌ನಿಂದ ಸ್ಕಿಡ್ ಆಗಿ ಕೆಳಗೆ ಬಿದ್ದ ಸವಾರ ಸಾವು: ಅತಿ ವೇಗ ಚಾಲನೆಯಿಂದ ಅಪಘಾತ ಸಂಭವಿಸಿದ್ದು, ಯುವಕನೊರ್ವ ಮೃತಪಟ್ಟಿದ್ದಾನೆ. ಬೈಕ್‌ನಿಂದ ಸ್ಕಿಡ್ ಆಗಿ ಕೆಳಗೆ ಬಿದ್ದ ಕುಮಾರ್ (30) ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಶನಿವಾರ ತಡರಾತ್ರಿ 1.30ಕ್ಕೆ ಬೆಂಗಳೂರಿನ ಬೊಮ್ಮನಹಳ್ಳಿ ಆಕ್ಸ್‌ಫರ್ಡ್ ಕಾಲೇಜು ಮುಂಭಾಗ ಘಟನೆ ನಡೆದಿದೆ. ಕುಮಾರ್ ಮತ್ತು ನವೀನ್ ಬೈಕ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ಬೈಕ್ ಸ್ಕಿಡ್ ಆಗಿ ಇಬ್ಬರು ಕೆಳಗೆ ಬಿದ್ದಿದ್ದಾರೆ. ಸ್ಥಳದಲ್ಲೇ ಕುಮಾರ್ ಮೃತಪಟ್ಟರೇ ನವೀನ್ ಗಂಭೀರ ಗಾಯಗೊಂಡಿದ್ದಾನೆ. ಸದ್ಯ ನವೀನ್ (20) ಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಕುಮಾರ್ ಮೃತದೇ ಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಮಡಿವಾಳ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಮಹಿಳೆಯರನ್ನು ಬಳಸಿಕೊಂಡು ವ್ಯಕ್ತಿಯ ಅಪಹರಣ

ಬೆಂಗಳೂರು: ಮಹಿಳೆಯರನ್ನು ಬಳಸಿಕೊಂಡು ವ್ಯಕ್ತಿಯನ್ನು ಅಪಹರಿಸಿದ ಆರೋಪದಡಿ ಕನ್ನಡ ಪರ ಸಂಘಟನೆಯೊಂದರ ಅಧ್ಯಕ್ಷ ಸೇರಿದಂತೆ ಆರು ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಮಂಜುನಾಥ್ ಎಂಬಾತನನ್ನು ಅಪಹರಿಸಿದ್ದ ಆರೋಪದಡಿ ಕನ್ನಡ ಪರ ಸಂಘಟನೆಯ ಅಧ್ಯಕ್ಷ ಪ್ರಕಾಶ್, ಮಂಜುಳಾ ಎಂಬಾಕೆ ಸೇರಿದಂತೆ ಆರು ಜನರ ವಿರುದ್ಧ ಶಂಕರಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಬ್ಯಾಂಕ್ ಉದ್ಯೋಗಿಯಾಗಿರುವ ಮಂಜುನಾಥ್, ಆರೋಪಿ ಮಂಜುಳಾ ಬಳಿ 8 ಲಕ್ಷ ರು. ಸಾಲ ಪಡೆದಿದ್ದರು. ಸಾಲ ವಾಪಸ್ ನೀಡಲಾಗದಿದ್ದಾಗ ಮಂಜುನಾಥ್ ವಿರುದ್ಧ ಮಂಜುಳಾ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು. ಏಪ್ರಿಲ್ 4ರಂದು ಕೊರಿಯರ್ ಬಂದಿರುವುದಾಗಿ ಮಂಜುನಾಥ್‌ಗೆ ಕರೆ ಮಾಡಿದ್ದ ಆರೋಪಿಗಳು, ಶಂಕರಮಠ ರಸ್ತೆಯ ಬಳಿ ಕರೆಸಿಕೊಂಡಿದ್ದಾರೆ.

ಈ ವೇಳೆ ಮಂಜುಳಾ ಸೇರಿದಂತೆ ಕೆಲ ಮಹಿಳೆಯರು ಕಾರಿನಲ್ಲಿ ಬಂದು ಮಂಜುನಾಥ್ ಅವರನ್ನು ಅಪಹರಿಸಿದ್ದಾರೆ. ಕಾರಿನಲ್ಲಿದ್ದ ಪ್ರಕಾಶ್ ಮತ್ತು ಆತನ ಚಾಲಕ ವೆಂಕಟಾಚಲಪತಿ, ಮಹಿಳೆಯರೊಂದಿಗೆ ಸೇರಿ ತನ್ನ ಕಚೇರಿಗೆ ಕರೆದೊಯ್ದು ಥಳಿಸಿದ್ದಾರೆ. ಬಳಿಕ ಹಣ, ಮನೆ ದಾಖಲೆಗಳನ್ನು ಕಸಿದುಕೊಂಡಿದ್ದಾರೆ. ನಂತರವೂ ಸಹ ಆರೋಪಿಗಳು ಕರೆ ಮಾಡಿ ಬೆದರಿಕೆ ಹಾಕುತ್ತಿರುವುದರಿಂದ ತನಗೆ ಜೀವಭಯವಿದೆ ಎಂದು ಮಂಜುನಾಥ್ ದೂರಿದ್ದಾರೆ. ಮಂಜುನಾಥ್ ನೀಡಿದ್ದ ದೂರಿನನ್ವಯ ಸದ್ಯ ಮಂಜುಳಾ, ಪ್ರಕಾಶ್, ವೆಂಕಟಾಚಲಪತಿ, ಮೂವರು ಅಪರಿಚಿತ ಮಹಿಳೆಯರ ವಿರುದ್ಧ ಶಂಕರಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕನ ಅಪಹರಣ

ಬೆಂಗಳೂರು: ಸಿನಿಮೀಯ ಮಾದರಿಯಲ್ಲಿ ಯುವಕನನ್ನು ಅಪಹರಿಸಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಕೆಲಸ ಮಾಡಿಕೊಂಡಿದ್ದ ಅಜ್ಮೀರಾ ರಾಜು ಎಂಬಾತನ ಐಶಾರಾಮಿ ಜೀವನ ಶೈಲಿ ಗಮನಿಸಿದ್ದ ಆರೋಪಿಗಳು ಅಪಹರಿಸಿ, ತೆಲಂಗಾಣಕ್ಕೆ ಕರೆದೊಯ್ದು ಫಾರ್ಮ್ ಹೌಸ್‌ವೊಂದರಲ್ಲಿ ಕೂಡಿ ಹಾಕಿ ಹಲ್ಲೆ ಮಾಡಿ, 5 ಕೋಟಿ ರು. ಹಣ, ಬಿಟ್ ಕಾಯಿನ್ ನೀಡುವಂತೆ ಬೆದರಿಸಿದ್ದರು. ಇತ್ತ ರಾಜು ಅಪಹರಣದ ಕುರಿತು ಆತನ ಸ್ನೇಹಿತ ಹಲಸೂರು ಠಾಣೆಗೆ ದೂರು ನೀಡಿದ್ದ. ಕಾರ್ಯಾಚರಣೆ ಕೈಗೊಂಡ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ವಿಜಯ ಕರ್ನಾಟಕ ಪ್ರಧಾನ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಅಭಿಮತ

ಮಾಧ್ಯಮಕ್ಕೆ ಬರುವ ಪತ್ರಕರ್ತರ ಸಂಖ್ಯೆ ಕ್ಷೀಣ

ಬೆಂಗಳೂರು: ಮುದ್ರಣ ಮಾಧ್ಯಮಕ್ಕೆ ಬರುವ ಪತ್ರಕರ್ತರ ಸಂಖ್ಯೆ ಕ್ಷೀಣಿಸಿದೆ ಎಂದು ವಿಜಯ ಕರ್ನಾಟಕ ಪ್ರಧಾನ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಅಭಿಪ್ರಾಯಪಟ್ಟರು.

ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ಸಂವಾದ ಕೇಂದ್ರ ವತಿಯಿಂದ ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, ಈಗ ಬರುವ ಯುವ ಪತ್ರಕರ್ತರ ಆಸಕ್ತಿ ರಾತ್ರೋರಾತ್ರಿ ಸೆಲೆಬ್ರಿಟಿ ಆಗಬೇಕು ಎನ್ನುವುದಾಗಿದೆ. ಕಲಿಕೆ ಮತ್ತು ಅಧ್ಯಯನ ಕಡಿಮೆಯಾಗಿದೆ. ಕೋವಿಡ್ ಬಳಿಕ ಎಲ್ಲ ಕ್ಷೇತ್ರಗಳಲ್ಲೂ ಸಮಸ್ಯೆಗಳು ಕಂಡುಬಂದಿದ್ದು, ಪತ್ರಿಕೋದ್ಯಮದಲ್ಲೂ ಸಮಸ್ಯೆಗಳಾಗಿತ್ತು. ಅದರಲ್ಲಿ ಹೆಚ್ಚು ನಷ್ಟ ಅಭವಿಸಿದ್ದು ಮುದ್ರಣ ಮಾಧ್ಯಮ. ಆ ಸಂದರ್ಭದಲ್ಲಿ ಡಿಜಿಟಲ್ ಮತ್ತು ಟಿವಿ ಮಾಧ್ಯಮ ಪ್ರಭಾವದಿಂದ ಮುದ್ರಣ ಮಾಧ್ಯಮ ಉಳಿಯಲಾರದ ಪರಿಸ್ಥಿತಿ ಉಂಟಾಗಿತ್ತು. ಆಗ ನಾವು ಡಿಜಿಟಲ್ ಅಥವಾ ಟಿವಿ ಮಾಧ್ಯಮಗಳಿಗೆ ಹೋಗುವ ಚಿಂತನೆ ನಡೆಸಿದ್ದೆವು. ಆದರೆ ಪತ್ರಿಕೆಗಳನ್ನು ಉಳಿಸಿ ಬೆಳೆಸುವ ನಿಶ್ಚಯ ಕೂಡ ಮುದ್ರಣ ಮಾಧ್ಯಮದ ಪತ್ರಕರ್ತರಿಗಿತ್ತು ಎಂದರು.

ಪತ್ರಿಕೋದ್ಯಮದ ಪಿತಾಮಹ ನಾರದರು: ಆರ್ಗನೈಸರ್ ಪತ್ರಿಕೆಯ ಸಂಪಾದಕ ಪ್ರಫುಲ್ಲ ಕೇತ್ಕರ್ ಮಾತನಾಡಿ, ನಾರದ ಮಹರ್ಷಿಗಳು ಪತ್ರಿಕೋದ್ಯಮದ ಪಿತಾಮಹ. 1826ರಲ್ಲಿ ಭಾರತದ ಮೊದಲ ಇಂಗ್ಲಿಷೇತರ ಪತ್ರಿಕೆ ಪ್ರಾರಂಭವಾಗಿತ್ತು. ಹಿಂದಿ ಮತ್ತು ಬೆಂಗಾಲಿ ಭಾಷೆಯಲ್ಲಿ ಉದಾಂತ್ ಮಾರ್ತಾಂಡ್ ಪತ್ರಿಕೆಯ ಮುಖಪುಟ ನಾರದನಿಗೆ ಮೀಸಲಾಗಿತ್ತು. ಭಾರತದ ಪುಣ್ಯಕಥೆಗಳಲ್ಲಿ ನಾರದನನ್ನು ಮೊದಲ ಸಂವಹನಕಾರ ಎಂದು ಬಿಂಬಿಸಲಾಗಿತ್ತು. ನಂತರ ಕೂಡ ಭಾರತದಲ್ಲಿ ಪ್ರಕಟವಾದ ಪತ್ರಿಕೆಗಳಲ್ಲಿ ಒಂದಲ್ಲ ಒಂದು ರೀತಿ ನಾರದ ಮಹರ್ಷಿಗಳನ್ನು ಪ್ರತಿಬಿಂಬಿಸಲಾಗುತ್ತಿತ್ತು ಎಂದರು.

ಸ್ವಾತಂತ್ರ್ಯದ ನಂತರ 1955 ರಲ್ಲಿ ಪತ್ರಿಕೆಗಳಿಗಾಗಿಯೇ ಕೇಂದ್ರ ಸರಕಾರ ಸಮಿತಿ ರಚಿಸಿತು. ಸಮಿತಿಯ ಮುಂದಾಳತ್ವವನ್ನು ಖ್ಯಾತ ಇತಿಹಾಸಕಾರ ಕೆಎಂ ಮುನ್ಷಿ ಅವರಿಗೆ ವಹಿಸಲಾಗಿತ್ತು. ಆ ಸಮಿತಿಯು ಸಭೆಗಳ ಮೂಲಕ ಪರಾಮರ್ಶಿಸಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ರಚಿಸುವಂತೆ ಸರಕಾರಕ್ಕೆ ವರದಿಯನ್ನು ಸಲ್ಲಿಸಿತ್ತು ಅದರ ಜತೆಗೆ ಮೊದಲ ಪತ್ರಿಕಾ ವರದಿಗಾರರಾಗಿ ನಾರದ ಮಹರ್ಷಿಗಳನ್ನು ಪರಿಗಣಿಸಿ ಎಂದು ಮನವಿ ಮಾಡಿತು. ನಂತರ ಕೂಡ ದೇಶದ ಪತ್ರಿಕೆಯಾದ ಹಿಂದೂಸ್ಥಾನ್ ಸಮಾಚಾರ್ ಸೇರಿದಂತೆ ಹಲವು ಮುದ್ರಣ ಸಂಸ್ಥೆಗಳು ನಾರದ ಜಯಂತಿಯನ್ನು ಪತ್ರಿಕಾರಂಗಕ್ಕೆ ಸಂಬಂಧಿಸಿದ ಆಚರಣೆಯಾಗಿ ಚಾಲ್ತಿಗೆ ತಂದವು. ಈ ವಿದ್ಯಮಾನವು ತುರ್ತು ಪರಿಸ್ಥಿತಿಯವರೆಗೂ ಮುಂದುವರಿಯಿತು ಎಂದು ತಿಳಿಸಿದರು.

ವಿಶ್ವ ಸಂವಾದ ಕೇಂದ್ರ ವತಿಯಿಂದ ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿವಿಧ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

> ಪತ್ರಕರ್ತರು ಸರಿ- ತಪ್ಪುಗಳ ವಿಷಯದಲ್ಲಿ ದೃಢವಾದ ನಿಲುವು ತೆಗೆದುಕೊಳ್ಳಬೇಕು. ಸತ್ಯ ಹೇಳುವುದರಿಂದ ಹಾಗೂ ಸಾಧ್ಯವಾದಷ್ಟು ಗಟ್ಟಿಧ್ವನಿಯಲ್ಲಿ ಸತ್ಯವನ್ನು ಹೇಳುವುದರಿಂದ ನಿಜವಾದ ಪತ್ರಕರ್ತನೆಂದು ರೂಪಿಸಿಕೊಳ್ಳಲು ಸಾಧ್ಯವಿದೆ. ಜನರು ನೋಡುವಾಗಲು ಮತ್ತು ನೋಡದೆ ಇರುವಾಗಲು ನಮ್ಮನ್ನು ನಾವು ಇನ್ನಷ್ಟು ವಿನೀತರನ್ನಾಗಿ ಮಾಡಿಕೊಂಡಾಗ ಮಾತ್ರ ಒಬ್ಬ ವಸ್ತುನಿಷ್ಠ ಪತ್ರಕರ್ತನಾಗಲು ಸಾಧ್ಯ.
> -ಅಜಿತ್ ಹನುಮಕ್ಕನವರ್, ಸುವರ್ಣ ನ್ಯೂಸ್ ಸಂಪಾದಕ

ಗಣ್ಯರಿಗೆ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ

ಈ ವೇಳೆ ವಿಶ್ವ ಸಂವಾದ ಕೇಂದ್ರ, ಕರ್ನಾಟಕದ ವತಿಯಿಂದ ನೀಡಲಾದ ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿಯನ್ನು ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿಯನ್ನು ಏಷಿಯಾನೆಟ್ ಸುವರ್ಣನ್ಯೂಸ್ ಸಂಪಾದಕ ಅಜಿತ್ ಹನುಮಕ್ಕನವರ್, ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿಯನ್ನು ಸ್ತ್ರೀಜಾಗೃತಿ ಪತ್ರಿಕೆಯ ಸಂಪಾದಕಿ ಶೋಭಾ ಎಚ್. ಜಿ, ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿಯನ್ನು ಖ್ಯಾತ ಅಂಕಣಕಾರ ಪ್ರೊ.ಪ್ರೇಮಶೇಖರ, ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿಯನ್ನು ಡಾ. ಪೂರ್ವಿ ಜಯರಾಜ್ ಸ್ವೀಕರಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಘಚಾಲಕ ಡಾ.ಪಿ ವಾಮನ್ ಶೆಣೈ, ವಿಶ್ವ ಸಂವಾದ ಕೇಂದ್ರ, ಕರ್ನಾಟಕದ ವಿಶ್ವಸ್ಥ ಶ್ರೀನಿವಾಸ್ ಭಟ್ ಸೇರಿದಂತೆ ಇದ್ದರು.

ಸೊಳ್ಳೆ ಸಂತತಿ ನಾಶಕ್ಕೆ ಫಾಗಿಂಗ್ ಕಾರ್ಯಾಚರಣೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಹಾಗೂ ಹೊರ ವಲಯದಲ್ಲಿ ರೋಗಗಳ ಹರಡುವಿಕೆಗೆ ಕಾರಣವಾದ ಸೊಳ್ಳೆ ಸಂತತಿಗಳನ್ನು ನಾಶಪಡಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯು ಫಾಗಿಂಗ್ ಕಾರ್ಯಾಚರಣೆಯನ್ನು ಆರಂಭಿಸಿದೆ.

ಈ ಮೂಲಕ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ನಿಯಂತ್ರಿಸಲು ಕ್ರಮ ಕೈಗೊಂಡಿದ್ದು, ಫಾಗಿಂಗ್ ಮೂಲಕ ಒಂದು ಹಂತದವರೆಗೆ ಡೆಂಘೀ, ಮಲೇರಿಯಾ ಬಾಧಿಸಿದ ರೋಗಿಗಳಿಗೆ ಕಚ್ಚಿದ ಸೊಳ್ಳೆಗಳನ್ನು ನಾಶಪಡಿಸಲು ಸಾಧ್ಯವಾಗುವುದು. ಸಮೀಕ್ಷೆ ಬಳಿಕ ಆರೋಗ್ಯ ಇಲಾಖೆ ಫಾಗಿಂಗ್ ಕಾರ್ಯಾಚರಣೆ ಆರಂಭಿಸಿದೆ. ಜೂನ್ ಮೊದಲ ಹದಿನೈದು ದಿನಗಳ ಸುಮಾರು 7.6 ಲಕ್ಷ ಮನೆಗಳು ಸೇರಿದಂತೆ ಪಾಲಿಕೆ ವ್ಯಾಪ್ತಿಯಲ್ಲಿ 12.04 ಲಕ್ಷ ಮನೆಗಳನ್ನು ಸಮೀಕ್ಷೆ ಮಾಡಲಾಗಿದೆ. ಬೆಂಗಳೂರು ಗ್ರಾಮಾಂತರದಲ್ಲಿ 2.12 ಲಕ್ಷ ಮನೆಗಳನ್ನು ಸಮೀಕ್ಷೆ ಮಾಡಲಾಗಿದ್ದು, ಬೆಂಗಳೂರು ನಗರದಲ್ಲಿ 3.12 ಲಕ್ಷ ಮನೆಗಳನ್ನು ಇದೇ ಅವಧಿಯಲ್ಲಿ ಪರಿಶೀಲಿಸಲಾಗಿದೆ ಎಂದು ತಿಳಿದುಬಂದಿದೆ.

ವಾಹನ ಸವಾರರ ಪರದಾಟ | ಜುಲೈ 6ರವರೆಗೆ ಮಳೆ ಸಾಧ್ಯತೆ

ನಗರದಲ್ಲಿ ಭಾನುವಾರವೂ ಮುಂದುವರಿದ ಮಳೆ

ಬೆಂಗಳೂರು: ಭಾನುವಾರವೂ ನಗರದಲ್ಲಿ ಮಳೆ ಮುಂದುವರಿದಿದ್ದು, ಕೆಲವೆಡೆಗಳಲ್ಲಿ ಸುರಿದ ಭಾರೀ ಮಳೆಯಿಂದಾಗಿ ವಾಹನ ಸವಾರರು ತೊಂದರೆ ಅನುಭವಿಸಿದರು.

ಕೆಲವು ದಿನಗಳಿಂದ ಇದೇ ರೀತಿಯ ವಾತಾವರಣ ಎರಡು ವಾರದಿಂದ ಮುಂದುವರಿದಿದ್ದು, ಆಗಾಗ ಹಗುರ ಮಳೆ, ಜಡಿ ಮಳೆಯೊಂದಿಗೆ ಬಿಸಿಲಿನ ದರ್ಶನವು ಆಗುತ್ತಿದೆ. ಭಾನುವಾರವೂ ಸಂಜೆ ವಿಜಯನಗರ, ದೀಪಾಂಜಲಿನಗರ, ನಾಯಂಡಹಳ್ಳಿ, ಹಂಪಿನಗರ, ಚಂದ್ರಾಲೇಔಟ್, ಮೆಜೆಸ್ಟಿಕ್ ಸುತ್ತಮುತ್ತ, ಚಾಮರಾಜಪೇಟೆ, ಹೆಬ್ಬಾಳ, ಕೋರಮಂಗಲ ಹಾಗೂ ಇನ್ನಿತರ ಬಡಾವಣೆಗಳಲ್ಲಿ ಲಘು ಮಳೆ ಉಂಟಾಯಿತು. ಆಗಾಗ ಬರುತ್ತಿದ್ದ ಮಳೆಗೆ ಜನರು ಮಳೆಯಿಂದ ರಕ್ಷಿಸಿಕೊಳ್ಳಲು ಮೇಲ್ಸೇತುವೆ ಕೆಳಗೆ, ಮೆಟ್ರೋ ವಯಾಡಕ್ಟ್ ಕೆಳಗೆ ನಿಂತಿದ್ದು ಕಂಡು ಬಂತು. ಕೆಲವು ರಸ್ತೆಗಳ ಮೇಲೆ ನೀರು ನಿಂತು, ಕೆಲವೆಡೆ ಸಿಗ್ನಲ್‌ಗಳಲ್ಲಿ ಟ್ರಾಫಿಕ್ ಸಮಸ್ಯೆ ಉಂಟಾಯಿತು. ಸಂಜೆ ವೇಳೆ ರಸ್ತೆ ಅಕ್ಕಪಕ್ಕದ ವ್ಯಾಪಾರಕ್ಕೆ ಹೊಡೆತ ಬಿದ್ದಿದ್ದು, ಜಿಟಿ ಜಿಟಿ ಮಳೆಗೆ ಗ್ರಾಹಕರು ಇಲ್ಲದೇ ಅಂಗಡಿ ಮುಂಗಟ್ಟುಗಳು ಬಣಗುಟ್ಟಿದ್ದವು.

ಜುಲೈ 6 ರವರೆಗೆ ಮಳೆಯ ದರ್ಶನ : ಮುಂದಿನ ಒಂದು ವಾರ ಬೆಂಗಳೂರಿನಲ್ಲಿ ಜೋರು ಮಳೆ ಸುರಿಯುವ ಸಾಧ್ಯತೆ ಇದೆ. ಜುಲೈ 6 ರವರೆಗೆ ನಗರದಲ್ಲಿ ಹಗುರದಿಂದ ಸಾಧಾರಣವಾಗಿ ಮಳೆ ಬರಲಿದೆ. ಕೆಲವೆಡೆ ಧಾರಾಕಾರವಾಗಿ ಮಳೆ ಅಬ್ಬರಿಸಲಿದ್ದು, ಮೋಡ ಕವಿದ ವಾತಾವರಣ ಕಂಡು ಬರಲಿದೆ ಎಂದು ಹವಮಾನ ಇಲಾಖೆ ತಿಳಿಸಿದೆ.

ಕರಾವಳಿ ಕರ್ನಾಟಕದ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಗಾಳಿಯ ವೇಗ 30 ರಿಂದ 40 ಪ್ರತಿ ಕಿ.ಮೀ ವೇಗದಲ್ಲಿ ಇರಲಿದ್ದು, ಒಂದೆರಡು ಕಡೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಗಾಳಿ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳ ಸಾಧಾರಣ ಮಳೆಯಾಗುವ ಸಂಭವವಿದೆ ಎಂದಿದೆ.

ಬೆಂಗಳೂರು ನಗರ ಮತ್ತು ಸುತ್ತಮುತ್ತ ಸ್ಥಳೀಗಳಲ್ಲಿ ಮುಂದಿನ 48 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ನಿರಂತರ ಗಾಳಿಯ ಬೀಸಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 28 ಡಿಗ್ರಿ ಮತ್ತು 21 ಡಿಗ್ರಿ ಇರಲಿದೆ.

ಅತಿ ಹೆಚ್ಚು ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದಲ್ಲಿ 9 ಸೆ.ಮೀ ಮಳೆ ಬಿದ್ದಿದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಮಾನ ನಿಲ್ದಾಣದಸುತ್ತ ಮುತ್ತ 7 ಸೆ.ಮೀ ಮಳೆಯಾಗಿದೆ ಎಂದು ಹೇಳಿದೆ.

ರಾಜ್ಯದ ಆರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂಗಾರು ಮಳೆ ಮುಂದುವರಿದಿದ್ದು, ಈ ಹಿನ್ನೆಲೆ ಆರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮುಂದಿನ 48 ಗಂಟೆಗಳ ಕಾಲ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ಮಲೆನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮೀನುಗಾರಿಗೆ ಕೂಡ ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಸಮಾಚಾರ ಸಣ್ಣದಲ್ಲ

ನೂತನ ತಂತ್ರಾಂಶ ಪುನರಾರಂಭ

ಬೆಂಗಳೂರು: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳನ್ನು ಜೂನ್ 11 ರಿಂದ https://kbocwwb.karnataka.gov.in ಜಾಲತಾಣದ ಮೂಲಕ ತಂತ್ರಾಂಶವನ್ನು ಪುನರಾರಂಭಿಸಲಾಗಿರುತ್ತದೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೂತನ ತಂತ್ರಾಂಶದಲ್ಲಿ ಕಂಡು ಬಂದ ತಾಂತ್ರಿಕ ಕಾರಣಗಳಿಂದಾಗಿ ಫೆಬ್ರವರಿ 6 ರಿಂದ ತಂತ್ರಾಂಶವನ್ನು ಸ್ಥಗಿತಗೊಳಿಸಿ ನಿರ್ವಹಣೆಯಲ್ಲಿ ಇಡಲಾಗಿತ್ತು ಹಾಗೂ 2024ರ ಸಾರ್ವತ್ರಿಕ ಲೋಕಸಭೆ ಚುನಾವಣಾ ಮಾದರಿ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ನೂತನ ತಂತ್ರಾಂಶವನ್ನು ಪುನರಾರಂಭಿಸಲು ಸಾಧ್ಯವಾಗಿರುವುದಿಲ್ಲ. ತಾಂತ್ರಿಕ ಕಾರಣಗಳಿಂದಾಗಿ 2023ನೇ ಅಕ್ಟೋಬರ್ 17 ರಿಂದ 2024 ನೇ ಜೂನ್ 10 ರವರೆಗೆ ವಿವಿಧ ಸೌಲಭ್ಯಗಳನ್ನು ಕೋರಿ ಅರ್ಜಿ ಸಲ್ಲಿಸಲು ಸಾಧ್ಯವಾಗದ/ಕಾಲವಧಿ ಮುಕ್ತಾಯವಾದ ಪ್ರಕರಣಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಜೂನ್ 11 ರಿಂದ ಸೆಪ್ಟೆಂಬರ್ 30 ರವರೆಗೆ ಹೆಚ್ಚುವರಿ ಕಾಲಾವಕಾಶ ಕಲ್ಪಿಸಲಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ ರಂಗಭೂಮಿಗೆ ಸಂಬಂಧಿಸಿದಂತೆ, ಈಗಾಗಲೇ ಪ್ರಕಟವಾಗಿರುವ ರಂಗಭೂಮಿಯ ಆಕರ ಗ್ರಂಥಗಳಿಗೆ ಬಹುಮಾನ ನೀಡಲು ತೀರ್ಮಾನಿಸಿದ್ದು, 2021, 2022 ಮತ್ತು 2023ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಪುಸ್ತಕ ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಕನ್ನಡ ರಂಗಭೂಮಿಯ ಬೆಳವಣಿಗೆ, ವೈವಿಧ್ಯತೆ ಹಾಗೂ ರಂಗಭೂಮಿಯ ಇತಿಹಾಸವನ್ನು ತಿಳಿಸುವಂತಹ ವಿಮರ್ಶಾತ್ಮಕ ಕೃತಿಗಳಿಗೆ ಬಹುಮಾನ ನೀಡಲಾಗುವುದು. ಪ್ರತಿ ಸಾಲಿಗೆ ತಲಾ ಒಂದು ಪುಸ್ತಕಕ್ಕೆ ಬಹುಮಾನವನ್ನು ನೀಡಲಾಗುವುದು. ಈ ಬಹುಮಾನದ ಮೊತ್ತ 25,000 ರು.ಗಳಾಗಿರುತ್ತವೆ. ಕೃತಿಗಳನ್ನು ಲೇಖಕರೇ ನೇರವಾಗಿ ಅಕಾಡೆಮಿಗೆ ಕಳುಹಿಸಿ ಕೊಡಬೇಕು. ಆಸಕ್ತ ಲೇಖಕರು ತಮ್ಮ ಹೆಸರು, ವಿಳಾಸ, ಪ್ರಕಟಣೆ ವರ್ಷ, ಪುಸ್ತಕದ ನಾಲ್ಕು ಪ್ರತಿಗಳೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ನೆಲ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002 ಈ ವಿಳಾಸಕ್ಕೆ ಜುಲೈ 20 ರೊಳಗಾಗಿ ಸಲ್ಲಿಸುವಂತೆ ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಭಾಷಾ ಪರೀಕ್ಷೆ ಕಡ್ಡಾಯ

ಬೆಂಗಳೂರು: ಗ್ರೂಪ್ ಸಿ ವೃಂದದ ಮೋಟಾರು ವಾಹನ ನಿರೀಕ್ಷಕರು 70 ಹುದ್ದೆಗಳಿಗೆ ಕನ್ನಡ ಭಾಷಾ ಪರೀಕ್ಷೆ ಕಡ್ಡಾಯವೆಂದು ಕೆಪಿಎಸ್‌ಸಿ ಪ್ರಕಟಣೆಯಲ್ಲಿ ತಿಳಿಸಿದೆ. ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು Have you passed Kannada Language Test? ಕಾಲಂನಲ್ಲಿ ಓಟ ಎಂದು ನಮೂದಿಸಿದಲ್ಲಿ ಮೋಟಾರು ವಾಹನ ನಿರೀಕ್ಷಕರು 70 + 06 (ಹೈಕ) ಹುದ್ದೆಗಳ ನೇಮಕಾತಿ ಸಂಬಂಧ ನಡೆಸುವ ಕನ್ನಡ ಭಾಷೆ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿ ಡಾ. ರಾಕೇಶ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಜಿಪಿಯಾಗಿ ಮಾಲಿನಿ ಕೃಷ್ಣಮೂರ್ತಿಗೆ ಬಡ್ತಿ

ಬೆಂಗಳೂರು: ಐಪಿಎಸ್ ಅಧಿಕಾರಿ ಪ್ರಣಬ್ ಮೊಹಂತಿ ಅವರಿಗೆ ಮುಂಬಡ್ತಿ ನೀಡಿದ್ದು, ಮಾಲಿನಿ ಕೃಷ್ಣಮೂರ್ತಿ ಅವರಿಗೆ ಡಿಜಿಪಿ ಹಾಗೂ ಅಗ್ನಿ ಶಾಮಕದಳ, ತುರ್ತು ಸೇವೆಗಳ ಡಿಜಿಯಾಗಿ ಹೆಚ್ಚುವರಿ ಹುದ್ದೆ ನೀಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಐಪಿಎಸ್ ಅಧಿಕಾರಿ ಪ್ರಣಬ್ ಮೊಹಂತಿ ಅವರು ಎಡಿಜಿಪಿಯಿಂದ ಡಿಜಿಪಿಯಾಗಿ ಮುಂಬಡ್ತಿ ಪಡೆದಿದ್ದು, ಕಂಪ್ಯೂಟರ್ ವಿಂಗ್ ಡಿಜಿಪಿಯಾಗಿ ಮುಂದುವರಿಯಲಿದ್ದಾರೆ. ಇನ್ನು ಮಾಲಿನಿ ಕೃಷ್ಣಮೂರ್ತಿ ಅವರಿಗೆ ಡಿಜಿಪಿ ಹಾಗೂ ಅಗ್ನಿ ಶಾಮಕದಳ, ತುರ್ತು ಸೇವೆಗಳ ಹೆಚ್ಚುವರಿ ಹುದ್ದೆ ನೀಡಲಾಗಿದೆ ಡಿಜಿಪಿ ಕಮಲ್ ಪಂತ್ ಅವರು ನಿವೃತ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಮಾಲಿನಿ ಕೃಷ್ಣಮೂರ್ತಿ ಅವರಿಗೆ ಹೆಚ್ಚುವರಿ ಹುದ್ದೆ ನೀಡಲಾಗಿದೆ. ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದ್ದು, ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಮಹಾನಿರ್ದೇಶಕರಾದ (ಡಿಜಿ) ಮಾಲಿನಿ ಕೃಷ್ಣಮೂರ್ತಿ ಅವರನ್ನು ಡಿಜಿಪಿ ಮತ್ತು ಮತ್ತು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಡಿಜಿ, ಹೋಮ್ ಗಾರ್ಡ್ಸ್ ಕಮಾಂಡೆಂಟ್ ಜನರಲ್, ರಾಜ್ಯ ವಿಪತ್ತು ನಿರ್ವಹಣಾ ಪಡೆ ಡಿಜಿ, ನಾಗರಿಕ ರಕ್ಷಣೆ ನಿರ್ದೇಶಕರಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ. ಐಪಿಎಸ್ ಅಧಿಕಾರಿ ಪ್ರಣಬ್ ಮೊಹಂತಿ ಅವರು ಪೊಲೀಸ್ ಮಹಾನಿರ್ದೇಶಕರ ದರ್ಜೆಗೆ (ಡಿಜಿಪಿ) ಬಡ್ತಿ ಪಡೆದಿದ್ದು, ಅವರು ಸೈಬರ್ ಅಪರಾಧ ಮತ್ತು ಮಾದಕ ದ್ರವ್ಯಗಳ ಉನ್ನತೀಕರಿಸಿದ ಡಿಜಿಪಿ ಹುದ್ದೆಯ ಸಮಕಾಲೀನ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

{ ಸಿ.ಟಿ ರವಿ } ವಿಧಾನ ಪರಿಷತ್ ಸದಸ್ಯ

ವಾಲ್ಮೀಕಿ ನಿಗಮದ ಬಳಿಕ ಮೈಸೂರು ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ. ಇದನ್ನ ಮುಚ್ಚಿಹಾಕಲು ಸಿಎಂ ಹಾಗೂ ಡಿಸಿಎಂ ರಾಜಕೀಯ ನಾಟಕ ಆಡುತ್ತಿದ್ದಾರೆ. ಮೈಸೂರು ಮುಡಾದಲ್ಲಿ ಬೇಲಿಯೇ ಎದ್ದು ಹೊಲ ಮೇದಾಂತಾಗಿದೆ. ಸಾವಿರಾರು ಕೋಟಿ ಬೆಲೆ ಬಾಳುವ ಮುಡಾ ಆಸ್ತಿ ಕಳ್ಳರ ಪಾಲಾಗಿದೆ.

ಡೆಂಘೀ: ತಯಾರಿಯಿಲ್ಲದೆ ಸಮರಕ್ಕಿಳಿದ ಇಲಾಖೆ?

ರಾಜ್ಯದಲ್ಲಿ 91,853 ಜನ ಡೆಂಘೀ ಶಂಕಿತರು | ಆಸ್ಪತ್ರೆಗಳಲ್ಲಿ ಬೆಡ್ ಇಲ್ಲದೆ ರೋಗಿಗಳ ಪರದಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂಗಾರು ಮಳೆಯು ಬಿಸಿಲಿನ ಝಳದಿಂದ ಸಾಕಷ್ಟು ನಿರಾಳತೆ ತಂದಿರುವ ಮಧ್ಯೆ, ದೇಶದ ವಿವಿಧೆಡೆ ಡೆಂಘೀ ಪ್ರಕರಣಗಳು ಹೆಚ್ಚಾಗುತ್ತಿರುವುದು ಕಳವಳ ಮೂಡಿಸಿದೆ.

ತಾಲೂಕು, ಜಿಲ್ಲಾ ಆಸ್ಪತ್ರೆಗಳಿಂದ ಹಿಡಿದು ಹೈಟೆಕ್ ಆಸ್ಪತ್ರೆಗಳವರೆಗೆ, ಖಾಸಗಿ ಕ್ಲಿನಿಕ್‌ನಿಂದ ಹಿಡಿದು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳವರೆಗೆ ಎಲ್ಲೆಡೆ ಡೆಂಘೀ ಸೋಂಕಿತರಿಂದಲೇ ಆಸ್ಪತ್ರೆಗಳು ತುಂಬಿಹೋಗಿವೆ. ಕೆಲವು ಸರಕಾರಿ ಆಸ್ಪತ್ರೆಗಳಲ್ಲಿ ಬೆಡ್‌ಗಳಷ್ಟೇ ಅಲ್ಲದೆ, ವಾರ್ಡಿನ ನೆಲದ ಮೇಲೂ ಹಾಸಿಗೆ ಮೇಲೂ ರೋಗಿಗಳನ್ನು ಮಲಗಿಸುವ ಪರಿಸ್ಥಿತಿ ಎದುರಾಗಿದೆ. ರಾಜಧಾನಿ ಬೆಂಗಳೂರಿನಿಂದ ಯಾವುದೋ ಮೂಲೆಯ ತಾಲೂಕು ಆಸ್ಪತ್ರೆಯವರೆಗೆ ಡೆಂಘೀ ಜನರ ಆತಂಕಕ್ಕೆ ಕಾರಣವಾಗಿದೆ. ಮಕ್ಕಳು ಮತ್ತು ವಯೋವೃದ್ಧರ ಆರೋಗ್ಯ ಅಪಾಯಕ್ಕೆ ಸಿಲುಕಿದೆ. ಆರೋಗ್ಯ ಇಲಾಖೆ ಆರಂಭದಲ್ಲಿ ಸೋಂಕಿನ ವಿಷಯದಲ್ಲಿ ವಹಿಸಿದ ನಿರ್ಲಕ್ಷ್ಯ ಮತ್ತು ಉದಾಸೀನ ಧೋರಣೆಗಳು ಇದೀಗ ನಾಗರಿಕ ಜೀವಕ್ಕೆ ಕಂಟಕವಾಗಿ ಪರಿಣಮಿಸಿವೆ.

ಸಮುದಾಯ ಸೋಂಕು ಹಂತಕ್ಕೆ ಡೆಂಘೀ?

ರಾಜ್ಯದಲ್ಲಿ ಏಕಾಏಕಿ ಡೆಂಘೀ ಪ್ರಕರಣಗಳು ಸ್ಫೋಟಕ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಶಂಕಿತರ ಸಂಖ್ಯೆಯೂ ಹೆಚ್ಚಳವಾಗಿದೆ. ಹೀಗಾಗಿ, ಡೆಂಘೀ ಜ್ವರ ಸಮುದಾಯ ಸೋಂಕು ಹಂತ ತಲುಪಿದೆಯೇ ಎನ್ನುವ ಪ್ರಶ್ನೆ ಎದುರಾಗಿದೆ. ರಾಜ್ಯದಲ್ಲಿ 91,853 ಜನರನ್ನು ಡೆಂಘೀ ಶಂಕಿತರು ಎಂದು ಗುರುತಿಸಲಾಗಿದೆ. ಈ ಪ್ರಮಾಣದಲ್ಲಿ ಡೆಂಘೀ ಶಂಕಿತರು ಇರುವುದು ಸಮುದಾಯದ ಹಂತಕ್ಕೆ ಡೆಂಘೀ ಹಬ್ಬಿದೆಯೇ ಎನ್ನುವ ಪ್ರಶ್ನೆ ಎದುರಾಗಿದೆ. ಆದರೆ, ಇಲ್ಲಿಯವರೆಗೂ ರಾಜ್ಯದಲ್ಲಿ ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸ್ಫೋಟಕ ಪ್ರಮಾಣದಲ್ಲಿ ಡೆಂಘೀ (ಸಮುದಾಯ ಹಂತದಲ್ಲಿ) ಪ್ರಕರಣಗಳು ವರದಿಯಾಗಿಲ್ಲ ಎಂದು ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.

ಲಕ್ಷದ ಸನಿಹದಲ್ಲಿ ಹೆಚ್ಚು ಡೆಂಘೀ ಶಂಕಿತ ಪ್ರಕರಣ: ರಾಜ್ಯದಲ್ಲಿ ವ್ಯಾಪಕ ಪ್ರಮಾಣದಲ್ಲಿ ಡೆಂಘೀ ಹರಡುತ್ತಿದ್ದು, ಸರಕಾರದ ಅಂಕಿಅಂಶಗಳ ಪ್ರಕಾರವೇ ಶಂಕಿತ ಪ್ರಕರಣಗಳು ಒಂದು ಲಕ್ಷಕ್ಕೂ ಹೆಚ್ಚಿವೆ. ದೃಢಪಟ್ಟ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೂ, ಪರೀಕ್ಷೆಗಳನ್ನು ಸರಿಯಾಗಿ ಮಾಡದೇ ಇರುವುದು ಮತ್ತು ಶಂಕಿತ ಎಲ್ಲಾ ಪ್ರಕರಣಗಳ ರಕ್ತ ಪರೀಕ್ಷೆಯ ಮಾಹಿತಿಯನ್ನು ಪಾರದರ್ಶಕವಾಗಿ ಪ್ರಕಟಿಸದೇ ಇರುವುದರಿಂದಾಗಿ ಆರೋಗ್ಯ ಇಲಾಖೆಯ ಅಂಕಿಅಂಶಗಳು ನಂಬಲಾರ್ಹವಲ್ಲ ಎಂಬ ಮಾತುಗಳು ವೈದ್ಯಕೀಯ ವಲಯದಿಂದ ಕೇಳಿಬರುತ್ತಿವೆ.

ಟೆಸ್ಟಿಂಗ್ ಕಿಟ್ ಇಲ್ಲ, ಲ್ಯಾಬ್ ಇಲ್ಲ!

ಬಹುತೇಕ ಸರಕಾರಿ ಆಸ್ಪತ್ರೆಗಳಲ್ಲಿ ಡೆಂಘೀ ಶಂಕಿತರ ರಕ್ತಪರೀಕ್ಷೆಗೆ ನಡೆಸುವ ಆರ್‌ಟಿಪಿಸಿಆರ್ ಪರೀಕ್ಷೆಯ ಕಿಟ್‌ಗಳೇ ಇಲ್ಲ. ಖಾಸಗಿ ಲ್ಯಾಬ್ ಅಥವಾ ಜಿಲ್ಲಾ ಲ್ಯಾಬ್‌ಗಳಿಗೆ ರೋಗಿಗಳನ್ನು ಕಳಿಸಲಾಗುತ್ತಿದೆ. ಇನ್ನೂ ಕೆಲವು ಕಡೆ ಇಲಾಖೆಯ ಮೇಲಿನ ಒತ್ತಡ ಕಡಿಮೆ ಮಾಡಿಕೊಳ್ಳಲು ವೈದ್ಯರಿಗೆ ರಕ್ತ ಪರೀಕ್ಷೆಗೆ ಶಿಫಾರಸು ಮಾಡದಂತೆ ತಾಲೂಕು ಅಥವಾ ಜಿಲ್ಲಾ ವೈದ್ಯಾಧಿಕಾರಿಗಳೇ ತಾಕೀತು ಮಾಡುತ್ತಿದ್ದಾರೆ. ಹಾಗಾಗಿ ಡೆಂಘೀ ಲಕ್ಷಣಗಳಿದ್ದರೂ ಬಹಳಷ್ಟು ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ರಕ್ತ ಪರೀಕ್ಷೆಗೆ ಹೇಳುತ್ತಿಲ್ಲ ಎಂಬ ಗಂಭೀರ ಸಂಗತಿಯನ್ನು ಇಲಾಖೆಯ ಅಧಿಕಾರಿಗಳೇ ಬಹಿರಂಗಪಡಿಸಿದ್ದಾರೆ. ಡೆಂಘೀ ರಾಜ್ಯದಲ್ಲಿ ಹೆಚ್ಚಾಗುತ್ತಿದ್ದರೆ ಆಸ್ಪತ್ರೆಗಳನ್ನು ಸಜ್ಜುಗೊಳಿಸಿ, ಪ್ರತಿ ಸೋಂಕಿತರಿಗೂ ಸೂಕ್ತ ಚಿಕಿತ್ಸೆ, ತುರ್ತುಬೇಕಾಗುವ ರಕ್ತ, ಔಷಧಿ, ಹೆಚ್ಚುವರಿ ಸಿಬ್ಬಂದಿಯ ವ್ಯವಸ್ಥೆ ಮಾಡಬೇಕಾದ ಆರೋಗ್ಯ ಇಲಾಖೆ, ಈಗಲೂ ಲಾರ್ವಾ ಸಮೀಕ್ಷೆಯ ಜಪ ಮಾಡುತ್ತಿದೆ. ಅಪಾಯಕಾರಿ ವೈರಸ್ ವಿರುದ್ಧ ಇಲಾಖೆಯ ಈ ಬಗೆಗೈ ಸಮರವನ್ನು ನೆಚ್ಚಿಕೊಳ್ಳದೆ ಜನ, ತಮ್ಮ ಜೀವ ಉಳಿಸಿಕೊಳ್ಳುವ ಹೊಣೆಯನ್ನು ತಾವೇ ಹೊರಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಡೆಂಘೀ ಪ್ರಕರಣ ಹೆಚ್ಚಿರುವ ರಾಜ್ಯಗಳು

ರಾಜ್ಯ	ಪ್ರಕರಣಗಳು
ಕರ್ನಾಟಕ	5,374
ತೆಲಂಗಾಣ	882
ಒಡಿಶಾ	288
ಕೇರಳ	400

ಡೆಂಘೀ ಹೆಚ್ಚಳಕ್ಕೆ ಕಾರಣಗಳು ?

- ಆರೋಗ್ಯ ಇಲಾಖೆ, ಸ್ಥಳೀಯ ಆಡಳಿತ ಸಕಾಲದಲ್ಲಿ ಎಚ್ಚೆತ್ತುಕೊಂಡು ಜಾಗೃತಿ ಮೂಡಿಸದಿರುವುದು ಡೆಂಘೀ ಉಲ್ಬಣಕ್ಕೆ ಕಾರಣ.
- ರಾಜ್ಯದಲ್ಲಿ ಡೆಂಘೀ ಹೆಚ್ಚಳದ ಮುನ್ಸೂಚನೆ ಇದ್ದರೂ ಯಾವುದೇ ನಿಯಂತ್ರಣ ಕ್ರಮ ತೆಗೆದುಕೊಂಡಿಲ್ಲ.
- ಮಳೆಗಾಲದಲ್ಲಿ ನೀರು ನಿಲ್ಲುವ ಸ್ಥಳಗಳನ್ನು ಸರಿಪಡಿಸದಿದ್ದರಿಂದ ಸೊಳ್ಳೆಗಳ ಲಾರ್ವಾ ಉತ್ಪತ್ತಿ.
- ಆಸ್ಪತ್ರೆಗಳಲ್ಲಿ ದಾಖಲಾಗುವ ಪ್ರಮಾಣ ಹೆಚ್ಚಳ.

ಆದಿಚುಂಚನಗಿರಿ ಮಠದಿಂದ ಯುಪಿಎಸ್‌ಸಿ ಕೋಚಿಂಗ್ ಕೇಂದ್ರ

ಡಾ. ನಿರ್ಮಲಾನಂದನಾಥ ಶ್ರೀಗಳ ಹೇಳಿಕೆ

ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು

ಬೆಂಗಳೂರು: ಆದಿಚುಂಚನಗಿರಿ ಶ್ರೀಮಠದ ವತಿಯಿಂದ ಬೆಂಗಳೂರಿನಲ್ಲಿ ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವೆ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವನ್ನು ತೆರೆಯಲಾಗುವುದು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಹೇಳಿದರು.

ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಯುಪಿಎಸ್‌ಸಿ ತರಬೇತಿ ಕೇಂದ್ರ ಸ್ಥಾಪಿಸುವ ಕುರಿತಂತೆ ಈಗಾಗಲೇ ಕೆಲ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇದಕ್ಕಾಗಿ ರೂಪುರೇಷೆ ಕೂಡ ತಯಾರು ಮಾಡಲಾಗಿದೆ, ದೆಹಲಿಯಲ್ಲಿ ಆದಿಚುಂಚನಗಿರಿ ಮಠದಿಂದಲೇ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಎಂದು ತಿಳಿಸಿದರು.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ಎಂಟನೇ ತರಗತಿಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡಲು ಶಿಕ್ಷಣ ನೀಡಲಾಗುತ್ತದೆ. ಮಠದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಕಾಲೇಜು ಸ್ಥಾಪಿಸುವ ಕುರಿತು ರೂಪುರೇಷೆ ಮಾಡಿದ್ದು, ನ್ಯಾಯಾಧೀಶರು, ವಕೀಲರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

> ಸಮುದಾಯದಲ್ಲಿ ನಾವು ಏಡಿಯಾಗದೇ ಏಣಿಯಾಗಿ ಸಹಾಯ ಮಾಡಬೇಕು. ದೇವರು ಕೊಟ್ಟ ವರವನ್ನು ಸಮಾಜದಲ್ಲಿ ಋಣ ತೀರಿಸುವ ಕೆಲಸ ಮಾಡಬೇಕು. ಕಷ್ಟಪಟ್ಟು ಐಎಎಸ್ ಪಾಸ್ ಮಾಡಿದವರನ್ನು ಸನ್ಮಾನಿಸುವುದು ಒಳ್ಳೆಯ ಕೆಲಸ.
> - ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಮಾತನಾಡಿ, ಆದಿಚುಂಚನಗಿರಿ ಮಹಾಸ್ವಾಮೀಜಿಗಳು ಸಮುದಾಯದ ಮಕ್ಕಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ತಮ್ಮದೇ ಕೊಡುಗೆ ನೀಡಿದ್ದಾರೆ. ಐಎಎಸ್ ಪೂರೈಸಿದ ಸಮುದಾಯದ ಅಭ್ಯರ್ಥಿಗಳು ಸಮುದಾಯಕ್ಕಾಗಿ ಕೆಲಸ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ, ದೇಶ-ವಿದೇಶಗಳಲ್ಲಿ ಒಕ್ಕಲಿಗ ಮಕ್ಕಳಿಗೆ ಶಿಕ್ಷಣ ಹಾಗೂ ಮತ್ತು ಉದ್ಯೋಗ ಕಲ್ಪಿಸುವಲ್ಲಿ ಬ್ರಿಗೇಡ್ ಶ್ರಮಿಸುತ್ತಿದೆ ಎಂದರು.

ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ದೊರಕಿಸಿ

ಹಿರಿಯ ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಮಾತನಾಡಿ, ಪ್ರತಿಯೊಬ್ಬ ಪೋಷಕರು ಹೆಣ್ಣು ಮಕ್ಕಳು ಉತ್ತಮ ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೆ ಏರಲು ಸಹಕರಿಸಬೇಕು, ಜತೆಯಾಗಿ ನಿಲ್ಲಬೇಕು. ಮಂಡ್ಯದಲ್ಲಿ ನಾನು ಜಿಲ್ಲಾಧಿಕಾರಿಯಾಗಿದ್ದಾಗ ಅಸಹಾಯಕ ಬಾಲಕನೊಬ್ಬನಿಗೆ ಸ್ವಂತ ಅಧಿಕಾರ ಬಳಸಿ ಜಾತಿ ಪ್ರಮಾಣ ಪತ್ರ ನೀಡಿದ್ದೆ, ಅಧಿಕಾರದಲ್ಲಿದ್ದಾಗ ಬಡವರಿಗೆ, ನಿರ್ಗತಿಕರಿಗೆ ನಮ್ಮ ಕೈಲಾದ ಸಹಾಯ ಮಾಡಬೇಕು ಎಂದು ಹೇಳಿದರು.



ಜಯನಗರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ನೂತನ ಕಚೇರಿಯನ್ನು ಮಾಜಿ ಶಾಸಕಿ ಸೌಮ್ಯಾರೆಡ್ಡಿ ಅವರು ಉದ್ಘಾಟಿಸಿದರು. ಅನುಷ್ಠಾನ ಸಮಿತಿ ಅಧ್ಯಕ್ಷ ಎನ್.ನಾಗರಾಜು ಇದ್ದರು.

ಬೆಂಗಳೂರು ಕೆರೆ ಅಭಿವೃದ್ಧಿಗೆ ಮಹಾನಗರ ಪಾಲಿಕೆ ಸಿದ್ಧತೆ

ಬೆಂಗಳೂರು: ಬಿಬಿಎಂಪಿಯು ಅರ್ಧ ಬೆಂಗಳೂರಿಗೆ ನೀರಿನ ಪೂರೈಕೆ ಮಾಡುತ್ತಿದ್ದ ಹಲಸೂರು ಕೆರೆಯ ಅಭಿವೃದ್ಧಿಗೆ ಮುಂದಾಗಿದ್ದು, 160 ಎಕರೆಯನ್ನು 20 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೆ ಚಿಂತನೆ ನಡೆಸಿದೆ.

ಹಲಸೂರು ಕೆರೆ ಈಗಲೂ ಬಿಬಿಎಂಪಿಯ ಪೂರ್ವ ವಲಯದ ಜೀವನಾಡಿಯಾಗಿದ್ದು, ಈ ಸಾಲಿನಲ್ಲಿ ಬರೋಬ್ಬರಿ 20 ಕೋಟಿ ವೆಚ್ಚದಲ್ಲಿ ಹಲಸೂರು ಕೆರೆ ಅಭಿವೃದ್ಧಿ ಮಾಡೋಕೆ ಬಿಬಿಎಂಪಿ ಸಿದ್ಧತೆ ನಡೆಸಿದೆ. ಕಳೆದ ಸರಕಾರದ ಅವಧಿಯಲ್ಲಿ ಅಮೃತ್ ನಗರೋತ್ಥಾನ ಯೋಜನೆ ಅಡಿಯಲ್ಲಿ ಪಾಲಿಕೆಯು 4 ಕೋಟಿ ಖರ್ಚು ಮಾಡಿ ಕೆರೆಗೆ ಬೇಲಿ, ಗಾರ್ಡನ್ ಎಲ್ಲವನ್ನೂ ಕೂಡ ಅಭಿವೃದ್ಧಿಪಡಿಸಿ ಎನ್‌ಜಿಟಿಗೂ ಇದರ ವರದಿಯನ್ನು ರವಾನಿಸಿದೆ. ಇದಾಗಿ ಕೆಲವೇ ತಿಂಗಳ ಅಂತರದಲ್ಲಿ ಮತ್ತೆ ಬಿಬಿಎಂಪಿ 20 ಕೋಟಿ ಅನುದಾನದಲ್ಲಿ ಅಭಿವೃದ್ಧಿ ಮಾಡಲು ಹೊರಟಿದ್ದು, ಕೆರೆಯ ನೀರು ಶುದ್ಧೀಕರಣ ಸೇರಿದಂತೆ ಇತರೆ ಕಾಮಗಾರಿ ನಡೆಸುತ್ತೇವೆ ಎಂದು ಅಧಿಕಾರಿಗಳು ಹೇಳಿದರು.

ತೆರಿಗೆ ಹಣ ಪೋಲು, ಸಾರ್ವಜನಿಕರು ಕಿಡಿ

ಈಗ ಬಿಡುಗಡೆಯಾಗಿರುವ 20 ಕೋಟಿಯಲ್ಲಿ ಹಲಸೂರು ಕೆರೆಯ ನೀರನ್ನು ಶುದ್ಧೀಕರಿಸುವ ಕಾರಣಕ್ಕೆ ಪಾಲಿಕೆ ಬಳಸಿಕೊಳ್ಳಲಿದೆಯಂತೆ. ಈ ಮೂಲಕ ನಗರದ ಕುಡಿಯುವ ನೀರಿನ ಗುಣಮಟ್ಟ ಹೆಚ್ಚಲಿದೆ. ಆದರೆ ಮಳೆಗಾಲದಲ್ಲಿ ಮಳೆ ಬಂದರೆ ಇನ್ನೂ ಕೂಡ ಅನೇಕ ಏರಿಯಾಗಳಿಗೆ ನಗರದಲ್ಲಿ ನೀರು ನುಗ್ಗುತ್ತಿದೆ. ಅಳಿವಿನಂಚಿನಲ್ಲಿರುವ ಇನ್ನೂ ಅನೇಕ ಕೆರೆಗಳು ನಗರದಲ್ಲಿವೆ. ಅವುಗಳನ್ನು ಕಡೆಗಣಿಸಿ ಸದ್ಯಕ್ಕೆ ಚೆನ್ನಾಗಿರುವ ಕೆರೆಗಳನ್ನೇ ಕೋಟ್ಯಂತರ ರುಪಾಯಿ ವೆಚ್ಚ ಮಾಡಿ ಅಭಿವೃದ್ಧಿ ಪಡಿಸುತ್ತಿರುವುದು ಅನಗತ್ಯವಾಗಿ ಜನರ ತೆರಿಗೆ ಹಣ ಪಾಲಿಕೆ ಅಧಿಕಾರಿಗಳು ಪೋಲುಮಾಡಿದಂತೆ ಎಂದು ಸಾರ್ವಜನಿಕರ ಆರೋಪವಾಗಿದೆ.

ಮಾನಸ ಸರೋವರ ಯಾತ್ರೆಗೆ ಸರಕಾರದಿಂದ ಸಹಾಯಧನ

ಕರ್ನಾಟಕದ ಕಾಯಂ ನಿವಾಸಿಗಳು ಧನ ಸಹಾಯಕ್ಕೆ ಅರ್ಹ | ಮುಜರಾಯಿ ಇಲಾಖೆ ಆದೇಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರವು ಕರ್ನಾಟಕದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಅನುದಾನಕ್ಕೆ ಮಾರ್ಗಸೂಚಿಯನ್ನು ಹೊರಡಿಸಿದ್ದು, ಮುಜರಾಯಿ ಇಲಾಖೆಯು ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಮಾನಸ ಸರೋವರ ಯಾತ್ರಾರ್ಥಿಗಳಿಗೆ ತಲಾ 30 ಸಾವಿರ ರು. ಚಾರ್‌ಧಾಮ್ (ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್) ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ 20 ಸಾವಿರ ರು, ಕಾಶಿ ಯಾತ್ರೆ ಕೈಗೊಂಡ 30 ಸಾವಿರ ಯಾತ್ರಾರ್ಥಿಗಳಿಗೆ ತಲಾ 5000 ರು. ಸಹಾಯಧನ ಪಾವತಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಮುಜರಾಯಿ ಇಲಾಖೆ ಪ್ರಕಟಿಸಿದೆ.

ಕಾಶಿಯಾತ್ರೆಯ ಮಾರ್ಗಸೂಚಿಗಳು

- ಕರ್ನಾಟಕದ ಕಾಯಂ ನಿವಾಸಿಗಳು ಮಾತ್ರ ಈ ಧನ ಸಹಾಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
- ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳು ಆಯಾ ಆರ್ಥಿಕ ವರ್ಷದ ಮೊದಲ ದಿನಕ್ಕೆ ಅನ್ವಯಿಸುವಂತೆ ಏಪ್ರಿಲ್ 1ಕ್ಕೆ 18 ವರ್ಷಗಳ ಮೇಲ್ಪಟ್ಟವರಾಗಿರತಕ್ಕದ್ದು.
- 18 ವಯಸ್ಸಿನ ಕೆಳಗಿನವರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 18 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ವಯಸ್ಸಿಗೆ ಸಂಬಂಧಿಸಿದ ಸೂಕ್ತ ದಾಖಲೆಯನ್ನು ಹಾಜರುಪಡಿಸಬೇಕು.
- ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಬಾರಿ ಪಡೆದ ನಂತರದಲ್ಲಿ, ಅದೇ ವ್ಯಕ್ತಿಗೆ ಎರಡನೇ ಬಾರಿ ಅನುದಾನ ನೀಡಲು ಪರಿಗಣಿಸಲಾಗುವುದಿಲ್ಲ.
- ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಮಾರ್ಗಸೂಚಿಯನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಕೈಲಾಸ ಮಾನಸ ಸರೋವರ ಯಾತ್ರೆಯ ಮಾರ್ಗಸೂಚಿಗಳು

- ಕರ್ನಾಟಕದ ಕಾಯಂ ನಿವಾಸಿಗಳು ಮಾತ್ರ ಈ ಧನ ಸಹಾಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
- ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳು ಸರಕಾರದ ಸಹಾಯಧನವನ್ನು ಪಡೆಯಲು ಇಚ್ಛಿಸಿದಲ್ಲಿ, ಆಯಾ ಆರ್ಥಿಕ ಸಾಲಿನಲ್ಲಿ ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರು ನಿಗದಿಪಡಿಸಲಾಗುವ ದಿನಾಂಕಗಳ ಒಳಗೆ ಅಗತ್ಯ ದಾಖಲೆಗಳೊಂದಿಗೆ 25 ರು. ಗಳ ಶುಲ್ಕ ಪಾವತಿಸಿ ಸಂಬಂಧಿಸಿದ ವೆಬ್‌ಸೈಟ್ ಅಥವಾ ಮೊಬೈಲ್ ಆಪ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು.
- ಯಾತ್ರೆಯನ್ನು ಕೈಗೊಳ್ಳುವ ಬಗ್ಗೆ ಭಾರತ ಸರಕಾರಕ್ಕೆ ಅರ್ಜಿ ಸಲ್ಲಿಸುವ ಮತ್ತು ಸದರಿ ಅರ್ಜಿಯ ಬಗ್ಗೆ ಸಂಬಂಧಿಸಿದ ಪಕ್ರಿಯೆಗಳಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಹಾಗೂ ಚೀನಾ ದೇಶಕ್ಕೆ ಪಾವತಿಸಬೇಕಾಗುವ ಮೊತ್ತವನ್ನು ಸಂಬಂಧಪಟ್ಟ ಯಾತ್ರಾರ್ಥಿಗಳೇ ಭರಿಸಬೇಕು.

ಚಾರ್‌ಧಾಮ್ ಯಾತ್ರೆಯ ಮಾರ್ಗಸೂಚಿಗಳು

- ಕರ್ನಾಟಕದ ಕಾಯಂ ನಿವಾಸಿಗಳು ಮಾತ್ರ ಈ ಧನ ಸಹಾಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಚುನಾವಣಾ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್‌ನ್ನು ಅಪ್‌ಲೋಡ್ ಮಾಡುವುದು.
- 45 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಈ ಯೋಜನೆಯಡಿ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾರೆ.
- 45 ವರ್ಷ ಮೇಲ್ಪಟ್ಟಿರುವ ಯಾತ್ರಾರ್ಥಿಗಳು ವಯಸ್ಸಿಗೆ ಸಂಬಂಧಿಸಿದ ಸೂಕ್ತ ದಾಖಲೆಯನ್ನು ಅಪ್‌ಲೋಡ್ ಮಾಡಬೇಕು.
- ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಬಾರಿ ಪಡೆದ ನಂತರದಲ್ಲಿ ಅದೇ ವ್ಯಕ್ತಿಗೆ ಮತ್ತೊಮ್ಮೆ ಅನುದಾನ ನೀಡಲಾಗುವುದಿಲ್ಲ.

ಎಚ್‌ಎಂಟಿ ಕ್ಯಾಂಪಸ್‌ನಲ್ಲಿ ಹೆಚ್ಚುವರಿ ಶೆಡ್‌ಗೆ ಮನವಿ

ಬೆಂಗಳೂರು: ಜಾಲಹಳ್ಳಿರುವ ಎಚ್‌ಎಂಟಿ ಕ್ಯಾಂಪಸ್‌ನಲ್ಲಿ ಹೆಚ್ಚುವರಿ ಶೆಡ್‌ಗಳನ್ನು ಮಂಜೂರು ಮಾಡುವಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಚಿವ ಪ್ರಿಯಾಂಕ್ ಖರ್ಗೆ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಶನಿವಾರ ಭೇಟಿಯಾದ ಪ್ರಿಯಾಂಕ್ ಖರ್ಗೆ, ರಾಜ್ಯದಲ್ಲಿ ತಂತ್ರಜ್ಞಾನ ಮತ್ತು ಆವಿಷ್ಕಾರ ಕ್ಷೇತ್ರದಲ್ಲಿ ಉತ್ಕೃಷ್ಟತೆಯ ಕೇಂದ್ರಗಳ ಮಹತ್ವದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಜಾಲಹಳ್ಳಿಯ ಎಚ್‌ಎಂಟಿ ಕ್ಯಾಂಪಸ್‌ನಲ್ಲಿ ಹೆಚ್ಚುವರಿ ಶೆಡ್‌ಗಳನ್ನು ಮಂಜೂರು ಮಾಡಲು ಮನವಿ ಮಾಡಿದರು.

ಐಐಎಸ್‌ಸಿ ಸಹಯೋಗದಲ್ಲಿ ಸ್ಥಾಪಿಸಲಾದ ಸೆಂಟರ್ ಆಫ್ ಎಕ್ಸಲೆನ್ಸ್-ಆರ್ಟಿಪಾರ್ಕ್‌ಗೆ ಜಾಲಹಳ್ಳಿಯ ಎಚ್‌ಎಂಟಿ ಕ್ಯಾಂಪಸ್‌ನಲ್ಲಿರುವ ಕೈಗಾರಿಕಾ ಶೆಡ್ ಅನ್ನು ಗುತ್ತಿಗೆಗೆ ನೀಡಲಾಗಿದೆ. ಖಾಲಿ ಇರುವ ಎರಡು ಶೆಡ್‌ಗಳನ್ನು ಎಲೆಕ್ಟ್ರಾನಿಕ್ಸ್, ಐಟಿ ಬಿಟಿ ಇಲಾಖೆಗೆ ದೀರ್ಘಾವಧಿಗೆ ಗುತ್ತಿಗೆ ನೀಡುವಂತೆ ಕುಮಾರಸ್ವಾಮಿ ಅವರನ್ನು ಒತ್ತಾಯಿಸಿದರು. ಜಾಗತಿಕವಾಗಿ ವಿವಿಧ ಹೈಟೆಕ್ ಡೊಮೇನ್ ಗಳಲ್ಲಿ ಕರ್ನಾಟಕವನ್ನು ಮುಂಚೂಣಿಯಲ್ಲಿರಿಸುವ ಮೂಲಕ ರಾಜ್ಯದ ಆರ್ಥಿಕ ಬೆಳವಣಿಗೆಗೆ ನೆರವಾಗುವ ಕುರಿತು ಪ್ರಸ್ತಾಪಿಸಿದರು. ಹೆಚ್ಚು ಟೆಕ್ ಸಂಸ್ಥೆಗಳ ಸ್ಥಾಪನೆ ಮೂಲಕ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಬೇಕೆಂದು ಮನವಿ ಮಾಡಿದರು.

ರಿಯಲ್ ಲೈಫ್‌ನಲ್ಲಿ ವೈದ್ಯ; ರೀಲ್ ಲೈಫ್‌ನಲ್ಲಿ ನಾಯಕ!

ಡಾ.ಪಿ.ವಿ.ಆರ್ ಲೀಲಾಮೋಹನ್ ಅವರ ಬಹುಮುಖ ಪ್ರತಿಭೆ | ಇತ್ತೀಚೆಗೆ ತೆರೆಕಂಡ ರೋಡ್‌ಕಿಂಗ್‌ನಲ್ಲೂ ಪ್ರಮುಖ ಪಾತ್ರ

ವೃತ್ತಿಯಲ್ಲಿ ವೈದ್ಯರಾದರೂ ನಟನೆ ಎನ್ನುವುದು ಪ್ಯಾಶನ್ ಎನ್ನುವ ಲೀಲಾ ಮೋಹನ್, ಚಿಕ್ಕಂದಿನಿಂದ ನಟಿಸುವ ಆಸಕ್ತಿ ಇತ್ತು. ಈ ಟಿವಿ ಕನ್ನಡದ 'ಬದುಕು' ಧಾರಾವಾಹಿಯಲ್ಲಿ ನಟಿಸಿದ್ದೆ. ಆಮೇಲೆ ವೈದ್ಯಕೀಯ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿಸಿಕೊಂಡಿದ್ದರಿಂದ ನಟನೆಯಿಂದ ದೂರ ಉಳಿಯಬೇಕಾಯಿತು. ಆ ನಂತರ ಲಾಫಿಂಗ್ ಪೀಕಾಕ್ ಪ್ರೊಡಕ್ಷನ್ಸ್ ಎಂಬ ನಿರ್ಮಾಣ ಸಂಸ್ಥೆ ಪ್ರಾರಂಭಿಸಿ ಕಿರುಚಿತ್ರಗಳಲ್ಲಿ ನಟಿಸಿದ್ದೆ. ಕೆಲವು ಮ್ಯೂಸಿಕ್ ಆಲ್ಬಂ ನಿರ್ಮಾಣದ ಲ್ಲಿಯೂ ತೊಡಗಿಸಿಕೊಂಡೆ. ಕಳೆದ ಕೆಲವು ವರ್ಷಗಳಿಂದ ಪುನಃ ಅಭಿನಯದಲ್ಲಿ ತೊಡಗಿಸಿ ಕೊಂಡಿದ್ದೇನೆ' ಎನ್ನುತ್ತಾರೆ.

ವೈದ್ಯರೆಂದರೆ ತಾವಾಯಿತು, ತಮ್ಮ ಆಸ್ಪತ್ರೆ, ರೋಗಿಗಳ ಆರೈಕೆಯಲಿಯೇ ಜೀವನ ಕಳೆಯುತ್ತಾರೆ ಎನ್ನುವುದೇ ಅನೇಕರ ಅಭಿಪ್ರಾಯ. ಆದರೆ ಇಲ್ಲೊಬ್ಬರು, ಬಿಳಿಕೋಟು ಧರಿಸಿದರೆ, ಅದ್ಭುತ ವೈದ್ಯ, ಕ್ಯಾಮೆರಾ ಮುಂದೆ ನಿಂತರೆ ಪ್ರಚಂಡ ನಟ. ವೈದ್ಯಕೀಯ ಸೇವೆಯ್ಲಲ್ಲಿರುವ ಅನೇಕರು ಚಿತ್ರರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ನಟ, ನಿರ್ಮಾಪಕ, ನಿರ್ದೇಶಕರಾಗಿ ತಮ್ಮದೇ ರೀತಿಯಲ್ಲಿ ಕಲಾಸೇವೆ ಮಾಡಿದ್ದಾರೆ. ಈ ಸಾಲಿಗೆ ಇದೀಗ ಡಾ.ಪಿ.ವಿ.ಆರ್ ಲೀಲಾ ಮೋಹನ್ ಸೇರ್ಪಡೆಯಾಗಿದ್ದಾರೆ.

ಎಚ್‌ಎಸ್‌ಆರ್. ಲೇಔಟ್‌ನಲ್ಲಿ ಪಡಿತೆಮ್ ಹೆಲ್ತ್ ಕೇರ್ ಕೇಂದ್ರವನ್ನು ಆರಂಭಿಸಿರುವ ಡಾ. ಲೀಲಾ ಮೋಹನ್ ಅವರು, ಮಣಿಪಾಲ್, ಕೊಲಂಬಿಯಾ ಏಷ್ಯಾ, ಮದರ್ ಹುಡ್ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಜನರಲ್ ಫಿಸಿಶಿಯನ್ ಹಾಗೂ ಡಯಾಬಿಟಿಸ್ ಸ್ಪೆಷಲಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವೈದ್ಯರಾಗಿ ದಶಕಗಳ ಸೇವೆ ಸಲ್ಲಿರುವ ಲೀಲಾ ಅವರು ಜೂನ್ 23ರಂದು ಬಿಡುಗಡೆಯಾಗಿರುವ 'ರೋಡ್ ಕಿಂಗ್' ಚಿತ್ರದಲ್ಲೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮುಂದಿನ ಕೆಲ ದಿನದಲ್ಲಿಯೇ ತೆರೆಮೇಲೆ ಬರಲಿರುವ ನಾಯಿ ಇದೆ ಎಚ್ಚರಿಕೆ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆ.

ರೋಡ್ ಕಿಂಗ್, ಲೀಲಾ ಮೋಹನ್ ಅವರ ಮೊದಲ ಚಿತ್ರವೇನಲ್ಲ. ಕೆಲವು ವರ್ಷಗಳ ಹಿಂದೆ ಬಿಡುಗಡೆಯಾದ 'ಗಡಿಯಾರ' ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಅವರು, ಪ್ರಿಯಾಂಕಾ ಉಪೇಂದ್ರ ಅಭಿನಯದ ಉಗ್ರಾವತಾರ ಚಿತ್ರದಲ್ಲಿ ಸೈಕೋ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಿ ಇದೆ ಎಚ್ಚರಿಕೆ, ಪುಟಾಣಿ ಪಂಟರ್‌ಗಳು ಚಿತ್ರಗಳಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ಕನ್ನಡವಲ್ಲದೆ ತೆಲುಗಿನ ಕಲ್ಯಾಣಮಸ್ತು ಚಿತ್ರದಲ್ಲೂ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಹಾಲಿವುಡ್ ನಿರ್ದೇಶಕ ರ್‍ಯಾಂಡಿ ಕೆಂಟ್ ನಿರ್ದೇಶನದ ರೋಡ್ ಕಿಂಗ್ ಚಿತ್ರದ ಬಿಡುಗಡೆಗೆ ಎದುರು ನೋಡುತ್ತಿರುವ ಡಾ. ಲೀಲಾ ಮೋಹನ್, ಅದೇ ನಿರ್ದೇಶಕರ ರೋಡ್ ಕಿಂಗ್ 2 ಚಿತ್ರದಲ್ಲಿ ನಾಯಕನಾಗಿ ನಟಿಸಲಿದ್ದಾರೆ. ಈ ಚಿತ್ರದ ಘೋಷಣೆ ಸದ್ಯದಲ್ಲಿಯೇ ಆಗಲಿದೆ. ವೈದ್ಯಕೀಯ ವೃತ್ತಿ, ನಟನೆಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲೂ ಗುರುತಿಸಿಕೊಂಡಿರುವ ಡಾ. ಲೀಲಾ ಮೋಹನ್ ಅವರ ಸೇವೆಯನ್ನು ಗುರುತಿಸಿ ಹಲವು ಸಂಘ-ಸಂಸ್ಥೆಗಳು ಅವರಿಗೆ ರಾಷ್ಟ್ರೀಯ ರತ್ನ, ಸಾಧಕ ರತ್ನ, ಕರ್ನಾಟಕ ರತ್ನಶ್ರೀ, ವರ್ಷದ ಕನ್ನಡ ರತ್ನ, ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

ಸಮಾಚಾರ ಸಣ್ಣದಲ್ಲ

ಅಗಲಿದ ಜೀವ

ಕೋಟ ಶ್ರೀನಿವಾಸ ಪೂಜಾರಿ ತಾಯಿ ನಿಧನ

ಉಡುಪಿ: ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಮಾತೃ ವಿಯೋಗವಾ ಗಿದೆ. ಕೋಟದ ಕೋಟತಟ್ಟು ನಿವಾಸಿ ಲಚ್ಚಿ ಪೂಜಾರ್ತಿ (97) ಅವರು



ವಯೋಸಹಜ ಕಾಯಿಲೆ ಯಿಂದ ಭಾನುವಾರ ನಿಧನರಾದರು.

ಮೃತರಿಗೆ ಪುತ್ರ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಲಚ್ಚಿ ಪೂಜಾರ್ತಿ ಕೃಷಿಕರಾಗಿದ್ದರು. ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನ ಏರಿದ ಪ್ರತಿ ಸಂದರ್ಭದಲ್ಲಿ ಕೋಟ ಶ್ರೀನಿವಾಸ ಪೂಜಾರಿ ಅವರು, ತಾಯಿ ಮನೆಗೆ ತೆರಳಿ ಆಶೀರ್ವಾದ ಪಡೆಯುತ್ತಿದ್ದರು. ಅಲ್ಲದೇ ಚುನಾವಣೆ ವೇಳೆ ತಾಯಿಯೊಂದಿಗೆ ತೆರಳಿ ಮತ ಚಲಾಯಿಸುತ್ತಿದ್ದರು. ಇನ್ನು ತಮ್ಮ ಯಶಸ್ಸಿನಲ್ಲಿ ತಾಯಿಯವರ ಪಾತ್ರ ಮಹತ್ವದ್ದು ಎಂದು ಯಾವಾಗಲೂ ಸ್ಮರಿಸುತ್ತಿದ್ದರು. ಲಚ್ಚಿ ಪೂಜಾರ್ತಿ ಅವರ ನಿಧನಕ್ಕೆ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ, ಉಡುಪಿ ಶಾಸಕ ಯಶ್ಪಾಲ್ ಸುವರ್ಣ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ, ಕಾರ್ಕಳ ಶಾಸಕ ಸುನೀಲ್ ಕುಮಾರ್ ಸೇರಿ ಹಲವರು ಸಂತಾಪ ಸೂಚಿಸಿದ್ದಾರೆ.

ಮೊಯ್ಲಿ ಪುತ್ರಿ ಹಂಸಾ ಮೊಯ್ಲಿ ನಿಧನ

ಬೆಂಗಳೂರು: ಕೇಂದ್ರದ ಮಾಜಿ ಸಚಿವ, ಮಾಜಿ ಮುಖ್ಯಮಂತ್ರಿ ವಿರಪ್ಪ ಮೊಯ್ಲಿ ಪುತ್ರಿ ಹಂಸಾ ಮೊಯ್ಲಿ ಅವರು ಅನಾರೋಗ್ಯ ದಿಂದ ಭಾನುವಾರ



ಕೊನೆಯು ಸಿರು ಎಳೆದಿದ್ದಾರೆ. 46 ವರ್ಷದ ಹಂಸಾ ಮೊಯ್ಲಿ ಭರತನಾಟ್ಯ ನೃತ್ಯಗಾರ್ತಿ ಹಾಗೂ ನೃತ್ಯ ಸಂಯೋಜಕಿಯಾಗಿದ್ದರು. ದೇವದಾಸಿಯರ ಜೀವನಾಧರಿತ ತಮಿಳು ಚಿತ್ರ 'ಶೃಂಗಾರಂ'ನಲ್ಲಿ ಅಭಿಯಿಸಿದ್ದರು. ಕೆಲದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಹಂಸಾ ಅವರ ಆರೋಗ್ಯದಲ್ಲಿ ಏರುಪೇರಾ ಗುತ್ತಿದ್ದಂತೆ ಶನಿವಾರ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರು ಎಳೆದಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸೋಮವಾರ ಅಂತ್ಯಸಂಸ್ಕಾರ ನಡೆಯಲಿದೆ. ದೆಹಲಿ ಪ್ರವಾಸದಲ್ಲಿದ್ದ ವೀರಪ್ಪ ಮೊಯ್ಲಿ ಅವರು ಪುತ್ರಿಯ ನಿಧನ ಸುದ್ದಿ ತಿಳಿದು ಬೆಂಗಳೂರಿಗೆ ವಾಪಸಾಗಿದ್ದಾರೆ. ವೀರಪ್ಪ ಮೊಯ್ಲಿ ಅವರಿಗೆ ಹರ್ಷ ಮೊಯ್ಲಿ ಮತ್ತು ಹಂಸ ಮೊಯ್ಲಿ ಅವಳಿ-ಜವಳಿ ಮಕ್ಕಳು. ಹಂಸಾ ಮೊಯ್ಲಿ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಶಾಸಕ ಪ್ರದೀಪ್ ಈಶ್ವರ್ ಹಾಗೂ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸದ್ಯಕ್ಕೆ ಹುದ್ದೆಗಳ ತಂಟೆ ಬೇಡ ಎಂದ ಹೈಕಮಾಂಡ್ | ಚುನಾವಣೆ ನಂತರ ಕೆಪಿಸಿಸಿ ಅಧ್ಯಕ್ಷರ ಬದಲು

ಸಿಎಂ, ಡಿಸಿಎಂ ಅಕಾಲಿಕ ಬದಲಾವಣೆ ಅಸಾಧ್ಯ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ನಲ್ಲಿ ಹುದ್ದೆಗಳ ಬದಲಾವಣೆಯ ಬಲವಂತದ ಗಾಳಿ ಬೀಸಲಾರಂಭಿಸಿದೆ.



ಲೋಕಸಭಾ ಚುನಾವಣೆ ಯಲ್ಲಿ ಡಿ.ಕೆ.ಶಿವಕುಮಾರ್ ನಾಯಕತ್ವಕ್ಕೆ ಒಕ್ಕಲಿಗರು ಮತಹಾಕಿಲ್ಲ ಎಂದೂ ಯಾರೊಬ್ಬರೂ ಡಿಸಿಎಂ ಹುದ್ದೆ ತ್ಯಜಿಸ ಬೇಕೆನ್ನುತ್ತಿಲ್ಲ. ಹಾಗೆಯೇ ಒಪ್ಪಂದದ ಅವಧಿ ಮುಗಿದಿದೆ ಎಂದು ಯಾರೊಬ್ಬರೂ ಸಿದ್ದರಾಮಯ್ಯ ಅವರನ್ನು ಸ್ಥಾನವನ್ನೂ ಬಿಟ್ಟುಕೊಡಿ ಎನ್ನುತ್ತಿಲ್ಲ. ಈ ಬಗ್ಗೆ ಹೈಕಮಾಂಡ್ ಕೂಡ ಚರ್ಚೆ ಆಗಿಲ್ಲ. ಆದರೂ ಹೆಚ್ಚುವರಿ ಡಿಸಿಎಂ ಹಾಗೂ ಮುಖ್ಯಮಂತ್ರಿ ಬದಲಾವಣೆ ವಿಚಾರ ಹೆಚ್ಚು ಮುನ್ನೆಲೆಗೆ ಬರುತ್ತಿದೆ.

ಇದರ ಹಿಂದೆ ಆ ಸ್ಥಾನಗಳಲ್ಲಿ ಕಣ್ಣಿಟ್ಟಿರುವ ನಾಯಕರು ಹಾಗೂ ಅವರ ಬೆಂಬಲಿಗರ ಕೈಗಳು ಹೆಚ್ಚು ಕೆಲಸ ಮಾಡುತ್ತಿರುವುದು ಪಕ್ಷದ ಹೈಕಮಾಂಡ್ ಗಮನಕ್ಕೆ ಬಂದಿದೆ. ಹಾಗೆಯೇ ಲಾಭದ ನಿರೀಕ್ಷೆಯಲ್ಲಿರುವ ಕೆಲವು ಸ್ವಾಮೀಜಿಗಳು ಕೂಡ ಇದರಲ್ಲಿ ಪ್ರಮುಖ ಪಾತ್ರ ವಹಿಸಿರುವ ಬಗ್ಗೆಯೂ ದಿಲ್ಲಿ ನಾಯಕರು ಮಾಹಿತಿ ಪಡೆದಿದ್ದಾರೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

ದಿಢೀರ್ ಬದಲಾವಣೆ ಕೂಗು ಏಕೆ?

ವಾಸ್ತವದಲ್ಲಿ ಲೋಕಸಭೆಯಲ್ಲಿ (ಹಿಂದಿನ ಚುನಾವಣೆಗೆ ಹೋಲಿಸಿದರೆ) ಕಾಂಗ್ರೆಸ್ ಉತ್ತಮ ಸಾಧನೆಯನ್ನೇ ಮಾಡಿರುವ ಕಾರಣ ನಾಯಕರ ಹುದ್ದೆ ಬದಲಾವಣೆ ಸದ್ಯಕ್ಕೆ ನಡೆಯದು. ಆದರೆ ಈ ಹಿಂದೆ ಹೈಕಮಾಂಡ್ ನಾಯಕಾರಾದಿಯಾಗಿ ಅನೇಕರು ಹೇಳಿದ್ದಂತೆ, ಲೋಕಸಭೆ ನಂತರ ಶಿವಕುಮಾರ್, ಕೆಪಿಸಿಸಿ ಹುದ್ದೆ ಬಿಟ್ಟುಕೊಡುತ್ತಾರೆ ಎನ್ನುವ ಮಾತುಕತೆ ನಡೆದಿತ್ತು. ಇದನ್ನು ನೆನೆಪಿಸಲು ಸಚಿವ ರಾಜಣ್ಣ ಹೆಚ್ಚುವರಿ ಡಿಸಿಎಂ ಬಾಂಬ್ ಹಾಕುತ್ತಿದ್ದರು. ಇದಕ್ಕೆ ಪ್ರತಿಯಾಗಿ ಡಿ.ಕೆ. ಶಿವಕುಮಾರ್ ಬೆಂಬಲಿಗರು, ಕೆಂಪೇಗೌಡ ಜಯಂತಿಯ ಸಂದರ್ಭ ಬಳಸಿಕೊಂಡು ಮುಖ್ಯಮಂತ್ರಿ ಬದಲಾವಣೆ ಚರ್ಚೆ ಮುನ್ನೆಲೆಗೆ ತಂದರು. ಪರಿಣಾಮ ಒಕ್ಕಲಿಗ ಮಹಾಸಂಸ್ಥಾನ ಮಠದ ಚಂದ್ರಶೇಖರಸ್ವಾಮಿ, ತುಂಬಿದ ಸಮಾರಂಭದಲ್ಲಿ ಮುಖ್ಯಮಂತ್ರಿ ಎದುರೇ ಕುರ್ಚಿ ಬಿಟ್ಟುಕೊಡಬೇಕೆನ್ನುವ ಒತ್ತಾಯ ಮಾಡಿದರು. ಈ ಬಗ್ಗೆ ಮೌನ ವಹಿಸಲಾಗದ ಡಿ.ಕೆ.ಶಿವಕುಮಾರ್, ಇನ್ನು ಮುಂದೆ ಸ್ವಾಮೀಜಿಗಳು ಇಂಥ ಮಾತನಾಡಬೇಡಿ ಎನ್ನುವ ಸಮಾಧಾನದ ಮಾತುಗಳನ್ನಾಡಿದ್ದರು. ಆದರೂ ಸಮಾಧಾನಗೊಳ್ಳದ ಕನಕ ಗುರುಪೀಠದ ಸಿದ್ದರಾಮಾನಂದ ಸ್ವಾಮೀಜಿ, ಸಿದ್ದರಾಮಯ್ಯ ಅವರು ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಅವರ ಬದಲಾವಣೆ ಸಲ್ಲದು ಎಂದು ವಿರೋಧಿಸಿದರು. ಇದೇ ವೇಳೆ ತಮ್ಮದೇನೂ ಕಡಿಮೆ ಎನ್ನುವಂತೆ ಬಾಳೇಹೊನ್ನೂರು ರಂಭಾಪುರ ಮಠದ ಸ್ವಾಮೀಜಿ, ಕಾಂಗ್ರೆಸ್ ನ ಅತ್ಯಂತ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು. ಹೀಗೆ ಸ್ವಾಮೀಜಿಗಳ ಹೇಳಿಕೆಯಾಟ ಮುಂದುವರಿಯಬಾರದು ಎಂದು ವಚನಾನಂದ ಸ್ವಾಮೀಜಿ ಈ ವಿಷಯವನ್ನು ಹೈಕಮಾಂಡ್ ನೋಡಿಕೊಳ್ಳುತ್ತದೆ ಎನ್ನುವ ಮೂಲಕ ಎಲ್ಲಾ ಸ್ವಾಮೀಜಿಗಳ ಹೇಳಿಕೆಗಳಿಗೆ ತೆರೆ ಎಳೆದಿದ್ದಾರೆ.

ಕೆಪಿಸಿಸಿ ಬದಲಾವಣೆ ಸಾಧ್ಯತೆ ಹೆಚ್ಚು

ಈ ಹಿಂದೆಯೇ ಚರ್ಚೆಯಾಗಿರುವಂತೆ ಸದ್ಯದಲ್ಲೇ ಕೆಪಿಸಿಸಿ ಅಧ್ಯಕ್ಷ ಬದಲಾವಣೆ ಮಾಡಲು ಪಕ್ಷದ ಹೈಕಮಾಂಡ್ ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ. ಆದರೆ ಡಿ.ಕೆ. ಶಿವಕುಮಾರ್, ಜಿಪಂ ಮತ್ತು ಬಿಬಿಎಂಪಿ ಚುನಾವಣೆವರೆಗೂ ಅವಕಾಶ ಕೇಳಿರುವ ಹಿನ್ನೆಲೆಯಲ್ಲಿ ಅಲ್ಲಿಯತನಕ ಅವಕಾಶ ನೀಡಲಾಗಿದ್ದು, ಆನಂತರದಲ್ಲಿ ರಾಜ್ಯ ಪ್ರವಾಸ ಮಾಡಿ ಪಕ್ಷ ಸಂಘಟಿಸುವ ಹಿರಿಯರೊಬ್ಬರಿಗೆ ಹುದ್ದೆ ನೀಡಲಾಗುತ್ತದೆ. ಹೀಗಾಗಿ ಸಚಿವರಾದ ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ ರೇಸ್‌ನಲ್ಲಿದ್ದಾರೆ. ಅಷ್ಟಕ್ಕೂ ಶಿವಕುಮಾರ್ ಅವರಿಗೆ ಸದ್ಯಕ್ಕೆ ಚನ್ನಪಟ್ಟಣ ಉಪಚುನಾವಣೆ ಗೆಲ್ಲುವ ಮೂಲಕ ಸಹೋದರ ಡಿ.ಕೆ.ಸುರೇಶ್ ರಾಜಕೀಯ ಭವಿಷ್ಯ ಗಟ್ಟಿಗೊಳಿಸುವ ದಿಗಿಲಿ ನಲ್ಲಿದ್ದು, ಅಲ್ಲಿ ತನಕ ಯಾವುದೇ ಬದಲಾವಣೆ ಯನ್ನೂ ಅವರು ಒಪ್ಪುವುದಿಲ್ಲ ಎನ್ನಲಾಗಿದೆ. ಮುಂದಿನ ದಿನಗಳ ಅಧಿಕಾರ ಹಂಚಿಕೆ ಕುರಿತು ಪಕ್ಷದ ಹೈಕಮಾಂಡ್ ಜತೆಗೆ ಚರ್ಚೆ ನಡೆಸಲಾ ಗಿದೆ. ಸದ್ಯ ಸಿಎಂ, ಡಿಸಿಎಂ ಬದಲಾವಣೆ ಬಗ್ಗೆ ಲಕ್ಷ್ಯ ಕೊಡುತ್ತಿಲ್ಲ ಎನ್ನಲಾಗುತ್ತಿದೆ.

ಹೀಗಾಗಿ ಕಾಂಗ್ರೆಸ್‌ನಲ್ಲಿ ಸಿಎಂ ಹಾಗೂ ಡಿಸಿಎಂ ಸೇರಿದಂತೆ ಅನೇಕ ಹುದ್ದೆಗಳ ಅಕಾಲಿಕ ಬದಲಾವಣೆಯ ಬಲವಂತದ ಬಿರುಗಾಳಿ ಎದ್ದಿದೆ. ಹಾಗೆ ನೋಡಿದರೆ, ಪಕ್ಷದಲ್ಲಿ ಹೆಚ್ಚುವರಿ ಡಿಸಿಎಂ ಹುದ್ದೆ ಕೇಳುತ್ತಿರುವುದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಮಾತ್ರ. ಅದರ ನೈಜ ಆಕಾಂಕ್ಷಿಗಳಾದ ಡಾ.ಎಚ್.ಸಿ.ಮಹದೇವಪ್ಪ ಅವರಾಗಲೀ, ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಹಾಗೂ ಪರಮೇಶ್ವರ್, ಕೆ.ಎಚ್. ಮುನಿಯಪ್ಪ ಅವರಾಗಲೀ ಅಲ್ಲ, ಈ ವಿಚಾರದಲ್ಲಿ ಮಹದೇವಪ್ಪ ಹಾಗೂ ಜಾರಕಿಹೊಳಿ ಕೊಂಚ ಹಿಂದೆಯೇ ಇದ್ದಾರೆ. ಏಕೆಂದರೆ, ಅವರಿಬ್ಬರೂ ಅವರು ಕೆಪಿಸಿಸಿ ಅಧ್ಯಕ್ಷರ ಹುದ್ದೆ ಮೇಲೆ ಕಣ್ಣಿಟ್ಟಿದ್ದು, ಸದಾ ಕಾರ್ಯಕರ್ತರ ಜತೆ ಹಾಗೂ ಜನರ ಮಧ್ಯೆ ರಾಜಕಾರಣ ಮಾಡುವವರು ಎನ್ನುವ ಮಾಹಿತಿ ಪಕ್ಷದ ಹೈಕಮಾಂಡ್ ಗೆ ತಿಳಿದಿದೆ. ಈ ಹಿನ್ನೆಲೆಯಲ್ಲಿ ಮಹದೇವಪ್ಪ ಅವರು ದೆಹಲಿ ಪ್ರವಾಸದ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಭೇಟಿ ಸಂದರ್ಭದಲ್ಲಿ ಈ ವಿಚಾರಗಳನ್ನು ಚರ್ಚಿಸಿದ್ದಾರೆ ಎನ್ನಲಾಗಿದ್ದು, ಖರ್ಗೆ ಅವರು ಈ ಇಬ್ಬರ ವಿಚಾರದಲ್ಲಿ ಗಂಭೀರ ಲೆಕ್ಕಾಚಾರ ಮಾಡುತ್ತಿದ್ದಾರೆ.

ಈ ಇಬ್ಬರೂ ಸಚಿವರೂ ಕೆಪಿಸಿಸಿ ಅಧ್ಯಕ್ಷ ಹುದ್ದೆ ನೀಡುವುದಾದರೆ, ಮಂತ್ರಿಸ್ಥಾನದ ಜತೆಗೇ ಇರಬೇಕು ಎಂಬ ಬೇಡಿಕೆ ಸಲ್ಲಿಸಿದ್ದಾರೆ ಎನ್ನಲಾಗಿದೆ. ಈ ಇಬ್ಬರೂ ನಾಯಕರು ಅಪಾರ ವಿರೋಧದ ನಡುವೆಯೂ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿ ಸಂಸತ್ ನಲ್ಲಿ ಪಕ್ಷದ ಕೈ ಬಲಪಡಿಸಿದ್ದಾರೆ. ಉಳಿದಂತೆ ಇತರ ದಲಿತ ಸಮುದಾಯದ ಮಂತ್ರಿಗಳು ಈ ವಿಚಾರದಲ್ಲಿ ವಿಫಲವಾಗಿದ್ದು, ಇದನ್ನು ಪಕ್ಷದ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ ಎಂದೂ ಹೇಳಲಾಗಿದೆ.

ಮುಡಾದಲ್ಲಿ 5 ಸಾವಿರ ಕೋಟಿ ಅವ್ಯವಹಾರ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ



ಮತ್ತು ತಂಡದ 'ಸಹಕಾರ'ದಿಂದ' ಮುಡಾ ಅಧಿಕಾರಿಗಳು 5 ಸಾವಿರ ಕೋಟಿ ರು. 'ಅವ್ಯವಹಾರ' ನಡೆಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತೀಂದ್ರ ಬುದ್ಧಿವಂತನೋ, ಮಂಗನೋ ಗೊತ್ತಾಗುತ್ತಿಲ್ಲ. ಆತನನ್ನು ಮುಂದೆ ಇಟ್ಟುಕೊಂಡು ದಂಧೆ ಮಾಡಲಾಗುತ್ತಿದೆ. ಇದಕ್ಕೆ ಜನಪ್ರತಿನಿಧಿ ಗಳು-ಅಧಿಕಾರಿಗಳು ಸಿಂಡಿಕೇಟ್ ರಚಿಸಿಕೊಂಡಿದ್ದಾರೆ. ಇದರ ಮೂಲಕ ಅವ್ಯವಹಾರ ನಡೆಸಿದ್ದಾರೆ. ಇದರಲ್ಲಿ ಮುಡಾ ಆಯುಕ್ತ ದಿನೇಶ್ ಕುಮಾರ್, ಶಾಸಕ ಕೆ.ಹರೀಶ್‌ಗೌಡ, ರಾಕೇಶ್ ಪಾಪಣ್ಣ, ಮುಡಾ ಅಧ್ಯಕ್ಷ ಕೆ. ಮರೀಗೌಡ, ಹಿಂದಿನ ಅಧ್ಯಕ್ಷ ರಾಜೀವ್, ಆಯುಕ್ತ ನಟೇಶ್, ಮರಿತಿಬ್ಬೇಗೌಡರ ಸಂಬಂಧಿ ಸುದೀಪ್, ದಲ್ಲಾಳಿಗಳಾದ ಉತ್ತಮಗೌಡ, ಮೋಹನ್, ಮುಡಾ ಕಮಿಷನರ್ ಭಾವಮೈದುನ ತೇಜಸ್‌ಗೌಡ, ರೆಕಾರ್ಡ್ ರೂಂ ಅಧಿಕಾರಿ ತ್ರಿಶೂಲ್ ಮತ್ತಿತರರು ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟಕ್ಕೆ ಸಂಬಂಧಿಸಿದಂತೆ ಚರ್ಚೆ ಸಾಧ್ಯತೆ

ಬಿಜೆಪಿ ಕಾರ್ಯಕಾರಣಿ ಸಭೆ 4ಕ್ಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ವಿರುದ್ಧ ಹೋರಾಟ ಮುಂದುವರೆಸುವ ಹಾಗೂ ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧಿಕಾರದ ಗದ್ದುಗೆ ಏರಿದ ಹಿನ್ನಲೆಯಲ್ಲಿ ಜು.4ರಂದು ಬಿಜೆಪಿ ರಾಜ್ಯ ಕಾರ್ಯಕಾರಣಿ ಸಭೆಯನ್ನು ಕರೆದಿದೆ.

ಲೋಕಸಭಾ ಚುನಾವಣೆ ಮುಕ್ತಾಯಗೊಂಡ ಬಳಿಕ ಮೊದಲ ರಾಜ್ಯ ಕಾರ್ಯಕಾರಿಣಿ ಸಭೆ ಆಯೋಜಿಸಿದೆ. ಈ ಕಾರ್ಯಕಾರಿಣಿಯಲ್ಲಿ ಮೋದಿ ಸರಕಾರ ರಚನೆಗೆ ಅಭಿನಂದನೆ ಸಲ್ಲಿಸುವುದರೊಂದಿಗೆ ರಾಜ್ಯ ಕಾಂಗ್ರೆಸ್



ಸರಕಾರದ ವಿರುದ್ಧ ಹೋರಾಟದ ಸ್ವರೂಪದ ಕುರಿತು ಮಹತ್ವದ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿರುವುದರಿಂದ ಕುತೂಹಲ ಹೆಚ್ಚಿಸಿದೆ.

ಕಾರ್ಯಕಾರಿಣಿ ಸಭೆ ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಕಾರ್ಯಕಾರಿಣಿಯನ್ನು ಉದ್ಘಾಟಿಸಲಿದ್ದು, ನಿರ್ಮಲಾ ಸೀತಾರಾಮನ್, ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ ಹಾಗೂ ವಿ. ಸೋಮಣ್ಣ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದು, ರಾಜ್ಯ ಘಟಕದಿಂದ ಅಭಿನಂದನೆ ಸ್ವೀಕಾರ ಮಾಡಲಿದ್ದಾರೆ.

ಮೊದಲ ನಿರ್ಣಯದಲ್ಲಿ ಮೋದಿ ಸರಕಾರಕ್ಕೆ ಅಭಿನಂದನೆ ಸಲ್ಲಿಸಿದರೆ, ಎರಡನೇ ನಿರ್ಣಯದಲ್ಲಿ ರಾಜ್ಯ ಸರಕಾರದ ವೈಫಲ್ಯಗಳ ಬಗ್ಗೆ ಕೈಗೊಳ್ಳಲಿದೆ. ಬೆಲೆ ಏರಿಕೆ, ಆಡಳಿತ ವೈಫಲ್ಯ, ಭ್ರಷ್ಟಾಚಾರ, ಮುಖ್ಯಮಂತ್ರಿ ರಾಜೀನಾಮೆ ಕೊಡುವವರೆಗೂ ಹೋರಾಟ ನಿಲ್ಲಿಸಬಾರದು ಎನ್ನುವ ನಿರ್ಣಯ ಕೈಗೊಳ್ಳುವ ಸಾಧ್ಯತೆಯಿದೆ. ಸಭೆಯಲ್ಲಿ ಸಭೆಯಲ್ಲಿ ಮುಂದಿನ ಹೋರಾಟ, ಪಕ್ಷದ ಚಟುವಟಿಕೆ ಬಗ್ಗೆ ಚರ್ಚೆಯಾಗಲಿದೆ ಎಂದು ತಿಳಿದುಬಂದಿದೆ.

ಪಕ್ಷ ಸಂಘಟನೆ ಚರ್ಚೆ



ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮಾತನಾಡಿ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆ 4ರಂದು ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ನಡೆಯಲಿದೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಉದ್ಘಾಟಿಸಲಿದ್ದಾರೆ. ಪ್ರತಿಪಕ್ಷ ನಾಯಕ ಆರ್.ಅಶೋಕ್, ಕೇಂದ್ರದ ಸಚಿವರು, ಶಾಸಕರು, ಸಂಸದರು ಭಾಗವಹಿಸಲಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಮೂರನೇ ಬಾರಿ ಅಧಿಕಾರ ಪಡೆದ ಸಾಧನೆ ಸಂಬಂಧ ಅಭಿನಂದನೆ ಸಲ್ಲಿಸಲಾಗುವುದು. ಪ್ರಧಾನಿಯವರನ್ನು ಇದೇ ವೇಳೆ ಅಭಿನಂದಿಸುತ್ತೇವೆ. ರಾಜ್ಯ ಸರಕಾರದ ವೈಫಲ್ಯವನ್ನು, ಭ್ರಷ್ಟಾಚಾರ, ದರ ಏರಿಕೆಯನ್ನು ಖಂಡಿಸುವ ಇನ್ನೊಂದು ನಿರ್ಣಯವನ್ನೂ ಅಂಗೀಕರಿಸುತ್ತೇವೆ. ಪಕ್ಷ ಸಂಘಟನೆ ಕುರಿತು ಚರ್ಚಿಸಲಿದ್ದೇವೆ ಎಂದು ವಿವರಿಸಿದರು.

ಅಸಮಾಧಾನ ಶಮನಕ್ಕೆ ಮಾತುಕತೆ?

ಇನ್ನು ಲೋಕಸಭಾ ಚುನಾವಣೆಯಲ್ಲಿ ಪಕ್ಷದಲ್ಲಿ ಕಾಣಿಸಿಕೊಂಡಿರುವ ಅಸಮಾಧಾನ, ಬಂಡಾಯ ಸೇರಿದಂತೆ ಪಕ್ಷದ ಸಂಘಟನೆ ವಿಷಯದಲ್ಲಿ ಆಗುತ್ತಿರುವ ಸಮಸ್ಯೆಯ ಬಗ್ಗೆಯೂ ಚರ್ಚೆ ನಡೆಯುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ. ರಾಜ್ಯಾದ್ಯಂತ ಪಕ್ಷದ ಅಧ್ಯಕ್ಷ ವಿಜಯೇಂದ್ರ ಪ್ರವಾಸ ಮಾಡುತ್ತಿದ್ದಾರೆ. ಆದರೆ ಸಂಘಟನೆಯಲ್ಲಿ ಹೇಳಿಕೊಳ್ಳುವ ಬದಲಾವಣೆಯಾಗುತ್ತಿಲ್ಲ. ಆದ್ದರಿಂದ ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆ ಹೊತ್ತಿಗೆ ಪಕ್ಷದ ಸಂಘಟನೆಯನ್ನು ಯಾವ ರೀತಿಯಲ್ಲಿ ಬಲಪಡಿಸಬೇಕು ಎನ್ನುವ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ. ಇನ್ನು ಕೋಟ ಶ್ರೀನಿವಾಸ್ ಪೂಜಾರಿ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನಪರಿಷತ್ ಪ್ರತಿಪಕ್ಷ ನಾಯಕನ ಸ್ಥಾನಕ್ಕೆ ಯಾರನ್ನು ಕೂರಿಸಬೇಕು ಎನ್ನುವ ಬಗ್ಗೆಯೂ ಚರ್ಚೆ ನಡೆಯಲಿದೆ ಎನ್ನಲಾಗಿದೆ.

ತಪ್ಪಿತಸ್ಥರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ

ವಾಲ್ಮೀಕಿ ನಿಗಮ ಹಗರಣ ಪ್ರಕರಣದ ತನಿಖೆ ಚುರುಕು

ರಾಯಚೂರು: ಮಹರ್ಷಿ ವಾಲ್ಮೀಕಿ ನಿಗಮದ 187 ಕೋಟಿ ರು. ಹಗರಣದ ತನಿಖೆ ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದು ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಎಸ್ಐಟಿ, ಸಿಬಿಐ ಮತ್ತು ಇಡಿ ಮೂರು ಸಂಸ್ಥೆಗಳು ಪ್ರಕರಣದ ತನಿಖೆ ನಡೆಸುತ್ತಿವೆ. ಮೂರು ಸಂಸ್ಥೆಗಳು ದಾಖಲೆಗಳ ಸಂಗ್ರಹ ಮಾಡುತ್ತಿದ್ದು, ತನಿಖೆ ತೀವ್ರಗತಿಯಲ್ಲಿ ಸಾಗಿದೆ. ಇದರಲ್ಲಿ ಯಾರೇ ತಪ್ಪಿತಸ್ಥರು ಇದ್ರೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಜೂನ್ 26ರಂದು ಪ್ರಿನ್ಸಿಪಲ್ ಸೆಕ್ರೆಟರಿ ನೇತೃತ್ವದಲ್ಲಿ ಸಭೆ ಆಗಿದೆ. ನಿಮಗದ ಪ್ರಿನ್ಸಿಪಲ್ ಸೆಕ್ರೆಟರಿ ಮಂಜುನಾಥ ಹಾಗೂ ಎಲ್ಲಾ ಅಧಿಕಾರಿಗಳ ಜೊತೆಗೆ ಸಿಎಂ ಸಿದ್ದರಾಮಯ್ಯ ಕೂಡ ಸಭೆ ಮಾಡಿದ್ದಾರೆ. ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸಲು ಸಭೆಯಲ್ಲಿ ಹೇಳಿದ್ದೇವೆ ಎಂದರು.

ನಿಗಮದಲ್ಲಿ 10 ವರ್ಷಗಳಿಂದ ನಡೆದ ಎಲ್ಲಾ ಹಣದ ವ್ಯವಹಾರದ ಮಾಹಿತಿ ಕೇಳಿದ್ದೇವೆ. ನಮ್ಮ ಅಧಿಕಾರಿಗಳು ಒಂದು ಬುಕ್ ಲೆಟ್ ರೂಪದಲ್ಲಿ ಸಿದ್ಧಪಡಿಸುತ್ತಿದ್ದಾರೆ. 10ವರ್ಷದಿಂದ ಇಲ್ಲಿಯವರೆಗೆ ನಿಗಮಗಳಿಗೆ ಎಷ್ಟು ಅನುದಾನ ಹೋಯ್ತು. ಯಾವ್ಯಾವ ಯೋಜನೆಗಳಿಗೆ ಹಣ ಖರ್ಚು ಆಯ್ತು, ಎಷ್ಟು ಉಳಿಕೆ ಆಯ್ತು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಯಾರೇ ತಪ್ಪಿತಸ್ಥರು ಇದ್ರೂ, ಇದರಲ್ಲಿ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದರು.



ಈ ಪ್ರಕರಣವನ್ನು ಮೂರು ಉನ್ನತ ಸಂಸ್ಥೆಗಳ ದಕ್ಷ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ. ನಮ್ಮ ಸಮಾಜಕ್ಕಾಗಿ ಬಂದ ಹಣ ಅದು. ನಾನು ಕೂಡ ಎಸ್‌ಟಿ ಮೀಸಲು ಕ್ಷೇತ್ರದಿಂದ ಆಯ್ಕೆ ಆಗಿದ್ದೇನೆ. ಹಗರಣದ ಬಗ್ಗೆ ಸಮಗ್ರ ತನಿಖೆ ಆಗುತ್ತೆ ಎಂಬ ಭರವಸೆ ಇದೆ. ಯಾರು ತಪ್ಪು ಮಾಡಿದ್ದಾರೆ, ಯಾರು ದುಡ್ಡು ಲೂಟಿ ಮಾಡಿದ್ದಾರೆ. ಅವರಿಂದ ದುಡ್ಡು ಮರಳಿ ನಿಗಮಕ್ಕೆ ತರಿಸುವ ಕೆಲಸ ನಡೆದಿದೆ.

- **ಬಸವನಗೌಡ ದದ್ದಲ್**, ವಾಲ್ಮೀಕಿ ನಿಗಮದ ಅಧ್ಯಕ್ಷ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304,
ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023-24/886 ದಿನಾಂಕ:27.06.2024

ಅವಧಿ ವಿಸ್ತರಣೆ ಟೆಂಡರ ಅಧಿಸೂಚನೆ ಕರೆ-2
(ಕೆ.ಪಿ.ಪಿ. ಪ್ರೋಟಲ್-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ಈ ಕಛೇರಿ ಅಲ್ಪಾವಧಿ ಟೆಂಡರ ಅಧಿಸೂಚನೆ ಪತ್ರ ಸಂ ಕನೀನನಿನಿ/ಎಚ್.ಬಿ.ಸಿ/ಪಿಬಿ/ಟಿಬಿಎಲ್ಎಸ್/ಟಿಎನ್.ಡಿ/ಎಸ್.ಸಿ.ಪಿ/2024-25/706 ದಿನಾಂಕ:18/06/2024 ಟೆಂಡರ ಆಹ್ವಾನಿಸಲಾಗಿರುತ್ತದೆ ಸದರಿ ಪ್ರಕಟಣೆಯಲ್ಲಿನ ಕ್ರ ಸಂ 01 ರಿಂದ 06 ರಲ್ಲಿನ ಕಾಮಗಾರಿಗಳಿಗೆ ಮೊದಲನೇ ಅವಧಿ ವಿಸ್ತರಣೆ ಮಾಢಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ 1) ರೂ. 489.61 ಲಕ್ಷ,2) ರೂ. 489.61 ಲಕ್ಷ, 3)ರೂ.489.61 ಲಕ್ಷ,4)ರೂ.489.61 ಲಕ್ಷ, 5)ರೂ.489.61 ಲಕ್ಷ, 6)ರೂ. 489.61 ಲಕ್ಷ

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:ದಿನಾಂಕ 01.07.2024 ರ 10.30 ಬೆಳಿಗ್ಗೆ ರಿಂದ 08.07.2024 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:06.07.2024 ರ ಸಾಯಂಕಾಲ 4.00 ವರೆಗೆ,3:ಫ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 05.07.2024 ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:01.07.2024ರ 10.30 ಬೆಳಿಗ್ಗೆ ರಿಂದ 08.07.2024 ರ ಸಾಯಂಕಾಲ 4.00 ಗಂಟೆ ವರಗೆ 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):10.07.2024 ರ ಬೆಳಿಗ್ಗೆ 11.00 ಗಂಟೆಗೆ,6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 12.07.2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ),7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:11.07.2024 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp. karnataka.gov.in/kpp-portal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/-ಪ್ರವೀಣ .ಬ. ಹುಣಶೀಕಟ್ಟಿ,
ಕಾರ್ಯನಿರ್ವಾಹಕ ಇಂಜಿನೀಯರರು,
ಎಚ್.ಬಿ.ಸಿ ವಿಭಾಗ, ಅಥಣಿ..

DIPR/BGM/RO-NO-237/KSMCA/2024-25

ಮನ್ ಕಿ ಬಾತ್ ಮುಖ್ಯಾಂಶಗಳು

← ಮೊದಲಪುಟದಿಂದ

- ಮುಂಬರುವ ಪ್ಯಾರಿಸ್ ಒಲಿಂಪಿಕ್‌ನಲ್ಲಿ ಭಾರತದ ಕ್ರೀಡಾಪಟುಗಳಿಂದ ಅದ್ಭುತ ಪ್ರದರ್ಶನ ನಿರೀಕ್ಷಿಸಲಾಗಿದ್ದು, ಜನರು 'ಚಿಯರ್ 4 ಭಾರತ್' ಹ್ಯಾಷ್‌ಟ್ಯಾಗ್ ಮೂಲಕ ಅವರಿಗೆ ಉತ್ತೇಜನ ನೀಡಬೇಕು.
- ವಿಶ್ವ ಪರಿಸರ ದಿನದ ಅಂಗವಾಗಿ ಈ ವರ್ಷ 'ಅಮ್ಮನ ಹೆಸರಿನಲ್ಲಿ ಒಂದು ಗಿಡ' ವಿಶೇಷ ಅಭಿಯಾನ ಆರಂಭವಾಗಿದೆ. ನಾನು ಕೂಡ ನನ್ನ ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಟ್ಟಿದ್ದೇನೆ. ದೇಶದ ಪ್ರತಿಯೊಬ್ಬರೂ ತಾಯಿ ಜತೆಗೆ ಅಥವಾ ಆಕೆಯ ಹೆಸರಿನಲ್ಲಿ ಗಿಡಗಳನ್ನು ನೆಡುವಂತೆ ಕೋರುತ್ತೇನೆ.
- ಭಾರತದ ಅನೇಕ ಉತ್ಪನ್ನಗಳಿಗೆ ಜಗತ್ತಿನಾದ್ಯಂತ ಭಾರಿ ಬೇಡಿಕೆ ಇದೆ. ಭಾರತದ ಸ್ಥಳೀಯ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಗೆ ಹೋಗುವುದನ್ನು ಕಂಡಾಗ ನಮಗೆ ಹೆಮ್ಮೆಯಾಗುವುದು ಸಹಜ. ಅವುಗಳಲ್ಲಿ ಆಂಧ್ರ ಪ್ರದೇಶದ ಅರಕು ಕಾಫಿ ಕೂಡ ಒಂದು.
- ಕೇರಳದ ಅಟ್ಟಪ್ಪಾಡಿಯಲ್ಲಿ 'ಕಾರ್ತುಂಬಿ ಛತ್ರಿಗಳು' ಎಂಬ ವಿಶೇಷ ಕೊಡೆಗಳನ್ನು ತಯಾರಿಸಲಾಗುತ್ತಿದೆ. ಕೇರಳದ ನಮ್ಮ ಆದಿವಾಸಿ ಸಹೋದರಿಯರು ಇದನ್ನು ತಯಾರಿಸುತ್ತಿದ್ದಾರೆ. ಈ ಕೊಡೆಗಳಿಗೆ ದೇಶಾದ್ಯಂತ ಬೇಡಿಕೆ ಹೆಚ್ಚುತ್ತಿದೆ. ಇವುಗಳನ್ನು ಆನ್‌ಲೈನ್‌ನಲ್ಲಿ ಸಹ ಮಾರಲಾಗುತ್ತಿದೆ.

ಜು.15ರಿಂದ ಸಂಗೀತ ಕೋರ್ಸ್ ಆರಂಭ: ಸಂಗೀತ ನಿರ್ದೇಶಕ ಹಂಸಲೇಖ

ಹಂಸಲೇಖಗೆ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ

ಮಂಡ್ಯ: ಯಾವುದೇ ಭೇದಭಾವವಿಲ್ಲದೇ ಎಲ್ಲ ಮಕ್ಕಳಿಗೆ ಐದು ಸಂಗೀತ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯದ ಮೂಲಕ ಆನ್‌ಲೈನ್ ಮತ್ತು ಆಫ್‌ಲೈನ್ ನಲ್ಲಿ ಜುಲೈ 15ರಿಂದ ಆರಂಭಿಸುತ್ತಿದ್ದೇನೆ ಎಂದು ಸಂಗೀತ ನಿರ್ದೇಶಕ ಹಂಸಲೇಖ ತಿಳಿಸಿದ್ದಾರೆ.

ನಗರದಲ್ಲಿ ಕರ್ನಾಟಕ ಸಂಘ, ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿ, ದೇಸಿ ಸಂಗೀತ ಶಾಲೆಯನ್ನು ಸ್ಥಾಪಿಸುವ ಮೂಲಕ ಸಂಗೀತಾಸಕ್ತರಿಗೆ ತರಬೇತಿ ನೀಡುತ್ತಿದ್ದೇವೆ. ಕರ್ನಾಟಕ ಸಂಗೀತ ಸರ್ಟಿಫಿಕೇಟ್ ಕೋರ್ಸ್, ಹಿಂದೂಸ್ತಾನಿ ಸಂಗೀತ ಸರ್ಟಿಫಿಕೇಟ್ ಕೋರ್ಸ್, ಐದನೇ ಸಂಗೀತ ಶಾಸ್ತ್ರ ಸರ್ಟಿಫಿಕೇಟ್ ಕೋರ್ಸ್, ಸುಗಮ ಸಂಗೀತ ಸರ್ಟಿಫಿಕೇಟ್ ಕೋರ್ಸ್ ಹಾಗೂ ಮುಖ್ಯವಾಗಿ ಸಿನಿಮಾ ಸಂಗೀತದ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಜು.15ರಿಂದ ನಡೆಸಲಾಗುತ್ತಿದೆ ಎಂದು ಹೇಳಿದರು.

ಮಂಡ್ಯ ನಗರದ ರೈತ ಸಭಾಂಗಣದಲ್ಲಿ ಕರ್ನಾಟಕ ಸಂಘದ ವತಿಯಿಂದ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನನಗೆ ಗೌರವಯುತವಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಋಣಭಾರ ಹೆಚ್ಚು ಮಾಡಿದ್ದೀರಾ. ಬುದ್ಧ, ಬಸವ, ಅಂಬೇಡ್ಕರ್ ನನ್ನ ಮನಸಿನಲ್ಲಿ ಸದಾ ಹರಿಯುತ್ತಿರುತ್ತಾರೆ. ಕೆ.ವಿ.ಶಂಕರಗೌಡ ಅವರ ಪರಮ ಅಭಿಮಾನಿಯಾಗಿರುವೆ. ಈ ಹಿಂದೆ ಅವರ ಹೆಸರಿನ ಪ್ರಶಸ್ತಿಯನ್ನು ಸ್ವೀಕರಿಸಿದ್ದೆ. ಈ ಪ್ರಶಸ್ತಿ ನೀಡಲು ಆಯ್ಕೆ ಮಾಡಿದವರಿಗೆಲ್ಲ ಹೃದಯಸ್ಪರ್ಶಿ ಕೃತಜ್ಞತೆ ತಿಳಿಸುವೆ ಎಂದರು.

ಲತಾ ಹಂಸಲೇಖ, ಐಪಿಎಸ್ ಅಧಿಕಾರಿ ಬಿ.ಆರ್.ರವಿಕಾಂತೇಗೌಡ, ಪುರುಷೋತ್ತಮಾನಂದನಾಥ ಸ್ವಾಮೀಜಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ಪಿ. ರವಿಕುಮಾರ್, ಸಚಿವ ಎನ್.ಚಲುವರಾಯಸ್ವಾಮಿ, ಪ್ರೊ.ಜಯಪ್ರಕಾಶಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮುಂತಾದವರು ಇದ್ದರು.

ಸಭಾಭವನ ನಿರ್ಮಾಣಕ್ಕೆ ನೆರವು

ಕರ್ನಾಟಕ ಸಂಘದ ಕಚೇರಿಯಲ್ಲಿ ಶಿಸ್ತು ಇದೆ. ಒಂದು ಸಭಾಭವನ ನಿರ್ಮಿಸುತ್ತಿರುವುದರಿಂದ ನಾನು ಒಂದು ಸಂಗೀತ ಕಾರ್ಯಕ್ರಮವನ್ನು ನನ್ನ ಖರ್ಚಿನಲ್ಲಿಯೇ ಮಾಡಿಕೊಡುತ್ತೇನೆ. ಅದರಿಂದ ಬರುವ ಹಣವನ್ನು ಭವನ ನಿರ್ಮಾಣಕ್ಕೆ ಬಳಸಿಕೊಳ್ಳಬೇಕು ಎಂದು ಹಂಸಲೇಖ ನುಡಿದರು.

ಕರುನಾಡಲ್ಲಿ ಕರವೇ ಕಹಳೆ ಇಂದು

← ಮೊದಲಪುಟದಿಂದ

1. ಕೈಗಾರಿಕಾ ಉದ್ಯೋಗ ಸ್ಥಾಯಿ ಆದೇಶ ಕಾಯಿದೆ 1946 ರ ಅನ್ವಯ ಬಲಿಷ್ಠ ಕಾನೂನು ರೂಪಿಸಿ ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡಬೇಕು.
2. ಖಾಸಗಿ ಸಂಸ್ಥೆಗಳ 'ಸಿ' ಮತ್ತು 'ಡಿ' ದರ್ಜೆ ಹುದ್ದೆಗಳು ಶೇ.100 ಕನ್ನಡಿಗರಿಗೆ ಮೀಸಲಿಡಬೇಕು.
3. ಖಾಸಗಿ ಸಂಸ್ಥೆಗಳ ಇತರೆ ಹುದ್ದೆಯಲ್ಲಿ ಶೇ.80 ಕನ್ನಡಿಗರಿಗೆ ಮೀಸಲಿಡಬೇಕು.
4. 15 ವರ್ಷ ರಾಜ್ಯದಲ್ಲಿದ್ದವರಿಗೆ ಕನ್ನಡಿಗರೆಂದು ಪರಿಗಣಿಸುವ ನಿಯಮವಿದ್ದು, ಅಂತವರಿಗೆ ಕನ್ನಡ ಪರೀಕ್ಷೆ ನಡೆಸಿ ಉತ್ತೀರ್ಣರಾದರೆ ಮಾತ್ರ ಕನ್ನಡಿಗರೆಂದು ಪರಿಗಣಿಸಬೇಕು.
5. ನಿಯಮ ಪಾಲಿಸದ ಸಂಸ್ಥೆಗಳ ಲೈಸೆನ್ಸ್ ರದ್ದು ಮಾಡಬೇಕು. ಸರಕಾರ ನೀಡಿರುವ ಭೂಮಿ, ಸವಲತ್ತುಗಳನ್ನು ವಾಪಸ್ ಪಡೆದು ಕ್ರಿಮಿನಲ್ ಮೊಕದ್ದಮೆ ಹಾಕಬೇಕು.
6. ರಾಜ್ಯ ಸರಕಾರಿ ಸಂಸ್ಥೆ ಮತ್ತು ಸಾರ್ವಜನಿಕ ವಲಯದಲ್ಲಿ ಶೇ.100 ಕನ್ನಡಿಗರಿಗೆ ಮೀಸಲು ನೀಡಬೇಕು.
7. ಕೇಂದ್ರ ಸರಕಾರದ ಇಲಾಖೆಗಳಲ್ಲಿ ಗ್ರೂಪ್ 'ಸಿ' ಹಾಗೂ 'ಡಿ' ಹುದ್ದೆಗಳಲ್ಲಿ ಶೇ.100 ಕನ್ನಡಿಗರಿಗೆ ಮೀಸಲು ನೀಡಬೇಕು.
8. ಕೇಂದ್ರ ಸರಕಾರದ ಇಲಾಖೆಗಳಲ್ಲಿ ಗ್ರೂಪ್ 'ಸಿ', 'ಡಿ' ಹೊರತಾದ ಉಳಿದ ಉದ್ಯೋಗದಲ್ಲಿ ಶೇ.90 ಮೀಸಲು ನೀಡಬೇಕು.
9. ಕನ್ನಡಿಗರಿಗೆ ಮೀಸಲು ಕಲ್ಪಿಸಲು ವಿಫಲವಾಗುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು, ಈ ಅಂಶವನ್ನು ಉದ್ದೇಶಿತ ಕಾನೂನಿನಲ್ಲಿ ಸೇರಿಸಬೇಕು.
10. ರಾಜ್ಯ ಸರಕಾರ ರೂಪಿಸುವ ಕಾನೂನು ಜಾರಿ ಮಾಡಲು ಕನ್ನಡ ಪ್ರಾಧಿಕಾರಕ್ಕೆ ಅಧಿಕಾರ ನೀಡಬೇಕು.

ಶನಿವಾರ ಭೇಟಿಯ ವೇಳೆ 10 ನಿಮಿಷ ಪ್ರತ್ಯೇಕ ಚರ್ಚೆ | ಈ ವೇಳೆ ಡಿಸಿಎಂ ಹುದ್ದೆ ಸೃಷ್ಟಿಗೆ ಸಂಬಂಧಿಸಿದಂತೆ ಚರ್ಚೆ ಸಾಧ್ಯತೆ | ರಾಹುಲ್, ಸಿಎಂ ಚರ್ಚೆಯ ಬಗ್ಗೆ ಮಾಹಿತಿಯಿಲ್ಲ: ಪರಂ

ರಾಹುಲ್ ಗಾಂಧಿ ಜತೆ ಸಿಎಂ ಪ್ರತ್ಯೇಕ ಚರ್ಚೆ

ಬೆಂಗಳೂರು: ದೆಹಲಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಲ ಸಚಿವರು, ಆಪ್ತರೊಂದಿಗೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದರು. ಆದರೆ ಈ ಭೇಟಿಯ ಬಳಿಕ, ಸಿಎಂ, ರಾಹುಲ್ ಗಾಂಧಿ ಪ್ರತ್ಯೇಕ ಸಭೆ ನಡೆಸಿರುವುದು ಇದೀಗ ಕುತೂಹಲಕ್ಕೆ ಕಾರಣವಾಗಿದೆ.

ಮೊದಲಿಗೆ ಸಚಿವರಾದ ಡಾ.ಜಿ.ಪರಮೇಶ್ವರ್, ಜಾರ್ಜ್ ಅವರೊಂದಿಗೆ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಪ್ರತಿಪಕ್ಷದ ನಾಯಕರಾಗಿದ್ದಕ್ಕೆ ಅಭಿನಂದಿಸಿದರು. ಬಳಿಕ ರಾಹುಲ್ ಗಾಂಧಿ ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದಾಗ, ಸಿಎಂ ಬದಲಾವಣೆ ಕೂಗಿನ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಮುಖ್ಯಮಂತ್ರಿ ಬದಲಾವಣೆ ಮತ್ತು ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿ ಬಗ್ಗೆ ಬದಲಾವಣೆ ಬಗ್ಗೆ ಪಕ್ಷದಲ್ಲಿ ಚರ್ಚೆ ನಡೆದಿರುವ ಬಗ್ಗೆ ನಮಗೆ ಯಾವುದೇ ಮಾಹಿತಿಯಿಲ್ಲ. ದೆಹಲಿಗೆ ಹೋದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಯವರೊಂದಿಗೆ ಪ್ರತ್ಯೇಕವಾಗಿ 10 ನಿಮಿಷ ಮಾತನಾಡಿದ್ದಾರೆ ಏನು ಮಾತನಾಡಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ ಆ ಸಂದರ್ಭದಲ್ಲಿ ನಾವೆಲ್ಲ ಹೊರಗೆ ಇದ್ದೆವು ಎಂದು ಸ್ಪಷ್ಟಪಡಿಸಿದರು.

ಯಾವುದೇ ಹುದ್ದೆಯನ್ನು ಬದಲಾವಣೆ ಮಾಡುವುದಿದ್ದರೆ ವರಿಷ್ಠರು ವೀಕ್ಷಕರನ್ನ ಕಳುಹಿಸಿ ಎಲ್ಲ ಶಾಸಕರು ಮುಖಂಡರ ಅಭಿಪ್ರಾಯ ಸಂಗ್ರಹಿಸುತ್ತಾರೆ ನಂತರ ಈ ಬಗ್ಗೆ ತೀರ್ಮಾನಿಸುತ್ತಾರೆ ಸದ್ಯಕ್ಕಂತೂ ಯಾವ ಬದಲಾವಣೆಯಿಲ್ಲ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ನೀಡುವಂತೆ ಸ್ವಾಮೀಜಿಯೊಬ್ಬರು ಬೇಡಿಕೆಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿದವರು ಸ್ವಾಮೀಜಿಗಳು ಸಂದರ್ಭ ಸಮಯ ನೋಡಿಕೊಂಡು ಮಾತನಾಡಬೇಕು ಯಾವ ಸಂದರ್ಭದಲ್ಲಿ ಅವರ ಆ ರೀತಿ ಹೇಳಿದ್ದಾರೋ ಗೊತ್ತಿಲ್ಲ ಎಂದರು ಮುಖ್ಯಮಂತ್ರಿ ಹುದ್ದೆ ಬದಲಾವಣೆ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಎಲ್ಲದರ ಬಗ್ಗೆಯೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಹೇಳಿದರು.



ಪ್ರತಿಪಕ್ಷ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ರಾಹುಲ್ ಗಾಂಧಿಯವರನ್ನು ಅಭಿನಂದಿಸಲು ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲರೂ ಹೋಗಿದ್ದೆವು. ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿಯವರ ಜೊತೆ 10 ನಿಮಿಷ ಪ್ರತ್ಯೇಕ ಚರ್ಚೆ ಮಾಡಿದರು. ಇದಕ್ಕೂ ಮೊದಲು ಏಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ರಾಜಕೀಯ ವಿದ್ಯಮಾನಗಳ ಬಗ್ಗೆ ಮಾತನಾಡಿದ್ದೇವೆ.

-**ಡಾ.ಜಿ. ಪರಮೇಶ್ವರ್**, ಗೃಹ ಸಚಿವ

ಸಮಾಚಾರ ಸಣ್ಣದಲ್ಲ

ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ: ಇಬ್ಬರು ಸಾವು

ಕೂಡ್ಲಿಗಿ: ಪಟ್ಟಣದ ಹೊರವಲಯದಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ನಸುಕಿನಲ್ಲಿ ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿಯಾಗಿ ಇಬ್ಬರು ಮೃತಪಟ್ಟು ಐವರು ಗಾಯಗೊಂಡಿದ್ದಾರೆ. ಕಾರಿನ ಚಾಲಕ ವಿನಯ್ ಹಾಗೂ ಚೆನ್ನಬಸವ ಮೃತಪಟ್ಟವರು. ರಾಯಚೂರು ಜಿಲ್ಲೆ ಲಿಂಗಸುಗೂರಿನಿಂದ ಕೇರಳದ ವೈನಾಡಿಗೆ ಹೊರಟಿದ್ದ ಇವರು ಭಾನುವಾರ ಬೆಳಗಿನಜಾವ ಕೂಡ್ಲಿಗಿ ಹೊರವಲಯದಲ್ಲಿನ ರಾಷ್ಟ್ರೀಯ ಹೆದ್ದಾರಿ 50ರ ಮೇಲ್ಸೇತುವೆ ಮೇಲೆ ಹೋಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ವಿಭಜಕಕ್ಕೆ ಡಿಕ್ಕಿಯಾಗಿದೆ. ಕಾರಿನಲ್ಲಿದ್ದ ಚೆನ್ನಬಸವ ಹಾಗೂ ಕಾರಿನ ಚಾಲಕ ವಿಜಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡ ಸಚಿನ್ ಹಾಗೂ ಗೌರವ್ ಕೂಡ್ಲಿಗಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಕಾರ್ತಿಕ್, ಪ್ರಭು ಹಾಗೂ ಸಾಗರ್ ಅವರನ್ನು ಕೊಪ್ಪಳ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೂಡ್ಲಿಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸದ್ಯಕ್ಕೆ ಸಿಎಂ ಸ್ಥಾನ ಖಾಲಿ ಇಲ್ಲ: ಜಮೀರ್

ಮಂಡ್ಯ: ಸದ್ಯಕ್ಕೆ ಸಿಎಂ ಸ್ಥಾನ ಖಾಲಿಯಿಲ್ಲ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತಿದ್ದಾರೆ ಎಂದು ಸಚಿವ ಜಮೀರ್ ಅಹಮದ್ ತಿರುಗೇಟು ನೀಡಿದ್ದಾರೆ.



ರಾಜ್ಯದಲ್ಲಿ ಸಿಎಂ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ಚಂದ್ರಶೇಖರ ಶ್ರೀಗಳು ಹೇಳಿರುವುದು ಅವರ ವೈಯಕ್ತಿಕ ಅಭಿಪ್ರಾಯ. ಆದ್ರೆ ಸಿಎಂ ಕುರ್ಚಿ ಈಗ ಎಲ್ಲಿ ಖಾಲಿ ಯಿದೆ? ಖಾಲಿ ಇರುವಾಗ ಚರ್ಚೆ ಮಾಡಬೇಕು, ಇಲ್ಲದಿರುವಾಗ ಚರ್ಚೆ ಅಗತ್ಯವಿಲ್ಲ ಎಂದಿದ್ದಾರೆ. ಸ್ವಾಮೀಜಿ ಅಭಿಪ್ರಾಯ ತಪ್ಪು ಅನ್ನೋಕೆ ಆಗಲ್ಲ, ಈಗಾಗಲೇ ಹೈಕಮಾಂಡ್ ಸಿದ್ದರಾಮಯ್ಯ ಸಿಎಂ ಎಂದು ತೀರ್ಮಾನ ಮಾಡಿ ಆಗಿದೆ. ಒಕ್ಕಲಿಗರು, ಲಿಂಗಾಯತರು, ದಲಿತರು ಕೇಳ್ತಿದ್ದಾರೆ. ಅವರು ಕೇಳುವುದರಲ್ಲಿ ತಪ್ಪೇನಿದೆ? ನಮ್ಮದು ಹೈಕಮಾಂಡ್ ಪಕ್ಷ. ಕಾಂಗ್ರೆಸ್ ವರಿಷ್ಠರು ಯಾರು ಸಿಎಂ ಎಂದು ತೀರ್ಮಾನಿಸುತ್ತದೆ. ಅವರು ಹಾಕಿದ ಗೆರೆಯನ್ನು ನಾವ್ಯಾರು ದಾಟಲ್ಲ. ಇದು ನಮ್ಮ ಪಕ್ಷದ ನಿಯಮ ಎಂದರು.



ಟ್ವೀಟೂ-ಖಾರಾ

ನರೇಂದ್ರ ಮೋದಿ, ಪ್ರಧಾನಮಂತ್ರಿ

ಪ್ರಿಯ ರವೀಂದ್ರ ಜಡೇಜಾ, ಆಲ್‌ರೌಂಡರ್ ಆಗಿ ಅದ್ವಿತೀಯ ಪ್ರದರ್ಶನ ನೀಡಿದ್ದೀರಿ. ನಿಮ್ಮ ಬ್ಯಾಟಿಂಗ್ ಶೈಲಿ, ಸ್ಪಿನ್ ಬೌಲಿಂಗ್ ಮತ್ತು ಅದ್ಭುತ ಫೀಲ್ಡಿಂಗ್ ಅನ್ನು ಕ್ರಿಕೆಟ್ ಪ್ರೇಮಿಗಳು ಆರಾಧಿಸುತ್ತಿದ್ದಾರೆ. ಹಲವು ವರ್ಷಗಳಿಂದ ಟಿ20 ಕ್ರಿಕೆಟ್‌ನಲ್ಲಿ ರೋಮಾಂಚಕ ಪ್ರದರ್ಶನ ನೀಡಿದ್ದಕ್ಕೆ ಧನ್ಯವಾದಗಳು. ನಿಮಗೆ ನನ್ನ ಹೃತ್ಪೂರ್ವಕ ಶುಭಾಶಯಗಳು.

ಡಿ.ಕೆ ಶಿವಕುಮಾರ್ , ಉಪಮುಖ್ಯಮಂತ್ರಿ

ನಾನು ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಜಗನ್ಮೋಹನ ರೆಡ್ಡಿ ಅವರನ್ನು ಭೇಟಿಮಾಡಿರುವಂತೆ ಯಾರೋ ಕಿಡಿಗೇಡಿಗಳು ನಕಲಿ ಫೋಟೋ ಸೃಷ್ಟಿಸಿ ಹರಡುತ್ತಿದ್ದಾರೆ. ನಾನು ಜಗನ್ಮೋಹನ ರೆಡ್ಡಿಯನ್ನು ಭೇಟಿಮಾಡಿಲ್ಲ. ಯಾರೂ ಇದನ್ನು ನಂಬಬಾರದು.

{ ಚಲುವರಾಯಸ್ವಾಮಿ } ಕೃಷಿ ಸಚಿವ

ಕೇಂದ್ರದ ವಿಳಂಬ ಧೋರಣೆ ನಡುವೆಯೂ ರಾಜ್ಯದಲ್ಲಿ 4600 ಕೋಟಿ ರು. ಬರ ಪರಿಹಾರ ನೀಡಲಾಗಿದೆ. 1700 ಕೋಟಿ ರು. ಮುಂಗಾರು ಹಂಗಾಮಿನ ವಿಮೆ ಪರಿಹಾರ ಇತ್ಯರ್ಥ ಮಾಡಲಾಗಿದೆ. ಒಂದು ಸಾವಿರ ಕೋಟಿ ವೆಚ್ಚದಲ್ಲಿ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗಿದೆ. ಸರಕಾರ ಈ ಬಜೆಟ್‌ನಲ್ಲಿಯೂ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಕನ್ನಡ ಚಿತ್ರಗಳಿಗೆ ಸರಕಾರದಿಂದ ಹೆಚ್ಚು ಒತ್ತು ಸಿಗಬೇಕಿದೆ: ಸಿಎಂ | ರಾಮೋಜಿ ಫಿಲ್ಮ್ ಸಿಟಿ ಮಾದರಿಯಲ್ಲಿ ರಾಜ್ಯದಲ್ಲಿ ಸಿನಿಮಾ ಸಿಟಿ

ಮೈಸೂರಿನಲ್ಲಿ ಶೀಘ್ರ ಚಿತ್ರನಗರಿಗೆ ಶಂಕುಸ್ಥಾಪನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹೈದರಾಬಾದ್‌ನಲ್ಲಿರುವ ರಾಮೋಜಿ ಫಿಲ್ಮಂ ಸಿಟಿ ರೀತಿಯಲ್ಲಿಯೇ ಕರ್ನಾಟಕದಲ್ಲಿಯೂ ಚಿತ್ರನಗರಿಯನ್ನು ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ನೂತನ ಕಟ್ಟಡದ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ನೆರೆಯ ತೆಲಂಗಾಣದ ಹೈದರಾಬಾದ್‌ನಲ್ಲಿ ಫಿಲ್ಮಂ ಸಿಟಿಯಿದೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ಚಿತ್ರನಗರಿಯಾಗಬೇಕು ಎನ್ನುವುದು ವರನಟ ರಾಜ್‌ಕುಮಾರ್ ಅವರ ಆಶಯವಾಗಿತ್ತು. ಹಲವು ವರ್ಷಗಳಿಂದ ಈ ವಿಷಯದಲ್ಲಿ ಪ್ರಯತ್ನ ನಡೆಯುತ್ತಿದೆ. ಮುಂದಿನ ದಿನದಲ್ಲಿ ಈ ಕನಸಿನ ಯೋಜನೆಯನ್ನು ಸಾಕಾರಗೊಳಿಸಲಾಗುವುದು ಎಂದರು.

ಈ ಹಿಂದೆ ನಮ್ಮ ಸರಕಾರ ಅಧಿಕಾರದಲ್ಲಿದ್ದಾಗ ಮೈಸೂರಿನಲ್ಲಿ ನೂರು ಎಕರೆ ಪ್ರದೇಶದಲ್ಲಿ ಚಿತ್ರನಗರಿಗೆ ಸಿದ್ಧತೆ ನಡೆಸಲಾಗಿತ್ತು. ಇದೀಗ ಅಲ್ಲಿಯೇ ಖಾಸಗಿ ಹಾಗೂ ಸರಕಾರದ ಸಹಭಾಗಿತ್ವದಲ್ಲಿ ಪಿಪಿಪಿ ಮಾದರಿಯಲ್ಲಿ ಸುಸಜ್ಜಿತವಾದ ಫಿಲ್ಮಂಸಿಟಿ ನಿರ್ಮಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಫಿಲ್ಮ್ ಸಿಟಿ ನಿರ್ಮಾಣಕ್ಕೆ ಶೀಘ್ರವೇ ಶಂಕುಸ್ಥಾಪನೆ ನೆರವೇರಿಸಲಾಗುವುದು. ಈಗಾಗಲೇ ಜಮೀನು ಹಸ್ತಾಂತರಿಸಲಾಗಿದೆ. ಅದಕ್ಕೆ ಯಾವುದೇ ತೊಡಕುಗಳಿಲ್ಲ ಎಂದು ಸ್ಪಷ್ಟಪಡಿಸಿದರು.

ಚಿತ್ರರಂಗದ ಬೆಳವಣಿಗೆಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ಸರಕಾರ ನೀಡಲಿದೆ. ಸಂಕಷ್ಟದ ಸಂದರ್ಭದಲ್ಲೂ ನಿರ್ಮಾಪಕರು ಚಲನಚಿತ್ರಗಳನ್ನು ನಿರ್ಮಿಸುತ್ತಿದ್ದಾರೆ. ಚಲನಚಿತ್ರ ನಿರ್ಮಾಪಕರ ಸಂಘದ ಕಟ್ಟಡಕ್ಕೆ ಈವರೆಗೂ ಸರಕಾರದಿಂದ ಆರ್ಥಿಕ ಸಹಾಯ ಕೇಳಿರಲಿಲ್ಲ. ಈಗಷ್ಟೆ ಕೇಳಿದ್ದಾರೆ. ಸರಕಾರದಿಂದ ಅಗತ್ಯ ನೆರವು ನೀಡಲಾಗುವುದು. ಚಿತ್ರರಂಗದ ಅಭಿವೃದ್ಧಿಗೆ ಮೊದಲಿನಿಂದಲೂ ಸರಕಾರ ನೆರವು ನೀಡಲಾಗುತ್ತಿದೆ. ಮುಂದೆ ಕೂಡ ಅದೇ ರೀತಿಯ ಬೆಂಬಲ ಮುಂದುವರೆಯಲಿದೆ ಎಂದು ಭರವಸೆ ನೀಡಿದರು.

ಚಿತ್ರರಂಗದ ಬೆಳವಣಿಗೆಗೆ ಶೀಘ್ರದಲ್ಲಿಯೇ ಸಭೆ ಕನ್ನಡ ಚಲನಚಿತ್ರರಂಗದ ಬೆಳವಣಿಗೆ ಹಾಗೂ ಸಮಸ್ಯೆಗಳ ಕುರಿತು ಚರ್ಚೆ ನಡೆಸಲು ಶೀಘ್ರದಲ್ಲಿಯೇ ಸಭೆ ನಡೆಸಲಾಗುವುದು. ಚಿತ್ರರಂಗದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕಂಡುಕೊಳ್ಳಲು ಚಲನಚಿತ್ರ ವಾಣಿಜ್ಯ ಮಂಡಳಿ ಸಮುಖದಲ್ಲಿ ಕಲಾವಿದರು, ನಿರ್ಮಾಪಕರು, ಚಿತ್ರಮಂದಿರಗಳ ಮಾಲೀಕರು ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರೊಂದಿಗೆ ಚರ್ಚೆ ನಡೆಸಲಾಗುವುದು. ಹಿರಿಯ ಕಲಾವಿದರಿಗೆ ನೆರವು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆಸುವುದಾಗಿ ಹೇಳಿದರು. ಸಚಿವ ಭೈರತಿ ಸುರೇಶ್, ಶಾಸಕ ರಿಜ್ವಾನ್ ಅರ್ಷದ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸುರೇಶ್, ನಟ ಶಿವರಾಜ್‌ಕುಮಾರ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ರಾಜ್ಯಸಭಾ ಸದಸ್ಯ ನಟ ಜಗ್ಗೇಶ್ ಸೇರಿದಂತೆ ಅನೇಕರಿದ್ದರು.

ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ , ಸಚಿವ ಭೈರತಿ ಸುರೇಶ್, ಶಾಸಕ ರಿಜ್ವಾನ್ ಅರ್ಷದ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸುರೇಶ್, ನಟ ಶಿವರಾಜ್‌ಕುಮಾರ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ನಟ ಜಗ್ಗೇಶ್ ಭಾಗವಹಿಸಿದ್ದರು.

ಸರಕಾರದಿಂದಲೇ ಓಟಿಟಿ ಮಾಡಿ

ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯಸಭಾ ಸದಸ್ಯ ಜಗ್ಗೇಶ್ ಹಾಗೂ ಸಾ.ರಾ. ಗೋವಿಂದ್ ಸರಕಾರದ ವತಿಯಿಂದಲೇ ಓಟಿಟಿ ಫ್ಲಾಟ್‌ಫಾರ್ಮ್ ಆರಂಭಿಸ ಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ, ಅನ್ಯ ಭಾಷೆಗಳ ಮಾದರಿಯಲ್ಲಿ ಕನ್ನಡ ಭಾಷೆಯಲ್ಲೂ ಓಟಿಟಿ ವೇದಿಕೆ ಸೃಷ್ಟಿಸುವ ಬೇಡಿಕೆ ಕುರಿತು ಪರಿಶೀಲಿಸಲಾಗುವುದು. ಸಂಬಂಧಪಟ್ಟವರೊಂದಿಗೆ ಚರ್ಚಿಸಿ , ತೀರ್ಮಾನ ಕೈಗೊಳ್ಳಾಗುವುದು ಎಂದು ಸ್ಪಷ್ಟಪಡಿಸಿದರು.

ಭಾನುವಾರವೇ ಸಭೆ!

ಚಿತ್ರರಂಗದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಒಂದು ದಿನಾಂಕ ನಿಗದಿಪಡಿಸುವುದಾಗಿ ಸಿಎಂ ಹೇಳುತ್ತಿದ್ದಂತೆ, ಮಧ್ಯಪ್ರವೇಶಿಸಿದ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ, ಭಾನುವಾರ ಸಭೆ ಕರೆಯಬೇಡಿ ಎಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯನವರು ಭಾನುವಾರವೇ ನಿಮಗೆ ಒಳ್ಳೆಯ ದಿನ. ಭಾನುವಾರ ಬೆಳಗ್ಗೆ 11 ಗಂಟೆಗೆ ಸಭೆ ಸೇರಿ, ಒಂದು ಗಂಟೆಗೆ ಸಭೆ ಮುಗಿಸೋಣ ಎಂದು ಹೇಳಿದರು.

ಮೊಬೈಲ್‌ಗಿಂತ ಚಿತ್ರಮಂದಿರದಲ್ಲಿ ಚಲನಚಿತ್ರ ನೋಡುವ ಅನುಭವ ಸೊಗಸು. ಸಾಮಾಜಿಕ ಕಳಕಳಿಯ ಹಾಗೂ ಸಾಮಾಜಿಕ ಪರಿಣಾಮ ಬೀರುವ ಚಿತ್ರಗಳನ್ನು ನಿರ್ಮಿಸಬೇಕು. ಉತ್ತಮ ಚಿತ್ರಗಳನ್ನು ನಿರ್ಮಿಸಿದರೆ ಜನ ನೋಡುತ್ತಾರೆ. ಚಲನಚಿತ್ರಗಳ ಸಂಖ್ಯೆ ಹೆಚ್ಚಾಗುತ್ತಿದೆ, ಚಿತ್ರಮಂದಿರಗಳ ಸಂಖ್ಯೆ ಕಡಿಮೆಯಾಗುತ್ತಿದೆ. ರಾಜ್ಯಸರಕಾರ ಚಿತ್ರರಂಗದ ಬೆಳವಣಿಗೆಗೆ ನೆರವು ನೀಡಲು ಹಿಂದೆ ಬೀಳುವುದಿಲ್ಲ.

– ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೇರಳದ ಮಾದರಿಯಲ್ಲಿ ರಾಜ್ಯಸರಕಾರವೇ ಓಟಿಟಿ ವೇದಿಕೆ ನಿರ್ಮಾಣ ಮತ್ತು ನಿಯಮಾವಳಿಗಳನ್ನು ರಚಿಸಬೇಕು. ವಾರ್ತಾ ಇಲಾಖೆಯಿಂದ ಆನ್‌ಲೈನ್ ಟಿಕೆಟ್ ಬುಕ್ಕಿಂಗ್‌ಗೆ 45 ಲಕ್ಷ ರು. ವೆಚ್ಚದಲ್ಲಿ ಯೋಜನೆ ತಯಾರಿಸಿ ಚಾಲನೆ ನೀಡಲಾಗಿತ್ತು. ಆದರೆ ಇದ್ದಕ್ಕಿದ್ದಂತೆ ಅದು ಸ್ಥಗಿತಗೊಂಡಿದೆ. ಅದಕ್ಕೆ ಪುನರ್‌ಚಾಲನೆ ನೀಡಬೇಕು.

– ಸಾ.ರಾ. ಗೋವಿಂದು, ಕಟ್ಟಡ ನಿರ್ಮಾಣ ಸಮಿತಿ ಅಧ್ಯಕ್ಷ

ಕಾಂಗ್ರೆಸ್‌ನವರು ನಮ್ಮನ್ನು ಸಂಪರ್ಕಿಸಿಲ್ಲ

ಗದಗ: ಕಾಂಗ್ರೆಸ್‌ನ ಯಾರೂ ನಮ್ಮನ್ನು ಸಂಪರ್ಕ ಮಾಡಿಲ್ಲ. ಆದರೆ, ಆಂತರಿಕವಾಗಿ ಕಾಂಗ್ರೆಸ್‌ನಲ್ಲಿ ವೈರುಧ್ಯ ಇರುವುದು ಸ್ಪಷ್ಟವಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ, ಡಿಸಿಎಂ ವಿಷಯವಾಗಿ ಅವರ ಅಭಿಪ್ರಾಯ ಹೇಳುತ್ತಾರೆ. ಆದರೆ, ರಾಜಕಾರಣಕ್ಕೆ ವಿಧಿವಿಧಾನಗಳಿವೆ. ಸ್ವಾಮೀಜಿಗಳ ಹೇಳಿಕೆ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. ಆದರೆ, ಯಾರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು. ಮೂರು –ನಾಲ್ಕು ಡಿಸಿಎಂಗಳನ್ನು ಮಾಡಬೇಕೆನ್ನುವುದು ಕಾಂಗ್ರೆಸ್ ಗೆ ಬಿಟ್ಟಿದ್ದು. ಅವರ ಆಂತರಿಕ ವಿಚಾರವಾಗಿ ನಾನು ಮಾತನಾಡುವುದಿಲ್ಲ. ಡಿಸಿಎಂ ವಿಚಾರವಾಗಿ ಹೊಸ ವ್ಯಾಖ್ಯಾನ ಮಾಡುವುದು ಕಾಂಗ್ರೆಸ್ ನಲ್ಲಿ ನಡೆದಿದೆ. ಅಸಲಿ ರಾಜಕಾರಣ ಬೇರೇನೇ ಇದೆ. ಕಾದು ನೋಡೋಣ ಎಂದರು. ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ಮಾಜಿ ಸಚಿವ ಮುರುಗೇಶ್ ನಿರಾಣಿ ಬರುತ್ತಾರೆ ಎನ್ನುವ ಕುರಿತು ಕೇಳಿದ ಪ್ರಶ್ನೆಗೆ ನಾನು ಅವರ ಬಳಿ ಚರ್ಚಿಸಿಲ್ಲ. ಅವರೂ ನನ್ನ ಬಳಿ ಚರ್ಚೆ ಮಾಡಿಲ್ಲ ಎಂದು ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಪಠ್ಯಪುಸ್ತಕದಲ್ಲಿ ವೀರಶೈವ ಪದ ತೆಗೆದುಹಾಕಿರುವ ಬಗ್ಗೆ ನೋಡಿಲ್ಲ. 9ನೇ ತರಗತಿ ಪಠ್ಯದಲ್ಲಿ ತೆಗೆದಿದ್ದಾರೆ ಅಂತ ಹೇಳುತ್ತಿದ್ದಾರೆ . ನಾನು ಗಮನಿಸಿಲ್ಲ. ಹಾಗೇನಾದರೂ ಆಗಿದ್ದರೆ, ಸರಿಪಡಿಸಿ ಎಂದು ರಾಜ್ಯ ಸರಕಾರವನ್ನು ಆಗ್ರಹಿಸುತ್ತೇನೆ.

–ಬಸವರಾಜ ಬೊಮ್ಮಾಯಿ, ಸಂಸದ

ಡಿಕೆಶಿಗೆ ಪ್ರಣವಾನಂದ ಸ್ವಾಮೀಜಿ ಸವಾಲು

ನೀವು ಮಠಕ್ಕೆ ಬರಬೇಡಿ ,ನಾವು ರಾಜಕಾರಣಕ್ಕೆ ಬರುವುದಿಲ್ಲ

ಯಾದಗಿರಿ: ನೀವು ಧೈರ್ಯವಾಗಿ ಹೇಳಿ ಮಠಕ್ಕೆ ಕಾಲಿಡಲ್ಲ ಅಂತ, ಆಗ ನಾವು ರಾಜಕೀಯಕ್ಕೆ ಬರುವುದಿಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಈಡಿಗ ಸಮುದಾಯದ ಪ್ರಣವಾನಂದ ಸ್ವಾಮೀಜಿ ಸವಾಲು ಹಾಕಿದ್ದಾರೆ.

ಸ್ವಾಮೀಜಿಗಳು ರಾಜಕೀಯಕ್ಕೆ ಬರಬೇಡಿ ಎಂಬ ಡಿಕೆಶಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸ್ವಾಮೀಜಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗ ಮಂತ್ರಿಗಳು, ರಾಜಕೀಯ ನಾಯಕರು ಅಪಮಾನ ಮಾಡಬಾರದು. ಅಪಮಾನಿಸಿದರೆ ಮುಂದಿನ ದಿನಗಳಲ್ಲಿ ನೀವು ಮಠಕ್ಕೆ ಕಾಲಿಡಬೇಡಿ. ನೀವು ಮಾಡಿದ್ದೆಲ್ಲಾ ಸರಿ ಅಂತ ಒಪ್ಪಿಕೊಳ್ಳಲು ಸಮುದಾಯದ ಸ್ವಾಮೀಜಿಗಳು ಸಿದ್ಧರಿಲ್ಲ. ನೀವು ಮಠಕ್ಕೆ ಬರಬೇಡಿ ನಾವೂ ರಾಜಕೀಯಕ್ಕೆ ಬರಲ್ಲ ಎಂದು ಎಚ್ಚರಿಕೆ ಕೊಟ್ಟರು.

ಸ್ವಾಮೀಜಿಗಳ ಬಗ್ಗೆ ಇಬ್ಬಗೆ ಧೋರಣೆ ಸಲ್ಲ: ಚಂದ್ರಶೇಖರ ಸ್ವಾಮೀಜಿ ಹೇಳಿದಾಗ ಡಿ.ಕೆ.ಸುರೇಶ್ ಹಾಗೂ ಚಲುವರಾಯಸ್ವಾಮಿ ಸ್ವಾಗತಿಸಿದರು. ಒಂದು ಕಡೆ ಸ್ವಾಗತ ಮಾಡೋದು, ಮತ್ತೊಂದು ಕಡೆ ರಾಜಕೀಯಕ್ಕೆ ಬರಬೇಡಿ ಅಂತ ಹೇಳೋದು. ಇದು ಡಿ.ಕೆ. ಶಿವಕುಮಾರ್ ಅವರ ರಾಜಕೀಯ ತಂತ್ರ. ನಮಗೆ (ಈಡಿಗ ಸಮುದಾಯ) ಯಾರೂ ಡಿಸಿಎಂ ಸ್ಥಾನ ಕೊಟ್ಟಿಲ್ಲ, ಈಗಾಗಲೇ ಶಿವಕುಮಾರ್ ಡಿಸಿಎಂ ಆಗಿದ್ದಾರೆ. ಜತೆಗೆ ಒಕ್ಕಲಿಗ ಸಮುದಾಯದ ಸಚಿವರು ಇದ್ದಾರೆ. ಚಂದ್ರಶೇಖರ ಸ್ವಾಮೀಜಿ ತಮ್ಮ ಸಮುದಾ ಯದ ಬಗ್ಗೆ ಮಾತನಾಡಿದ್ದಾರೆ ಎಂದರು.

ಹರಿಪ್ರಸಾದ್ ಸಿಎಂ ಆಗಲಿ

ಬಿ.ಕೆ. ಹರಿಪ್ರಸಾದ್ ಅವರನ್ನು ಸಿಎಂ ಮಾಡುವಂತೆ ಒತ್ತಾಯಿಸಿದ ಅವರು, ಈಡಿಗ ಸಮುದಾಯವು ತನ್ನದೇ ರಾಜಕೀಯ ಪ್ರಾಬಲ್ಯ ಹೊಂದಿದೆ. ಮುಖ್ಯಮಂತ್ರಿ ಸ್ಥಾನ ಬದಲಾವಣೆ ಮಾಡುವುದಿದ್ದರೆ ಬಿ.ಕೆ.ಹರಿಪ್ರಸಾದ್‌ರನ್ನೇ ಸಿಎಂ ಎಂದು ಘೋಷಿಸಬೇಕು ಎಂದು ಪ್ರಣವಾನಂದ ಸ್ವಾಮೀಜಿ ಆಗ್ರಹಿಸಿದರು.

ದಾರಿತಪ್ಪಿದ ಕಾಂಗ್ರೆಸ್ ಸರಕಾರ: ಜೋಶಿ ಟೀಕೆ

ರಾಜ್ಯದಲ್ಲಿ ರಾಜಕೀಯ ಅರಾಜಕತೆ

ಧಾರವಾಡ: ಸಿದ್ದರಾಮಯ್ಯ ನೇತೃತ್ವದ ಸರಕಾರದಿಂದ ರಾಜ್ಯದಲ್ಲಿ ರಾಜಕೀಯ ಅರಾಜಕತೆ ಸೃಷ್ಟಿಯಾಗಿದೆ. ಹೆಚ್ಚು ಡಿಸಿಎಂಗಳನ್ನು ಸೃಷ್ಟಿಸಬೇಕೆಂದು ಸಿಎಂ ತಮ್ಮ ಅನುಯಾಯಿಗಳಿಂದ ಒತ್ತಾಯ ಮಾಡಿಸಿದರೆ, ಇತ್ತ ಸಿಎಂ ಅವರನ್ನೇ ಬದಲಿ ಮಾಡಬೇಕು, ಬಳಿಕ ಹೆಚ್ಚುವರಿ ಡಿಸಿಎಂ ಮಾಡಿಕೊಳ್ಳಬಹುದು ಎಂಬ ಹೇಳಿಕೆ ಕೊಡುತ್ತಿದ್ದಾರೆ. ಇದರಿಂದ ಸರಕಾರ ದಿಕ್ಕು ತಪ್ಪಿದಂತಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಚ್ಚು ಡಿಸಿಎಂ ಸೃಷ್ಟಿ ಮಾಡಬೇಕು ಎಂದು ಸಿಎಂ ತಮ್ಮ ಹಿಂಬಾಲಕರಿಂದ ಹೇಳಿಸುತ್ತಿದ್ದಾರೆ. ಇತ್ತ , ಮುಖ್ಯಮಂತ್ರಿಯನ್ನೇ ಬದಲಾಯಿಸಬೇಕೆಂದು ತಮ್ಮ ಹಿಂಬಾಲಕರಿಂದ ಡಿಸಿಎಂ ಹೇಳಿಸುತ್ತಿದ್ದಾರೆ. ರಾಜ್ಯ ಸರಕಾರ ದಿಕ್ಕು ತಪ್ಪಿದೆ. ದಾರಿತಪ್ಪಿದ ಮಗನಂತಾಗಿದೆ ಕಾಂಗ್ರೆಸ್ ಸರಕಾರ ಆಗಿದೆ ಎಂದು ವ್ಯಂಗ್ಯವಾಡಿದರು.

ಲೋಕಸಭೆ ಚುನಾವಣೆ ಬಳಿಕ ಸರಕಾರ ಬೀಳಿಸುತ್ತೇವೆಂದು ಬಿಜೆಪಿಗರ ಹೇಳಿಕೆ ವಿಚಾರಕ್ಕೆ ಮಾತನಾಡಿ, ಇದರ ಬಗ್ಗೆ ನಾನೂ ಮೊದಲು ಪತ್ರಿಕ್ರಿಯೆ ನೀಡಿರಲಿಲ್ಲ, ಈಗಲೂ ಪ್ರತಿಕ್ರಿಯಿಸಲಾರೆ. ಐದು ವರ್ಷ ಜನ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಐದು ವರ್ಷ ಚೆನ್ನಾಗಿ ಆಡಳಿತ ನಡೆಸಿ ಅಂತಾನೇ ನಾವು ಹೇಳೋದು. ಅವರ ಆಂತರಿಕ ಕಾರಣದಿಂದ ಸರಕಾರ ಬಿದ್ದರೆ ನಾವು ಜವಾಬ್ದಾರರಲ್ಲ, ಆಮೇಲೆ ಅದಕ್ಕೆ ಆಪರೇಷನ್ ಕಮಲ ಅಂತಾ ಅವರೇ ಹೇಳ್ತಾರೆ. ಆದರೆ ಆ ವಿಚಾರ ನಮ್ಮ ತಲೆಯಲ್ಲಿಲ್ಲ ಎಂದು ಪ್ರಲ್ಹಾದ ಜೋಶಿ ಸ್ಪಷ್ಟವಾಗಿ ಹೇಳಿದರು.

ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಸಮಾಜ ಒಡೆಯುವ ಕೆಲಸಕ್ಕೆ ಕೈಹಾಕಿದ್ದಾರೆ. ಸಮಾಜ ವಿಜ್ಞಾನ ಪಠ್ಯ ಪುಸ್ತಕದಲ್ಲಿನ ವೀರಶೈವ ಪದ ತೆಗೆದುಹಾಕುವುದು ಸರಿಯಲ್ಲ, ವೀರಶೈವ ಲಿಂಗಾಯತ ಅಂತಾ ಮೊದಲು ಇತ್ತು. ಈಗ ವೀರಶೈವ ಪದ ತೆಗೆದಿದ್ದಾರೆ. ಅನಗತ್ಯವಾಗಿ ಕಿಚ್ಚು ಹಚ್ಚುವ ಕೆಲಸ ಮಾಡಿದ್ದಾರೆ.

–ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ವಿಐಎಸ್‌ಎಲ್‌ಗೆ ಭೇಟಿನೀಡಿ ಪರಿಶೀಲಿಸಿದ ಎಚ್‌ಡಿಕೆ , ಅಧಿಕಾರಿಗಳ ಜತೆ ಚರ್ಚೆ

ಭದ್ರಾವತಿ ಕಾರ್ಖಾನೆ ಭವಿಷ್ಯದ ಬಗ್ಗೆ ಶೀಘ್ರ ನಿರ್ಧಾರ

ಶಿವಮೊಗ್ಗ: ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ಭಾನುವಾರ ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಭೇಟಿನೀಡಿ ಪರಿಶೀಲನೆ ನಡೆಸಿದರು.

ನವದೆಹಲಿಯಿಂದ ಬೆಳಗ್ಗೆಯೇ ಭದ್ರಾವತಿಯ ಕಾರ್ಖಾನೆ ತಲುಪಿದ ಕೇಂದ್ರ ಸಚಿವರು ಬಹಳ ಹೊತ್ತು ಇಡೀ ಕಾರ್ಖಾನೆಯನ್ನು ಸುತ್ತುಹಾಕಿ ಪರಿಶೀಲಿಸಿದರು. ಮುಖ್ಯವಾಗಿ ಯಂತ್ರೋಪಕರಣಗಳ ಕ್ಷಮತೆ, ಅವುಗಳ ಸದ್ಯದ ಸ್ಥಿತಿ, ಆಡಳಿತ ವ್ಯವಸ್ಥೆ, ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಪರಿಶೀಲನೆ ನಡೆಸಿದರು.

ವಿಐಎಸ್‌ಎಲ್ ಉಳಿಯಬೇಕು: ಬಳಿಕ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ, ಹಿಂದೆ ಭದ್ರಾವತಿ, ಶಿವಮೊಗ್ಗ ಜಿಲ್ಲೆಗೆ ಮಾತ್ರವಲ್ಲ, ಇಡೀ ಕರ್ನಾಟಕದ ಕೀರ್ತಿ, ಗರಿಣೆಗೆ ಹೆಗ್ಗುರುತಾಗಿತ್ತು ಈ ಕಾರ್ಖಾನೆ. ಮೈಸೂರು ಮಹಾರಾಜರ ಕೊಡುಗೆ ಇದು. ಕೃಷ್ಣರಾಜ ಒಡೆಯರ್ ಮಾರ್ಗದರ್ಶನದಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಅವರು 1923ರಲ್ಲಿ ಸ್ಥಾಪನೆ ಮಾಡಿದ್ದರು. ಇಂತಹ ಪರಂಪರೆ ಇರುವ ಕಾರ್ಖಾನೆ, ಲಕ್ಷಾಂತರ ಜನರಿಗೆ ಅನ್ನ ಕೊಟ್ಟ ಉದ್ಯಮ. ಶಿವಮೊಗ್ಗ ಮತ್ತು ಕರ್ನಾಟಕದ ಹೆಮ್ಮೆ ಆಗಿದ್ದ ಈ ಕಾರ್ಖಾನೆಯನ್ನು ಉಳಿಸಲು ಪ್ರಯತ್ನ ಆಗಬೇಕಿದೆ ಎಂದರು.

ಒಳ್ಳೆಯದು ಮಾಡಲು ಪ್ರಯತ್ನಿಸುತ್ತೇನೆ: ನನ್ನ ಜತೆ ಭಾರತೀಯ ಉಕ್ಕು ಪ್ರಾಧಿಕಾರದ ಅಧ್ಯಕ್ಷರನ್ನು, ಹಿರಿಯ ಅಧಿಕಾರಿಗಳನ್ನು ಕರೆತಂದಿದ್ದೇನೆ. ಪ್ರಧಾನಿಯವರು ನನಗೆ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವ ಸ್ಥಾನದ ಜವಾಬ್ದಾರಿ ನೀಡಿದ್ದಾರೆ. ಏನಾದರೂ ಒಳ್ಳೆಯ ಕೆಲಸ ಮಾಡಬಹುದೇ ಎಂದು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇನೆ ಎಂದು ಕುಮಾರಸ್ವಾಮಿ ತಿಳಿಸಿದರು.

ಕಾರ್ಮಿಕರ ನೋವು ಅರ್ಥ ಮಾಡಿಕೊಳ್ಳಬಲ್ಲೆ: ಭೇಟಿಯ ಸಂದರ್ಭದಲ್ಲಿ ಕಾರ್ಮಿಕರ ಬೇಡಿಕೆ, ಆಡಳಿತ ಮಂಡಳಿಯ ಅಹವಾಲು ಹಾಗೂ ಸ್ಥಳೀಯರ ಮನವಿ ಆಲಿಸಿದ್ದೇನೆ. ಕಾರ್ಖಾನೆಯಲ್ಲಿರುವ ನಾಲ್ಕು ವಿಭಾಗಗಳ ಯತ್ರೋಪಕರಣಗಳನ್ನು ವೀಕ್ಷಿಸಿದ್ದೇನೆ. ಈ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಕಾರ್ಮಿಕರ ಕುಟುಂಬಗಳ ನೋವು ಅರ್ಥಮಾಡಿಕೊಂಡಿದ್ದೇನೆ. ಉನ್ನತಾಧಿಕಾರಿ ಗಳ ಜತೆ ಈ ಬಗ್ಗೆ ಸಮಾಲೋಚನೆ ನಡೆಸುತ್ತೇನೆ ಎಚ್.ಡಿ.ಕೆ ಭರವಸೆ ನೀಡಿದರು.

ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ಭಾನುವಾರ ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಭೇಟಿನೀಡಿ ಪರಿಶೀಲನೆ ನಡೆಸಿದರು.

ನಾನು ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವನಾಗಿ ಅಧಿಕಾರ ವಹಿಸಿಕೊಂಡ ಮೇಲೆ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ನನಗೆ ಐದು ಕಾರ್ಖಾನೆಗಳ ಬಗ್ಗೆ ಪ್ರಶ್ನೆ ಕೇಳಿದ್ದರು. ಅದರಲ್ಲಿ ಭದ್ರಾವತಿ ಕಾರ್ಖಾನೆಯೂ ಸೇರಿದೆ. ಅದನ್ನು ಉಳಿಸುವ ನಿಟ್ಟಿನಲ್ಲಿ ಎಲ್ಲಾ ಸಾಧಕ -ಬಾಧಕಗಳ ಬಗ್ಗೆ ಮಾಹಿತಿ ಪಡೆದಿದ್ದೇನೆ. ಸದ್ಯದಲ್ಲಿಯೇ ನಿರ್ಧಾರ ಪ್ರಕಟಿಸಲಾಗುವುದು.

– ಎಚ್.ಡಿ ಕುಮಾರಸ್ವಾಮಿ, ಕೇಂದ್ರ ಸಚಿವ

ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಇಲ್ಲ

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ

ಕಲಬುರಗಿ: ರಾಜ್ಯದಲ್ಲಿ ಸದ್ಯ ಸಿಎಂ ಬದಲಾವಣೆ ಮಾತುಗಳು ಕೇಳಿಬರುತ್ತಿದ್ದು, ಈ ಕುರಿತು ಕಲಬುರಗಿಯಲ್ಲಿ ಕೆಕೆಆರ್‌ಡಿಬಿ ಅಧ್ಯಕ್ಷ ಡಾ ಅಜಯ್‌ಸಿಂಗ್ ಪ್ರತಿಕ್ರಿಯೆ ನೀಡಿ ಸಿಎಂ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮಲ್ಲಿ ಬಣ ರಾಜಕೀಯ ಇಲ್ಲ, ನಾವೆಲ್ಲಾ ಒಂದಾಗಿದ್ದೇವೆ. ನಾವು ಶಿಸ್ತಿನಿಂದ ಇರಬೇಕು ಎನ್ನುವುದನ್ನು ನಮ್ಮ ಡಿಸಿಎಂ ಈಗಾಗಲೇ ಹೇಳಿದ್ದಾರೆ. ನಮ್ಮ ಹೈಕಮಾಂಡ್ ಬಲಿಷ್ಟವಾಗಿದೆ. ಬದಲಾವಣೆ ಇದ್ದರೆ ಹೈಕಮಾಂಡ್ ಮಾಡುತ್ತೆ. ಅದರ ನಿರ್ಣಯಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಡಾ. ಅಜಯ್ ಸಿಂಗ್ ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಜನ ಮೆಚ್ಚಿದ ಮುಖ್ಯಮಂತ್ರಿಯಾಗಿದ್ದಾರೆ. ಅದಕ್ಕಾಗಿಯೇ ಅವರಿಗೆ ಹೈಕಮಾಂಡ್ ಮತ್ತೊಂದು ಅವಕಾಶ ನೀಡಿದೆ ಎಂದು ಸಿಎಂ ಬದಲಾವಣೆಯಿಲ್ಲ ಎಂದು ಸ್ಪಷ್ಟಪಡಿಸಿದರು. ಗ್ಯಾರಂಟಿ ಯೋಜನೆಗಳಿಂದ ಜನ ಸೋಮಾರಿಗಳಾಗುತ್ತಿದ್ದಾರೆ ಎಂಬ ರಂಭಾಪುರಿ ಶ್ರೀಗಳ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅಜಯ್ ಸಿಂಗ್, ಅದು ಜಗದ್ಗುರು ಗಳ ವೈಯಕ್ತಿಕ ಹೇಳಿಕೆಯಾಗಿದೆ. ಆದರೆ, ನಾವು ಜನರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿದ್ದೇವೆ ಎಂದರು.

ಈ ವರ್ಷ ಸಂಪುಟ ವಿಸ್ತರಣೆ ಆಗುತ್ತದೆ ಎಂಬ ನಂಬಿಕೆ ನನಗಿದೆ. ನಾನು ಸಹ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದೇನೆ.

– ಡಾ. ಅಜಯ್ ಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ

ಸ್ವಾಮೀಜಿ ಮಾತನಾಡಿದ್ದು ರಾಜಕಾರಣ ಆಗುತ್ತಾ?

ಹಾವೇರಿ : ರಾಜ್ಯದಲ್ಲಿ ಸಿಎಂ, ಡಿಸಿಎಂ ಸ್ಥಾನಗಳ ಬಗ್ಗೆ ಕೆಲವರು ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಅದರ ಬಗ್ಗೆ ನಾವ್ಯಾಕೆ ತಲೆಕೆಡಿಸಿಕೊಳ್ಳಬೇಕು ಎಂದು ಸಚಿವ ಶಿವಾನಂದ ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವೆಲ್ಲ ಆಗುವುದಾ, ಹೋಗುವುದಾ?. ಅವರ ಹೇಳಿಕೆಗೆ ನಾವ್ಯಾಕೆ ಪ್ರತಿಕ್ರಿಯೆ ನೀಡಬೇಕು. ಒಬ್ಬ ಸ್ವಾಮೀಜಿ ಮಾತನಾಡಿದ್ದು ರಾಜಕಾರಣ ಆಗುತ್ತಾ? ಎಂದು ಪ್ರಶ್ನಿಸಿದರು. ಸ್ವಾಮೀಜಿಗಳ ಮಾತನ್ನು ಅಲ್ಲಿಯೇ ಕೇಳಬೇಕು, ಅಲ್ಲಿಯೇ ಬಿಡಬೇಕು. ಸ್ವಾಮೀಜಿಗಳನ್ನು ಬಳಸಿಕೊಂಡು ಸಿಎಂ ಕುರ್ಚಿ ಪಡೆಯಲು ಯಾರು ಪ್ರಯತ್ನಿಸುತ್ತಿದ್ದಾರೆ ಎಂಬುದು ತಮಗೆ ಗೊತ್ತಿಲ್ಲ. ಆದರೆ ಸ್ವಾಮೀಜಿಗಳು ರಾಜಕಾರಣ ಮಾತನಾಡಬಾರದು ಎಂದು ತಿಳಿಸಿದರು.

ರಾಜಕೀಯದ ಬಗ್ಗೆ ರಾಜಕಾರಣಿಗಳು ಮಾತನಾಡಿದರೆ ಅದಕ್ಕೆ ಒಂದು ಬೆಲೆ ಇದೆ. ಆದರೆ ಅದೇ ಮಾತನ್ನ ಸ್ವಾಮೀಜಿಗಳು ಮಾತನಾಡಬಾರದು. ಬಿಜೆಪಿಯವರು ಹೇಳಿದಂತೆ ಲೋಕಸಭೆ ಫಲಿತಾಂಶದ ನಂತರ ರಾಜ್ಯದಲ್ಲಿ ಸರಕಾರ ಪತನವಾಗುತ್ತದೆ ಎಂಬುದು ತಪ್ಪು. ಈಗ ಸಿಎಂ, ಡಿಸಿಎಂ ಸ್ಥಾನಕ್ಕೆ ಚರ್ಚೆ ನಡೆದಿರುವುದು ಅದರ ಮುನ್ನುಡಿ ಎನ್ನುವುದು ತಪ್ಪು ಎಂದು ಸಚಿವ ಶಿವಾನಂದ ಪಾಟೀಲ್ ಹೇಳಿದರು.

ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡಿದರೆ ಡಿಕೆಶಿ ಸಿಎಂ

ಡಿಸಿಎಂ ಪರ ಬ್ಯಾಟ್ ಬೀಸಿದ ಜಿಟಿಡಿ

ಮೈಸೂರು: ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡಿದ್ರೆ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಈ ಹಿಂದೆ ಕಾಂಗ್ರೆಸ್ ದುರ್ಬಲವಾಗಿತ್ತು, ಆಗ ಸಿದ್ದರಾಮಯ್ಯ ಪ್ರಬಲವಾಗಿದ್ದರು. ಸದ್ಯ ಕಾಂಗ್ರೆಸ್ ಹೈಕಮಾಂಡ್ ಪ್ರಬಲವಾಗಿದೆ. ಸಿದ್ದರಾಮ ಯ್ಯ ಕೂಡ ಹೈಕಮಾಂಡ್ ಹೇಳಿದ್ರೆ ಅಂತ ಹೇಳಿದ್ದಾರೆ. ಹೀಗಾಗಿ ಕಾಂಗ್ರೆಸ್ ವರಿಷ್ಠರು ಮನಸ್ಸು ಮಾಡಿದ್ರೆ ಡಿ.ಕೆ ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಭವಿಷ್ಯ ನುಡಿದರು. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಹೇಳಿಲ್ಲ, ಅವರ ಶಾಸಕರೂ ಕೂಡ ಹೇಳಿಲ್ಲ. ಒಕ್ಕಲಿಗ ಸ್ವಾಮೀಜಿಗಳು ಬಹಿರಂಗವಾಗಿ ಒಂದು ಮನವಿ ಮಾಡಿದ್ದಾರೆ. ಡಿ.ಕೆ ಶಿವಕುಮಾರ್ ಮೇಲಿನ ಅಭಿಮಾನದಿಂದ ಹೇಳಿದ್ದಾರೆ ಎಂದು ಜಿ.ಟಿ ದೇವೇಗೌಡ ನುಡಿದರು. ಸಿದ್ದರಾಮಯ್ಯ ಸಿಎಂ ಆಗಬೇ ಕೆಂದು ಕುರುಬ ಸಮುದಾಯದ ಸ್ವಾಮೀಜಿ ದೊಡ್ಡ ಘರ್ಜನೆ ಮಾಡಲಿಲ್ಲವೇ ? ಅಧಿಕಾರ ಹಂಚಿಕೆ ಬಗ್ಗೆ ಮಾಧ್ಯಮದವರೇ ಹೇಳಿದ್ದೀರಿ. ಅದರ ಆಧಾರದಲ್ಲಿ ಸಿದ್ದರಾಮಯ್ಯ ಆದ ಮೇಲೆ ಶಿವಕುಮಾರ್ ಸಿಎಂ ಆಗಲಿ ಎಂದು ಹೇಳಿದ್ದಾರೆ. ಇದು ದೊಡ್ಡ ಅಪರಾಧ ಅಲ್ಲ ಎಂದು ಜಿಟಿಡಿ ಪ್ರತಿಪಾದಿಸಿದರು. ಸಿದ್ದರಾಮಯ್ಯಗೆ ಅಧಿಕಾರ ಹೇಗೆ ಉಳಿಸಿಕೊಳ್ಳ ಬೇಕು ಎಂಬುದು ಗೊತ್ತಿದೆ. ಅವರು ಸುದೀರ್ಘವಾಗಿ ಮಂತ್ರಿ, ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. 15 ಭಾರಿ ಹಣಕಾಸು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಯಾವ ರೀತಿ ಅಧಿಕಾರ ಉಳಿಸಿಕೊಳ್ಳಬೇಕೆಂಬ ಬಗ್ಗೆ ಅವರ ಜೀವನದಲ್ಲಿ ಸಾಕಷ್ಟು ಆಗಿದೆ. ಹೀಗಾಗಿ ಸಡನ್ ಆಗಿ ಅವರು ಅಧಿಕಾರ ಬಿಡುತ್ತಾರೆ ಎಂದು ನಾನು ಹೇಳಲ್ಲ ಎಂದು ತಿಳಿಸಿದರು.

ನೂರಾರು ಕೋಟಿ ಹಗಲು ದರೋಡೆ

ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ ವಿಚಾರ ಕುರಿತು ಮಾತನಾಡಿದ ಅವರು, ಹಣಕಾಸು ಸಚಿವರಾಗಿ ಸಿದ್ದರಾಮಯ್ಯ ಅವರೇ ಈ ಪ್ರಕರಣದ ಜವಾಬ್ದಾರಿ ಹೊರಬೇಕು. ಸಿದ್ದರಾಮಯ್ಯ ಹಣಕಾಸು ಸಚಿವರಿದ್ದಾರೆ. ಹಣಕಾಸು ಇಲಾಖೆ ಅನುಮತಿ ಇಲ್ಲದೆ ಹಣ ಮತ್ತೊಂದು ಖಾತೆಗೆ ಜಮಾ ಮಾಡಲು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಜವಾಬ್ದಾರಿ ಇದೆ. ಪ್ರಕರಣವನ್ನು ಸಿಬಿಐ ತನಿಖೆಗೆ ಕೊಡಬೇಕು. ಎಸ್‌ಟಿ ಸಮುದಾಯದ ನೂರಾರು ಕೋಟಿ ಹಗಲು ದರೋಡೆಯಾಗಿದೆ. ಇದು ಎಲ್ಲರೂ ತಲೆತಗ್ಗಿಸುವ ವಿಚಾರ. ಸಿಎಂ ಸಿದ್ದರಾಮಯ್ಯ ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ ಎಂದರು.

ಮುಖ್ಯಮಂತ್ರಿ ಹುದ್ದೆ ಬಗ್ಗೆ ಚರ್ಚೆ ಅನಗತ್ಯ

ಸಚಿವ ಮಹದೇವಪ್ಪ ಸ್ಪಷ್ಟನೆ

ಬೆಳಗಾವಿ: ಕಾಂಗ್ರೆಸ್ ಹೈಕಮಾಂಡ್ ವೀಕ್ಷಕರ ಕಳುಹಿಸಿ ಎಲ್ಲಾ ಶಾಸಕರ ಅಭಿಪ್ರಾಯದ ಮೇರೆಗೆ ಸಿದ್ದರಾ ಮಯ್ಯ ಅವರನ್ನು ಸಿಎಂ ಮಾಡಿದ್ದಾರೆ. ಸದ್ಯ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ ಈ ಕುರಿತು ಚರ್ಚೆ ಅನಗತ್ಯ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ ಮಹದೇವಪ್ಪ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, 5 ವರ್ಷ ಆಡಳಿತ ನಡೆಸುವಂತೆ ರಾಜ್ಯದ ಜನ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದ್ದಾರೆ. ಎಲ್ಲಾ ಶಾಸಕರ ಅಭಿಪ್ರಾಯದ ಮೇರೆಗೆ ಸಿಎಂ ಆಯ್ಕೆಯಾಗಿದೆ. ಸಿಎಂ ಆಯ್ಕೆ ಸಂದ ರ್ಭದಲ್ಲಿ ಹೈಕಮಾಂಡ್ ಯಾವೆಲ್ಲ ಚರ್ಚೆ ಮಾಡಿದೆ ಎಂಬುದನ್ನು ಬಹಿರಂಗ ಪಡಿಸಲು ಬರುವುದಿಲ್ಲ. ಸಿಎಂ ಬದಲಾವಣೆ ಚರ್ಚೆ ಅನಗತ್ಯ ಎಂದರು. ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಸುವ ವಿಚಾರವಾಗಿ ಮಾತನಾಡಿ, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜಾತಿವಾರು ಡಿಸಿಎಂ ಹುದ್ದೆ ಸೃಷ್ಟಿಸುವ ಕುರಿತು ಚರ್ಚೆ ನಡೆದಿತ್ತು. ಈ ಕುರಿತು ಪಕ್ಷದ ಹೈಕಮಾಂಡ್ ನಿರ್ಧಾರ ಮಾಡುತ್ತಾರೆ. ಪಕ್ಷದ ಹಿತದೃಷ್ಟಿಯಿಂದ ಇದು ಆಂತರಿಕೆ ಚರ್ಚೆಯಾಗಬೇಕು. ಸಿಎಂ ದೆಹಲಿ ಭೇಟಿ ವೇಳೆ ಅಭಿವೃದ್ಧಿ ಹಾಗೂ ಪಕ್ಷ ಸಂಘಟನೆ ಕುರಿತು ಚರ್ಚೆ ಆಗಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಡೆಂಘೀ ನಿಯಂತ್ರಣ ಅಗತ್ಯ

ಮಳೆ-ಬಿಸಿಲಿನಿಂದಾಗಿ ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, ಕಳೆದೊಂದು ತಿಂಗಳಲ್ಲಿ 1,955 ಪ್ರಕರಣಗಳು ದೃಢಪಟ್ಟಿವೆ. ಈ ವರ್ಷ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಡೆಂಘೀ ಪ್ರಕರಣಗಳು ದೃಢಪಟ್ಟಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 4,595 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದ್ದು, ಅವರಲ್ಲಿ 1,385 ಮಂದಿಯಲ್ಲಿ ಈ ಜ್ವರ ಖಚಿತಪಟ್ಟಿದೆ. ಚಿಕ್ಕಮಗಳೂರು (491), ಮೈಸೂರು (431), ಹಾವೇರಿ (402), ಚಿತ್ರದುರ್ಗ (253), ಶಿವಮೊಗ್ಗ (249) ಹಾಗೂ ದಕ್ಷಿಣ ಕನ್ನಡ (233) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಖಚಿತಪಟ್ಟಿವೆ. ಡೆಂಘೀ ಪ್ರಕರಣಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗುತ್ತಿರುವುದು ಕಳವಳಕಾರಿ. ಪರಿಸ್ಥಿತಿಯ ಗಾಂಭೀರ್ಯವನ್ನು ಅರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡೆಂಘೀ ನಿಯಂತ್ರಣದ ಕುರಿತು ಅಧಿಕಾರಿಗಳ ಸಭೆ ನಡೆಸಿದ್ದಾರೆ. ಅಗತ್ಯ ಪ್ರಮಾಣದ ಚುಚ್ಚುಮದ್ದು ಮತ್ತು ಪ್ಲೇಟ್‌ಗಳ ಸಂಗ್ರಹಕ್ಕೆ ಸೂಚನೆ ನೀಡಿದ್ದಾರೆ. ಇಷ್ಟೇ ಸಿದ್ಧತೆ ಸಾಲದು. ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ, ಔಷಧಿಗಳ ಲಭ್ಯತೆಯನ್ನು ಖಾತರಿಪಡಿಸಬೇಕು. ಆಶಾ ಕಾರ್ಯಕರ್ತೆಯರು, ನರ್ಸಿಂಗ್ ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಸ್ವಯಂ ಸೇವಕರ ನೆರವಿನೊಂದಿಗೆ ಮನೆ ಮನೆ ಸಮೀಕ್ಷೆ ನಡೆಸಿ ಅರಿವು ಮೂಡಿಸಬೇಕು. ನಿರಂತರವಾಗಿ ನಿಗಾ ವಹಿಸಿ, ಅಧಿಕಾರಿಗಳು ಮೈಮರೆಯದಂತೆ ಚುರುಕು ಮುಟ್ಟಿಸುವ ಕೆಲಸವನ್ನು ಮಾಡಬೇಕು. ಸೊಳ್ಳೆಗಳ ನಿಯಂತ್ರಣ ಸೇರಿದಂತೆ ಪರಿಸರವನ್ನು ಚೊಕ್ಕಟವಾಗಿಡುವ ಅಗತ್ಯದ ಕುರಿತು ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತಗಳು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯವನ್ನು ಆಂದೋಲನದ ರೂಪದಲ್ಲಿ ನಡೆಸಬೇಕು. ಜನರೂ ಅಷ್ಟೆ; ತಮ್ಮ ಸುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಹಾಗೂ ನೀರು ನಿಲ್ಲದಂತೆ ನೋಡಿಕೊಳ್ಳುವ ಮೂಲಕ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಸ್ಥಳೀಯ ಆಡಳಿತದ ಜತೆ ಕೈಜೋಡಿಸಬೇಕು. ಡೆಂಘೀಯಿಂದ ಬಾಧೆಗೊಳಗಾದವರ ಚಿಕಿತ್ಸೆಗೆ ಕೆಲವು ಖಾಸಗಿ ಆಸ್ಪತ್ರೆಗಳು ಹಣ ಸುಲಿಗೆ ಮಾಡುತ್ತಿವೆ ಎಂದೂ ವರದಿಯಾಗಿದೆ. ಮಾನವೀಯತೆ ಮರೆತು ಹಣ ಮಾಡುವ ದಂಧೆಯಲ್ಲಿ ಮುಳುಗಿದ ಅಂತಹ ಆಸ್ಪತ್ರೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು.

ಸೊಂಪಾದಕೀಯ

ತಾಲಿಬಾನ್ ಅಲ್ಲಾ, ಅಲ್ಲಾ!

ತಾಳಿದವನು ಬಾಳಿಯಾನು ಅಂತ ಹಿರಿಯರು ಹೇಳಿದ್ದಾರೆ. ಆದರೆ ನಮ್ಮ ದೇಶದ ಅವಿವಾಹಿತ ಹುಡುಗರು ತಾಳಿ ಕಟ್ಟಿದವನು ಬಾಳಿಯಾನು ಅಂತ ಮದುವೆ ಆಗಲು ಹೆಣ್ಣು ಸಿಗದೆ ತುದಿಗಾಲಿನಲ್ಲಿ ನಿಂತಿದ್ರೆ, ಅತ್ತ ತಾಲಿಬಾನ್‌ನವರು ಬಾಳಿಯಾರೇ ಅಂತ ಆಫ್ಘಾನಿಸ್ತಾನದಲ್ಲಿ ಇನ್ನೊಂದು ಚರ್ಚೆ ನಡೆಯುತ್ತಿದೆ. ಸದ್ಯಕ್ಕೆ ಆಫ್ಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಇರೋದು ಎಲ್ಲರಿಗೂ ಗೊತ್ತು. ತಾಲಿಬಾನ್ ಕೆಲಸ ಅಂದ್ರೆನೇ, ಜನರಿಗೆ ಅದನ್ನ ಮಾಡ್ಬೇಡಿ, ಇದನ್ನ ಮಾಡ್ಬೇಡಿ ಅಂತ ಬ್ಯಾನ್ ಮಾಡೋದು ಅಂತನೂ ಗೊತ್ತು. ಆದರೆ ಇಷ್ಟು ದಿನ ಇವರ ಬ್ಯಾನ್ ಬ್ಯಾನೆ ಎಲ್ಲ ಕೇವಲ ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತ ಆಗಿತ್ತು. ಮುಸ್ಲಿಂ ಹೆಣ್ಣುಮಕ್ಕಳು ಬುರ್ಖಾ ಹಾಕಬೇಕು, ಕೆಲಸಕ್ಕೆ ಹೋಗುವಂತಿಲ್ಲ, ಅದೂ, ಇದು ಸುಡುಗಾಡು ಅಂತ ಇವರ ದರ್ಪ ಮತ್ತು ದಬ್ಬಾಳಿಕೆಗೆ ಹೆಣ್ಣುಮಕ್ಕಳು ಪಡಬಾರದ ಕಷ್ಟ ಪಡುತ್ತಿದ್ದರು. ಆದರೆ ಈಗ ಇವರ ಕೆಂಗಣ್ಣು ಪುರುಷರ ಮೇಲೂ ಬಿದ್ದಿದೆ. ಅಂದ್ರೆ ಪುರುಷರು ಹಾಕೋ ಬಟ್ಟೆಯ ಮೇಲೂ ಬಿದ್ದಿದೆ. ಈಗ ಆಫ್ಘಾನಿಸ್ತಾನದಲ್ಲಿ ಪುರುಷರು ಟೈ ಧರಿಸುವಂತಿಲ್ಲ ಅನ್ನೋ ಕಾನೂನು ತರಲಾಗಿದೆಯಂತೆ. ಹಾಗಾಗಿ ಇನ್ನು ಮುಂದೆ ಅಫಿಷಿಯಲ್ ಕೆಲಸ ಮಾಡೋ ಪುರುಷರು ಕುತ್ತಿಗೆಗೆ ಟೈ ಕಟ್ಟಿಕೊಳ್ಳಲು, ಟೈ ಅನ್ನು ಕೈಗೆತ್ತಿಕೊಂಡರೆ ಅದು ಕಾನೂನನ್ನು ಕೈಗೆತ್ತಿಕೊಂಡಂತೆ. ಹಾಗಂತ ಈ ಹೊಸ ವಸ್ತ್ರ ಸಂಹಿತೆಯಿಂದ ಈಗ ಪುರುಷರಿಗೂ ಕುತ್ತಿಗೆಗೆ ಬಂದಿದೆ ಎನ್ನುವಂತಿಲ್ಲ. ಯಾಕಂದ್ರೆ ಟೈ ಮೊದಲಿನಿಂದಲೂ ಕುತ್ತಿಗೆಯಲ್ಲೇ ಇರುವಂಥದ್ದು. ಆದರೆ, ಇದನ್ನು ಕೇಳಿ ಆಫ್ಘಾನಿಸ್ತಾನದಲ್ಲಿ ಟೈ ಕಟ್ಟಿಕೊಂಡು ಅಫಿಷಿಯಲ್ ಕೆಲಸ ಮಾಡೋರೂ ಇದ್ದಾರಾ ಅಂತ ಕೇಳೋದು ಕುಚೋದ್ಯದ ಪ್ರಶ್ನೆಯೇ ಬಿಡಿ. ಅದೇನೇ ಇರಲಿ, ಸದ್ಯಕ್ಕೆ ತಾಲಿಬಾನ್ ಮಾತ್ರ ಟೈ ಕಟ್ಟಂಗಿಲ್ಲ. ಟೈ ಅನ್ನೋದು ಕ್ರೈಸ್ತ ಧರ್ಮದ ಪಾಲನೆ ಮಾಡಿದಂತೆ. ಯಾಕಂದ್ರೆ ಅದು ಕ್ರಾಸ್ ಇದ್ದಂತೆ ಎಂದು ಫರ್ಮಾನು ಹೊರಡಿಸಿದೆ. ಹಾಗಾಗಿ ಈಗ ಅಲ್ಲಿನ ಗಂಡಸರು ಟೈ ಅನ್ನು ಟ್ರೈ ಮಾಡುವಂತಿಲ್ಲ. ಒಂದು ವೇಳೆ ತಾಲಿಬಾನ್‌ನ ಈ ಆದೇಶವನ್ನು ಮೀರಿ ಯಾರಾದ್ರೂ ಟೈ ಕಟ್ಟಿಕೊಂಡ್ರೆ, ಅದು ಅವರ ಗೆಲುವು. ಟೈ ಕಟ್ಟಿದ ಕಾರಣಕ್ಕೆ ಅಂಥವರನ್ನು ಶಿಕ್ಷೆಗೆ ಒಳಪಡಿಸಿದರೆ ಅದು ತಾಲಿಬಾನ್‌ನ ಗೆಲುವು. ಒಂದು ವೇಳೆ ಕುತ್ತಿಗೆಗೆ ಕಟ್ಟದೆ, ಟೈ ಅನ್ನು ಕೈಯಲ್ಲೇ ಹಿಡ್ಕೊಂಡು ಆಫೀಸಿಗೆ ಹೋದರೆ ಅದು ಯಾರ ಗೆಲುವೂ ಅಲ್ಲ. ಅದು ಟೈ!

ಸಂಪಾದಕರ ಸದ್ಯಶೋಧನೆ

ಪಿ.ಶಿವಶಂಕರ ನೆನಪು

ನೀವು ಪಿ.ಶಿವಶಂಕರ (ಪುಂಜಲ ಶಿವಶಂಕರ) ಎಂಬ ರಾಜಕಾರಣಿಯ ಹೆಸರನ್ನು ಕೇಳಿರಬಹುದು. ಅವರು ನಿಧನರಾಗಿಯೇ ಏಳು ವರ್ಷಗಳಾದವು. ಅವರು ಇಂದಿರಾ ಗಾಂಧಿ ಅವರಿಗೆ ಆಪ್ತರಾಗಿದ್ದರು. ನಂತರ ಅವರ ಪುತ್ರ ರಾಜೀವ್ ಗಾಂಧಿಯವರಿಗೂ. ಗಾಂಧಿ ಕುಟುಂಬಕ್ಕೆ ಅತ್ಯಂತ ನಿಕಟರಾದವರ ಪೈಕಿ ಶಿವಶಂಕರ ಕೂಡ ಒಬ್ಬರು. ಆಂಧ್ರದ ಕೆಲವೇ ಕೆಲವು ರಾಜಕಾರಣಿಗಳಂತೆ ಅವರೂ ಕೂಡ ಕೇಂದ್ರದಲ್ಲಿ ಬಹುಕಾಲ ಮಂತ್ರಿಯಾಗಿ ಅಧಿಕಾರ ಅನುಭವಿಸಿದವರು. 1982 ರಿಂದ ಮುಂದಿನ ಹದಿನಾಲ್ಕು ವರ್ಷ(1996)ಗಳ ಕಾಲ ಅವರು ಕೇಂದ್ರದಲ್ಲಿ ಒಂದಿಲ್ಲೊಂದು ಪ್ರಮುಖ ಖಾತೆಯ ಸಚಿವರಾಗಿದ್ದರು. ಮುನ್ನೂರು ಕಾಪು ಕುಟುಂಬದಲ್ಲಿ ಜನಸಿದ ಶಿವಶಂಕರ ಕೇಂದ್ರದಲ್ಲಿ ಪೆಟ್ರೋಲಿಯಂ, ಇಂಧನ, ವಿದೇಶಾಂಗ ವ್ಯವಹಾರ, ಕಾನೂನು ಮತ್ತು ನ್ಯಾಯ, ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವರಾಗಿದ್ದರು. ಮೂಲತಃ ವಕೀಲರಾಗಿದ್ದ ಅವರು, 1974 ರಿಂದ 1975ರವರೆಗೆ ಆಂಧ್ರ ಪ್ರದೇಶ ಹೈಕೋರ್ಟಿನ ನ್ಯಾಯಮೂರ್ತಿಯೂ ಆಗಿದ್ದರು. ತುರ್ತುಪರಿಸ್ಥಿತಿ ನಂತರ ನಡೆದ ಚುನಾವಣೆಯಲ್ಲಿ ಸಿಕಂದರಾಬಾದ್‌ನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದ ಅವರು, ನಂತರ ಹಿಂತಿರುಗಿ ನೋಡಿದ್ದೇ ಇಲ್ಲ. ಕಾನೂನು ಸಚಿವರಾಗಿದ್ದ ಸಂದರ್ಭದಲ್ಲಿ ಶಿವಶಂಕರ ಹಲವು ಬಾರಿ ವಿವಾದಗಳನ್ನು ಮೈಮೇಲೆ ಎಳೆದುಕೊಂಡಿದ್ದರು. ನ್ಯಾಯಮೂರ್ತಿಗಳ ವರ್ಗಾವಣೆಗೆ ಸಂಬಂಧಿಸಿದ ಸುತ್ತೋಲೆ ವಿಷಯವಾಗಿ ಅವರು ತೆಗೆದುಕೊಂಡ ನಿರ್ಧಾರ ವಿವಾದಕ್ಕೆ ಕಾರಣವಾಗಿತ್ತು. ಸುಪ್ರೀಂ ಕೋರ್ಟಿನ ಏಳು ಸದಸ್ಯರ ಪೀಠವು ಶಿವಶಂಕರ ಸುತ್ತೋಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿ, ಆ ವಿಷಯವನ್ನು ಅಂತ್ಯಗೊಳಿಸಿದ್ದು ಒಂದು ದೊಡ್ಡ ಪ್ರಹಸನ. 1984 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಶಿವಶಂಕರ ಅವರು ಸೋತು ಹೋದರು. ಆದರೆ ರಾಜೀವ ಗಾಂಧಿಯವರು ಅವರನ್ನು ಗುಜರಾತಿನಿಂದ ರಾಜ್ಯಸಭಾ ಸದಸ್ಯರನ್ನಾಗಿ ಮಾಡಿ ಮಾನವ ಸಂಪನ್ಮೂಲ ಮತ್ತು ವಿದೇಶಾಂಗ ಖಾತೆ ಸಚಿವರನ್ನಾಗಿ ಮಾಡಿದರು. ಅವರು ಎರಡು ಅವಧಿಗೆ ರಾಜ್ಯಸಭಾ ಸದಸ್ಯರಾಗಿದ್ದರು. 1987 ರಲ್ಲಿ ರಾಜೀವ್ ಆದೇಶದ ಮೇರೆಗೆ ಯೋಜನಾ ಆಯೋಗದ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದರು. 1988 ರಿಂದ ಎರಡು ವರ್ಷಗಳ ಕಾಲ ಅವರು ರಾಜ್ಯಸಭೆಯಲ್ಲಿ ಆಡಳಿತ ಪಕ್ಷದ ನಾಯಕರಾಗಿದ್ದರು. ನಂತರ ಎರಡು ವರ್ಷಗಳ ಕಾಲ ಮೇಲ್ಮನೆಯಲ್ಲಿ ಪ್ರತಿಪಕ್ಷದ ನಾಯಕರಾಗಿದ್ದರು. 1994 ರಲ್ಲಿ ಅವರು ಸಿಕ್ಕಿಂ ರಾಜ್ಯಪಾಲರಾಗಿದ್ದರು. ಮುಂದಿನ ವರ್ಷ ಕೇರಳದ ರಾಜ್ಯಪಾಲರಾದರು. ಸಾಮಾನ್ಯವಾಗಿ ರಾಜ್ಯಪಾಲರಾಗಿ ನೇಮಕವಾದ ಬಳಿಕ, ಸಕ್ರಿಯ ರಾಜಕಾರಣದಿಂದ ನಿವೃತ್ತರಾಗುವುದು ಸಂಪ್ರದಾಯ. ಆದರೆ ಶಿವಶಂಕರ ಅವರು 1998ರಲ್ಲಿ ತೆನಾಲಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಬಂದರು. ಆದರೆ ಆ ಅವಧಿಯಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದ್ದರಿಂದ ಶಿವಶಂಕರ ಅಧಿಕಾರದಿಂದ ಹೊರಗುಳಿದರು. ಅದು ಅವರ ಜಾಯಮಾನಕ್ಕೆ ನಿಲುಕದೇ ಇರುವಂಥದ್ದು. ಈ ಮಧ್ಯೆ ಕಾಂಗ್ರೆಸ್ ನಾಯಕತ್ವದೊಂದಿಗೆ ಅವರ ಸಂಬಂಧ ಹಳಸಲಾರಂಭಿಸಿತ್ತು. ಆಂಧ್ರದಲ್ಲಿ ಪಕ್ಷದ ಟಿಕೇಟನ್ನು ಹಣಕ್ಕೆ ಮಾರಾಟ ಮಾಡಲಾಗಿದೆ ಎಂದು ಬಹಿರಂಗ ಹೇಳಿಕೆ ನೀಡಿದರು. ಆದರೆ ಅವರ ಹೇಳಿಕೆಯನ್ನು ಯಾರೂ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಪಕ್ಷದಲ್ಲಿ ತಮ್ಮನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂದು ಆಗಾಗ ಹೇಳುತ್ತಿದ್ದ ಶಿವಶಂಕರ, 2008 ರಲ್ಲಿ ಕಾಂಗ್ರೆಸ್ ತೊರೆದು ತೆಲುಗು ಚಿತ್ರನಟ ಚಿರಂಜೀವಿ ನೇತೃತ್ವದ ಪ್ರಜಾ ರಾಜ್ಯಮ್ ಪಕ್ಷವನ್ನು ಸೇರಿದರು. ಅದು ಅವರ ರಾಜಕೀಯ ಜೀವನದ ಕೆಟ್ಟ ನಡೆ ಎಂದೇ ಭಾವಿಸಲಾಯಿತು. ಅದಾಗಿ ಎರಡು ವರ್ಷಗಳಲ್ಲಿ ಚಿರಂಜೀವಿ ತಮ್ಮ ಪಕ್ಷವನ್ನು ಕಾಂಗ್ರೆಸ್ಸಿನಲ್ಲಿ ವಿಲೀನಗೊಳಿಸಿಬಿಟ್ಟರು. ಕಾಂಗ್ರೆಸ್ಸಿನೊಂದಿಗೆ ಹೋಗಬೇಡಿ ಎಂದು ಚಿರಂಜೀವಿಯನ್ನು ಪರಿಪರಿಯಾಗಿ ಬೇಡಿಕೊಂಡರೂ, ಶಿವಶಂಕರ ಮಾತಿಗೆ ಯಾರೂ ಸೊಪ್ಪು ಹಾಕಲಿಲ್ಲ. ಅಷ್ಟು ದಿನಗಳ ಕಾಲ ಕಾಂಗ್ರೆಸ್ಸನ್ನು ಬಾಯಿಗೆ ಬಂದಂತೆ ಟೀಕಿಸುತ್ತಿದ್ದ ಶಿವಶಂಕರ ಮೌನಕ್ಕೆ ಶರಣಾಗಿಬಿಟ್ಟರು. ಈ ನೋವು ಅವರನ್ನು ಅತೀವವಾಗಿ ಕಾಡುತ್ತಿತ್ತು. ತಮ್ಮ ಕೊನೆಗಾಲದಲ್ಲಿ ತಪ್ಪು ಮಾಡಿದೆ ಎಂದು ಅವರು ಆಪ್ತರ ಮುಂದೆ ಹೇಳಿಕೊಂಡು ವೇದನೆಪಡುತ್ತಿದ್ದರು. ಅವರನ್ನು ಕಾಣಲು ಯಾರೂ ಬರುತ್ತಿರಲಿಲ್ಲ. ಸ್ನೇಹಿತರು, ಆಪ್ತರೆಲ್ಲ ದೂರವಾಗಿದ್ದರು. 2017ರಲ್ಲಿ ನಿಧನರಾದರು.

ಅರಳುತ್ತಿವೆ ವಿಜಯೇಂದ್ರ ಕ್ಯಾಂಪಿನ ಕನಸುಗಳು



ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇತ್ತೀಚೆಗೆ ದೆಹಲಿಗೆ ಹೋಗಿದ್ದರು. ಲೋಕಸಭಾ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಅಮಿತ್ ಶಾ ಅವರಿಗೆ ವಿವರ ನೀಡುವುದೇ ದೆಹಲಿ ಭೇಟಿಯ ಉದ್ದೇಶ. ಆದರೆ, ಭೇಟಿ ಮಾಡಲು ಬಂದ ವಿಜಯೇಂದ್ರ ಅವರನ್ನು ಅಮಿತ್ ಶಾ ತುಂಬ ಹೊತ್ತು ಕಾಯಿಸಿದ್ದಾರೆ. ಕಾರಣ? ಕರ್ನಾಟಕದ ನೆಲೆಯಲ್ಲಿ ತಾವು ನಿರೀಕ್ಷಿಸಿದಷ್ಟು ಸೀಟು ಬಂದಿಲ್ಲ ಎಂಬುದು ಅಮಿತ್ ಶಾ ಅವರ ಸಿಟ್ಟು. ಈ ಸಿಟ್ಟಿಗಿರುವ ಮತ್ತೊಂದು ಕಾರಣವೆಂದರೆ ಕರ್ನಾಟಕದಲ್ಲಿ ಪಕ್ಷ ಗೆಲ್ಲಬಹುದಾಗಿದ್ದ ಚಿಕ್ಕೋಡಿ, ಬೀದರ್,ದಾವಣಗೆರೆ, ಚಾಮರಾಜನಗರದಂತಹ ಕ್ಷೇತ್ರಗಳಲ್ಲಿ ಯಡಿಯೂರಪ್ಪ ಕ್ಯಾಂಪು ಫುಲ್ಲು ನಿರಾಸಕ್ತಿ ತೋರಿಸಿತು ಎಂಬ ಫೀಡ್ ಬ್ಯಾಕು.

ಅಂದ ಹಾಗೆ ರಾಯಚೂರು, ಚಿಕ್ಕೋಡಿ, ಬೀದರ್‌ನಂತಹ ಕ್ಷೇತ್ರಗಳಲ್ಲಿ ತಾವು ಸೂಚಿಸಿದ ಹೆಸರುಗಳನ್ನು ಪರಿಗಣಿಸದೆ ತಮ್ಮಿಷ್ಟ ಬಂದವರಿಗೆ ವರಿಷ್ಠರು ಟಿಕೆಟ್ ಕೊಟ್ಟರು. ಪರಿಣಾಮವಾಗಿ ಅವರೆಲ್ಲ ಸೋತು ಹೋದರು ಅಂತ ಯಡಿಯೂರಪ್ಪ ಟೀಮು ಕನವರಿಸುತ್ತಿದೆಯಾದರೂ ಮೋದಿ-ಅಮಿತ್ ಶಾ ಅದನ್ನೊಪ್ಪುತ್ತಿಲ್ಲ. ಅವರ ಪ್ರಕಾರ ಕ್ಯಾಂಡಿಡೇಟುಗಳು ಯಾರೇ ಇರಲಿ,ಆದರೆ ಕರ್ನಾಟಕದಲ್ಲಿ ಚುನಾವಣೆಯ ಸಾರಥ್ಯವನ್ನು ವಹಿಸಿಕೊಂಡವರು ಸೋಲಿನ ಜವಾಬ್ದಾರಿ ಹೊರಲೇಬೇಕು.

ಹಾಗಂತ ಈ ಜೋಡಿ ತೀರ್ಮಾನಿಸಿದ ಕಾಲಕ್ಕೆ ಸರಿಯಾಗಿ ಚಿಕ್ಕೋಡಿಯಲ್ಲಿ ಸೋತ ಅಣ್ಣಾ ಸಾಹೇಬ್ ಜೊಲ್ಲೆ, ಬೀದರ್‌ನಲ್ಲಿ ಸೋತ ಭಗವಂತ ಖೂಬಾ ಸೇರಿದಂತೆ ಸೋತ ಹಲವರು ದೆಹಲಿಗೆ ಹೋಗಿ ಯಡಿಯೂರಪ್ಪ ಟೀಮಿನ ವಿರುದ್ಧವೇ ಕಂಪ್ಲೇಂಟು ರಿಜಿಸ್ಟರ್ ಮಾಡಿ ಬಂದಿದ್ದಾರೆ. ಪರಿಣಾಮ? ಎಲ್ಲವೂ ಸೇರಿ ಮೋದಿ-ಅಮಿತ್ ಶಾ ಜೋಡಿ ಕಿರಿಕಿರಿ ಮಾಡಿಕೊಂಡಿದೆ. ಹೀಗಾಗಿಯೇ ಕೇಂದ್ರ ಸಚಿವ ಸಂಪುಟ ವಿಸ್ತರಣೆಯ ನಂತರ ತಮ್ಮನ್ನು ಭೇಟಿ ಮಾಡಲು ಬಂದ ವಿಜಯೇಂದ್ರ ಅವರನ್ನು ಅಮಿತ್ ಶಾ ತುಂಬ ಹೊತ್ತು ಕಾಯಿಸಿದ್ದಾರೆ. ಕುತೂಹಲದ ಸಂಗತಿ ಎಂದರೆ ವಿಜಯೇಂದ್ರ ಅವರನ್ನು ಅಮಿತ್ ಶಾ ಕಾಯಿಸಿದ ಬೆಳವಣಿಗೆ ಯಡಿಯೂರಪ್ಪ ವಿರೋಧಿ ಕ್ಯಾಂಪಿನ ಸಂಭ್ರಮಕ್ಕೆ ಕಾರಣವಾಗಿ, ಇನ್ನೇನು ವಿಜಯೇಂದ್ರ ಅವರ ಪೊಲಿಟಿಕಲ್ ಕೆರಿಯರ್ ಮಸುಕಾಗಲಿದೆ ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ.

ಮಠಾಧೀಶರೇಕೆ ಧ್ವನಿ ಎತ್ತಿದರು?

ಅಂದ ಹಾಗೆ ಇಂತಹ ಬೆಳವಣಿಗೆಗಳೇನೇ ಇರಲಿ,ಆದರೆ ವಿಜಯೇಂದ್ರ ಕ್ಯಾಂಪು ಮಾತ್ರ ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಏಕೆಂದರೆ ರಾಜಕಾರಣದಲ್ಲಿ ಹಲವು ಸಲ ತಮ್ಮ ಕೈ ಮೇಲಾದರೆ, ಕೆಲವು ಸಲ ವಿರೋಧಿಗಳ ಕೈ ಮೇಲಾಗುತ್ತದೆ ಎಂಬುದು ಅದಕ್ಕೆ ಗೊತ್ತು. ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದ ರಾಜಕೀಯ ಬೆಳವಣಿಗೆಗಳು ವಿಜಯೇಂದ್ರ ಭವಿಷ್ಯದ ನಾಯಕರಾಗಿ ಎಮರ್ಜ್ ಆಗಲು ಕಾರಣವಾಗುತ್ತಿವೆ ಎಂಬುದು ಅದರ ಲೆಕ್ಕಾಚಾರ.

ಅದರ ಪ್ರಕಾರ, ಕರ್ನಾಟಕದ ರಾಜಕೀಯ ಬೆಳವಣಿಗೆಗಳು ಏಕಕಾಲಕ್ಕೆ ಒಕ್ಕಲಿಗ ಮತ್ತು ಲಿಂಗಾಯತ ವರ್ಗಗಳ ಅಸಹನೆಗೆ ಕಾರಣವಾಗುತ್ತಿವೆ. ಮೊನ್ನೆ ಒಕ್ಕಲಿಗ ಮಠಾಧೀಶರಾದ ಚಂದ್ರಶೇಖರನಾಥ ಸ್ವಾಮೀಜಿಗಳಾಡಿದ ಮಾತು ಮತ್ತು ಲಿಂಗಾಯತ ಮಠಾಧೀಶರಾದ ಶ್ರೀಶೈಲ ಜಗದ್ಗುರು ಗಳಾಡಿದ ಮಾತುಗಳೇ ಇದಕ್ಕೆ ಸಾಕ್ಷಿ. ಅಂದ ಹಾಗೆ ಒಕ್ಕಲಿಗ ಮಠಾಧೀಶರಾದ ಚಂದ್ರಶೇಖರನಾಥಸ್ವಾಮೀಜಿ ಏನು ಹೇಳಿದರು? ಸಿದ್ದರಾಮಯ್ಯ ಅವರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟವನ್ನು ವಹಿಸಿಕೊಡಬೇಕು ಅಂತ ತಾನೇ? ಇಂತಹ ಮಾತುಗಳನ್ನು ಅವರೇಕೆ ಆಡಿದರು? ಅಧಿಕಾರ ಹಂಚಿಕೆಯ ಬಗ್ಗೆ ಕಾಂಗ್ರೆಸ್ ವರಿಷ್ಠರು ತೀರ್ಮಾನಿಸಿದ್ದರೆ ಅದು ಜಾರಿಯಾಗಲು ಇನ್ನೊಂದು ವರ್ಷವಾದರೂ ಕಾಯಲೇಬೇಕು. ಆದರೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಒಂದು ವರ್ಷ ಕಳೆಯುತ್ತಿದ್ದಂತೆಯೇ ಅಂತಹ ಅವಸರದ ಮಾತುಗಳೇಕೆ ಶುರುವಾದವು?

ಹಾಗಂತ ಕೆದಕಲು ಹೋದರೆ ಹಲವು ಕುತೂಹಲಕಾರಿ ಅಂಶಗಳು ಹೊರಬೀಳುತ್ತವೆ. ಅದರ ಪ್ರಕಾರ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ಬಿಟ್ಟುಕೊಡುವ ವಿಷಯದಲ್ಲಿ ಸಿದ್ದರಾಮಯ್ಯ ಟೀಮಿಗೆ ಸಹಮತವಿಲ್ಲ. ಒಂದು ವೇಳೆ ಅಧಿಕಾರ ಹಂಚಿಕೆಯ ಒಪ್ಪಂದ ಆಗಿದ್ದೇ ಹೌದಾದರೆ ಎರಡನೇ ಅವಧಿಗೆ ಮಲ್ಲಿಕಾರ್ಜುನ ಖರ್ಗೆ ಸಿಎಂ ಆಗಲಿ, ಆದರೆ ಡಿ.ಕೆ.ಶಿವಕುಮಾರ್ ಅವರನ್ನು ಒಪ್ಪಲು ತಾವು ತಯಾರಿಲ್ಲ ಅಂತ ಈ ಟೀಮಿನ ಪ್ರಮುಖರು ಖಾಸಗಿ ಮಾತುಕತೆಯಲ್ಲಿ ಹೇಳತೊಡಗಿದ್ದಾರೆ. ಅರ್ಥಾತ್, ಡಿಕೆಶಿಗೆ ಸಿಎಂ ಹುದ್ದೆ ತಪ್ಪಿಸುವ ಯತ್ನ ವ್ಯವಸ್ಥಿತವಾಗಿ ನಡೆದಿದೆ ಎಂಬುದು ಡಿಕೆ ಕ್ಯಾಂಪಿಗೆ ಕನ್‌ಫರ್ಮ್ ಆಗಿದೆ. ಇದೇ ಕಾರಣಕ್ಕಾಗಿ ಆ ಟೀಮು ಹುಯಿಲೆಬ್ಬಿಸುತ್ತಿದೆ. ಚಂದ್ರಶೇಖರನಾಥ ಸ್ವಾಮೀಜಿಗಳ ಹೇಳಿಕೆಯ ಹಿಂದೆ ಪ್ರಭಾವ ಬೀರಿರುವುದೇ ಈ ಹುಯಿಲು ಎಂಬುದು ಸದ್ಯದ ಅನುಮಾನ.

ಹೀಗೆ ಸಿಎಂ ಪಟ್ಟಕ್ಕಾಗಿ ಪುನಃ ಶುರುವಾದ ಕದನ ಅಂತಿಮವಾಗಿ ಡಿಕೆಶಿ ಕಾಲೆಳೆಯಲಿದೆ. ಆ ಮೂಲಕ ಒಕ್ಕಲಿಗರಿಗೆ ಸಿಎಂ ಪಟ್ಟ ತಪ್ಪಲಿದೆ. ಅಂದ ಹಾಗೆ ವಿಧಾನಸಭಾ ಚುನಾವಣೆಯ ನಂತರ ಡಿಕೆಶಿ ಸಿಎಂ ಆಗಲಿದ್ದಾರೆ ಎಂಬ ನಿರೀಕ್ಷೆಯಿಂದ ಒಕ್ಕಲಿಗ ಸಮುದಾಯ ಕಾಂಗ್ರೆಸ್ಸಿಗೆ ಶಕ್ತಿ ನೀಡಿತ್ತು. ಆದರೆ, ಯಾವಾಗ ಅದು ಹುಸಿಯಾಯಿತೋ? ಇದರಿಂದ ಕೆರಳಿದ ಅದು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟಕ್ಕೆ ಪವರ್ ತುಂಬಿತು. ಒಂದು ವೇಳೆ ಎರಡನೇ ಅವಧಿಯಲ್ಲೂ ಡಿಕೆಶಿಗೆ ಸಿಎಂ ಹುದ್ದೆ ದೊರೆಯದಿದ್ದರೆ ಅದು ನಿಶ್ಚಿತವಾಗಿ ಕೆರಳುತ್ತದೆ. ಮೈತ್ರಿಕೂಟದ ಜತೆ ಖಾಯಂ ಆಗಿ ನಿಲ್ಲುತ್ತದೆ ಎಂಬುದು ವಿಜಯೇಂದ್ರ ಕ್ಯಾಂಪಿನ ಕನಸು.

ಒಕ್ಕಲಿಗ-ಲಿಂಗಾಯತ ಶಕ್ತಿ ಒಗ್ಗೂಡಲಿದೆ

ಇನ್ನು ಕಾಂಗ್ರೆಸ್ಸಿನಲ್ಲಿ ಅಧಿಕಾರ ಹಂಚಿಕೆಯ ಮಾತು ಶುರುವಾಗುತ್ತಿದ್ದಂತೆಯೇ ಶ್ರೀ ಶೈಲ, ರಂಭಾಪುರಿ ಪೀಠದ ಜಗದ್ಗುರುಗಳು, ಲಿಂಗಾಯತರಿಗೆ ಮುಖ್ಯಮಂತ್ರಿ ಅಥವಾ ಉಪಮುಖ್ಯಮಂತ್ರಿ ಪಟ್ಟ ಸಿಗಲಿ ಅಂತ ಹೇಳಿದರು. ಹೀಗೆ ಅವರು ಹೇಳಿದ ಮಾತ್ರಕ್ಕೆ ಲಿಂಗಾಯತ ಸಮುದಾಯದ ನಾಯಕರಿಗೆ ಸಿಎಂ ಪಟ್ಟ ಸಿಕ್ಕಿ ಬಿಡುತ್ತದೆ ಅಂತಲ್ಲ.

ಆದರೆ ಅವರ ಮಾತಿನಿಂದ ಕರ್ನಾಟಕದ ಲಿಂಗಾಯತ ಸಮುದಾಯ ಮತ್ತೊಮ್ಮೆ ಸಾಲಿಡ್ಡಾಗಿ ಬಿಜೆಪಿ ಜತೆ ನಿಲ್ಲುವ ಅನಿವಾರ್ಯತೆ ಸೃಷ್ಟಿಯಾಗಲಿದೆ ಎಂಬುದು ವಿಜಯೇಂದ್ರ ಕ್ಯಾಂಪಿನ ಲೆಕ್ಕಾಚಾರ. ಅರ್ಥಾತ್, ಅಧಿಕಾರ ಹಂಚಿಕೆ ಅಂತ ಆಗಿದ್ದೇ ಆದರೆ ಸಿಎಂ ಪಟ್ಟ ಒಕ್ಕಲಿಗರಿಗೂ ಸಿಗುವುದಿಲ್ಲ, ಲಿಂಗಾಯತರಿಗೂ ಸಿಗುವುದಿಲ್ಲ. ಬದಲಿಗೆ ಅದು ಅಹಿಂದ ವರ್ಗಗಳ ನಾಯಕರೊಬ್ಬರ ಪಾಲಾಗಲಿದೆ. ಯಾವಾಗ ಈ ಬೆಳವಣಿಗೆ ನಡೆಯುತ್ತದೋ? ಆಗ ಪ್ರಬಲ ಒಕ್ಕಲಿಗ, ಲಿಂಗಾಯತ ಸಮುದಾಯಗಳು ದೊಡ್ಡ ಮಟ್ಟದಲ್ಲಿ ಕನ್ಸಾಲಿಡೇಟ್ ಆಗುತ್ತವೆ. ಮತ್ತು ಇದರ ಪರಿಣಾಮವಾಗಿ ಬಿಜೆಪಿ ಮೈತ್ರಿಕೂಟಕ್ಕೆ ಡಬ್ಬಲ್ ಪವರ್ ದಕ್ಕಲಿದೆ. ಪರಿಸ್ಥಿತಿ ಹೀಗಾದಾಗ ಅದನ್ನು ಎನ್ ಕ್ಯಾಶ್ ಮಾಡಿಕೊಳ್ಳುವ ನಾಯಕರು ಬಿಜೆಪಿ ಮೈತ್ರಿಕೂಟದ ಮುಂಚೂಣಿಯಲ್ಲಿರಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ಅಂತಹ ಎನ್‌ಕ್ಯಾಶ್‌ಮೆಂಟ್ ಪವರ್ ಇರುವ ಪ್ರಮುಖ ನಾಯಕ ವಿಜಯೇಂದ್ರ ಎಂಬುದು ಅವರ ಕ್ಯಾಂಪಿನ ಮಾತು.

ಲಿಂಗಾಯತ ಪಾಳಯ ಕುದಿಯುತ್ತಿದೆ

ಈ ಮಧ್ಯೆ ವಿಜಯೇಂದ್ರ ಕ್ಯಾಂಪಿನ ಕನಸಿಗೆ ಕರ್ನಾಟಕದ ಲಿಂಗಾಯತ ಪಾಳಯದಲ್ಲಿರುವ ಒಂದು ಕನವರಿಕೆ ಶಕ್ತಿ ತುಂಬಿದೆ. ಅದೆಂದರೆ, ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಒಬ್ಬೇ ಒಬ್ಬ ಲಿಂಗಾಯತ ನಾಯಕ ಪೂರ್ಣಾವಧಿ ಮುಖ್ಯ ಮಂತ್ರಿ ಆಗಿಲ್ಲ. ಲೆಕ್ಕಾಚಾರದ ದೃಷ್ಟಿಯಿಂದ ನೋಡಿದರೆ ರಾಜ್ಯದಲ್ಲಿ ಲಿಂಗಾಯತರೇ ಹೆಚ್ಚು ಬಾರಿ ಮುಖ್ಯಮಂತ್ರಿ ಯಾಗಿದ್ದಾರೆ. ಈ ಪೈಕಿ ನಿಜಲಿಂಗಪ್ಪ ಅವರೊಬ್ಬರೇ ಹತ್ತತ್ತಿರ ಏಳೂವರೆ ವರ್ಷಗಳ ಕಾಲ ರಾಜ್ಯವಾಳಿದ್ದಾರೆ.

ಆದರೆ ಅಂತಹ ನಿಜಲಿಂಗಪ್ಪ ಸೇರಿದಂತೆ ಯಾವೊಬ್ಬ ಲಿಂಗಾಯತ ನಾಯಕರು ಪೂರ್ಣಾವಧಿಗೆ ಮುಖ್ಯಮಂತ್ರಿಗಳಾಗಿಲ್ಲ. 1956 ರಲ್ಲಿ ನಿಜಲಿಂಗಪ್ಪ ಪಟ್ಟವೇರುವ ಕಾಲಕ್ಕೆ ಆ ಅವಧಿಯಲ್ಲಿ ಕೆಂಗಲ್ ಹನುಮಂತಯ್ಯ ಹಾಗೂ ಕಡಿದಾಳ್ ಮಂಜಪ್ಪ ಮುಖ್ಯಮಂತ್ರಿಗಳಾಗಿದ್ದರು. 1957 ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ನಿಜಲಿಂಗಪ್ಪ ಪುನಃ ಮುಖ್ಯಮಂತ್ರಿಯಾದರು. ಆದರೆ ಮರು ವರ್ಷವೇ ಪಕ್ಷದಲ್ಲಿನ ಶುರುವಾದ ಭಿನ್ನಮತಕ್ಕೆ ಬಲಿಯಾದರು.

1962 ರ ಚುನಾವಣೆಯ ಸಂದರ್ಭದಲ್ಲಿ ನಿಜಲಿಂಗಪ್ಪ ಸಿಎಂ ಕ್ಯಾಂಡಿಡೇಟ್ ಆಗಿದ್ದರೂ ಚುನಾವಣೆಯಲ್ಲಿ ಸೋತರು. ಪರಿಣಾಮವಾಗಿ ಎಸ್.ಆರ್.ಕಂಠಿ ಮುಖ್ಯಮಂತ್ರಿಯಾದರು. ಮುಂದೆ ಕೆಲವೇ ಕಾಲದಲ್ಲಿ ಉಪಚುನಾವಣೆ ನಡೆದು ನಿಜಲಿಂಗಪ್ಪ ಗೆದ್ದರು. ಮರಳಿ ಮುಖ್ಯಮಂತ್ರಿಯಾದರು. ಆದರೆ ಆ ಅವಧಿ ಅವರೊಬ್ಬರದಾಗಿರಲಿಲ್ಲ. ಮುಂದೆ 1967 ರ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದಾಗ ನಿಜಲಿಂಗಪ್ಪ ಪುನಃ ಮುಖ್ಯಮಂತ್ರಿಯಾದರು. ಆದರೆ 1968 ರಲ್ಲಿ ಎಐಸಿಸಿ ಅಧ್ಯಕ್ಷರಾಗುವ ಸನ್ನಿವೇಶ ಬಂದಾಗ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದರು.

ಹೀಗೆ ನಿಜಲಿಂಗಪ್ಪ ಅವರಿಂದ ಹಿಡಿದು ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ವೀರೇಂದ್ರ ಪಾಟೀಲ್, ಎಸ್.ಆರ್.ಬೊಮ್ಮಾಯಿ, ಜೆ.ಹೆಚ್.ಪಟೇಲ್, ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ತನಕ ಹಲವು ಲಿಂಗಾಯತ ನಾಯಕರು ಮುಖ್ಯಮಂತ್ರಿಗಳಾದರೂ ನಿರಂತರ ಐದು ವರ್ಷಗಳ ಕಾಲ ರಾಜ್ಯವಾಳಲಿಲ್ಲ.

ಆ ದೃಷ್ಟಿಯಿಂದ ಕರ್ನಾಟಕದ ಇತಿಹಾಸದಲ್ಲಿ ಹಿಂದುಳಿದ ವರ್ಗಗಳಿಂದ ಬಂದ ದೇವರಾಜ ಅರಸು, ಸಿದ್ದರಾಮಯ್ಯ ಮತ್ತು ಒಕ್ಕಲಿಗ ಸಮುದಾಯದ ಎಸ್.ಎಂ.ಕೃಷ್ಣ ಪೂರ್ಣಾವಧಿಗೆ ಮುಖ್ಯಮಂತ್ರಿಗಳಾಗಿದ್ದಾರೆ. ಅರ್ಥಾತ್, ತಮ್ಮ ಸಮುದಾಯದ ಒಬ್ಬ ನಾಯಕ ಪೂರ್ಣಾವಧಿ ಮುಖ್ಯಮಂತ್ರಿ ಆಗಿರಲಿಲ್ಲ ಎಂಬ ಕುದಿ ಲಿಂಗಾಯತ ಪಾಳಯದಲ್ಲಿ ಶುರುವಾಗಿದೆ. ಹೀಗೆ ಶುರುವಾಗಿರುವ ಕುದಿಯನ್ನು ತಣಿಸುವ ಶಕ್ತಿ ವಿಜಯೇಂದ್ರ ಅವರಿಗಿದೆ. ಹೀಗಾಗಿ ಆ ಕುದಿಯ ಹಬೆ ವಿಜಯೇಂದ್ರ ಅವರನ್ನು ಭವಿಷ್ಯದ ಲಿಂಗಾಯತ ನಾಯಕನ ಜಾಗದಲ್ಲಿ ಕೂರಿಸಲಿದೆ ಎಂಬುದು ಈ ಕ್ಯಾಂಪಿನ ಕನಸು. ಹೀಗಾಗಿ ಅದು ದೆಹಲಿ ರಾಜಕಾರಣದ ಕಿರಿಕ್ಕುಗಳ ಬಗ್ಗೆ ಚಿಂತಿಸುತ್ತಿಲ್ಲ. ಬದಲಿಗೆ ವಿಜಯೇಂದ್ರ ಅವರು ಭವಿಷ್ಯದ ನಾಯಕರಾಗಿ ಹೊರಹೊಮ್ಮುವ ಸಾಧ್ಯತೆ ಗಳ ಬಗ್ಗೆ ಕನಸು ಕಾಣುತ್ತಿದೆ.

ಸಂತೋಷ್ ಸಮಸ್ಯೆ ಅಲ್ಲ

ಇನ್ನು ವಿಜಯೇಂದ್ರ ಅವರ ದಾರಿಗೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅಡ್ಡಿಯಾಗಲಿದ್ದಾರೆ ಎಂಬ ಮಾತಿದೆಯಾದರೂ ವಿಜಯೇಂದ್ರ ಕ್ಯಾಂಪು ಅದನ್ನು ಒಪ್ಪುವುದಿಲ್ಲ. ಯಾಕೆಂದರೆ ವಿಜಯೇಂದ್ರ ಪಕ್ಷದ ಅಧ್ಯಕ್ಷರಾದ ಮೊದಲ ದಿನದಿಂದಲೂ ಸಂತೋಷ್ ಅವರ ವಿಶ್ವಾಸಕ್ಕೆ ಪಾತ್ರರಾಗಲು ಯತ್ನಿಸುತ್ತಲೇ ಇದ್ದಾರೆ. ಉದಾಹರಣೆಗೆ ರಾಜ್ಯ ಬಿಜೆಪಿಯ ಹೆಡ್ ಆಫೀಸನ್ನೇ ತೆಗೆದುಕೊಳ್ಳಿ. ವಿಜಯೇಂದ್ರ ಅವರು ಪಕ್ಷದ ಅಧ್ಯಕ್ಷರಾಗುವ ಕಾಲಕ್ಕೆ ಇಡೀ ಕಚೇರಿಯೇ ಸಂತೋಷಮಯವಾಗಿತ್ತು. ಅರ್ಥಾತ್, ಸಂತೋಷ್ ಅವರ ಸೂಚನೆಯ ಮೇರೆಗೆ ನೇಮಕಗೊಂಡವರ ಪಡೆಯೇ ಅಲ್ಲಿತ್ತು. ಅಧ್ಯಕ್ಷರಾದ ನಂತರ ಈ ಟೀಮನ್ನು ಬದಲಿಸಿ, ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳಲು ವಿಜಯೇಂದ್ರ ಅವರಿಗೆ ಸಾಧ್ಯವಿತ್ತು. ಆದರೆ, ಅಪ್ಪಿತಪ್ಪಿಯೂ ಈ ಕೆಲಸಕ್ಕಿಳಿಯದ ವಿಜಯೇಂದ್ರ ಅವರು ಹಳೆ ಪಡೆಯನ್ನೇ ಮುಂದು ವರಿಸಿದರು. ಇದೇ ರೀತಿ ಪಕ್ಷದ ಪದಾಧಿಕಾರಿಗಳ ಪಟ್ಟಿ ತಯಾರಿಸಿದಾಗ ದಿಲ್ಲಿಯಲ್ಲಿದ್ದ ಸಂತೋಷ್ ಅವರನ್ನು ಭೇಟಿ ಮಾಡಿ, ಇದೇ ಸಾರ್ ಪದಾಧಿಕಾರಿಗಳ ಪಟ್ಟಿ ಅಂತ ತೋರಿಸಿದ್ದರಂತೆ. ಈಗಲೂ ಅಷ್ಟೇ, ಮಹತ್ವದ ನಿರ್ಣಯಗಳನ್ನು ಕೈಗೊಳ್ಳುವ ಮುನ್ನ ಅವರು ಸಂತೋಷ್ ಅವರ ಗಮನಕ್ಕೆ ತರುತ್ತಾರೆ. ಅಂದ ಹಾಗೆ ವಿಜಯೇಂದ್ರ ಅವರ ತಂದೆ ಯಡಿಯೂರಪ್ಪ ಉದ್ದಕ್ಕೂ ಸಂತೋಷ್ ಅವರ ಜತೆ ಸಂಘರ್ಷ ಮಾಡುತ್ತಲೇ ಬಂದರು. ಆದರೆ ಈಗ ಅದನ್ನೇ ಮುಂದುವರಿಸಿಕೊಂಡು ಹೋಗುವುದು ಪ್ರಾಕ್ಟಿಕಲ್ ಅಲ್ಲ, ಮತ್ತದರ ಅಗತ್ಯವೂ ಇಲ್ಲ ಎಂಬುದು ವಿಜಯೇಂದ್ರ ಅವರಿಗೆ ಗೊತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ತಾವು ಇನ್ನೂ ಇಪ್ಪತ್ತೈದು ವರ್ಷ ರಾಜಕೀಯ ಮಾಡಬೇಕಾದವರು. ಹೀಗಾಗಿ ಸಹನೆಯಿಂದ ಹೆಜ್ಜೆ ಇಡಬೇಕು ಎಂಬುದು ವಿಜಯೇಂದ್ರ ಅವರಿಗೆ ಅರ್ಥವಾಗಿದೆ. ಪರಿಣಾಮ? ಸಂತೋಷ್ ಅವರ ವಿರುದ್ಧ ಹೆಜ್ಜೆ ಇಡುವ ಕೆಲಸಕ್ಕೆ ಅವರು ತಯಾರಿಲ್ಲ. ಈ ಅಂಶವೇ ವಿಜಯೇಂದ್ರ ಅವರ ಬಲವನ್ನು ಹೆಚ್ಚಿಸಲಿದೆ ಎಂಬುದು ಈ ಕ್ಯಾಂಪಿನ ವಿಶ್ವಾಸ.

ಪತ್ರಿಕೆಗಳಿಗೆ ಸರಕಾರಗಳಿಂದ ಹಣಕಾಸಿನ ನೆರವು, ಎಷ್ಟು ಸರಿ?

ಅಭಿಮತ

ಎ.ಎಸ್.ಬಾಲಸುಬ್ರಹ್ಮಣ್ಯ
vveditoped@gmail.com

ಪ್ರಜಾಸತ್ತೆಯನ್ನು ಬೆಳೆಸಲು ಮತ್ತು ರಕ್ಷಿಸುವಲ್ಲಿ ಪತ್ರಿಕೆಗಳು ಮಹತ್ತರ ಪಾತ್ರ ನಿರ್ವಹಿಸುತ್ತ ಬಂದಿವೆ. ಅನೇಕ ಕಾಲಘಟ್ಟಗಳಲ್ಲಿ ಅವು ಅಧಿಕಾರದ ದುರುಪಯೋಗವನ್ನು ವಿರೋಧಿಸುತ್ತಲೇ ಬಂದಿವೆ. ಅಷ್ಟೇ ಅಲ್ಲ, ಅನೇಕ ಕಷ್ಟ ಕೋಟಲೆಗಳನ್ನು ಲೆಕ್ಕಿಸದೆ ಅವು ಜನಪರ ಹೋರಾಟ ನಡೆಸಿ,ಪ್ರಜಾಸತ್ತೆಯ ಮೌಲ್ಯಗಳನ್ನು ರಕ್ಷಿಸಿವೆ. ಸರ್ವಾಧಿಕಾರಿಗಳ ವಿರುದ್ಧ ಯುದ್ಧವನ್ನೇ ಸಾರಿವೆ. ಅಧಿಕಾರ ದುರುಪಯೋಗ ಮಾಡಿದವರನ್ನು ಪದಚ್ಯುತಗೊಳಿಸಿವೆ. ಪತ್ರಿಕೆಗಳು ಅನಧಿಕೃತ ವಿರೋಧ ಪಕ್ಷವಿದ್ದಂತೆ ಎಂದು ಬಣ್ಣಿಸಲಾಗಿದೆ. ಜಗತ್ತಿನ ಪ್ರಬಲ ದೇಶವೆನಿಸಿದ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು ಅಧಿಕಾರ ಕಳೆದುಕೊಳ್ಳಲು ವಾಷಿಂಗ್ಟನ್ ಪೋಸ್ಟ್ ಪತ್ರಿಕೆ ಕಾರಣವಾಯಿತು ಎನ್ನುವುದು ಎಲ್ಲರಿಗೂ ತಿಳಿದ ವಿಷಯ.

ಆಧುನಿಕ ಸಂವಹನ ತಂತ್ರಜ್ಞಾನಗಳ ಪ್ರಭಾವದಿಂದಾಗಿ ಇಂತಹ ಶಕ್ತಿಯುತ ಪತ್ರಿಕಾ ಮಾಧ್ಯಮ ಮುಂದುವರಿದ ಅಮೆರಿಕ ಮತ್ತು ಯುರೋಪಿನಲ್ಲಿ ನಲುಗುತ್ತಿವೆ. ಜಾಹಿರಾತು ಹಣ ಡಿಜಿಟಲ್ ಮಾಧ್ಯಮಗಳ ಪಾಲಾಗುತ್ತಿದೆ. ಪತ್ರಿಕೆಗಳ ಸಂಖ್ಯೆ ಕುಸಿದಿದೆ. ಪತ್ರಕರ್ತರ ಸಂಖ್ಯೆಯು ಕಡಿಮೆಯಾಗುತ್ತಿದೆ. ವಿಶೇಷವಾಗಿ ನಿಯತಕಾಲಿಕೆಗಳು ಮತ್ತು ಸಮುದಾಯ ಪ್ರಕಟಣೆಗಳು ಮರೆಯಾಗುತ್ತಿವೆ. 2005 ರಿಂದ ಅಮೆರಿಕದ ವೃತ್ತಪತ್ರಿಕೆ ಉದ್ಯಮವು ಅದರ ಮೂರನೇ ಎರಡರಷ್ಟು ಪತ್ರಕರ್ತರನ್ನು ಮತ್ತು ಸುಮಾರು ಮೂರನೇ ಒಂದು ಭಾಗದಷ್ಟು ಪತ್ರಿಕೆಗಳನ್ನು ಕಳೆದುಕೊಂಡಿದೆ. 2023 ರಲ್ಲಿ ಸುದ್ದಿ ಉದ್ದಿಮೆಯ 2500 ಕ್ಕೂ ಹೆಚ್ಚು ಉದ್ಯೋಗಿಗಳು ತಮ್ಮ ಕೆಲಸ ಕಳೆದುಕೊಂಡರು. ಈ ವರ್ಷದ ಜನವರಿ ತಿಂಗಳಿನಲ್ಲಿ 500 ಕ್ಕೂ ಹೆಚ್ಚು ಉದ್ಯೋಗಿಗಳನ್ನು ವಿವಿಧ ಮಾಧ್ಯಮಗಳಲ್ಲಿ ವಜಾಗೊಳಿಸಲಾಗಿದೆ. ಇದನ್ನು Journalism Bloodbath (ಪತ್ರಿಕೋದ್ಯಮ ರಕ್ತಪಾತ) ಎಂದು ಮಾಧ್ಯಮ ತಜ್ಞರು ಬಣ್ಣಿಸಿದ್ದಾರೆ. ಇಂತಹ ಸಂಕಷ್ಟ ಸಮಯದಲ್ಲಿ ಸ್ಥಳೀಯ ಪ್ರಕಟಣೆಗಳು ಅನಿವಾರ್ಯವಾಗಿ ಚುನಾಯಿತ ಸರಕಾರಗಳ ಸಹಾಯಕ್ಕೆ ಮೊರೆ ಹೋಗಬೇಕಿದೆ. ಕಳೆದ ಕೆಲ ವರ್ಷಗಳಿಂದ ಕೆನಡಾ, ಫ್ರಾನ್ಸ್ ಮುಂತಾದ ದೇಶಗಳು ಪರೋಕ್ಷವಾಗಿ ಪತ್ರಿಕೆಗಳಿಗೆ ಹಣಕಾಸು ನೆರವು ನೀಡಲು ಆರಂಭಿಸಿವೆ. ಇತ್ತೀಚೆಗಷ್ಟೇ ಅಮೆರಿಕದ ನ್ಯೂಯಾರ್ಕ್ ರಾಜ್ಯ ಹೊಸ ಕಾನೂನನ್ನು ಜಾರಿ ಗೊಳಿಸಿ ತನ್ನ ರಾಜ್ಯದಲ್ಲಿರುವ ನಿಯತಕಾಲಿಕೆಗಳು ಮತ್ತು ಪತ್ರಿಕೆಗಳೂ ಸೇರಿದಂತೆ ಇತರೆ ಪ್ರಸಾರ ಮಾಧ್ಯಮಗಳಿಗೆ ಹಲವು ಷರತ್ತುಗಳನ್ನು ವಿಧಿಸಿ ಧನ ಸಹಾಯ ನೀಡಲು ಮುಂದಾಗಿದೆ.

ನ್ಯೂಯಾರ್ಕ್ ರಾಜ್ಯದ 2025 ರ ಬಜೆಟ್ಟಿನಲ್ಲಿ ಸುದ್ದಿಪತ್ರಿಕೆ ಮತ್ತು ಪ್ರಸಾರ ಮಾಧ್ಯಮ ಉದ್ಯೋಗ ಕಾರ್ಯಕ್ರಮ ಉತ್ತೇಜಿಸುವ ಕಾರ್ಯಕ್ರಮದನ್ವಯ ಸ್ಥಳೀಯ ಸುದ್ದಿ ಮಾಧ್ಯಮಗಳಿಗೆ 90 ಮಿಲಿಯನ್(741 ಕೋಟಿ ರೂಗಳ) ತೆರಿಗೆ ವಿನಾಯಿತಿಗಳನ್ನು ನೀಡುವುದರ ಮೂಲಕ ಸ್ಥಳೀಯ ಪತ್ರಿಕೋದ್ಯಮ ಉಳಿವಿಗೆ ಮಹತ್ತರ ಕ್ರಮವನ್ನು ಜಾರಿಗೊಳಿಸಲಾಗಿದೆ. ನ್ಯೂಯಾರ್ಕ್ ರಾಜ್ಯದ ಸ್ಥಳೀಯ ಪತ್ರಿಕೋದ್ಯಮ ಸಂರಕ್ಷಣಾ ಕಾಯಿದೆಯನ್ನು ಜಾರಿಗೊಳಿಸಲು ಸುಮಾರು 100 ಸುದ್ದಿ ಪ್ರಕಾಶಕರು ಒಟ್ಟಾಗಿ ಸೇರಿ ಈ ಮಸೂದೆ ಪಾಸು ಮಾಡಿಸಲು ಪ್ರಯತ್ನಿಸಿ ಯಶಸ್ಸನ್ನು ಸಾಧಿಸಿದ್ದಾರೆ.

ಈ ಒಕ್ಕೂಟಕ್ಕೆ ಈಗ 200 ಸುದ್ದಿ ಪ್ರಕಾಶಕರು ಸೇರಿದ್ದಾರೆ. ಅಮೆರಿಕದಲ್ಲಿ ಸಮುದಾಯ ಸುದ್ದಿ ಸಂಸ್ಥೆಗಳಿಗೆ ನೆರವಾಗಲು ಮೀಸಲಿಟ್ಟ ಬಹು ದೊಡ್ಡ ಮೊತ್ತ ಇದಾಗಿದೆ. ಸುದ್ದಿವಾಹಿನಿಗಳು ತಮ್ಮ ಸಿಬ್ಬಂದಿಯನ್ನು ನಿರ್ವಹಿಸಲು ಮತ್ತು ಬೆಳೆಸಲು ಸಹಾಯ ಮಾಡುವ ಬೃಹತ್ ಪ್ರಯತ್ನವಾಗಿದೆ. ಸಣ್ಣ ಮತ್ತು ಮಧ್ಯಮ ಗಾತ್ರದ ಸುದ್ದಿಮನೆಗಳ ಬೇಡಿಕೆಗಳನ್ನು ಈ ನೆರವು ನ್ಯಾಯ ಯುತವಾಗಿ ಪರಿಗಣಿಸಲಾಗಿದೆ ಎಂದು ಬಣ್ಣಿಸಲಾಗುತ್ತಿದೆ.

ಹೊಸ ಕಾನೂನಿನ ಅನ್ವಯ ಮೂರು ವರ್ಷಗಳವರೆಗೆ 30 ಮಿಲಿಯನ್ ಗ್ಯಾರಂಟಿ ತೆರಿಗೆ ಸಾಲವನ್ನು ನೀಡಲಾಗುತ್ತದೆ. ಪ್ರತಿ ವರ್ಷ 13 ಮಿಲಿಯನ್ ಡಾಲರ್‌ಗಳನ್ನು 100 ಕ್ಕಿಂತ ಕಡಿಮೆ ಉದ್ಯೋಗಿಗಳನ್ನು ಹೊಂದಿರುವ ಹಾಗೂ 13 ಮಿಲಿಯನ್ ಡಾಲರ್‌ಗಳನ್ನು ದೊಡ್ಡ ಸುದ್ದಿ ಸಂಸ್ಥೆಗಳಿಗೆ ಮತ್ತು ನಾಲ್ಕು ಮಿಲಿಯನ್ ಡಾಲರ್‌ಗಳನ್ನು ಹೊಸದಾಗಿ ನೇಮಕಗೊಳ್ಳುವ ಪತ್ರಕರ್ತರಿಗೆ ಬೆಂಬಲಿಸಲು ನೀಡಲಾಗುವುದು. ನೂತನ ಕಾನೂನಿನ ಷರತ್ತುಗಳ ಪ್ರಕಾರ ಯಾವುದೇ ಒಂದು ಸುದ್ದಿಮನೆ ಪ್ರತಿ ವರ್ಷ 3.20 ಲಕ್ಷ ಡಾಲರ್‌ಗಿಂತ ಹೆಚ್ಚಿನ ಹಣ ಪಡೆಯುವಂತಿಲ್ಲ. ಇದು ಸುದ್ದಿಮನೆಯಲ್ಲಿ ಕೆಲಸ ಮಾಡುವ ಉದ್ಯೋಗಿಗಗಳ ಸಂಖ್ಯೆಯನ್ನು ಆಧರಿಸಿರುತ್ತದೆ. ಮರುಪಾವತಿಸಬಹುದಾದ ತೆರಿಗೆ ಸಾಲ (tax credit) ಯಾವುದೇ ಉದ್ಯೋಗಿಯ ವೇತನದ ಶೇ.50 ವೇತನದವರೆಗೆ ಇರುತ್ತದೆ. ಪಬ್ಲಿಕ್ ಲಿಮಿಟೆಡ್ ಕಂಪನಿಗಳು ಮತ್ತು ನಿಗಮಗಳು ಈ ಸೌಲಭ್ಯಗಳಿಗೆ ಒಳಪಡುವುದಿಲ್ಲ.

ಸಣ್ಣ ಮತ್ತು ಮಧ್ಯಮ ಗಾತ್ರದ ಪತ್ರಿಕೆಗಳ ಒಕ್ಕೂಟದ ಯಶಸ್ಸು ಸ್ಥಳೀಯ ಪತ್ರಿಕೋದ್ಯಮವನ್ನು ಬೆಂಬಲಿಸುವ ಮತ್ತು ಸಮರ್ಥ ನೀತಿಗಳನ್ನು ರೂಪಿಸುವಲ್ಲಿ ಈ ಕಾನೂನು ಮಾದರಿಯಾಗಿದೆ ಎಂದು ಪ್ರಕಾಶಕರು ಸಮರ್ಥಿಸಿ ಕೊಳ್ಳುತ್ತಿದ್ದಾರೆ. ನ್ಯೂಯಾರ್ಕ್ ರಾಜ್ಯದ ಈ ಕ್ರಮ, ಸ್ಥಳೀಯ ಪತ್ರಕರ್ತರನ್ನು ನೇಮಿಸಿಕೊಳ್ಳಲು ಮತ್ತು ಉದ್ಯೋಗದಲ್ಲಿ ಉಳಿಸಿಕೊಳ್ಳಲು ಪ್ರೋತ್ಸಾಹಿಸುವ ದೇಶದ ಮೊದಲ ರಾಜ್ಯವಾಗಿದೆ. ನೂರಾರು ಪತ್ರಿಕೆಗಳಿಗೆ ಇದು ನಿರ್ಣಾಯಕ ಹೂಡಿಕೆಯಾಗಿದೆ. ರಾಜ್ಯದ ಪ್ರಮುಖ ಸಮುದಾಯಗಳು ಸ್ಥಳೀಯ ಮಾಹಿತಿ ಪಡೆಯಲು ಇದು ನೆರವಾಗಲಿದೆ ಎಂದು ಅರ್ಥೈಸಲಾಗುತ್ತಿದೆ.

ವಿಭಿನ್ನ ಭಾಷೆ, ಸಂಸ್ಕೃತಿ ಮತ್ತು ಜನಾಂಗಗಳ ತವರೂರು ಎನಿಸಿರುವ ಅಮೆರಿಕದಲ್ಲಿ ಸಣ್ಣ ಮತ್ತು ಸಮುದಾಯ ಪ್ರಕಟಣೆಗಳು ಮಹತ್ತರ ಪಾತ್ರ ನಿರ್ವಹಿಸುತ್ತವೆ. ಅಂತರ್ಜಾಲ ಆಧಾರಿತ ಡಿಜಿಟಲ್ ಮಾಧ್ಯಮಗಳ ತೀವ್ರ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಮುದ್ರಿತ ಪ್ರಕಟಣೆಗಳು ಕಳೆದ ಮೂರು ದಶಕಗಳಲ್ಲಿ ಹಿನ್ನಡೆ ಅನುಭವಿಸಿದವು. ಇದರಿಂದಾಗಿ ಅನೇಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸುತ್ತಮುತ್ತಲಿನ ಬೆಳವಣಿಗೆಗಳ ಅರಿವೇ ಇಲ್ಲದಂತಾಯ್ತು. ಇದನ್ನು ಮನಗಂಡ ಹಲವಾರು ಸೇವಾ ಸಂಸ್ಥೆಗಳು ಮತ್ತು ದಾನಿಗಳು ಸ್ಥಳೀಯ ಪತ್ರಿಕೋದ್ಯಮದ ಬೆಂಬಲಕ್ಕೆ ನಿಂತರು.

ಸಾರ್ವಜನಿಕರು ಮತ್ತು ದೇಣಿಗೆ ಸಂಸ್ಥೆಗಳಿಂದ ಹಣ ಸಂಗ್ರಹಿಸಿ ಪತ್ರಿಕೆಗಳಿಗೆ ನೆರವಾದರು. ಫೇಸ್‌ಬುಕ್ ಮತ್ತು ಗೂಗಲ್ ಸಂಸ್ಥೆಗಳು ಪತ್ರಕರ್ತರಿಗೆ ತರಬೇತಿ ಹಾಗು ತಾಂತ್ರಿಕ ನೆರವುಗಳನ್ನು ನೀಡುವುದರ ಮೂಲಕ ತಮ್ಮ ಸಹಾಯ ಹಸ್ತವನ್ನು ಚಾಚಿದರು. ತೆರಿಗೆ ಉಳಿಸಲು ಅನೇಕ ಪತ್ರಿಕಾ ಸಂಸ್ಥೆಗಳು ಲಾಭ-ರಹಿತ ಸಂಸ್ಥೆಗಳಾಗಿ ಮಾರ್ಪಟ್ಟವು. ಇದರ ಜತೆಗೆ ಅನೇಕ ಚುನಾಯಿತ ಪ್ರತಿನಿಧಿಗಳು ಸರಕಾರದ ಮೂಲಕ ನೆರವು ಕೊಡಿಸಲು ಪ್ರಯತ್ನಿಸಿ ಸಫಲರಾಗಿದ್ದಾರೆ. ನ್ಯೂಯಾರ್ಕ್ ರಾಜ್ಯದ ಮಾದರಿಯಲ್ಲಿ ಅಮೆರಿಕದ ಹಲವು ರಾಜ್ಯಗಳು ಕಾನೂನು ಜಾರಿಗೊಳಿಸಿ ಪತ್ರಿಕೆಗಳು ಮತ್ತು ಪತ್ರಕರ್ತರಿಗೆ ನೆರವಾಗಲು ಕ್ರಮಕ್ಕೆಗೊಳ್ಳುತ್ತಿವೆ.

ಪತ್ರಿಕೆಗಳು ಮತ್ತು ಪತ್ರಕರ್ತರ ಸಂಖ್ಯೆಯಲ್ಲಿ ಗಣನೀಯ ಇಳಿಕೆಯನ್ನು ಗಮನಿಸಿ, ಅನೇಕ ದಾನಿಗಳು ಮತ್ತು ದತ್ತಿ ಸಂಸ್ಥೆಗಳು ಪತ್ರಿಕೆಗಳಿಗೆ ನೆರವು ನೀಡುತ್ತಿದ್ದಾರೆ. ದಾನಿಗಳಿಂದ ಹಣ ಸಂಗ್ರಹಿಸುವ ಸಂಸ್ಥೆಗಳು ಪತ್ರಿಕೆಗಳಿಗೆ ನೆರವಾಗುತ್ತಿವೆ. ಪತ್ರಕರ್ತರನ್ನು ನಿರ್ದಿಷ್ಟ ಅವಧಿಗೆ ನೇಮಿಸಿಕೊಳ್ಳಲು ಸಣ್ಣ ಪತ್ರಿಕೆಗಳಿಗೆ ಇದು ಸಹಾಯ ಮಾಡುತ್ತದೆ. ನೇಮಿಸಿಕೊಂಡ ಪತ್ರಕರ್ತರ ಪೂರ್ಣ ವೇತನವನ್ನು ಇಲ್ಲವೇ ಅರ್ಧ ವೇತನವನ್ನು ದಾನಿಗಳು ನೀಡಿದರೆ ಉಳಿದರ್ಧ ವೇತನವನ್ನು ಪತ್ರಿಕಾ ಸಂಸ್ಥೆ ನೀಡಬೇಕಾಗುತ್ತದೆ. ಯಾವುದಾದರೊಂದು ಪ್ರಮುಖ ಸಮಸ್ಯೆ ಪತ್ರಿಕೆಗಳ ಗಮನಕ್ಕೆ ಬಂದರೆ, ಅಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ತನಿಖಾ ವರದಿಗಳನ್ನು ಪ್ರಕಟಿಸಲು ಸಾರ್ವಜನಿಕರು, ದಾನಿಗಳು ಮತ್ತು ದತ್ತಿ ಸಂಸ್ಥೆಗಳು ಅಮೆರಿಕದಲ್ಲಿ ಮುಂದೆ ಬರುತ್ತಿದ್ದಾರೆ. ವಿಶೇಷವಾಗಿ, ಸಣ್ಣ ಮತ್ತು ಸಮುದಾಯ ಪತ್ರಿಕಾ ಪ್ರಕಟಣೆಯಲ್ಲಿ ಒಂದು ರೀತಿಯ ಸಮುದಾಯ ಸಹಭಾಗಿತ್ವ ಪ್ರಚಲಿತವಾಗುತ್ತಿದೆ.

ಕೆನಡಾ ಸರಕಾರದ ನೆರವು

ಡಿಜಿಟಲ್ ಯುಗಕ್ಕೆ ಹೊಂದಿಕೊಳ್ಳಲು ಮತ್ತು ಪ್ರಜಾಸತ್ತೆಯಲ್ಲಿ ಸ್ವತಂತ್ರ ಸುದ್ದಿ ಮಾಧ್ಯಮಗಳು ನಿರ್ವಹಿಸುವ ಜವಾಬ್ದಾರಿಯುತ ಪಾತ್ರವನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು ಕೆನಡಾ ದೇಶದ ಸರಕಾರ ಸುದ್ದಿ ಪ್ರಕಾಶನ ಸಂಸ್ಥೆಗಳಿಗೆ ನೆರವು ನೀಡಲು ಕ್ರಮಕ್ಕೆಗೊಂಡಿದೆ. ಲಾಭೋದ್ದೇಶವಿಲ್ಲದ ಪ್ರಕಾಶನ ಸಂಸ್ಥೆಗಳಿಗೆ ದೇಣಿಗೆಗಳನ್ನು ಸ್ವೀಕರಿಸಲು ಮತ್ತು ದಾನಿಗಳಿಗೆ ತೆರಿಗೆ ರಸೀದಿಗಳನ್ನು ನೀಡಲು ಅನುಮತಿಸುತ್ತದೆ. ಈ ರೀತಿಯ ನೆರವು ಪಡೆದು ಸುದ್ದಿ/ಲೇಖನಗಳನ್ನು ಪ್ರಕಟಿಸುವ ಸಂಸ್ಥೆ ಅವುಗಳನ್ನು ಉಚಿತವಾಗಿ ಬಿಡುಗಡೆ ಮಾಡಬೇಕಾ ಗುತ್ತದೆ. ಇದರಿಂದ ಸ್ಥಳೀಯ ಸುದ್ದಿ/ಲೇಖನಗಳು ಅಧಿಕ ಜನರನ್ನು ತಲಪುತ್ತವೆ ಎನ್ನುವುದು ಈ ಯೋಜನೆಯ ಮಹತ್ತರ ಉದ್ದೇಶ. ಈ ಯೋಜನೆಯಲ್ಲಿ ಲಾಭಕ್ಕಾಗಿ ಇರುವ ಮತ್ತು ಲಾಭರಹಿತ ಸುದ್ದಿ ಸಂಸ್ಥೆಗಳಲ್ಲಿ ಕಾರ್ಮಿಕ ವೆಚ್ಚಗಳಿಗಾಗಿ ಹೊಸದಾಗಿ ಮರುಪಾವತಿಸಬಹುದಾದ ತೆರಿಗೆ ಕ್ರೆಡಿಟ್ ಅನ್ನು ಸಹ ಸೇರಿಸಲಾಗಿದೆ. ನೆರವಿನ ಪ್ರಮಾಣವನ್ನು ನಿರ್ಧರಿಸಲು, ಹಿರಿಯ ಪತ್ರಕರ್ತರನ್ನು ಒಳಗೊಂಡ ಸಮಿತಿ ಇರುತ್ತದೆ.

ಇಂದು ಪತ್ರಿಕಾ ದಿನ

ಸರಕಾರದ ನೆರವು ಪಡೆಯಲು, ಪತ್ರಿಕೆಗಳು ಬಹುಪಾಲು ಕೆನಡಿಯನ್ನರ ಮಾಲೀಕತ್ವ ಮತ್ತು ನಿಯಂತ್ರಣದಲ್ಲಿರಬೇಕು. ಮುದ್ರಣ ಅಥವಾ ಡಿಜಿಟಲ್ ಸ್ವರೂಪದಲ್ಲಿ ನಿಯತಕಾಲಿಕೆ ಅಥವಾ ಸಮುದಾಯ ಪತ್ರಿಕೆಯಾಗಿರಬೇಕು. ಒಂದು ವರ್ಷದಲ್ಲಿ ಪ್ರಕಟವಾದ ಸಂಚಿಕೆಗಳಲ್ಲಿ ಕನಿಷ್ಠ ಶೇ.80 ರಷ್ಟು ವಸ್ತು ವಿಷಯಗಳು ಸ್ವದೇಶಕ್ಕೆ ಸಂಬಂಧಿಸಿರಬೇಕು. ಈ ಪ್ರಕಟಣೆಗಳ ಬಹುಪಾಲು ಸುದ್ದಿ-ಲೇಖನಗಳು ಮೂಲ ರಚನೆಯಾಗಿರಬೇಕು, ಭಾಷಾಂತರವಾಗಿರಬಾರದು. ಕೆನಡಾದಲ್ಲಿಯೇ ಸಂಪಾದಿಸಿ, ವಿನ್ಯಾಸಗೊಳಿಸಿ, ಮುದ್ರಿತವಾಗಿರಬೇಕು. ಈ ಷರತ್ತುಗಳ ಉದ್ದೇಶ ದೇಶದ ಸ್ಥಳೀಯ ಸಮುದಾಯದ ಸುದ್ದಿಗಳ ಪ್ರಕಟಣೆಗೆ ಉತ್ತೇಜಿಸುವುದೇ ಆಗಿದೆ.

ಪತ್ರಿಕೆಗಳಿಗೆ ಚಂದಾದಾರರಾಗುವ ಓದುಗರು ತಾವು ನೀಡುವ ಚಂದಾ ಹಣಕ್ಕೆ ಅಲ್ಪ ಪ್ರಮಾಣದ ತೆರಿಗೆ ವಿನಾಯಿತಿ ಸಹ ಕೆನಡಾದಲ್ಲಿ ಪಡೆಯಬಹುದಾಗಿದೆ.

ಫ್ರೆಂಚ್ ಪತ್ರಿಕೋದ್ಯಮ

ವಿಶ್ವದಲ್ಲೇ ಅತಿ ಹೆಚ್ಚು ಸರಕಾರದ ನೆರವು ಪಡೆಯುವ ಖ್ಯಾತಿಗೆ ಫ್ರೆಂಚ್ ಪತ್ರಿಕೋದ್ಯಮ ಹೆಸರಾಗಿದೆ. ಫ್ರೆಂಚ್ ಪತ್ರಿಕೆಗಳು ಸಹ ಪ್ರತ್ಯಕ್ಷ ಹಾಗೂ ಪರೋಕ್ಷ ವಾಗಿ ಸರಕಾರದಿಂದ ಹಣಕಾಸು ನೆರವು ಪಡೆಯುತ್ತವೆ. ಪ್ರಜಾಸತ್ತೆಯ ಮತ್ತು ಬಹುತ್ವ ಸಂಸ್ಕೃತಿಯ ಮೌಲ್ಯಗಳ ರಕ್ಷಣೆಯ ಉದ್ದೇಶದಿಂದ ಫ್ರೆಂಚ್ ಸರಕಾರ ಈ ನೆರವು ನೀಡುತ್ತಿದೆ. ರಾಷ್ಟ್ರೀಯ ಮತ್ತು ಸ್ಥಳೀಯ ಪತ್ರಿಕೆಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಡೆದ ಆರ್ಥಿಕ ಸಹಾಯ ಒಂದು ಬಿಲಿಯನ್ ಯುರೋ (900 ಕೋಟಿ ರು.ಗಳು) ಎಂದು ಅಂದಾಜಿಸಲಾಗಿದೆ. ಈ ಮೊತ್ತವನ್ನು ಪ್ರತಿ ವರ್ಷ ಕಡಿತ ಗೊಳಿಸಲಾಗುತ್ತಿದೆ. ಯುರೋಪಿನ ಇತರ ದೇಶಗಳು ಮಾಧ್ಯಮ ಉದ್ಯಮಕ್ಕೆ ಬೆಂಬಲವನ್ನು ನೀಡುತ್ತವೆ. ಆದರೆ ಫ್ರಾನ್ಸ್‌ನಲ್ಲಿ ಅದು ಅತ್ಯಧಿಕ ಎಂದು ವಿಶ್ಲೇಷಿಸಲಾಗುತ್ತಿದೆ.

ಫ್ರೆಂಚ್ ಸರಕಾರದ ನೆರವು ಕೆಲವೊಮ್ಮೆ ನೇರವಾಗಿರುತ್ತದೆ. ಪ್ರಕಾಶಕರು ಹೊಸ ಮುದ್ರಣ ಘಟಕವನ್ನು ಸ್ಥಾಪಿಸಲು ಬಯಸಿದರೆ, ಸರಕಾರವು ಅದರ ವೆಚ್ಚದ ಶೇ.15 ರವರೆಗೆ ಹಣ ಪಾವತಿಸುತ್ತದೆ. ಪತ್ರಿಕಾ ಮುದ್ರಣ ಕಾಗದದ ಬೆಲೆಯ ರಕ್ಷಣೆಗೆ ಸಹ ನೆರವಾಗುತ್ತದೆ. ವಿದೇಶಿ ಮತ್ತು ದೇಸಿ ಮುದ್ರಣ ಕಾಗದದ ಬೆಲೆಗಳಲ್ಲಿನ ವ್ಯತ್ಯಾಸಗಳನ್ನು ಸರಿದೂಗಿಸುತ್ತದೆ. ಅಲ್ಲದೆ ಫ್ರೆಂಚ್ ಪತ್ರಿಕೆಗಳ ಸಾಗರೋತ್ತರ ಮಾರಾಟಕ್ಕೆ ರಾಜ್ಯವು ಸಬ್ಸಿಡಿ ನೀಡುತ್ತದೆ. ಪ್ರಕಾಶಕರು ಖರೀದಿ ತೆರಿಗೆ ಯನ್ನು ಪಾವತಿಸುವ ಅಗತ್ಯವಿಲ್ಲ ಮತ್ತು ಐದು ವರ್ಷಗಳೊ ಳಗೆ ಹಣವನ್ನು ಮರುಹೂಡಿಕೆ ಮಾಡಿದರೆ ಲಾಭದ ಮೇಲಿನ ತೆರಿಗೆಯಿಂದ ವಿನಾಯಿತಿ ನೀಡುತ್ತದೆ. ಕಾರ್ಯನಿರತ ಪತ್ರಕರ್ತರು ತಮ್ಮ ಆದಾಯ ತೆರಿಗೆಯಲ್ಲಿ ಶೇ.30 ರಷ್ಟು ಕಡಿತವನ್ನು ಖರ್ಚು ಭತ್ಯೆಯಾಗಿ ಪಡೆಯುತ್ತಾರೆ.

ಪತ್ರಿಕೆಗಳ ವಿತರಣೆ ವಿದೇಶಗಳಲ್ಲಿ ಸುಲಭವಲ್ಲ, ಇದಕ್ಕಾಗಿಯೇ ಬೃಹತ್ ಸಂಘಟನೆಗಳಿವೆ. ಅವುಗಳ ಮೂಲಕ ಪತ್ರಿಕೆಗಳನ್ನು ವಿತರಿಸಬೇಕಾಗುತ್ತದೆ. ಇವುಗಳಿಗೆ ಅಧಿಕ ಹಣ ನೀಡಬೇಕಾಗುತ್ತದೆ. ಸರಕಾರ ಇದಕ್ಕೂ ನೆರವಾಗುತ್ತದೆ ಮತ್ತು ಸಂಪಾದಕೀಯ ವಿಭಾಗದಲ್ಲಿ ಬಹುತ್ವವನ್ನು ರಕ್ಷಿಸಲು ಸಹ ಪತ್ರಿಕೆಗಳು ಸಹಾಯಧನ ಪಡೆಯುತ್ತವೆ. ಮುದ್ರಣಾಲಯಗಳನ್ನು ಆಧುನೀಕರಣಗೊಳಿಸಲು ಸಹ ಪತ್ರಿಕಾಲಯಗಳು ನೆರವು ಪಡೆಯುತ್ತವೆ. ಇದಲ್ಲದೆ, ಅನೇಕ ಸೇವಾ ತೆರಿಗೆಗಳಲ್ಲಿ ಅಪರೋಕ್ಷವಾಗಿ ವಿನಾಯಿತಿಗಳನ್ನು ಪತ್ರಿಕೆಗಳು ಪಡೆಯುತ್ತವೆ. ಈ ಎಲ್ಲ ನೆರವುಗಳು ಇತರೆ ಡಿಜಿಟಲ್ ಮಾಧ್ಯಮಗಳಿಗೆ ಸಹ ಅನ್ವಯವಾಗುತ್ತವೆ.

ಮಾಧ್ಯಮ ಸ್ವಾತಂತ್ರ್ಯವು ಆರೋಗ್ಯಕರ ಪ್ರಜಾಪ್ರಭುತ್ವದ ನಿರ್ಣಾಯಕ ಅಂಶವಾಗಿದೆ ಎಂಬುದು ನಿಜ. ಆದರೆ ಸರ್ಕಾರದ ಹಣಕಾಸಿನ ಸಹಾಯ ಮಾಧ್ಯಮಗಳ ಸಂಪಾದಕೀಯ ಸ್ವಾತಂತ್ರ್ಯದ ಮೇಲೆ ಯಾವರೀತಿಯ ಪ್ರಭಾವ ಬೀರಬಲ್ಲವು ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಾಗಿದೆ. ಸಾರ್ವಜನಿಕ ನೆರವನ್ನು ಸ್ವೀಕರಿಸುವ ಮಾಧ್ಯಮ ಸಂಸ್ಥೆಗಳು ಹಣಕಾಸಿನ ಮಾಹಿತಿಯನ್ನು ಬಹಿರಂಗಪಡಿಸಲು ಹಾಗು ನೈತಿಕ ಮಾನದಂಡಗಳಿಗೆ ಬದ್ಧವಾಗಿರಬೇಕಾಗುತ್ತದೆ.

ಸರಕಾರದ ನೆರವು ಎರಡು ಅಲುಗಿನ ಕತ್ತಿಯೇ? ಹಣಕಾಸಿನ ಬೆಂಬಲವನ್ನು ಪಡೆದ ಪತ್ರಿಕೆಗಳು ಅನಗತ್ಯ ಸರಕಾರಿ ಪ್ರಭಾವವನ್ನು ತಡೆಗಟ್ಟಲು ಮತ್ತು ಮಾಧ್ಯಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವೇ? ಪಾರದರ್ಶ ಕತೆ, ಸ್ಪಷ್ಟ ಮಾನದಂಡಗಳು ಮತ್ತು ದೃಢವಾದ ಸಂಪಾದಕೀಯ ನೀತಿಗಳ ಸಮತೋಲನ ಸಾಧ್ಯವೇ ಎಂಬುದು ನಿರ್ಣಾಯಕ ಅಂಶಗಳಾಗಿವೆ. ಸರಕಾರದ ನೆರವು ಇಲ್ಲದಿದ್ದರೆ ಪತ್ರಿಕೆಗಳ ಉಳಿವು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ಮುಂದುವರಿದ ದೇಶಗಳಲ್ಲಿ ತಲೆದೋರಿರುವುದರಿಂದ, ಸರಕಾರದ ನೆರವು ಅನಿವಾರ್ಯವಾಗಿದೆ.

ಬೃಹತ್ ಪ್ರಮಾಣದ ಆರ್ಥಿಕ ನೆರವು ಪಡೆಯುವ ಪತ್ರಿಕಾ ರಂಗವನ್ನು 'ಶಾಶ್ವತ ಕೃತಕ ಉಸಿರಾಟದ' ಸ್ಥಿತಿಯಲ್ಲಿ ಇರಿಸಲಾಗಿದೆ ಎಂದು ಅನೇಕ ಮಾಧ್ಯಮ ತಜ್ಞರು ಬಣ್ಣಿಸುತ್ತಾರೆ. ಬಹುಪಾಲು ಸರಕಾರಿ ಅನುದಾನ ಪತ್ರಿಕೆಗಳ ನಿರ್ವಹಣಾ ವೆಚ್ಚವನ್ನು ಭರಿಸಲು ಮಾತ್ರವೇ ಬಳಸಲಾಗುತ್ತಿದೆ. ಸುಸ್ಥಿರ ಆರ್ಥಿಕ ಕಾರ್ಯತಂತ್ರಗಳನ್ನು ಗುರುತಿಸುವಲ್ಲಿ ಪತ್ರಿಕೆಗಳು ವಿಫಲವಾಗಿವೆ ಎಂಬ ಆರೋಪಗಳಿವೆ. ಸರಕಾರದ ನೆರವು ಪಡೆಯುವ ಪತ್ರಿಕೆಗಳ ಕಾರ್ಯನಿರ್ವಹಣೆಯ ಬಗ್ಗೆ ಓದುಗರು ಮುಕ್ತವಾಗಿ ಚರ್ಚಿಸಬಹುದಾಗಿದೆ ಎಂಬುದು ಒಂದು ಆಯಾಮವೆನಿಸಿದರೆ, ಸಹಾಯಧನ ಪಡೆಯುವ ಪತ್ರಿಕೆಗಳು, ಆಡಳಿತಗಾರರ ಒತ್ತಡಗಳನ್ನು ಹೇಗೆ ಮೆಟ್ಟಿ ನಿಲ್ಲಬಲ್ಲವು ಎಂಬುದು ಇನ್ನೊಂದು ಆಯಾಮ. ಈ ದ್ವಂದ್ವಗಳ ನಡುವೆ ಪತ್ರಕರ್ತನ ಪಾತ್ರ ನಿಜಕ್ಕೂ ಸವಾಲಿನದೇ ಸರಿ.

ಪತ್ರಿಕೋದ್ಯಮ, ಮಾರುಕಟ್ಟೆಯಲ್ಲಿ ಲಾಭದಾಯಕತೆಯ ಮೌಲ್ಯವನ್ನು ನಿರ್ಧರಿಸುವ ಸರಕಲ್ಲ, ಅದೊಂದು ಸಾರ್ವಜನಿಕ ಸೇವೆ ಎಂಬುದು ಸಾರ್ವಕಾಲಿಕ ಸತ್ಯ. ಆದರೆ ವಾಸ್ತವ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವುದು ವಿಪರ್ಯಾಸ.

(ಲೇಖಕರು ವಿಶ್ರಾಂತ ಪತ್ರಿಕೋದ್ಯಮ ಪ್ರಾಧ್ಯಾಪಕರು ಮತ್ತು ಮಾಧ್ಯಮ ತಜ್ಞರು)

ಭಟ್ಟರ್ ಸ್ಕಾಚ್

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ನಟಿ ಭಾವನಾ ದರ್ಶನ ಪರ ಹೇಳಿಕೆ ನೀಡಿದ್ದಾರಲ್ಲ?
- ಅವರು ತಮ್ಮ ಭಾವನೆಯನ್ನು ಪ್ರಕಟಿಸಿರಬಹುದು!

● **ರಾಘಣ್ಣ, ಮೈಸೂರು**
ಭಟ್ರೇ, ದ್ರಾವಿಡ್ ಕೋಚ್ ಆಗಿದ್ದರಿಂದಲೇ ಭಾರತ ವರ್ಲ್ಡ್ ಕಪ್ ಗೆದ್ದಿತು ಅಂತ ಇಲ್ಲೊಬ್ಬ ಹೇಳ್ತಾನಲ್ಲ?
-'ದ್ರಾವಿಡ ಪ್ರಾಣಾಯಾಮ'ದ ಹೇಳಿಕೆ!

● **ಗೋಪಾಲ ಜಿ, ಶ್ರೀರಂಗಪಟ್ಟಣ**
ಭಟ್ರೇ, ರಾಜ್ಯದಲ್ಲಿ ಇಂಗ್ಲಿಷ್ ಮಾಧ್ಯಮದ ಮಕ್ಕಳಿಗೂ, ಕನ್ನಡ ಮಾಧ್ಯಮದ ಮಕ್ಕಳಿಗೂ ಏನು ವ್ಯತ್ಯಾಸ?
- ಮೊದಲನೆಯವರು 'ರೈನ್ ರೈನ್ ಗೋ ಅವೇ...' ಅಂತ ಹಾಡಿದರೆ, ಎರಡನೆಯವರು 'ಹುಯ್ಯೋ ಹುಯ್ಯೋ ಮಳೆರಾಯ...' ಅಂತ ಹಾಡ್ತಾರೆ!

● **ಸಾಮಗ ದತ್ತಾತ್ರಿ, ಬೆಂಗಳೂರು**
ಭಟ್ರೇ, ಜೈಲಿನಲ್ಲಿ ದರ್ಶನ್ ಒಬ್ಬರೇ ಮಲಗುತ್ತಿದ್ದಾರಂತೆ?
- ಪವಿತ್ರಾ ಗೌಡ ಕೂಡ!

● **ರಮೇಶ ದೊಡ್ಡವಾಡ, ಧಾರವಾಡ**
ಸಾರ್, ಹೃದಯಕ್ಕೇ ಕೈ ಹಾಕ್ತಾಳಲ್ಲ?
- ಮದುವೆಯಾದ ನಂತರ ಜೇಬಿಗೆ!

● **ಅವಿಕ್ ಗೊಂದಿಮನೆ, ಕಡೂರು**
ಭಟ್ರೇ, ಕೆಲವರು ಇದ್ದಕ್ಕಿದ್ದಂತೆ ಮಾಯವಾಗಿಬಿಡ್ತಾರಲ್ಲ?
- ನಾನು ಅಂಥವನಲ್ಲ ಎಂದು ಜಯವೀರ ಗೌಡ ಕಿರುಚೋದು ಯಾಕೋ?!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಯೋಗ ದಿನಾಚರಣೆ ದಿನ ಯೋಗವೊಂದನ್ನೇ ಮಾಡಬೇಕಾ?
- ಮಕ್ಕಳ ದಿನಾಚರಣೆ ದಿನ ಏನು ಮಾಡಲಿ ಅಂತ ಕೇಳಿದರೆ ಕಷ್ಟ!

● **ಪ್ರವೀಣ ತಾಂಡೇಲ, ಹೊನ್ನಾವರ**
ಭಟ್ರೇ, ಮುಖ್ಯಮಂತ್ರಿ ಸ್ಥಾನದ ಮೇಲೆ ಎಲ್ಲ ಜಾತಿಯವರು ಕಣ್ಣಿಟ್ಟಿದ್ದಾರಲ್ಲ?
- ದಲಿತ, ಲಿಂಗಾಯತ, ಒಕ್ಕಲಿಗ, ಅಲ್ಪಸಂಖ್ಯಾತ, ಹಿಂದುಳಿದ ವರ್ಗದವರಿಗೆ ಅಂತ ಐವರು ಸಿಎಂಗಳನ್ನು ಮಾಡಿದರೆ ಹೇಗೆ?!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಮಠಾಧೀಶರಿಗೆ ಸಿಎಂ ಪಟ್ಟ ಕೊಟ್ಟು ನೋಡಿದರೆ ಹೇಗೆ?
- ರಾಜ್ಯದಲ್ಲಿರುವ ಎಲ್ಲ ಮಠಾಧೀಶರು ಆಗ ವಿಧಾನ ಸೌಧದ ಮುಂದೆ ಧ್ಯಾನಕ್ಕೆ ಕುಳಿತಾರು!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಸೂರಜ್, ಪ್ರಜ್ವಲ್ ಇಬ್ಬರಲ್ಲಿ ಯಾರು ಬೆಟರ್?
- ಅವರಿಗೆ ಇವನು ಇಷ್ಟ, ಇವರಿಗೆ ಅವನು ಇಷ್ಟ!

ಅವರು ಮನೆ ಬಿಟ್ಟು ಓಡಿಹೋದರೇನಂತೆ...?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಓಡಿ ಹೋಗುವುದು ಆತನಿಗೆ ಇಷ್ಟವಿರಲಿಲ್ಲ, ಆದರೆ ಮನೆಯ ಪರಿಸ್ಥಿತಿ ಹಾಗಿತ್ತು. ಹೊಟ್ಟೆಯಲ್ಲಿ ಹಸಿವು, ಕಣ್ಣಿನಲ್ಲಿ ಕನಸು ಸಾಕಷ್ಟು ತುಂಬಿಕೊಂಡಿರುವಾಗ ಯಾರಾದರೂ ಎಷ್ಟು ಸಮಯ ಒಂದೇ ಕಡೆ ಕುಳಿತುಕೊಳ್ಳಬಲ್ಲರು?

ಆತ ಪುಂಡನೂ ಅಲ್ಲ, ಪೋಕರಿಯೂ ಅಲ್ಲ. ಮನೆ ಬಿಟ್ಟು ಓಡಿ ಹೋಗುವಂತಹ ಉಡಾಳತನ ಮಾಡಿದವನೂ ಅಲ್ಲ. ಆದರೆ ಮನೆಯ ಪರಿಸ್ಥಿತಿ!? ಮುಂದೊಂದು ದಿನ ತಾನು ಶಾಲೆಯ ಶಿಕ್ಷಕನಾಗಬೇಕು, ಒಂದಿಷ್ಟು ಮಕ್ಕಳಿಗೆ ಪಾಠ ಹೇಳಬೇಕು, ಎಂಬುದು ಅವನ ಕನಸಾಗಿತ್ತು. ಆದರೆ ಮನೆಯ ಪರಿಸ್ಥಿತಿ ಹೇಗಿತ್ತು ಎಂದರೆ, ಶಿಕ್ಷಕನಾಗುವುದು ಇರಲಿ, ಸ್ವತಃ ತಾನು ಶಾಲೆಗೆ ಹೋಗಲೂ ಹಣ ಇರಲಿಲ್ಲ. ರಾತ್ರಿ-ಹಗಲು ಹೊಲದಲ್ಲಿ ದುಡಿಯುತ್ತಿದ್ದ. ಅವನೊಬ್ಬನೇ ಅಲ್ಲ, ಅವನ ಒಡಹುಟ್ಟಿದ ಉಳಿದ ಆರು ಮಂದಿಯೂ ಅಪ್ಪ-ಅಮ್ಮ ನೊಂದಿಗೆ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಎಷ್ಟೇ ದುಡಿದರು ಕೆಲವೊಮ್ಮೆ ಹಸಿದೇ ಮಲಗಬೇಕಿತ್ತು. ಹೊಟ್ಟೆಗೆ ಹಿಟ್ಟೂ ಇಲ್ಲ, ತೊಡಲು ಒಳ್ಳೆಯ ಬಟ್ಟೆಯೂ ಇಲ್ಲದ ಆತ ಎಷ್ಟೋ ಸಲ ಹೊಲದ ಕೆಲಸ ಮುಗಿಸಿ, ಹಳ್ಳಿಯಿಂದ ಕಟ್ಟಿಗೆ ಕೊಂಡುಹೋಗಿ ಪಟ್ಟಣದಲ್ಲಿ ಮಾರಿ ಬರುತ್ತಿದ್ದ. ಪಟ್ಟಣಕ್ಕೆ ಹೋದಾಗ, ಅಲ್ಲಿಯ ಜನರನ್ನು ಆತ ನೋಡುತ್ತಿದ್ದ. ಅವರೆಲ್ಲ ಒಳ್ಳೆಯ ಬಟ್ಟೆ ತೊಡುತ್ತಿದ್ದರು. ಅವರಲ್ಲಿ ಯಾರು ತನ್ನಷ್ಟು ಹಸಿದವರಂತೆ ಕಾಣುತ್ತಿರಲಿಲ್ಲ. ಆಗೆಲ್ಲ ಆತನಿಗೆ ಹಳ್ಳಿಯ ಹೊಲದ ಕೆಲಸ ಸಾಕು ಅನಿಸುತ್ತಿತ್ತು. ತಾನು ಆ ಪರಿಸರದಿಂದ ಹೊರಬರಬೇಕು, ತನ್ನದೇ ಆದ ಒಂದು ಬದುಕನ್ನು ಕಟ್ಟಿಕೊಳ್ಳಬೇಕು, ಕೊನೆಯ ಪಕ್ಷ ಹೊಟ್ಟೆ ತುಂಬಿಸಿಕೊಂಡು ಕಣ್ಣು ತುಂಬಾ ನಿದ್ದೆ ಮಾಡಬೇಕು ಎಂದು ಎಷ್ಟೋ ಬಾರಿ ಆತ ಯೋಚಿಸಿದ್ದ.

ಹೀಗಿರುವಾಗ, 'ಕಟ್ಟಡ ನಿರ್ಮಾಣಕ್ಕೆ ಕೆಲಸಗಾರರು ಬೇಕಾಗಿದ್ದಾರೆ' ಎಂಬ ದಿನಪತ್ರಿಕೆಯ ಜಾಹೀರಾತೊಂದು ಆತನ ಕಣ್ಣಿಗೆ ಬಿದ್ದಿತ್ತು. ಆಗ ಆತ ಮೊದಲನೆಯ ಬಾರಿ ಮನೆ ಬಿಟ್ಟು ಓಡಿ ಹೋಗುವ ನಿರ್ಧಾರ ಮಾಡಿದ್ದ. ಆಗ ಆತನಿಗೆ ಇನ್ನೂ ಹದಿನಾರು ವರ್ಷ. ಅದಕ್ಕೆ ತಕ್ಕಂತೆ ಅವನೊಟ್ಟಿಗೆ ಊರು ಬಿಟ್ಟು ಹೋಗಲು ಒಬ್ಬ ಸ್ನೇಹಿತನೂ ಸಿಕ್ಕಿದ್ದ. ಇಬ್ಬರೂ ಸೇರಿ ಹದಿನಾರು ಕಿಲೋಮೀಟರ್ ದೂರದಲ್ಲಿರುವ ಒಂದು ಪಟ್ಟಣಕ್ಕೆ ಹೊರಟೇಬಿಟ್ಟರು. ಪಟ್ಟಣದಲ್ಲಿ ಕೆಲಸವೂ ಸಿಕ್ಕಿತು. ಕಟ್ಟಡ ನಿರ್ಮಾಣ ಕಷ್ಟದ ಕೆಲಸ, ಸಂಬಳವೂ ಕಮ್ಮಿ. ಆದರೂ ಆತ ಖುಷಿಯಾಗಿದ್ದ. ಕಾರಣ, ಹಳ್ಳಿಯಲ್ಲಿ ದಿನಕ್ಕೆ ಹದಿನಾರು ತಾಸು ಕೆಲಸ ಮಾಡಿದರೂ ಖರ್ಚಿಗೆ ಹಣವೂ ಇರುತ್ತಿರಲಿಲ್ಲ, ಹೊಟ್ಟೆ ತುಂಬ ಊಟವೂ ಸಿಗುತ್ತಿರಲಿಲ್ಲ. ಅದ್ದರಿಂದ ಮನೆ ಬಿಟ್ಟು ಪಟ್ಟಣ ಸೇರುವುದು ಅನಿವಾರ್ಯವಾಗಿತ್ತು.

ಪಟ್ಟಣದ ಕೆಲಸದ ಖುಷಿ ಎರಡು ತಿಂಗಳಿಗಿಂತ ಹೆಚ್ಚು ಉಳಿಯಲಿಲ್ಲ. ಮಗನನ್ನು ಹುಡುಕಿಕೊಂಡು ಬಂದ ಅಪ್ಪ, ಬೈದು ಮಗನನ್ನು ಮನೆಗೆ ಕರೆದುಕೊಂಡು ಹೋಗಿದ್ದರು. ಆದರೆ ಆತನಿಗೆ ಆ ಜೀವನ ಬೇಡವಾಗಿತ್ತು. ಮತ್ತದೇ ಹೊಲದ ಕೆಲಸ, ಮತ್ತದೇ ಹಸಿವು, ಮತ್ತದೇ ಕನಸು. ಆತನಿಗೆ ಹಳ್ಳಿಯಿಂದ ಬಿಡುಗಡೆ ಬೇಕಾಗಿತ್ತು. ಆದರೆ ಈ ಬಾರಿ ಎರಡು ತಿಂಗಳು ಪಟ್ಟಣದಲ್ಲಿ ಕೆಲಸ ಮಾಡಿದ ಅನುಭವವಿತ್ತು. ಹೊಲ-ಗದ್ದೆಯ ಕೆಲಸಕ್ಕಿಂತಲೂ ಪಟ್ಟಣದ ಕೆಲಸವೇ ಆತನಿಗೆ ಹೆಚ್ಚು ಪ್ರಿಯವಾಗಿತ್ತು. ಅಲ್ಲದೆ, ಹಳ್ಳಿಯಲ್ಲಿ ಎಷ್ಟೇ ದುಡಿದರೂ ಹಣಗಳಿಸಲು ಸಾಧ್ಯವಿಲ್ಲ ಎಂದು ಮನವರಿಕೆಯಾಗಿತ್ತು. ಸುಮಾರು ಒಂದು ವರ್ಷದ ನಂತರ ಮತ್ತೊಮ್ಮೆ ಓಡಿ ಹೋಗುವ ಪ್ರಯತ್ನವನ್ನು ಮಾಡಿದ್ದ.

ಈ ಬಾರಿ ಇಬ್ಬರು ಸ್ನೇಹಿತರು ಆತನ ಜತೆಗೆ ಸೇರಿಕೊಂಡರು. ಈ ಬಾರಿ ಆತ ತನ್ನ ಊರನ್ನು ಬಿಟ್ಟು ದಕ್ಷಿಣದ ಕಡೆಗೆ ಹೊರಟಿದ್ದ. ಆದರೆ ಈ ಬಾರಿಯೂ ಆತನ ಪ್ರಯತ್ನ ವಿಫಲವಾಯಿತು. ಒಬ್ಬ ಸ್ನೇಹಿತನನ್ನು ಅವನ ಸಹೋದರ ಪತ್ತೆ ಹಚ್ಚಿ ಕರೆದುಕೊಂಡು ಹೋದ. ಈತ ಮತ್ತು ಇನ್ನೊಬ್ಬ ಸ್ನೇಹಿತ ವಂಚನೆಗೆ ಒಳಗಾಗಿದ್ದರು. ಇಬ್ಬರಿಗೂ ನೌಕರಿ ಕೊಡಿಸುತ್ತೇನೆಂದು ಆಮಿಷ ಹುಟ್ಟಿದ ಒಬ್ಬ ಇವರಲ್ಲಿದ್ದ ಹಣವನ್ನೆಲ್ಲ ಪಡೆದು ಇವರನ್ನು ವಂಚಿಸಿ ಓಡಿಹೋಗಿದ್ದ. ಹಣವನ್ನು ಕಳೆದುಕೊಂಡ ಆ ಯುವಕನಿಗೆ ದಿಕ್ಕು ತೋಚದಂತಾಗಿತ್ತು ಆತ ಅದೇ ಊರಿನಲ್ಲಿ ಇದ್ದ ತನ್ನ ಅಜ್ಜನ ಮನೆಯ ಪಕ್ಕದಲ್ಲಿಯೇ ಉಳಿದುಕೊಂಡ. ಮಗನ ಇರುವಿಕೆಯನ್ನು ತಿಳಿದು ಅಲ್ಲಿಗೆ ಬಂದ ತಂದೆ, ಆತನನ್ನು ಪುನಃ ಮನೆಗೆ ಕರೆದು ಕೊಂಡು ಹೋದರು.

ಆತನಿಗೆ ಹದಿನೆಂಟು ವರ್ಷ ತುಂಬಿತ್ತು. ಆಗ ಮತ್ತೊಮ್ಮೆ ಮನೆ ಬಿಟ್ಟು ಇನ್ನೂ ದೂರ ಹೋಗಲು ನಿರ್ಧರಿಸಿದ ಹದಿನೆಂಟರ ಯುವಕ, ಎಪ್ಪತ್ತು ವೊನ್ (ಕೊರಿಯಾ ದೇಶದ ಹಣ) ಕೊಟ್ಟು ರೈಲ್ವೆ ಟಿಕೆಟ್ ಪಡೆದಿದ್ದ. ಆ ಹಣಕ್ಕಾಗಿ ತನ್ನ ಮನೆಯದ್ದೇ ಒಂದು ಹಸುವನ್ನು ತಂದೆಗೆ ತಿಳಿಯದಂತೆ ಮಾರಾಟಮಾಡಿದ್ದ. ದಕ್ಷಿಣ ಕೊರಿಯಾದಲ್ಲಿರುವ ಒಂದು ಪಟ್ಟಣವನ್ನು ತಲುಪಿದ ಆತ, ಒಂದು ಶಾಲೆಯಲ್ಲಿ ಅಕೌಂಟೆಂಟ್ ಆಗಿ ಕೆಲಸಕ್ಕೆ ಸೇರಿಕೊಂಡ. ಈಗಲೂ ಅಷ್ಟೇ, ಎರಡು ತಿಂಗಳಾಗುತ್ತಿದ್ದಂತೆ ಮತ್ತೆ ಮಗನನ್ನು ಹುಡುಕಿಕೊಂಡ ಬಂದ ತಂದೆಯ ಕೈಗೆ ಸಿಕ್ಕಿ ಬಿದ್ದಿದ್ದ.

ನಾಲ್ಕನೇ ಬಾರಿ ಪುನಃ ಓಡಿ ಹೋದ ಅದೇ ಯುವಕ, ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್ ಸಮೀಪದ ಒಂದು ಪಟ್ಟಣವನ್ನು ತಲುಪಿದ. ಮೊದಲು ಬಂದರಿನಲ್ಲಿ ಕೂಲಿಯಾಗಿ ಸೇರಿಕೊಂಡ. ಕೆಲ ದಿನ ಕೂಲಿ ಕೆಲಸ ಮಾಡಿದ ನಂತರ ಕಟ್ಟಡ ನಿರ್ಮಾಣದ ಕೆಲಸಗಾರನಾಗಿ, ಸಿರಪ್ ತಯಾರಿಸುವ ಕಾರ್ಖಾನೆಯಲ್ಲಿ ಸಹಾಯಕನಾಗಿ ಒಂದು ವರ್ಷ ಕೆಲಸ ಮಾಡಿದ. ನಂತರ ಒಂದು ಅಕ್ಕಿ ಅಂಗಡಿಯಲ್ಲಿ ಡೆಲಿವರಿ ಬಾಯ್ ಆಗಿ ಸೇರಿಕೊಂಡ. ಅಂಗಡಿಯ ಕೆಲಸ ಆರಂಭಿಸಿದ ಆರು ತಿಂಗಳಲ್ಲೇ ಆತ ಅಂಗಡಿ ಮಾಲೀಕನ ಮೆಚ್ಚುಗೆ ಗಳಿಸಿದ್ದ. ಯುವಕನ ಕೆಲಸ ಮಾಡುವ ರೀತಿಯನ್ನು ಕಂಡ ಗ್ರಾಹಕರೇ ಖುಷಿಯಾಗಿರುವಾಗ ಮಾಲೀಕ ಖುಷಿಯಾಗದೇ ಇರಲು ಸಾಧ್ಯವೇ? ಮಾಲೀಕ ಆತನನ್ನು ಲೆಕ್ಕಪತ್ರ ನೋಡಿಕೊಳ್ಳಲು ಹೇಳಿದ. ಕ್ರಮೇಣ ಅಂಗಡಿಯ ಉಸ್ತುವಾರಿಯ ಜವಾಬ್ದಾರಿಯನ್ನೂ ವಹಿಸಿಕೊಟ್ಟ. ಕೆಲವು ದಿನಗಳ ನಂತರ ಅಂಗಡಿಯ ಮಾಲೀಕ ತೀವ್ರ ಅಸ್ವಸ್ಥನಾಗಿ ಹಾಸಿಗೆ ಹಿಡಿದು ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದ್ದ. ಆದರೆ ಅಂಗಡಿಯ ಜವಾಬ್ದಾರಿಯನ್ನು ಈ ಯುವಕನಿಗೆ ವಹಿಸಿಕೊಡುವ ನಿರ್ಣಯವನ್ನು ಆತ ಮಾಡಿದ್ದ. ಅಂಗಡಿ ವಹಿಸಿಕೊಂಡ ಮುಂದಿನ ಕೆಲವು ದಿನಗಳಲ್ಲಿ ತನ್ನ ಪರಿಶ್ರಮದಿಂದ ಜನರ ನಂಬುಗೆಯನ್ನು ಗಳಿಸಿಕೊಂಡಿದ್ದ ಆ ಯುವಕ. ಮುಂದಿನ ಎರಡು ವರ್ಷ ವ್ಯಾಪಾರ ಚೆನ್ನಾಗಿಯೇ ನಡೆಯಿತು. ಆದರೆ ಆ ಸಂದರ್ಭದಲ್ಲಿ ಎರಡನೆಯ ವಿಶ್ವಯುದ್ಧ ನಡೆಯುತ್ತಿದ್ದ ಪರಿಣಾಮವಾಗಿ ಜಪಾನ್ ದೇಶದ ಸೇನೆಗೆ ಮತ್ತು ಅಲ್ಲಿಯ ಜನರಿಗೆ ಅಕ್ಕಿ ಸರಬರಾಜನ್ನು ಪೂರೈಸುವುದಕ್ಕೋಸ್ಕರ ಜಪಾನ್ ಕೊರಿಯಾದ ಅಕ್ಕಿ ವ್ಯಾಪಾರದ ಮೇಲೆ ನಿರ್ಬಂಧವನ್ನು ಹೇರಿತು. ಇದರಿಂದಾಗಿ ಅಕ್ಕಿ ಅಂಗಡಿಯನ್ನು ಮುಚ್ಚಿ ಆ ಯುವಕ ತಾನಾಗಿಯೇ ಮೊದಲ ಬಾರಿ ಮನೆಗೆ ಹಿಂದಿರುಗುವಂತಾಯಿತು.

ಎಷ್ಟು ದಿನ ಮನೆಯಲ್ಲಿ ಖಾಲಿ ಕುಳಿತುಕೊಳ್ಳಲು ಸಾಧ್ಯ? ಕೂಡಿಟ್ಟ ಹಣ ಕರಗಿತ್ತು. ಆತ ಮೂರು ಸಾವಿರ ವೊನ್ ಸಾಲ ಪಡೆದು ಕಾರು ರಿಪೇರಿ ಮಾಡುವ ಗ್ಯಾರೇಜ್ ಆರಂಭಿಸಿದ. ಆತನ ದುರಾದೃಷ್ಟಕ್ಕೆ ಒಂದೇ ತಿಂಗಳಿನಲ್ಲಿ ಗ್ಯಾರೇಜಿಗೆ ಬೆಂಕಿ ಬಿದ್ದು, ವಾಹನಗಳೆಲ್ಲ ಭಸ್ಮವಾದವು. ಒಂದು ಕಡೆ ಯುದ್ಧ, ಇನ್ನೊಂದು ಕಡೆ ಗ್ರಾಹಕರಿಗೆ ನಷ್ಟ ಭರಿಸಿ ಕೊಡಬೇಕಾದ ಸಂಕಷ್ಟ. ಆತ ಮತ್ತೊಮ್ಮೆ ಮೂರುವರೆ ಸಾವಿರ ವೊನ್ ಸಾಲ ಪಡೆದು ಗ್ಯಾರೇಜ್ ಪುನಃ ಆರಂಭಿಸಿದ. ಉಳಿದ ಗ್ಯಾರೇಜಿನವರು ಒಂದು ಕಾರು ದುರಸ್ತಿ ಮಾಡಲು ಎರಡರಿಂದ ಮೂರು ವಾರ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಆತ ಐದರಿಂದ

ಆರು ದಿನದ ಒಳಗೇ ರಿಪೇರಿ ಮಾಡಿ ಕೊಡುತ್ತಿದ್ದ. ಅದಕ್ಕಾಗಿ ಅವನ ಜನಪ್ರಿಯತೆ ಹೆಚ್ಚಿ, ಹೆಚ್ಚು ಹೆಚ್ಚು ಗ್ರಾಹಕರು ಅವನಲ್ಲಿಗೆ ಬರಲಾರಂಭಿಸಿದರು. ಗ್ಯಾರೇಜ್ ಆರಂಭಿಸಿ ಮೂರು ವರ್ಷವಾಗುವುದರ ಒಳಗೆ ಎಂಬತ್ತು ಜನರನ್ನು ಆತ ಕೆಲಸಕ್ಕೆ ಇಟ್ಟುಕೊಂಡಿದ್ದ. ಹಳೆಯ ಸಾಲವನ್ನೆಲ್ಲ ತೀರಿಸಿ ಇನ್ನೇನು ಜೀವನ ಸುಗಮವಾಗುತ್ತಿದೆ ಎನ್ನುವಾಗ ಯುದ್ಧದ ಯಂತ್ರೋಪಕರಣ ತಯಾರಿಸುವ ಸಲುವಾಗಿ ಜಪಾನ್ ಆತನ ಗ್ಯಾರೇಜನ್ನು ವಶಪಡಿಸಿಕೊಂಡು ಸ್ಟೀಲ್ ತಯಾರಿಸುವ ಕಾರ್ಖಾನೆಗೆ ನೀಡಿತು. ಆತ ಪುನಃ ಸಂಸಾರ ಸಮೇತ ಊರಿಗೆ ಹೋಗಬೇಕಾಯಿತು. ಆದರೆ ಈ ಬಾರಿ ಅವನ ಬಳಿ ಐವತ್ತು ಸಾವಿರ ವೊನ್ ಇತ್ತು. ಜತೆಗೆ, ಈ ಸಲ ಆತ ಹೆಚ್ಚು ಕಾಯಬೇಕಾಗಿರಲಿಲ್ಲ.

ಯುದ್ಧ ಮುಗಿದಿತ್ತು, ಕೊರಿಯಾದ ರಾಜಧಾನಿ ಸಿಯೋಲ್‌ಗೆ ಹಿಂತಿರುಗಿ ಬಂದ ಆತ ಗ್ಯಾರೇಜ್ ಪುನಃ ಆರಂಭಿಸಿದ. ಅದಕ್ಕೆ 'ಹ್ಯುಂಡೈ ಆಟೋ ಸರ್ವಿಸ್' ಎಂದು ಹೆಸರಿಟ್ಟ. ಹ್ಯುಂಡೈ ಎಂದರೆ, 'ಆಧುನಿಕ' 'ಹೊಸತು', 'ನೂತನ' ಎಂದು ಅರ್ಥ. ಅಷ್ಟಕ್ಕೇ ನಿಲ್ಲದೆ, ತನ್ನ ಪ್ರೀತಿಯ ಕಟ್ಟಡ ನಿರ್ಮಾಣದ ಕೆಲಸವನ್ನು ಮಾಡುವುದಕ್ಕಾಗಿ 'ಹ್ಯುಂಡೈ ಸಿವಿಲ್ ವರ್ಕ್ಸ್' ಎಂಬ ಹೆಸರಿನಲ್ಲಿ ಕಂಪನಿ ಆರಂಭಿಸಿದ.

ಯಾರು ಆತ? ಆತ್ಮವಿಶ್ವಾಸದ ಮೇರು ಪರ್ವತ, ಇಂದು ನಾವು ನೀವೆಲ್ಲ ನೋಡುತ್ತಿರುವ, ಕೇಳುತ್ತಿರುವ 'ಹ್ಯುಂಡೈ' ಕಂಪನಿಯ ಸ್ಥಾಪಕ, 'ಚುಂಗ್ ಜು-ಯುಂಗ್'. ಬಾಲ್ಯದಲ್ಲಿ ಸಾಕಷ್ಟು ಕಷ್ಟ ಎದುರಿಸಿದ್ದರೂ ಸ್ವಂತ ಕಂಪನಿ ನಿರ್ಮಿಸುವ ಹಂತಕ್ಕೆ ಬೆಳೆದು ನಿಂತಿದ್ದರು ಜು-ಯುಂಗ್. ಸರಿ, ಅಲ್ಲಿಗೆ ಮುಗಿಯಿತೇ? ನಂತರ ಅವರಿಗೆ ಯಾವ ಕಷ್ಟವೂ ಬರಲಿಕ್ಕಿಲ್ಲ, ಅವರ ಜೀವನ ಸುಗಮವಾಗಿರಬಹುದು ಎಂದರೆ ಅದು ಸುಳ್ಳು. ಮೊದಲಿಗಿಂತಲೂ ಸಾಕಷ್ಟು ದೊಡ್ಡವರಾಗಿದ್ದರು ಜು-ಯುಂಗ್. ಹಾಗೆಯೇ ಸಮಸ್ಯೆಗಳೂ ದೊಡ್ಡದಾಗಿದ್ದವು. ಸಮಸ್ಯೆಗಳೇ ಹಾಗೆ, ಸಣ್ಣವರಿಗೆ ಸಣ್ಣ ಸಮಸ್ಯೆ, ದೊಡ್ಡವರಿಗೆ ದೊಡ್ಡ ದೊಡ್ಡ ಸಮಸ್ಯೆ!

ಅವರ ಕಂಪನಿ ಚೆನ್ನಾಗಿ ನಡೆಯುತ್ತಿತ್ತಾದರೂ ಮತ್ತೊಮ್ಮೆ ದುರಾದೃಷ್ಟ ಎದುರಾಯಿತು. ಎರಡನೆಯ ಮಹಾಯುದ್ಧ ಮುಗಿದಿತ್ತಾದರೂ, 1950 ರಲ್ಲಿ ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ ನಡುವೆ ಯುದ್ಧ ಆರಂಭವಾಯಿತು. ಉತ್ತರದ ಸೇನೆ ದಕ್ಷಿಣಕೊರಿಯಾದ ರಾಜಧಾನಿ ಸಿಯೋಲ್ ನಗರವನ್ನು ವಶಪಡಿಸಿಕೊಳ್ಳುವ ಹಂತ ತಲುಪಿತ್ತು. ಭಯಭೀತರಾದ ಜನ ಉತ್ತರದ ಸೇನೆಯಿಂದ ತಪ್ಪಿಸಿಕೊಳ್ಳಲು ಸಿಯೋಲ್ ಬಿಟ್ಟು ಓಡಿ ಹೋಗುತ್ತಿದ್ದರು. ಅದಕ್ಕೆ ಜು-ಯುಂಗ್ ಹೊರತಾಗಿರಲಿಲ್ಲ. ಆದರೆ ಅಮೆರಿಕದ ಸಹಾಯದಿಂದ ದಕ್ಷಿಣ ಕೊರಿಯಾ ತನ್ನ ದೇಶವನ್ನು ಉಳಿಸಿಕೊಳ್ಳುವಲ್ಲಿ ಸಫಲವಾಯಿತು. ಈ ನಡುವೆ ಯುದ್ಧದ ಸಂದರ್ಭದಲ್ಲಿ ಸೇನೆಗೆ ಬೇಕಾಗುವ ಟೆಂಟ್, ದಾಸ್ತಾನು ಮಳಿಗೆ, ಕಚೇರಿಗಳಲ್ಲಿ ವ್ಯಾಪಾರಕ್ಕೆ ಸಾಕಷ್ಟು ಅವಕಾಶವಿದೆ ಎಂಬುದನ್ನು ಅರಿತುಕೊಂಡ ಜು-ಯುಂಗ್, ಅಮೆರಿಕದ ಸೇನೆಯೊಡನೆ ವ್ಯಾಪಾರದ ಒಪ್ಪಂದ ಮಾಡಿಕೊಂಡರು. ಹಾಗೆಯೇ ತಮ್ಮ ಮೊದಲಿನ ಕೆಲಸವನ್ನು ಪುನಃ ಮುಂದುವರಿಸಿದರು. ಯುದ್ಧದಿಂದ ಹಾನಿಗೊಳಗಾಗಿದ್ದ ರಸ್ತೆ, ಕಟ್ಟಡಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಿ ಕೊಡುವಲ್ಲಿ ಹ್ಯುಂಡೈ ಕಂಪನಿ ಮಹತ್ವದ ಪಾತ್ರ ವಹಿಸಿತ್ತು. ಕೆಲವು ವರ್ಷದ ನಂತರ ದಕ್ಷಿಣ ಕೊರಿಯಾ ಒಂದು ಹೊಸ ಕಾನೂನ ತಂದಿತ್ತು. ಅದರ ಪ್ರಕಾರ ಯಾವುದೇ ವಿದೇಶಿ ಕಾರು ತಯಾರಿಸುವ ಕಂಪನಿ ಸ್ಥಳೀಯ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಿತ್ತು ಅಥವಾ ತಂತ್ರಜ್ಞಾನವನ್ನು ಕೊಡಬೇಕಿತ್ತು. ಈ ಅವಕಾಶವನ್ನು ಉಪಯೋಗಿಸಿಕೊಂಡ ಜು-ಯುಂಗ್, ಅಮೆರಿಕದ ಫೋರ್ಡ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡರು. ಅಲ್ಲಿಯವರೆಗೂ ಕಾರು ರಿಪೇರಿ ಮಾಡುತ್ತಿದ್ದ ಹುಂಡೈ ಕಂಪನಿ ಮೊದಲ ಬಾರಿಗೆ ಕಾರು ತಯಾರಿಸುವ ಸಂಸ್ಥೆಯಾಗಿ ಬೆಳೆದು ನಿಂತಿತು. ದೇಶದ ಉಲ್ಸನ್ ನಗರದಲ್ಲಿ ಕಾರು ತಯಾರಿಸುವ ದೊಡ್ಡ ಕಾರ್ಖಾನೆಯನ್ನು ನಿರ್ಮಿಸಿತು. ಇಂದು ಆ ಕಾರ್ಖಾನೆ ಪ್ರತಿ ವರ್ಷ ಹದಿನಾರು ಲಕ್ಷ ಕಾರು ತಯಾರಿಸುತ್ತದೆ. ಅದೊಂದೇ ಕಾರ್ಖಾನೆಯಲ್ಲಿ ಸುಮಾರು ಎಪ್ಪತ್ತೈದು ಸಾವಿರ ಜನ ಕೆಲಸ ಮಾಡುತ್ತಾರೆ.

ಆದರೆ ದಕ್ಷಿಣ ಕೊರಿಯಾದಲ್ಲಿ ತಯಾರಿಸಿದ ಮೊದಲ ಕಾರುಗಳು ಯಶಸ್ವಿಯಾಗಲಿಲ್ಲ ಅದಕ್ಕೆ ಸರಿಯಾಗಿ ಅತಿವೃಷ್ಟಿಯಿಂದ ಉಲ್ಸನ್ ನಗರದಲ್ಲಿ ಪ್ರವಾಹ ಉಂಟಾಗಿ, ಕಾರ್ಖಾನೆ ಭಾರಿ ನಷ್ಟಕ್ಕೆ ಒಳಗಾಯಿತು. ಅಲ್ಲಿಯೂ ಸೋಲು ಒಪ್ಪಿಕೊಳ್ಳದ ಜು-ಯುಂಗ್, ಪ್ರವಾಹದ ನಂತರ ಅದೇ ಕಾರ್ಖಾನೆಯನ್ನು ಪುನಃ ಆರಂಭಿಸಿದರು. ಮೊದಲಿನ ತಪ್ಪುಗಳನ್ನು ಸರಿಪಡಿಸಿಕೊಂಡು ಕಾರು ತಯಾರಿಸಿದ್ದರಿಂದ ಈ ಬಾರಿ ಯಶಸ್ವಿಯಾದರು. ಆದರೆ ಕೆಲವೇ ವರ್ಷದಲ್ಲಿ ಹುಂಡೈ ಮತ್ತು ಫೋರ್ಡ್ ನಡುವೆ ಮನಸ್ತಾಪ ಉಂಟಾಗಿ, ಎರಡೂ ಕಂಪನಿಗಳು ಬೇರೆ ಬೇರೆಯಾದವು. ಆದರೆ, ಹ್ಯುಂಡೈಗೆ ಸ್ವಂತ ಬಲದ ಮೇಲೆ ಕಾರು ತಯಾರಿಸುವ ತಂತ್ರಜ್ಞಾನ ಗೊತ್ತಿರಲಿಲ್ಲ. ಆದ್ದರಿಂದ ಜು-ಯುಂಗ್ ಮತ್ತೆ ಆತಂಕಕ್ಕೆ ಒಳಗಾದರು. ಭಾಗೀದಾರರಾಗಲು ಹೊಸ ಕಂಪನಿಯ ಹುಡುಕಾಟದಲ್ಲಿ ತೊಡಗಿದರು. ವೋಕ್ಸ್‌ವ್ಯಾಗನ್, ಜನರಲ್ ಮೋಟರ್ಸ್ ಜು-ಯುಂಗ್ ಆಮಂತ್ರಣವನ್ನು ತಿರಸ್ಕರಿಸಿದವು. ಕೊನೆಗೆ ಹುಂಡೈಯೊಂದಿಗೆ ಭಾಗಿದಾರರಾಗಲು ಜಪಾನಿನ ಮಿಟ್ಸುಬಿಶಿ ಕಂಪನಿ ಒಪ್ಪಿಕೊಂಡಿತ್ತು. ಮಿಟ್ಸುಬಿಶಿ ಕಾರು ತಯಾರಿಸುವ ತಂತ್ರಜ್ಞಾನವನ್ನು ಹ್ಯುಂಡೈಗೆ ಒದಗಿಸಿತು. 1975ರಲ್ಲಿ ಹ್ಯುಂಡೈ ಪೂರ್ಣ ಪ್ರಮಾಣದ ದೇಶೀ ಕಾರನ್ನು ತಯಾರಿಸಿತು. ಅದು ಎಷ್ಟು ಸಫಲವಾಯಿತು ಎಂದರೆ, ಕೊರಿಯಾದ ಕಾರು ಮಾರುಕಟ್ಟೆಯ ಶೇಕಡಾ ಅರವತ್ತರಷ್ಟನ್ನು ಆವರಿಸಿಕೊಂಡಿತು. ಈ ಹಂತ ತಲುಪುವಾಗ ಜು-ಯುಂಗ್‌ಗೆ ಅರವತ್ತು ವರ್ಷ ವಯಸ್ಸಾಗಿತ್ತು!

ಉತ್ತರ ಕೊರಿಯಾದ ಟಾಂಗ್ ಚಾನ್ ಹಳ್ಳಿಯಲ್ಲಿ ಜನಿಸಿ, ದಕ್ಷಿಣ ಕೊರಿಯಾದಲ್ಲಿ ವ್ಯಾಪಾರ ಆರಂಭಿಸಿ, ಆ ಕಾಲದಲ್ಲಿ ದಕ್ಷಿಣ ಕೊರಿಯಾದ ಅತ್ಯಂತ ಶ್ರೀಮಂತ ವ್ಯಕ್ತಿ ಎಂಬ ಕೀರ್ತಿಗೆ ಪಾತ್ರರಾದವರು ಚುಂಗ್ ಜು-ಯುಂಗ್. ಹದಿನಾರನೆಯ ವಯಸ್ಸಿನವರೆಗೂ ಬಡತನ, ಅದರ ನಂತರದ ಇಪ್ಪತ್ತು ವರ್ಷ ಸತತ ಸೋಲು, ಅಲ್ಲಿಗೆ ಜೀವನದ ಅರ್ಧಕ್ಕಿಂತ ಹೆಚ್ಚು ಆಯುಷ್ಯವೇ ಮುಗಿದು ಹೋಯಿತು. ಬೇರೆ ಯಾರದರೂ ಆಗಿದ್ದರೆ ಅದೆಷ್ಟು ಬಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೋ ಏನೋ? ಸೋಲನ್ನೇ ಗುಲಾಮನನ್ನಾಗಿಸಿ, ತನ್ನ ದೇಶವನ್ನಷ್ಟೇ ಅಲ್ಲ, ವಿಶ್ವವನ್ನೇ ಆಳಿದವರು ಚುಂಗ್ ಜು-ಯುಂಗ್. ಅನೇಕರಿಗೆ ಹ್ಯುಂಡೈ ಎಂದರೆ ಕೇವಲ ಕಾರು ತಯಾರಿಸುವ ಕಂಪನಿ. ಹುಂಡೈ ಇಂದು ವಿಶ್ವದ ಕಾರು ತಯಾರಿಸುವ ಕಂಪನಿಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಆದರೆ ಅಷ್ಟಕ್ಕೇ ಸೀಮಿತವಾಗಿಲ್ಲ, ವಿಶ್ವದ ಅತಿ ದೊಡ್ಡ ಹಡಗು ಕಟ್ಟುವ ಕಂಪನಿಯಾಗಿ ಬೆಳೆದಿದೆ. ವಿಶ್ವದ ಭಾರಿ ಯಂತ್ರೋಪಕರಣಗಳನ್ನು ತಯಾರಿಸುವ ಕಂಪನಿಗಳಲ್ಲಿ ಹುಂಡೈ ಕೂಡ ಒಂದು. ದಕ್ಷಿಣ ಕೊರಿಯಾದಲ್ಲಿ ಪ್ರಮುಖ ರಾಷ್ಟ್ರೀಯ ಹೆದ್ದಾರಿ, ಅಣುಸ್ಥಾವರ, ಅಣೆಕಟ್ಟು, ಇವುಗಳನ್ನೆಲ್ಲ ನಿರ್ಮಿಸಿದ ಕೀರ್ತಿ ಹ್ಯುಂಡೈ ಸಿವಿಲ್ ವರ್ಕ್ಸ್ ಕಂಪನಿಗೆ ಸಲ್ಲುತ್ತದೆ. ಇಂದು ಹುಂಡೈ ಕಂಪನಿಯ ಒಟ್ಟು ಮೌಲ್ಯ ಹದಿನಾರು ಟ್ರಿಲಿಯನ್ ವೊನ್ (ಒಂದು ಲಕ್ಷ ಕೋಟಿ ರುಪಾಯಿ). ಹ್ಯುಂಡೈ ಇಂದು ಸಮುದ್ರದಲ್ಲಿ ಬಳಸುವ ವಿವಿಧ ಯಂತ್ರೋಪಕರಣ, ಹಡಗು, ಜಲಂತರ್ಗಾಮಿ ನೌಕೆ, ವಿದ್ಯುತ್ ಸ್ಥಾವರ, ಪೆಟ್ರೋಲಿಯಂ ಉತ್ಪನ್ನಕ್ಕೆ ಬಳಸುವ ಯಂತ್ರ, ಅದನ್ನು ಶೇಖರಿಸಿ ಇಡಲು ಬೇಕಾದ ಟ್ಯಾಂಕರ್, ಸಾಗಿಸಲು ಬೇಕಾದ ಟ್ಯಾಂಕರ್, ಹೀಗೆ ಅನೇಕ ಉದ್ಯಮದಲ್ಲಿ ತೊಡಗಿಸಿಕೊಂಡಿದೆ. ವಿಶ್ವದಾದ್ಯಂತ ಎಲ್ಲ ದೇಶದಲ್ಲೂ ಒಂದಲ್ಲ ಒಂದು ಕ್ಷೇತ್ರದಲ್ಲಿ ಹ್ಯುಂಡೈ ಹೆಸರು ಕಾಣುತ್ತದೆ. ಇನ್ನು ಕಾರಿನ ವಿಷಯಕ್ಕೆ ಬಂದರೆ, ಕಳೆದ ವರ್ಷ ಹ್ಯುಂಡೈ ವಿಶ್ವದಾದ್ಯಂತ ಅರವತ್ತೆಂಟು ಲಕ್ಷಕ್ಕೂ ಹೆಚ್ಚು ಕಾರುಗಳನ್ನು ಮಾರಾಟ ಮಾಡಿದೆ, ಅದರಲ್ಲಿ ಎಂಟು ಲಕ್ಷಕ್ಕೂ ಹೆಚ್ಚು ಕಾರುಗಳನ್ನು ಭಾರತದಲ್ಲಿಯೇ ಮಾರಾಟವಾಗಿವೆ.

ಜು-ಯುಂಗ್ ಸಾಕಷ್ಟು ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿದ್ದಾರೆ. ವಿದ್ಯಾರ್ಥಿಗಳಿಗೆ, ಬಡವರಿಗೆ ದಾನವನ್ನೂ ಮಾಡಿದ್ದಾರೆ, ಪ್ರೋತ್ಸಾಹಧನ ನೀಡಿದ್ದಾರೆ. ದಕ್ಷಿಣ ಕೊರಿಯಾ ಕಟ್ಟುವುದರಲ್ಲಿ ಅವರ ಪಾತ್ರ ದೊಡ್ಡದು. 1988 ರಲ್ಲಿ ಸಿಯೋಲ್ ನಲ್ಲಿ ಒಲಿಂಪಿಕ್ ನಡೆದದ್ದೇ ಅವರಿಂದ ಎಂದರೆ ತಪ್ಪಲ್ಲ. ದಕ್ಷಿಣ ಮತ್ತು ಉತ್ತರ ಕೊರಿಯಾ ನಡುವಿನ ಸಂಬಂಧ ಸುಧಾರಿಸುವಲ್ಲಿಯೂ ಅವರು ಮಹತ್ವದ ಪಾತ್ರವನ್ನು ವಹಿಸಿದ್ದರು. ಇಷ್ಟೆಲ್ಲ ಆಗಿಯೂ ಎಂಬತ್ತಾರು ವರ್ಷ ಬದುಕಿದ್ದ ಜು-ಯುಂಗ್, ತಮ್ಮ ಎಪ್ಪತ್ತಾರನೆಯ ವರ್ಷದಲ್ಲಿಯೂ ಸೋಲನ್ನು ಕಂಡಿದ್ದರು, ದಕ್ಷಿಣ ಕೊರಿಯಾದ ಅಧ್ಯಕ್ಷ ಚುನಾವಣೆಗೆ ನಿಂತು ಸೋತಿದ್ದರು.

ಅದೆಲ್ಲ ಸರಿ, ತನ್ನ ಮನೆಯ ಆಕಳನ್ನೇ ಕದ್ದು ಮಾರಿದ್ದು ತಪ್ಪಲ್ಲವೇ? ಅದಕ್ಕೆ ಪ್ರಾಯಶ್ಚಿತ್ತವಾಗಿ ಅವರು ಒಂದು ಸಾವಿರ ಆಕಳನ್ನು ದಾನ ಮಾಡಿದ್ದರು.

ದೇಶ ಸೇವೆಗೆ ವೆಂಕಯ್ಯ ನಾಯ್ಡು ಜೀವನ ಮುಡಿಪು

ತನ್ನಿಮಿತ್ತ
ನರೇಂದ್ರ ಮೋದಿ
ಪ್ರಧಾನಮಂತ್ರಿ
vveditoped@gmail.com

ಇಂದು, ಭಾರತದ ಮಾಜಿ ಉಪರಾಷ್ಟ್ರಪತಿ ಮತ್ತು ರಾಜಕೀಯ ಮುತ್ಸದ್ದಿ ಎಂ. ವೆಂಕಯ್ಯ ನಾಯ್ಡು ಅವರು 75 ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ನಾನು ಅವರಿಗೆ ಸುದೀರ್ಘ ಮತ್ತು ಆರೋಗ್ಯಕರ ಜೀವನವನ್ನು ಆಶಿಸುತ್ತೇನೆ ಮತ್ತು ಅವರ ಎಲ್ಲ ಹಿತೈಷಿಗಳು ಮತ್ತು ಬೆಂಬಲಿಗರಿಗೆ ನನ್ನ ಶುಭಾಶಯಗಳನ್ನು ಸಲ್ಲಿಸುತ್ತೇನೆ. ಸಮರ್ಪಣೆ, ಹೊಂದಾಣಿಕೆ ಮತ್ತು ಸಾರ್ವಜನಿಕ ಸೇವೆಗೆ ಅಚಲವಾದ ಬದ್ಧತೆಯ ನಾಯಕನನ್ನು ಸಂಭ್ರಮಿಸಲು ಇದೊಂದು ಸಂದರ್ಭವಾಗಿದೆ. ರಾಜಕೀಯ ರಂಗದಲ್ಲಿ ಅವರ ಆರಂಭಿಕ ದಿನಗಳಿಂದ ಉಪರಾಷ್ಟ್ರಪತಿಯವರೆಗೆ, ವೆಂಕಯ್ಯ ನಾಯ್ಡು ಅವರ ವೃತ್ತಿಜೀವನವು ಭಾರತ ರಾಜಕೀಯದ ಸಂಕೀರ್ಣತೆಗಳನ್ನು ಸುಲಭವಾಗಿ ಮತ್ತು ನಮ್ರತೆಯಿಂದ ಪರಿಹರಿಸುವ ಅವರ ಅನನ್ಯ ಸಾಮರ್ಥ್ಯಕ್ಕೆ ಮಾದರಿಯಾಗಿದೆ. ಅವರ ವಾಕ್ಚಾತುರ್ಯ, ಜಾಣ್ಮೆ ಮತ್ತು ಅಭಿವೃದ್ಧಿಯ ವಿಷಯಗಳ ಮೇಲಿನ ದೃಢವಾದ ಗಮನವು ಪಕ್ಷಾತೀತವಾಗಿ ಅವರಿಗೆ ಗೌರವವನ್ನು ಗಳಿಸಿಕೊಟ್ಟಿದೆ.

ವೆಂಕಯ್ಯ ನಾಯ್ಡು ಅವರು ಮತ್ತು ನಾನು ದಶಕಗಳಿಂದ ಪರಸ್ಪರ ಜೊತೆಯಲ್ಲಿದ್ದೇವೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ ಮತ್ತು ನಾನು ಅವರಿಂದ ಸಾಕಷ್ಟು ಕಲಿತಿದ್ದೇನೆ. ಅವರ ಜೀವನದಲ್ಲಿ ಸಾಮಾನ್ಯವಾದ ಒಂದು ಸಂಗತಿ ಎಂದರೆ, ಅದು ಜನರ ಮೇಲಿನ ಪ್ರೀತಿ. ಅವರ ಹೋರಾಟ ಮತ್ತು ರಾಜಕೀಯ ಜೀವನವು ಆಂಧ್ರ ಪ್ರದೇಶದಲ್ಲಿ ವಿದ್ಯಾರ್ಥಿ ನಾಯಕನಾಗಿ ಪ್ರಾರಂಭವಾಯಿತು. ಅವರ ಪ್ರತಿಭೆ, ವಾಕ್ಚಾತುರ್ಯ ಮತ್ತು ಸಂಘಟನಾ ಕೌಶಲ್ಯವನ್ನು ಪರಿಗಣಿಸಿ, ಅವರನ್ನು ಯಾವುದೇ ರಾಜಕೀಯ ಪಕ್ಷವೂ ಸ್ವಾಗತಿಸುತ್ತಿತ್ತು. ಆದರೆ ಅವರು ಸಂಘ ಪರಿವಾರದೊಂದಿಗೆ ಕೆಲಸ ಮಾಡಲು ಆದ್ಯತೆ ನೀಡಿದರು. ಏಕೆಂದರೆ ಅವರು ರಾಷ್ಟ್ರ ಮೊದಲು ಎಂಬ ದೃಷ್ಟಿಕೋನದಿಂದ ಪ್ರೇರಿತರಾಗಿದ್ದರು. ಅವರು ಆರ್‌ಎಸ್‌ಎಸ್, ಎಬಿವಿಪಿಯೊಂದಿಗೆ ಸಂಬಂಧ ಹೊಂದಿದ್ದರು ಮತ್ತು ನಂತರ ಜನಸಂಘ ಮತ್ತು ಬಿಜೆಪಿಯನ್ನು ಬಲಪಡಿಸಿದರು.

ಸುಮಾರು 50 ವರ್ಷಗಳ ಹಿಂದೆ ತುರ್ತು ಪರಿಸ್ಥಿತಿ ಹೇರಿದಾಗ, ಯುವಕ ವೆಂಕಯ್ಯಗಾರು ತುರ್ತು ಪರಿಸ್ಥಿತಿ ವಿರೋಧಿ ಚಳವಳಿಯಲ್ಲಿ ಧುಮುಕಿದರು. ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರನ್ನು ಆಂಧ್ರಪ್ರದೇಶಕ್ಕೆ ಆಹ್ವಾನಿಸಿದ್ದಕ್ಕಾಗಿ ಅವರನ್ನು ಜೈಲಿಗೆ ಹಾಕಲಾಯಿತು. ಪ್ರಜಾಪ್ರಭುತ್ವದ ಬಗೆಗಿನ ಈ ಬದ್ಧತೆಯನ್ನು ಅವರ ರಾಜಕೀಯ ಜೀವನದಲ್ಲಿ ಮತ್ತೆ ಮತ್ತೆ ಕಾಣಬಹುದು. 1980 ರ ದಶಕದ ಮಧ್ಯಭಾಗದಲ್ಲಿ, ಮಹಾನ್ ನಾಯಕ ಎನ್‌ಟಿಆರ್ ಅವರ ಸರಕಾರವನ್ನು ಕಾಂಗ್ರೆಸ್ ಅನಾವಶ್ಯಕವಾಗಿ ವಜಾಗೊಳಿಸಿದಾಗ, ಅವರು ಮತ್ತೆ ಪ್ರಜಾಪ್ರಭುತ್ವದ ಆದರ್ಶಗಳನ್ನು ರಕ್ಷಿಸುವ ಚಳವಳಿಯ ಮುಂಚೂಣಿಯಲ್ಲಿದ್ದರು.

ವೆಂಕಯ್ಯ ನಾಯ್ಡು ಅವರು ಯಾವಾಗಲೂ ಅಗಾಧವಾದ ಅಲೆಗಳ ವಿರುದ್ಧ ಈಜುವುದನ್ನು ಇಷ್ಟಪಡುತ್ತಾರೆ. 1978ರಲ್ಲಿ, ಆಂಧ್ರಪ್ರದೇಶವು ಕಾಂಗ್ರೆಸ್‌ಗೆ ಮತ ಹಾಕಿತು, ಆದರೆ ಅವರು ಆ ಪ್ರವೃತ್ತಿಯನ್ನು ಸೋಲಿಸಿ, ಯುವ ಶಾಸಕರಾಗಿ ಆಯ್ಕೆಯಾದರು. ಐದು ವರ್ಷಗಳ ನಂತರ, ಎನ್‌ಟಿಆರ್ ಸುನಾಮಿ ರಾಜ್ಯವನ್ನು ಆವರಿಸಿದಾಗಲೂ, ಅವರು ಬಿಜೆಪಿ ಶಾಸಕರಾಗಿ ಆಯ್ಕೆಯಾದರು, ಹೀಗಾಗಿ ರಾಜ್ಯಾದ್ಯಂತ ಬಿಜೆಪಿಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟರು.

ವೆಂಕಯ್ಯ ನಾಯ್ಡು ಅವರ ಮಾತು ಕೇಳಿದವರೆಲ್ಲ ಅವರ ವಾಕ್ಚಾತುರ್ಯವನ್ನು ಮೆಲುಕು ಹಾಕುತ್ತಾರೆ. ಅವರು ನಿಸ್ಸಂಶಯವಾಗಿ ಮಾತಿನ ಮೋಡಿಗಾರರಾಗಿದ್ದಾರೆ, ಆದರೆ ಅದಕ್ಕಿಂತ ಹೆಚ್ಚಾಗಿ ಅವರು ಕೆಲಸಗಾರರಾಗಿದ್ದಾರೆ. ಅವರು ಯುವ ಶಾಸಕರಾಗಿದ್ದ ದಿನಗಳಿಂದ, ಶಾಸಕಾಂಗ ವ್ಯವಹಾರಗಳಲ್ಲಿ ಮತ್ತು ತಮ್ಮ ಕ್ಷೇತ್ರದ ಜನರಿಗಾಗಿ ಕಠಿಣವಾಗಿ ಮಾತನಾಡಿದ್ದಕ್ಕಾಗಿ ಅವರನ್ನು ಗೌರವಿಸಲು ಪ್ರಾರಂಭಿಸಲಾಯಿತು. ಎನ್‌ಟಿಆರ್‌ರಂತಹ ಧೀಮಂತರು ಅವರ ಪ್ರತಿಭೆಯನ್ನು ಗಮನಿಸಿದರು ಮತ್ತು ಅವರು ತಮ್ಮ ಪಕ್ಷಕ್ಕೆ ಸೇರಬೇಕೆಂದು ಬಯಸಿದ್ದರು. ಆದರೆ ವೆಂಕಯ್ಯ ಅವರು ತಮ್ಮ ಮೂಲ ಸಿದ್ಧಾಂತದಿಂದ ವಿಮುಖರಾಗಲಿಲ್ಲ. ಅವರು ಆಂಧ್ರಪ್ರದೇಶದಲ್ಲಿ ಬಿಜೆಪಿಯನ್ನು ಬಲಪಡಿಸುವಲ್ಲಿ ದೊಡ್ಡ ಪಾತ್ರವನ್ನು ವಹಿಸಿದರು, ಹಳ್ಳಿ-ಹಳ್ಳಿಗಳನ್ನು ಸುತ್ತಿ ಸಮಾಜದ ಎಲ್ಲ ವರ್ಗಗಳ ಜನರೊಂದಿಗೆ ಸಂಪರ್ಕ ಸಾಧಿಸಿದರು. ಅವರು ವಿಧಾನ ಸಭೆಯಲ್ಲಿ ಪಕ್ಷವನ್ನು ಮುನ್ನಡೆಸಿದರು ಮತ್ತು ಆಂಧ್ರ ಪ್ರದೇಶದಲ್ಲಿ ಬಿಜೆಪಿಯ ಅಧ್ಯಕ್ಷರಾದರು.

1990 ರ ದಶಕದಲ್ಲಿ ಬಿಜೆಪಿಯ ಕೇಂದ್ರ ನಾಯಕತ್ವವು ವೆಂಕಯ್ಯ ಅವರ ಪ್ರಯತ್ನಗಳನ್ನು ಗಮನಿಸಿತು ಮತ್ತು 1993 ರಲ್ಲಿ ಅವರು ಪಕ್ಷದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಾಗ ರಾಷ್ಟ್ರ ರಾಜಕೀಯದಲ್ಲಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಹದಿಹರೆಯದವರಾಗಿದ್ದಾಗ ಅಟಲ್ ಜಿ ಮತ್ತು ಅಡ್ವಾಣಿ ಜಿ ಅವರ ಭೇಟಿಗಳ ಬಗ್ಗೆ ಘೋಷಣೆ ಕೂಗುತ್ತಿದ್ದ ವ್ಯಕ್ತಿಯೊಬ್ಬರು ಅವರೊಂದಿಗೆ ನೇರವಾಗಿ ಕೆಲಸ ಮಾಡುವಂತಾದದ್ದು ನಿಜಕ್ಕೂ ಅದ್ಭುತವಾದ ಕ್ಷಣವಾಗಿತ್ತು. ಅವರು ಪ್ರಧಾನ ಕಾರ್ಯದರ್ಶಿಯಾಗಿ, ನಮ್ಮ ಪಕ್ಷವನ್ನು ಅಧಿಕಾರಕ್ಕೆ ತರುವುದು ಹೇಗೆ ಮತ್ತು ರಾಷ್ಟ್ರವು ಮೊದಲ ಬಿಜೆಪಿ ಪ್ರಧಾನಿಯನ್ನು ಪಡೆಯುವುದು ಹೇಗೆ ಎಂಬುದರ ಬಗ್ಗೆ ಗಮನಹರಿಸಿದ್ದರು. ದೆಹಲಿಗೆ ತೆರಳಿದ ನಂತರ ಹಿಂತಿರುಗಿ ನೋಡದೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಗಾದಿಗೆ ಏರಿದರು. 2000ದಲ್ಲಿ, ಅಟಲ್ ಜಿ ಅವರು ವೆಂಕಯ್ಯ ನಾಯ್ಡು ಅವರನ್ನು ಸಚಿವರಾಗಿ ಸರಕಾರಕ್ಕೆ ಸೇರಿಸಿಕೊಳ್ಳಲು ಬಯಸಿದಾಗ, ವೆಂಕಯ್ಯ ಅವರು ತಕ್ಷಣವೇ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಬಗೆಗಿನ ತಮ್ಮ ಆದ್ಯತೆಯನ್ನು ತಿಳಿಸಿದರು. ಇದು ಅಟಲ್ ಜೀ ಸೇರಿದಂತೆ ಎಲ್ಲರನ್ನೂ ಗೊಂದಲಕ್ಕೊಳಪಡಿಸಿತು. ಇಲ್ಲಿ ಒಬ್ಬ ನಾಯಕನಿಗೆ ಯಾವ ಖಾತೆ ಬೇಕು ಎಂದು ಕೇಳಲಾಯಿತು ಮತ್ತು ಅವರ ಮೊದಲ ಆಯ್ಕೆ ಗ್ರಾಮೀಣಾಭಿವೃದ್ಧಿಯಾಗಿತ್ತು. ಆದರೆ, ವೆಂಕಯ್ಯ ಅವರು ಸ್ಪಷ್ಟವಾಗಿದ್ದರು- ಅವರೊಬ್ಬ ರೈತನ ಮಗ, ಅವರು ತಮ್ಮ ಆರಂಭಿಕ ದಿನಗಳನ್ನು ಹಳ್ಳಿಗಳಲ್ಲಿ ಕಳೆದವರು ಮತ್ತು ಅವರು ಕೆಲಸ ಮಾಡಲು ಬಯಸಿದ್ದು ಗ್ರಾಮೀಣಾಭಿವೃದ್ಧಿಯಾಗಿತ್ತು. ಸಚಿವರಾಗಿ, ಅವರು 'ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆ'ಯ ಪರಿಕಲ್ಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಹಲವು ವರ್ಷಗಳ ನಂತರ, 2014 ರ ಎನ್‌ಡಿಎ ಸರಕಾರವು ಅಧಿಕಾರ ವಹಿಸಿಕೊಂಡಾಗ, ಅವರು ನಗರಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನೆಯಂತಹ ನಿರ್ಣಾಯಕ ಖಾತೆಗಳನ್ನು ನಿರ್ವಹಿಸಿದರು. ಅವರ ಅಧಿಕಾರಾವಧಿಯಲ್ಲಿ ನಾವು ಪ್ರಮುಖವಾದ ಸ್ವಚ್ಛ ಭಾರತ್ ಮಿಷನ್ ಮತ್ತು ಪ್ರಮುಖ ನಗರಾಭಿವೃದ್ಧಿ

ಸಂಬಂಧಿತ ಯೋಜನೆಗಳನ್ನು ಪ್ರಾರಂಭಿಸಿದೆವು. ಪ್ರಾಯಶಃ, ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಎರಡರಲ್ಲೂ ಇಷ್ಟೊಂದು ವ್ಯಾಪಕ ಅವಧಿಗೆ ಶ್ರಮಿಸಿದ ಏಕೈಕ ನಾಯಕರು ಅವರು.

ನಾನು 2014 ರಲ್ಲಿ ದೆಹಲಿಗೆ ಬಂದಾಗ, ನಾನು ರಾಷ್ಟ್ರ ರಾಜಧಾನಿಗೆ ಹೊರಗಿನವನಾಗಿದ್ದೆ, ಹಿಂದಿನ ಒಂದೂವರೆ ದಶಕಗಳಿಂದ ಗುಜರಾತ್‌ನಲ್ಲಿ ಕೆಲಸ ಮಾಡಿದ್ದೆ. ಅಂತಹ ಸಮಯದಲ್ಲಿ, ವೆಂಕಯ್ಯ ಅವರ ಒಳನೋಟಗಳು ತುಂಬಾ ಉಪಯುಕ್ತವಾದವು. ಅವರು ಪರಿಣಾಮಕಾರಿ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು – ಅವರು ದ್ವಿಪಕ್ಷೀಯತೆಯ ವೈಶಿಷ್ಟ್ಯವನ್ನು ತಿಳಿದಿದ್ದರು, ಅದೇ ಸಮಯದಲ್ಲಿ ಸಂಸದೀಯ ನಡವಳಿಕೆ ಮತ್ತು ನಿಯಮಗಳ ವಿಷಯಕ್ಕೆ ಬಂದಾಗ ಕಟ್ಟುನಿಟ್ಟಾಗಿದ್ದರು.

2017ರಲ್ಲಿ, ನಮ್ಮ ಮೈತ್ರಿಕೂಟವು ಅವರನ್ನು ನಮ್ಮ ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ಘೋಷಣೆ ಮಾಡಿತು. ನಾವು ಸಂದಿಗ್ಧತೆಗೆ ಸಿಲುಕಿದ್ದೆವು – ವೆಂಕಯ್ಯ ಅವರಂತಹ ದೊಡ್ಡ ವ್ಯಕ್ತಿತ್ವವನ್ನು ತುಂಬುವುದು ಹೇಗೆ ಎಂದು ನಾವು ಯೋಚಿಸಿದೆವು, ಆದರೆ ಅದೇ ಸಮಯದಲ್ಲಿ, ಉಪರಾಷ್ಟ್ರಪತಿ ಸ್ಥಾನಕ್ಕೆ ಅವರಿಗಿಂತ ಉತ್ತಮ ಅಭ್ಯರ್ಥಿ ಇಲ್ಲ ಎಂದು ನಮಗೆ ತಿಳಿದಿತ್ತು. ಸಚಿವ ಸ್ಥಾನ ಹಾಗೂ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ ಅವರು ಮಾಡಿದ ಭಾಷಣವನ್ನು ಮರೆಯಲು ನನಗೆ ಸಾಧ್ಯವೇ ಇಲ್ಲ. ಪಕ್ಷದ ಜೊತೆಗಿನ ಒಡನಾಟ ಮತ್ತು ಅದನ್ನು ಕಟ್ಟುವ ಪ್ರಯತ್ನಗಳನ್ನು ನೆನಪಿಸಿಕೊಂಡಾಗ ಅವರಿಗೆ ಕಣ್ಣೀರನ್ನು ತಡೆಯಲಾಗಲಿಲ್ಲ. ಇದು ಅವರ ಆಳವಾದ ಬದ್ಧತೆ ಮತ್ತು ಹಂಬಲದ ಒಂದು ನೋಟವನ್ನು ನೀಡಿತು. ಉಪರಾಷ್ಟ್ರಪತಿಯಾದ ಮೇಲೆ ತಮ್ಮ ಕಚೇರಿಯ ಘನತೆಯನ್ನು ಹೆಚ್ಚಿಸುವ ಹಲವಾರು ಕ್ರಮಗಳನ್ನು ಕೈಗೊಂಡರು. ಅವರು ರಾಜ್ಯಸಭೆಯ ಅತ್ಯುತ್ತಮ ಸಭಾಪತಿಯಾಗಿದ್ದರು, ಯುವ ಸಂಸದರು, ಮಹಿಳಾ ಸಂಸದರು ಮತ್ತು ಮೊದಲ ಬಾರಿಯ ಸಂಸದರಿಗೆ ಮಾತನಾಡಲು ಅವಕಾಶ ಸಿಗುವಂತೆ ಮಾಡಿದರು. ಅವರು ಹಾಜರಾತಿಗೆ ಹೆಚ್ಚಿನ ಒತ್ತು ನೀಡಿದರು, ಸಮಿತಿಗಳನ್ನು ಹೆಚ್ಚು ಪರಿಣಾಮಕಾರಿ ಯಾಗಿಸಿದರು ಮತ್ತು ಸದನದಲ್ಲಿ ಚರ್ಚೆಯ ಮಟ್ಟವನ್ನು ಹೆಚ್ಚಿಸಿದರು.

370 ಮತ್ತು 35(ಎ) ವಿಧಿಗಳನ್ನು ರದ್ದು ಮಾಡುವ ನಿರ್ಧಾರವನ್ನು ರಾಜ್ಯಸಭೆಯಲ್ಲಿ ಮಂಡಿಸಿದಾಗ, ವೆಂಕಯ್ಯ ಅವರು ಸಭಾಪತಿ ಪೀಠದಲ್ಲಿದ್ದರು. ಇದು ಅವರಿಗೆ ಭಾವನಾತ್ಮಕ ಕ್ಷಣವಾಗಿತ್ತು ಎಂದು ನನಗೆ ಖಾತ್ರಿಯಿದೆ- ಡಾ. ಶ್ಯಾಮಪ್ರಸಾದ್ ಮುಖರ್ಜಿಯವರ ಅಖಂಡ ಭಾರತದ ಕನಸಿನಿಂದ ಆಕರ್ಷಿತನಾದ ಯುವಕನೊಬ್ಬ ಅಂತಿಮವಾಗಿ ಅದನ್ನು ಸಾಧಿಸಿದಾಗ ಸಭಾಪತಿಯ ಪೀಠದಲ್ಲಿದ್ದರು.

ಕೆಲಸ ಮತ್ತು ರಾಜಕೀಯದ ಹೊರತಾಗಿ, ವೆಂಕಯ್ಯ ಅವರು ಅಪಾರ ಹಸಿವಿನ ಓದುಗ ಮತ್ತು ಬರಹಗಾರ ಕೂಡ. ದೆಹಲಿಯ ಜನರು ಅವರನ್ನು ನಗರಕ್ಕೆ ವೈಭವದ ತೆಲುಗು ಸಂಸ್ಕೃತಿಯನ್ನು ತಂದ ವ್ಯಕ್ತಿ ಎಂದು ಕರೆಯುತ್ತಾರೆ. ಅವರ ಯುಗಾದಿ ಮತ್ತು ಸಂಕ್ರಾಂತಿ ಕಾರ್ಯಕ್ರಮಗಳು ನಗರದ ಅತ್ಯಂತ ಪ್ರೀತಿಯ ಕೂಟಗಳು. ನಾನು ಯಾವಾಗಲೂ ವೆಂಕಯ್ಯ ಅವರನ್ನು ಆಹಾರವನ್ನು ಇಷ್ಟಪಡುವ ಮತ್ತು ಜನರಿಗೆ ಆತಿಥ್ಯ ನೀಡುವ ವ್ಯಕ್ತಿ ಎಂದು ತಿಳಿದಿದ್ದೇನೆ. ಆದರೆ, ತಡವಾಗಿ, ಅವರ ಆಹಾರದಲ್ಲಿನ ಸ್ವಯಂ ನಿಯಂತ್ರಣವು ಎಲ್ಲರಿಗೂ ಗೋಚರಿಸುತ್ತದೆ. ಅವರು ಇನ್ನೂ ಬ್ಯಾಡ್ಮಿಂಟನ್ ಆಡುತ್ತಾರೆ ಮತ್ತು ಚುರುಕಾದ ನಡಿಗೆಯನ್ನು ಹೇಗೆ ಆನಂದಿಸುತ್ತಾರೆ ಎಂಬುದರಲ್ಲಿಯೇ ಅವರ ಫಿಟ್ನೆಸ್ ಬಗೆಗಿನ ಬದ್ಧತೆಯನ್ನು ಕಾಣಬಹುದು.

ಉಪರಾಷ್ಟ್ರಪತಿಯಾದ ನಂತರವೂ ವೆಂಕಯ್ಯ ಅವರು ಸಕ್ರಿಯ ಸಾರ್ವಜನಿಕ ಜೀವನವನ್ನು ನಡೆಸಿದರು. ಅವರು ಇಷ್ಟದ ವಿಷಯಗಳ ಬಗ್ಗೆ ಅಥವಾ ರಾಷ್ಟ್ರದಾದ್ಯಂತ ನಡೆಯುವ ವಿವಿಧ ಬೆಳವಣಿಗೆಗಳ ಬಗ್ಗೆ, ಅವರು ನನಗೆ ಕರೆ ಮಾಡಿ ಕೇಳುತ್ತಾರೆ. ಇತ್ತೀಚೆಗಷ್ಟೇ ನಮ್ಮ ಸರಕಾರ ಮೂರನೇ ಅವಧಿಗೆ ಅಧಿಕಾರಕ್ಕೆ ಬಂದಾಗ ನಾನು ಅವರನ್ನು ಭೇಟಿಯಾಗಿದ್ದೆ. ಅವರು ಸಂತೋಷಪಟ್ಟರು ಮತ್ತು ನನಗೆ, ನಮ್ಮ ತಂಡಕ್ಕೆ ತಮ್ಮ ಶುಭಾಶಯಗಳನ್ನು ತಿಳಿಸಿದರು. 75 ನೇ ವಸಂತದ ಈ ಮೈಲಿಗಲ್ಲಿಗಾಗಿ ಮತ್ತೊಮ್ಮೆ ಅವರಿಗೆ ಶುಭ ಹಾರೈಸುತ್ತೇನೆ. ಯುವ ಕಾರ್ಯಕರ್ತರು, ಚುನಾಯಿತ ಪ್ರತಿನಿಧಿಗಳು ಮತ್ತು ಸೇವೆ ಮಾಡುವ ಉತ್ಸಾಹ ಹೊಂದಿರುವ ಎಲ್ಲರೂ ಅವರ ಬದುಕಿನಿಂದ ಕಲಿಯುತ್ತಾರೆ ಮತ್ತು ಆ ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂದು ನಾನು ಆಶಿಸುತ್ತೇನೆ. ಅವರಂತಹ ನಾಯಕರು ನಮ್ಮ ದೇಶವನ್ನು ಉತ್ತಮವಾಗಿಸುತ್ತಾರೆ ಮತ್ತು ಹೆಚ್ಚು ರೋಮಾಂಚಕವಾಗಿಸುತ್ತಾರೆ.

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಬಿಜೆಪಿಗೆ ಬೆವರು!



ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಅಧಿಕಾರ ಸ್ವೀಕರಿಸಿದ ನಂತರ ರಾಹುಲ್ ಗಾಂಧಿ ಅವರ ಹವಾ ಬದಲಾಗಿದೆ ಅಂತೆ. ಮೊದಲೆಲ್ಲ 'ಪಪ್ಪು' 'ಶೆಹಝಾದಾ' ಎಂದು ಮೂದಲಿಸುತ್ತಿದ್ದ ಬಿಜೆಪಿಗರು, ಇಂದು ರಾಹುಲ್ ಗಾಂಧಿ ಹವಾಕ್ಕೆ ಸೈಲೆಂಟ್ ಆಗುತ್ತಿದ್ದಾರಂತೆ. ಹಾಗೇ ಹಲವಾರು ಬಿಜೆಪಿಗರು 'ರಾಹುಲ್ ಗಾಂಧಿ ವಿರೋಧ ಪಕ್ಷದ ನಾಯಕರಾಗಿ ತುಂಬಾ ಚೆನ್ನಾಗಿಯೇ ಕೆಲಸ ಮಾಡುತ್ತಿದ್ದಾರೆ' ಎಂದು ಗುಸುಗುಸು ನಡೆಸಿದ್ದಾರಂತೆ. ಶುಕ್ರವಾರ, ನೀಟ್ ಬಗೆಗಿನ ಚರ್ಚೆಗೆ ಆಸ್ಪದ ಕೊಡದೆ, ಸದನ ಮುಂದೂಡಿದ ನಂತರ. ರಾಹುಲ್ ಗಾಂಧಿ ಮತ್ತು ಹಲವು ಕಾಂಗ್ರೆಸ್ ನಾಯಕರು ಹೊಸ ಪಾರ್ಲಿಮೆಂಟ್‌ನ ಕಾರಿಡಾರ್‌ಗಳಲ್ಲಿ ನಡೆದು ಕ್ಯಾಂಟೀನ್‌ಗೆ ಹೋಗುತ್ತಿದ್ದ ಸಮಯದಲ್ಲಿ ಹಲವಾರು ಬಿಜೆಪಿ ನಾಯಕರು ಬಂದು ಅವರನ್ನು ಭೇಟೀಯೂ ಆದರಂತೆ. ಆಗ ರಾಹುಲ್ ಗಾಂಧಿ ಮುಗುಳ್ನಕ್ಕು ಅವರ ಜೊತೆ ಮತನಾಡಿ ಹ್ಯಾಂಡ್ ಶೇಕ್ ಅನ್ನೂ ಮಾಡಿದರಂತೆ. ಅದಾದ ನಂತರ ಬಿಜೆಪಿ ನಾಯಕರು ಪ್ರಿಯಾಂಕಾ ಗಾಂಧಿ ವಾದ್ರಾ, ವಯಾನಾಡ್‌ನಿಂದ ಗೆದ್ದರೆ, ಪಾರ್ಲಿಮೆಂಟ್‌ನಲ್ಲಿ ಮತ್ತೆ ಯಾವರೀತಿಯ ಸೀನ್‌ಗಳು ಬರಬಹುದು ಎಂದು ಬೆವರೊರಸಿಕೊಂಡರಂತೆ.

ಲಾಲೂ ರಾಮ ಭಕ್ತಿ

ರಾಷ್ಟ್ರೀಯ ಜನತಾದಳದ ನಾಯಕ ಲಾಲೂ ಪ್ರಸಾದ್ ಯಾದವ್ ಅವರು ರಾಮ ಮಂದಿರದ ಗರ್ಭಗುಡಿಯಲ್ಲಿ ಮಳೆ ಹನಿ ತೊಟ್ಟಿಕ್ಕುತ್ತಿರುವ ಬಗ್ಗೆ ತನಿಖೆಯಾಗಬೇಕೆಂದು ಆಗ್ರಹಿಸುತ್ತಿದ್ದಾರೆ. ಬರೀ ರಾಮ ಮಂದಿರದ ಗರ್ಭಗುಡಿ ಅಲ್ಲದೇ ಮಂದಿರ ದಾರಿ ರಾಮ ಪಥದಲ್ಲಿ ಗುಂಡಿಗಳು ಹಾಗೂ ಅಯೋಧ್ಯ ಧಾಮ ರೈಲ್ವೇ ಸ್ಟೇಷನ್ನಿನ ಗೋಡೆಯೂ ಬಿದ್ದಿದೆ. ಇದೆಲ್ಲದರ ಬಗ್ಗೆ ಹೇಳಿಕೆ ನೀಡಿರುವ ಅವರು, 'ಅವರು (ಬಿಜೆಪಿ) ಪ್ರಭು ರಾಮನನ್ನೂ ಬಿಟ್ಟಿಲ್ಲ, ದೇವಸ್ಥಾನದ ಮುಖ್ಯ ಅರ್ಚ ಕರೇ 2025 ಜುಲೈನ ವರೆಗೂ ಕಟ್ಟಡದ ಪೂರ್ತಿ ನಿರ್ಮಾಣ ಸಾಧ್ಯವಿಲ್ಲ. ಆದರೆ, ಚುನಾವಣೆಗಾಗಿ ಜನರ ಭಾವನೆಗಳ ಜೊತೆ ಚೆಲ್ಲಾಟವಾಡಿ ಮಂದಿರದ ಉದ್ಘಾಟನೆ ಮಾಡಿದರು.' ಎಂದು ಹೇಳಿರುವ ಹೇಳಿಕೆ ಯನ್ನು ಒತ್ತಿ ಹೇಳಿದ ಲಾಲೂ, 'ಇದರಿಂದಲೇ ಗೊತ್ತಾಗುತ್ತೆ, ಬಿಜೆಪಿ ಏಕೆ ಫರಿದಾಬಾದ್ (ಆಯೋಧ್ಯಾ ನಗರಿ ಇರುವ ಜಿಲ್ಲೆ)ನಲ್ಲಿ ಸೋತಿದೆ ಎಂದು. ಇದೆಲ್ಲದರ ಬಗ್ಗೆ ತನಿಖೆಯಾಗಬೇಕು, ಇದಕ್ಕೆ ಕಾರಣರಾದವರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಶೆಡ್ಡಿಗೆ ಬಾ!

ಮೊದಲೆಲ್ಲ ಬೆಂಗಳೂರಿಗೆ ಬರುವವರನ್ನು, ಮನೆಗೆ ಕರೆಯುತ್ತಿದ್ದ ಜನರು ಈಗ ಶೆಡ್ಡಿಗೆ ಕರೆಯುತ್ತಿದ್ದಾರಂತೆ. ಏನೇ ವಿಷಯವಿದ್ದರೂ 'ಶೆಡ್ಡಿಗೆ ಬಾ' ಅನ್ನುವುದು ತುಂಬಾ ಕಾಮನ್ ಆಗಿರುವ ಮಾತಾಗಿದೆ. ಹಾಗೇ ನಾರದರು ವಿಧಾನಸಭೆಯ ಪಡಸಾಲೆಯಲ್ಲಿ ಕೆಲಸವಿಲ್ಲದೇ ಕುಳಿತಾಗ, ರಾಜ್ಯ ರಾಜಕೀಯದ ಬಗ್ಗೆ ಕೆಲವರು ಮಾತನಾಡುತ್ತಿದ್ದ ಮಾತುಗಳನ್ನು ಕೇಳಿಸಿಕೊಂಡಿದ್ದಾರೆ. ಅವರ ಮಾತಿನಲ್ಲಿ ಸಿದ್ದರಾಮಯ್ಯರ ಮುಖ್ಯಮಂತ್ರಿ ಸ್ಥಾನಕ್ಕೆ ಕುತ್ತು ತರುವ ಮಾತಾಡುವವರನ್ನು ಅವರು ಶೆಡ್ಡಿಗೆ ಕರೆಯುತ್ತಾರೋ? ರೆಸಾರ್ಟ್‌ಗೆ ಕರೆಯುತ್ತಾರೋ ಎಂಬುದೇ ಅವರ ಮಾತಿನ ದೊಡ್ಡ ಪ್ರಶ್ನೆಯಾಗಿತ್ತು.

ನಾರಾಯಣ ನಾರಾಯಣ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 189

ಸಮಾಚಾರ ಸಣ್ಣದಲ್ಲ

ಜಾರ್ಖಂಡ್: ನಿರ್ಮಾಣ ಹಂತದ ಸೇತುವೆ ಕುಸಿತ

ಗಿರಿದಿಹ್: ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಧಾರಾಕಾರ ಭಾರಿ ಮಳೆಯಾಗುತ್ತಿದೆ. ಜಾರ್ಖಂಡ್‌ನಲ್ಲಿನ ಮಳೆ ಆರ್ಭಟದಿಂದಾಗಿ ನಿರ್ಮಾಣ ಹಂತದ ಸೇತುವೆಯೊಂದು ಶನಿವಾರ ರಾತ್ರಿ ನೆಲಕ್ಕುರುಳಿದೆ. ಜಾರ್ಖಂಡ್ ರಾಜ್ಯದ ಗಿರಿದಿಹ್ ನಗರದಲ್ಲಿ ಅರ್ಗಾ ನದಿಯ ಮೇಲೆ ಡುಮ್ಮ್ರತೋಲಾ ಮತ್ತು ಕರಿಪಾಹ್ರಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು 5 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದ ಸೇತುವೆ ಮಳೆಯಿಂದಾಗಿ ಕುಸಿದಿದೆ. ಯಾವುದೇ ಪ್ರಾಣ ಹಾನಿ ವರದಿಯಾಗಿಲ್ಲ. ಮರು ನಿರ್ಮಾಣಕ್ಕೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರ ವಿನಯ್ ಕುಮಾರ್ ತಿಳಿಸಿದ್ದಾರೆ. ಬಿಹಾರದಲ್ಲಿಯೂ ಇತ್ತೀಚೆಗೆ 9 ದಿನಗಳ ಅಂತರದಲ್ಲಿ ಒಟ್ಟು 5 ಸೇತುವೆಗಳು ಕುಸಿದಿವೆ.

ಮಹಾರಾಷ್ಟ್ರ ಜಲಪಾತ: 5 ಪ್ರವಾಸಿಗರ ಸಾವು

ಪುಣೆ: ಮಹಾರಾಷ್ಟ್ರದ ಪುಣೆ ಸಮೀಪದ ಲೋನಾವಾಲಾ ಪ್ರದೇಶದಲ್ಲಿರುವ ಭೂಷಿ ಅಣೆಕಟ್ಟೆ ವೀಕ್ಷಣೆಗೆ ಬಂದಿದ್ದ ಐವರು ಪ್ರವಾಸಿಗರ ತಂಡ, ಬಳಿಕ ಹಿನ್ನೀರಿನಲ್ಲಿ ನೀರಿನಲ್ಲಿ ಆಟವಾಡಲು ಮುಂದಾಗಿ ಜೀವವನ್ನೇ ಕಳೆದುಕೊಂಡಿದೆ. ಭಾನುವಾರ ಮಧ್ಯಾಹ್ನ 3ರ ವೇಳೆ ಅವಘಡ ನಡೆದಿದೆ. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿರುವ ಲೋನಾವಾಲಾ ಠಾಣೆ ಪೊಲೀಸರು, ಮೃತದೇಹಗಳನ್ನು ಮೇಲಕ್ಕೆ ತರಲು ಸ್ಥಳೀಯರ ನೆರವಿನಲ್ಲಿ ಶ್ರಮಿಸುತ್ತಿದ್ದಾರೆ.

ರಿಯಾಸಿ ದಾಳಿ; ಎನ್‌ಐಎ ಶೋಧ

ಶ್ರೀನಗರ: ಜಮ್ಮು-ಕಾಶ್ಮೀರದ ರಿಯಾಸಿ ಪ್ರದೇಶದಲ್ಲಿ ಜೂ.9ರಂದು ಹಿಂದೂ ಯಾತ್ರಾರ್ಥಿಗಳ ಬಸ್ ಮೇಲಿನ ಭಯೋತ್ಪಾದಕರ ದಾಳಿ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕಾಶ್ಮೀರದಲ್ಲಿ 5 ಕಡೆ ಭಾನುವಾರ ಶೋಧ ನಡೆಸಿದೆ. ಜಿಲ್ಲೆಯಲ್ಲಿ ಉಗ್ರರ ಪತ್ತೆಗೆ ಎನ್‌ಐಎ ಅಧಿಕಾರಿಗಳ ತಂಡ ಭಾನುವಾರ ಶೋಧ ನಡೆಸಿದ್ದು, ಭಯೋತ್ಪಾದಕರು ಹಾಗೂ ಭೂಗತ ಕೆಲಸಗಾರರ ನಡುವೆ ಸಂಪರ್ಕ ಕಲ್ಪಿಸುವ ಅನೇಕ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿದೆ. ವಸ್ತುಗಳ ಕೂಲಂಕಶ ಪರಿಶೀಲನೆ ನಡೆಯುತ್ತಿದೆ ಎಂದು ಎನ್‌ಐಎ ಹೇಳಿಕೆಯಲ್ಲಿ ತಿಳಿಸಿದೆ. ದಾಳಿ ಸಂಬಂಧ ಜೂ.19ರಂದು ಬಂಧಿಸಲಾದ ಉಗ್ರ, ಹಕಮ್ ಖಾನ್ ನೀಡಿದ ಮಾಹಿತಿ ಮೇರೆಗೆ ಎನ್‌ಐಎ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ. ಖಾನ್ ಉಗ್ರರಿಗೆ ಅಗತ್ಯ ವಸ್ತುಗಳನ್ನು ಪೂರೈಸಿದ್ದ. ಅಲ್ಲದೇ, 6 ಸಾವಿರ ರು. ಹಣ ಪಡೆದು ಮನೆಯಲ್ಲಿ ತಂಗಲು ವ್ಯವಸ್ಥೆಯನ್ನೂ ಮಾಡಿಕೊಟ್ಟಿದ. ಉಗ್ರರಿಗೆ ದಾಳಿ ನಡೆಸಲು ಅನುಕೂಲ ಮಾಡಿಕೊಟ್ಟಿದ್ದ ಎಂದು ಆರೋಪಿಸಲಾಗಿದೆ.

ಗೂಗಲ್ ನಕ್ಷೆ ನಂಬಿದ್ದಕ್ಕೆ ಕಾರು ಸಮೇತ ನದಿಗೆ!

ಕಾಸರಗೋಡು: ಗೂಗಲ್ ನಕ್ಷೆ ನಂಬಿಕೊಂಡು ಕಾರು ಚಲಾಯಿಸಿದ್ದಕ್ಕೆ ಕಾರಿನ ಸಮೇತ ನದಿಗೆ ಬಿದ್ದ ಮತ್ತೊಂದು ಘಟನೆ ಕೇರಳದಲ್ಲಿ ನಡೆದಿದೆ. ಕಾಸರಗೋಡಿನ ಪಲ್ಲಂಚಿಯಲ್ಲಿ ಉಕ್ಕಿ ಹರಿಯುತ್ತಿರುವ ನದಿಗೆ ಉರುಳಿದ ಕಾರಿನಲ್ಲಿದ್ದ ಯುವಕರನ್ನು ಅಗ್ನಿಶಾಮಕ ದಳ ಸಿಬ್ಬಂದಿ ಮತ್ತು ಸ್ಥಳೀಯರು ರಕ್ಷಿಸಿದ್ದಾರೆ. ಆಸ್ಪತ್ರೆ ದಾರಿ ಗೊತ್ತಿಲ್ಲದಕ್ಕೆ ಗೂಗಲ್ ಮ್ಯಾಪ್ ಬಳಸಿದ ಹೈದರಾಬಾದ್ ಮೂಲದ ಯುವಕರಿಬ್ಬರು, ಅದನ್ನೇ ನಂಬಿಕೊಂಡು ಕಾರು ಚಲಾಯಿಸುತ್ತಾ ಸಾಗಿದ್ದಾರೆ. ಕಡೆಗೆ ಕಾರು ಉಕ್ಕಿ ಹರಿಯುತ್ತಿದ್ದ ನದಿಗೆ ಬಿದ್ದಿದೆ. ಅದೃಷ್ಟವಶಾತ್ ಯುವಕರಿಬ್ಬರು ಅಪಾಯದಿಂದ ಪಾರಾಗಿದ್ದಾರೆ. ಗೂಗಲ್ ನಕ್ಷೆ ತಪ್ಪು ದಾರಿ ತೋರಿರುವುದು ಮೊದಲೇನೂ ಅಲ್ಲ. ಮೇ 24ರಂದು ಹೈದರಾಬಾದ್‌ನಿಂದ ಬಂದಿದ್ದ ಪ್ರವಾಸಿಗರ ತಂಡ ಕೊಟ್ಟಾಯಂ ಕುರುಪ್ಪಂತಾರ ಬಳಿ ನದಿಗೆ ವಾಹನ ಓಡಿಸಿತ್ತು. ಪೊಲೀಸ್ ಗಸ್ತು ಘಟಕ-ಸ್ಥಳೀಯರು ಶ್ರಮಿಸಿ ನಾಲ್ವರು ಪ್ರವಾಸಿಗರನ್ನು ರಕ್ಷಿಸಿದ್ದರು. ಆದರೆ, ಅವರ ವಾಹನ ಸಂಪೂರ್ಣವಾಗಿ ಮುಳುಗಿತ್ತು.

ದಂಗೆ ಘೋಷಿಸಿದ ಹೇಮಂತ್ ಸೊರೆನ್

ರಾಂಚಿ: ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆ ಆಗುತ್ತಲೇ ಕೇಂದ್ರ ಸರಕಾರ ಮತ್ತು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ಆರಂಭಿಸಿರುವ ಜಾರ್ಖಂಡ್ ಮಾಜಿ ಮುಖ್ಯಮಂತ್ರಿ, ಜೆಎಂಎಂ ಮುಖಂಡ ಹೇಮಂತ್ ಸೊರೆನ್, ದೇಶದಾದ್ಯಂತ ಊಳಿಗಮಾನ್ಯ ಶಕ್ತಿಗಳನ್ನು ಓಡಿಸಲು ದಂಗೆ ಏಳುವುದಾಗಿ ಘೋಷಿಸಿದ್ದಾರೆ. ನನ್ನ ಬಿಡುಗಡೆ ಆಗುತ್ತಲೇ ಕೇಸರಿ ಪಕ್ಷ ಗೊಂದಲಕ್ಕೊಳಗಾಗಿದೆ ಎಂದು ಛೇಡಿಸಿದ್ದಾರೆ. ನನ್ನನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಲಾಗಿದೆ. ಬಿಜೆಪಿ ನನ್ನ ವಿರುದ್ಧ ಧ್ವನಿ ಎತ್ತುವವರಿಗೆ ಕಿರುಕುಳ ನೀಡಲು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

{ಜೈರಾಮ್ ರಮೇಶ್} ಕಾಂಗ್ರೆಸ್ ಪ್ರ.ಕಾರ್ಯದರ್ಶಿ

ಎನ್‌ಟಿಎ ತಾನೇ ನಡೆಸಬೇಕಾದ ಮಹತ್ವದ ಪರೀಕ್ಷೆಗಳನ್ನೂ ಖಾಸಗಿ ಸಂಸ್ಥೆಗಳ ಮೂಲಕ ನಡೆಸುತ್ತದೆ. ನೀಟ್ ಅಕ್ರಮಗಳಾಗಲು ಇದೇ ಕಾರಣ. ಇದು ಕೇವಲ ನೀಟ್‌ಗಷ್ಟೇ ಅಲ್ಲ, ಶಿಕ್ಷಣ ಸಚಿವಾಲ ಯದ ಎಲ್ಲಾ ಸಂಸ್ಥೆ- ವಿಭಾಗ ಗಳಲ್ಲೂ ಈ ಸಮಸ್ಯೆ ಇದೆ. ಎಲ್ಲಾ ಪ್ರಮಾದಗಳ ಹೊಣೆ ಹೊತ್ತು ಸಚಿವ ಧರ್ಮೇಂದ್ರ ಪ್ರಧಾನ್ ಪದತ್ಯಾಗ ಮಾಡಲಿ.

62 ಭಾಷೆಗಳಲ್ಲಿ ಭಿತ್ತರ; ಸಂಸ್ಕೃತಕ್ಕೆ ಒತ್ತು | ಕಬ್ಬನ್ ಪಾರ್ಕ್, ಅರಕು ಕಾಫಿ ಉಲ್ಲೇಖ | ಯೋಗ ದಿನ ಯಶಸ್ಸಿನ ಸಂತಸ | ಬುಡಕಟ್ಟು ಉದ್ಯಮಕ್ಕೆ ಶ್ಲಾಘನೆ

ಮೋದಿ 111ನೇ ಮನ್ ಕಿ ಬಾತ್ ಭಾಷಾ ವೈವಿಧ್ಯ

ದೆಹಲಿ: 'ಮಮ ಪ್ರಿಯಾಃ ದೇಶವಾಸಿನಃ.. ಅದ ಅಹಂ ಕಿಂಚಿತ್ ಚರ್ಚಾ ಸಂಸ್ಕೃತ ಭಾಷಾಯಾಂ ಆರಭೆ'... (ನನ್ನ ಪ್ರೀತಿಯ ದೇಶವಾಸಿಗಳೇ, ಈಗ ನಾನು ಸಂಸ್ಕೃತ ಭಾಷೆಯಲ್ಲಿ ಚರ್ಚೆಯನ್ನು ಆರಂಭಿಸುತ್ತೇನೆ)...

ಇದು ಪ್ರಧಾನಿ ನರೇಂದ್ರ ಮೋದಿ ಅವರ ಬಲು ಇಷ್ಟದ ಮನ್ ಕಿ ಬಾತ್ ಕಾರ್ಯಕ್ರಮವನ್ನು ಈ ಬಾರಿ ಸಂಸ್ಕೃತ ಭಾಷೆಯಲ್ಲಿ ಆರಂಭಿಸಿದ ವೈಖರಿ.

ದೇಶದ ಪ್ರಧಾನಿಯಾಗಿ ಮೂರನೇ ಬಾರಿ ಅಧಿಕಾರ ವಹಿಸಿಕೊಂಡ ಬಳಿಕದ ಮೊದಲ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮವನ್ನು ನರೇಂದ್ರ ಮೋದಿ ಅವರು ನಡೆಸಿಕೊಟ್ಟಿದ್ದು, ಕಾರ್ಯಕ್ರಮ ಜೂ.30ರಂದು ಪ್ರಸಾರವಾಗಿದೆ. ಲೋಕಸಭೆ ಚುನಾವಣೆಗೂ ಮುನ್ನ ಫೆ.25ರಂದು 'ಮನ್ ಕಿ ಬಾತ್' ಪ್ರಸಾರವಾಗಿತ್ತು. 'ಮನ್ ಕಿ ಬಾತ್'ನ 111ನೇ ಕಾರ್ಯಕ್ರಮದಲ್ಲಿ ಬೆಂಗಳೂರಿನ ಹೆಸರಾಂತ ಉದ್ಯಾನವನ 'ಕಬ್ಬನ್ ಪಾರ್ಕ್' ಮತ್ತು ಅಲ್ಲಿ ವಾರಾಂತ್ಯ ನಡೆಯುವ ಸಂಸ್ಕೃತ ಭಾಷೆಯ ಚರ್ಚೆ ವಿಚಾರ ಪ್ರಮುಖವಾಗಿ ಪ್ರಸ್ತಾಪವಾಗಿದೆ.

ಆಲ್ ಇಂಡಿಯ ರೇಡಿಯೋದ 500 ಕೇಂದ್ರಗಳಲ್ಲಿ 22 ಭಾರ ತೀಯ ಭಾಷೆಗಳಲ್ಲಿ, 29 ಉಪಭಾಷೆಗಳಲ್ಲಿ ಹಾಗೂ ಫ್ರೆಂಚ್, ಚೈನೀಸ್ , ಇಂಡೋನೇಶಿಯ, ಟಿಬೆಟಿಯನ್, ಬರ್ಮೀ ಸ್, ಬಲೂಚಿ, ಅರೇಬಿಕ್, ಪಶ್ತು, ಪರ್ಷಿಯನ್, ಡಾರಿ, ಸ್ವಾಹಿಲಿ ಸೇರಿದಂತೆ 11 ವಿದೇಶಿ ಭಾಷೆಗಳಲ್ಲಿ ಕಾರ್ಯಕ್ರಮ ಭಿತ್ತರಗೊಂಡಿದೆ. 'ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ ಭಾರತದ ಜನತೆ ತಾವು ಇಟ್ಟಿರುವ ವಿಶ್ವಾಸವನ್ನು ಚುನಾವಣೆಯ ಮತಗಟ್ಟೆಯಲ್ಲಿ ತೋರಿಸಿದ್ದಾರೆ' ಎಂದು ಪ್ರಧಾನಿ ಮೋದಿ ಲೋಕಸಭಾ ಚುನಾವಣೆ ಪ್ರಕ್ರಿಯೆ ಮತ್ತು ಮತದಾರರ ಭಾಗಿದಾರಿಕೆಯನ್ನು ಶ್ಲಾಘಿಸಿದ್ದಾರೆ. ವಿಶ್ವದ ಅತಿದೊಡ್ಡ ಚುನಾವಣೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿದ ಚುನಾವಣಾ ಸಿಬ್ಬಂದಿಗಳು ಮತ್ತು ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಜತೆಗೆ ಪ್ರಧಾನಿ ಯೋಗ ದಿನಾಚರಣೆ, ವಿಶ್ವ ಪರಿಸರ ದಿನ, ಸಂಸ್ಕೃತ ಭಾಷೆ, ಬೆಂಗಳೂರಿನ ಕಬ್ಬನ್ ಪಾರ್ಕ್, ಅರಕು ಕಾಫಿ, ಕೇರಳದ ವನಿತೆಯರ ವಿಶೇಷ ಛತ್ರಿ ತಯಾರಿಕೆ ಸೇರಿ ಹತ್ತು ಹಲವರು ವಿಚಾರಗಳನ್ನು ಪ್ರಸ್ತಾಪಿಸಿ ಮಹತ್ವದ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಜತೆಗೆ ಪ್ರತಿಯೊಬ್ಬರೂ ಅವರ ಅಮ್ಮನ ಹೆಸರಲ್ಲಿ ಒಂದಾದರೂ ಗಿಡ ನೆಡುವಂತೆ ಕರೆ ನೀಡಿದ್ದಾರೆ.

ಕೇರಳ ಬುಡಕಟ್ಟು ಮಹಿಳೆಯರ ವಿಶೇಷ ಛತ್ರಿ

ಈ ಬಾರಿಯ 'ಮನ್ ಕಿ ಬಾತ್'ನಲ್ಲಿ ಪ್ರಧಾನಿ ಮೋದಿ, ಕೇರಳದ ಅಟ್ಟಪಾಡಿ ಗ್ರಾಮಸ್ಥರು ತಯಾರಿಸುವ ವಿಶೇಷ ಛತ್ರಿ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. 'ಕರ್ತುಂಬಿ ಛತ್ರಿ'ಗಳನ್ನು ಬುಡಕಟ್ಟು ಮಹಿಳೆಯರು ತಯಾರಿಸುತ್ತಿದ್ದು ಅವುಗಳಿಗೀಗ ಬೇಡಿಕೆ ಹೆಚ್ಚಾಗಿದೆ. ಆನ್‌ಲೈನ್ ಮೂಲಕವೂ ಮಾರಾಟ ನಡೆಯುತ್ತಿದೆ. ಮಹಿಳೆಯರೇ ನಡೆಸುವ 'ವಟ್ಟಲಕ್ಕಿ ಸಹಕಾರ ಕೃಷಿ ಸೊಸೈಟಿ'ಯಲ್ಲಿ ಈ ವಿಶೇಷ ಛತ್ರಿಗಳನ್ನು ತಯಾರಿಸಲಾಗುತ್ತದೆ ಎಂದು ಮೋದಿ ಬುಡಕಟ್ಟು ಮಹಿಳೆಯರ ಸಾಧನೆಯನ್ನು ಪ್ರಸ್ತಾಪಿಸಿದ್ದಾರೆ. 50-60 ಮಹಿಳೆಯರು ಮೊದಲಿಗೆ ಈ ವಿಶೇಷ ಛತ್ರಿ ತಯಾರಿಕೆಯಲ್ಲಿ ತೊಡಗಿಸಿಕೊಂಡರು. 2017ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಎ.ಕೆ.ಬಾಲನ್ ಈ ಬುಡಕಟ್ಟು ಮಹಿಳೆಯರು ತಯಾರಿಸುವ ಛತ್ರಿಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿ ಉದ್ಯಮಕ್ಕೆ ಚಾಲನೆ ನೀಡಿದ್ದರು. ಬಳಿಕ ರಾಜ್ಯದೆಲ್ಲೆಡೆ ಕರ್ತುಂಬಿ ಛತ್ರಿಗಳು ಜನ ಮನ್ನಣೆ ಗಳಿಸಿತು. ಜತೆಗೆ ಉತ್ತಮ ಬೇಡಿಕೆ ಪಡೆಯಿತು. ಮೊದಲು ಸಮುದಾಯದಲ್ಲಷ್ಟೇ ಮಾರಾಟವಾಗುತ್ತಿದ್ದ ಈ ಛತ್ರಿಗಳು ಈಗ ದೇಶದೆಲ್ಲೆಡೆ ಮಾರಾಟವಾಗುತ್ತಿವೆ. ಜತೆಗೆ ಈ ಛತ್ರಿ ತಯಾರಿಸುವಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ತೊಡಗಿದ್ದಾರೆ. ಮಹಿಳೆಯರ ಈ ಉದ್ಯಮಕ್ಕೆ ಸಾಕಷ್ಟು ಬೆಂಬಲ ವ್ಯಕ್ತವಾಗಿದೆ.

'ಗೆಳೆಯರೇ, ಫೆಬ್ರವರಿ ಮಾಸಾಂತ್ಯದ ಕಾರ್ಯಕ್ರಮದ ಬಳಿಕ ಪ್ರತಿ ಭಾನುವಾರ ನಿಮ್ಮ ಜತೆಗಿನ ಈ ಸಂವಹನವನ್ನು ಮಿಸ್ ಮಾಡಿಕೊಂಡಿದ್ದೇನೆ. ಆದರೆ ಆ ಸಮಯದಲ್ಲಿ ನೀವೆಲ್ಲ ನೆನಪು ಮಾಡಿಕೊಂಡಂತೆ ಲಕ್ಷಾಂತರ ಸಂದೇಶಗಳನ್ನು ಕಳುಹಿಸಿದ್ದು ನನಗೆ ಬಹಳ ಖುಷಿ ಕೊಟ್ಟಿದೆ'

-ನರೇಂದ್ರ ಮೋದಿ ಪ್ರಧಾನಿ

ಅಮ್ಮನ ಹೆಸರಲ್ಲಿ ಗಿಡ

'ಏಕ್ ಪೇಡ್ ಮಾ ಕೆ ನಾಮ್'(ಅಮ್ಮನ ಹೆಸರಲ್ಲಿ ಒಂದು ಗಿಡ) ನೆಟ್ಟು ಪರಿಸರ ದಿನ ಆಚರಿಸಿ ಎಂದು ಪ್ರಧಾನಿ ಮೋದಿ ಕರೆ ನೀಡಿದ್ದಾರೆ. 'ನಾನೂ ಅಮ್ಮನ ಹೆಸರಲ್ಲಿ ಗಿಡ ನೆಟ್ಟಿದ್ದೇನೆ. ಅಮ್ಮನ ಋಣ ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಹಾಗೇ ಈ ಭೂಮಿಗಾಗಿ ಏನನ್ನಾದರೂ ಒಳಿತು ಮಾಡಬೇಕು' ಎಂದು ಮೋದಿ ಗಮನ ಸೆಳೆದಿದ್ದಾರೆ. 'ಪ್ಲಾಂಟ್ ಫಾರ್ ಮದರ್' ಹ್ಯಾಶ್‌ಟ್ಯಾಗ್ ಮೂಲಕ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿ ಅಭಿಯಾನ ಮುಂದುವರೆಸುವಂತೆ ಮೋದಿ ಕರೆ ನೀಡಿದ್ದಾರೆ. ಜೂ.6ರ ವಿಶ್ವ ಪರಿಸರ ದಿನದಂಗವಾಗಿ ಪ್ರಧಾನಿ ಮೋದಿ ದೆಹಲಿಯ ಬುದ್ಧ ಜಯಂತಿ ಪಾರ್ಕ್‌ನಲ್ಲಿ ಅಮ್ಮನ ಹೆಸರಲ್ಲಿ ಗಿಡ ನೆಟ್ಟು ಅಭಿಯಾನ ಆರಂಭಿಸಿದ್ದರು. ಪ್ಯಾರಿಸ್ ಒಲಂಪಿಕ್ಸ್ ಪ್ರಸ್ತಾಪ: ಸದ್ಯದಲ್ಲೇ ಪ್ಯಾರಿಸ್ ಒಲಂಪಿಕ್ಸ್ ಆರಂಭವಾಗಲಿದೆ. ಭಾರತದ ಆಟಗಾರರನ್ನು ಹುರಿದುಂಬಿಸಲು ನೀವೆಲ್ಲಾ ಸಿದ್ಧರಿದ್ದೀರಿ ಎಂದು ಭಾವಿಸುತ್ತೇನೆ. ಒಲಂಪಿಕ್ಸ್ ಗೇಮ್ಸ್‌ಗೆ ಎಲ್ಲಾ ಭಾರತೀಯ ಕ್ರೀಡಾಪಟುಗಳಿಗೆ 'ಬೆಸ್ಟ್ ಆಫ್ ಲಕ್' ಎಂದು ಮೋದಿ ಶುಭ ಹಾರೈಸಿದ್ದಾರೆ. ಯೋಗ ದಿನಾಚರಣೆಯಲ್ಲಿ ದೊಡ್ಡ ಮಟ್ಟದಲ್ಲಿ ಭಾಗಿಯಾಗಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಕ್ಕೆ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ಯೋಗ ಒಂದು ದಿನದ ಆಚರಣೆಯಾಗದೇ ಜೀವನದ ಭಾಗವಾಗಲಿ ಎಂದು ಕರೆ ನೀಡಿದ್ದಾರೆ.

ಅರಕು ಕಾಫಿ ಶ್ಲಾಘಿಸಿದ ಮೋದಿ

ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯಲ್ಲಿ ಬೆಳೆಯುವ 'ಅರಕು ಕಾಫಿ'ಯ ಸವಿಯನ್ನು ಪ್ರಧಾನಿ ಮೋದಿ ಮನ್ ಕಿ ಬಾತ್‌ನಲ್ಲಿ ಬಹಳವಾಗಿ ಬಣ್ಣಿಸಿದ್ದಾರೆ. ಕಾಫಿ ಪ್ರಿಯರು ಒಮ್ಮೆಯಾದರೂ ಸವಿಯುವಂತೆ ಉತ್ತೇಜಿಸಿದ್ದಾರೆ. ಅರಕು ಕಾಫಿ 1.50 ಲಕ್ಷ ಬುಡಕಟ್ಟು ಜನರ ಜೀವನಾಧಾರದ ಬೆಳೆಯಾಗಿದೆ. ವಿಶಾಖಪಟ್ಟಣಂಗೆ ತೆರಳಿದ್ದಾಗ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಜತೆ ಈ ಕಾಫಿಯನ್ನು ಸವಿದೆ ಎಂದು ಪ್ರಧಾನಿ ನೆನಪಿಸಿಕೊಂಡಿದ್ದಾರೆ. ವಿದೇಶದಲ್ಲಿ ಬೇಡಿಕೆ ಹೆಚ್ಚಿಸಿಕೊಳ್ಳುತ್ತಿರುವ ಭಾರತೀಯ ಉತ್ಪನ್ನಗಳಲ್ಲಿ ಅರಕು ಕಾಫಿ ಕೂಡಾ ಒಂದು. 2019ರಲ್ಲಿ 'ಜಿಐ ಟ್ಯಾಗ್' ಕೂಡ ಪಡೆದಿದೆ ಎಂದರು. ಅರಕು ವ್ಯಾಲಿಯಲ್ಲಿ ಯಾವುದೇ ರಾಸಾಯನಿಕ ಬಳಸದೇ ಸಾವಯವ ಪದ್ಧತಿಯಲ್ಲಿ ಬೆಳೆಸುವ ಈ ಕಾಫಿ ಗಿಡದ ಬೀಜವನ್ನು ಅಂತಾರಾಷ್ಟ್ರೀಯ ಸಂಸ್ಥೆಗಳೂ ಗುರುತಿಸಿವೆ. ಸಾಕಷ್ಟು ಪ್ರಶಸ್ತಿ ಬಂದಿವೆ. ಪ್ರೀಮಿಯಮ್ ಕಾಫಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಈ ಕಾಫಿಯ ಗುಣಮಟ್ಟ-ರುಚಿಗೆ ವಿದೇಶದಲ್ಲೂ ಬೇಡಿಕೆ ಹೆಚ್ಚಿದೆ. ಬುಡಕಟ್ಟು ಪ್ರದೇಶದಿಂದ ವಿಶ್ವಮಟ್ಟದವರೆಗೆ ಮನ್ನಣೆ ಗಳಿಸಿದ ಭಾರತದ ಉತ್ಪನ್ನಗಳಲ್ಲಿ ಅರಕು ಕಾಫಿ ಹೊಸ ಸೇರ್ಪಡೆ ಎಂದಿದ್ದಾರೆ.

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ವಾರಾಂತ್ಯ ಸಂಸ್ಕೃತ ಚರ್ಚೆ-ಸಂವಾದ

'ಆಲ್ ಇಂಡಿಯ ರೆಡಿಯೋದಲ್ಲಿ ಸಂಸ್ಕೃತ ಭಾಷೆಯಲ್ಲಿ ವಾರ್ತೆ ಆರಂಭವಾಗಿ 50 ವರ್ಷ ಸಂದಿದೆ' ಎಂದು ಪ್ರಧಾನಿ ಮೋದಿ ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸಿದ್ದಾರೆ. 50 ವರ್ಷ ಸಂಸ್ಕೃತ ಸುದ್ದಿ ಬುಲೆಟಿನ್ ನಡೆಸಿದ 'ಎಐಆರ್' ಸಿಬ್ಬಂದಿಗೆ ಮೋದಿ ಅಭಿನಂದಿಸಿದ್ದಾರೆ. ಬೆಂಗಳೂ ರಿನ ಕಬ್ಬನ್ ಪಾರ್ಕ್‌ನಲ್ಲಿ ಪ್ರತಿ ಭಾನುವಾರ ನಡೆಯುವ 'ಸಂಸ್ಕೃತ ಚರ್ಚೆ-ಸಂವಹನ' ಕಾರ್ಯಕ್ರಮವನ್ನು ಪ್ರಧಾನಿ ಮೋದಿ ಬಹಳವಾಗಿ ಶ್ಲಾಘಿಸಿದ್ದಾರೆ. 'ಸಂಸ್ಕೃತ ವೀಕೆಂಡ್' ಹೆಸರಿನ ಕಾರ್ಯಕ್ರಮ ಹೊಸ ಟ್ರೆಂಡ್ ಆರಂಭಿಸಿದೆ. ಸಂಸ್ಕೃತ ಭಾಷೆ ಉಳಿಸಿ- ಬೆಳೆಸುವಲ್ಲಿ ಕಬ್ಬನ್ ಪಾರ್ಕ್ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಿದೆ ಎಂದು ಮೋದಿ ಪ್ರಶಂಸಿಸಿದ್ದಾರೆ. ಸಂಸ್ಕೃತ ಭಾಷಾ ಸಂವಹನ ಕಾರ್ಯಕ್ರಮವನ್ನು ಮೊದಲು 'ಸಮಷ್ಟಿ ಗುಬ್ಬಿ' ಅವರು ವೆಬ್‌ಸೈಟ್‌ನಲ್ಲಿ ಆರಂಭಿಸಿದರು. ಕಾರ್ಯಕ್ರಮಕ್ಕೆ ಬಹು ಬೇಗ ಜನಮ ನ್ನಣೆ ಸಿಕ್ಕಿತು. ಬಳಿಕ ಕಬ್ಬನ್ ಪಾರ್ಕ್‌ನಲ್ಲಿ ಪ್ರತಿ ಭಾನು ವಾರ ಮಕ್ಕಳು, ವೃದ್ಧರು ಸೇರಿದಂತೆ ಸಂಸ್ಕೃತ ಭಾಷಾಭಿ ಮಾನವಿರುವ ಎಲ್ಲರೂ ಸೇರಿ ಸಂಸ್ಕೃತ ಭಾಷೆಯಲ್ಲೇ ಅನೇಕ ಚರ್ಚೆ, ಸಂವಹನ ನಡೆಸುವ ಮಟ್ಟಕ್ಕೆ ಕಾರ್ಯಕ್ರಮ ಬೆಳೆದಿದೆ. ಪುಟ್ಟ ಮಕ್ಕಳೂ ಹಿರಿಯರಿಂದ ಇಲ್ಲಿ ಸಂಸ್ಕೃತ ಭಾಷೆ ಕಲಿಯು ವುದು ವಿಶೇಷ. ನಾವೆ ಲ್ಲರೂ ಇಂತಹ ಪ್ರಯತ್ನಕ್ಕೆ ಕೈಜೋಡಿ ಸೋಣ, ವೈಜ್ಞಾನಿ ಕ-ಪ್ರಾಚೀನ ಭಾಷೆಗಳಿಂದ ಸಾಕಷ್ಟು ಕಲಿಯಬಹುದು ಎಂದು ಮೋದಿ ಉತ್ತೇಜಿಸಿದ್ದಾರೆ. ಸಂಸ್ಕೃತ ಭಾಷೆ ನಿತ್ಯ ಮಾತನಾಡುವ ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮ ದ ಬಗ್ಗೆಯೂ ಪ್ರಸ್ತಾಪಿಸಿದ್ದರು.

ಅಮರನಾಥ ಮಾರ್ಗದಲ್ಲಿ ಅಪಘಾತ: ಗಾಯಾಳು ಆಸ್ಪತ್ರೆಗೆ

ಮಹಿಳೆ-ಪುರುಷ ಯಾತ್ರಿಕರ ತಲೆಗೆ ಪೆಟ್ಟು

ಶ್ರೀನಗರ: ಜಮ್ಮು-ಕಾಶ್ಮೀರದ ಪಹಲ್‌ಗಾಮ್ ಭಾಗದ ಚಂದನ್ವಾರಿ ಬಳಿ ಅಮರನಾಥ ಯಾತ್ರಾರ್ಥಿಗಳಿದ್ದ ವಾಹನ ಭಾನುವಾರ ಅಪಘಾತಕ್ಕೀಡಾಗಿ, ಇಬ್ಬರು ಯಾತ್ರಿಗಳು ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ಯಾತ್ರಿಕರ ತಲೆಗೆ ಗಂಭೀರ ಗಾಯಗಳಾಗಿವೆ. ತಕ್ಷಣ ಹತ್ತಿರದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಬಿಎಸ್‌ಎಫ್‌ನ ಕ್ಷಿಪ್ರ ಸ್ಪಂದನೆ ಯಾತ್ರಿಕರ ಜೀವ ಉಳಿಸಿದೆ ಎಂದು ಗಡಿ ಭದ್ರತಾ ಪಡೆ(ಬಿಎಸ್‌ಎಫ್) 'ಎಕ್ಸ್' ಸಂದೇಶದಲ್ಲಿ ತಿಳಿಸಿದೆ. ಮಹಿಳೆ ಮತ್ತು ಒಬ್ಬ ಪುರುಷ ಯಾತ್ರಾರ್ಥಿಗಳು ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರ ಗುರುತಿನ ಮಾಹಿತಿ ಲಭ್ಯವಾಗಿಲ್ಲ. ಮೂಲ ಶಿಬಿರದ ಬಳಿ ಸುದ್ದಿಸಂಸ್ಥೆ ಜತೆ ಭಾನುವಾರ ಮಾತನಾಡಿದ ದೆಹಲಿ ಯಾತ್ರಾರ್ಥಿ ರಾಜೇಶ್ ಗುಪ್ತಾ, ಬಾಬಾ ಭೋಲೆನಾಥನ ಆರಾಧನೆಗಾಗಿ ಇದು ನನ್ನ 2ನೇ ಯಾತ್ರೆ. ತುಂಬಾ ಸಂತೋಷವಾಗಿದೆ ಮತ್ತು ಬಹಳ ಉತ್ಸುಕನಾಗಿದ್ದೇನೆ. ಯಾತ್ರಿಕರಿಗಾಗಿ ಕೇಂದ್ರ ಮೀಸಲು ಪೊಲೀಸ್ ಪಡೆ ಎಲ್ಲಾ ರೀತಿಯ ಸೌಲಭ್ಯ-ವ್ಯವಸ್ಥೆಗಳನ್ನು ಮಾಡಿಕೊಟ್ಟಿದೆ ಎಂದಿದ್ದಾರೆ.

ಬಿಆರ್‌ಎಸ್ ನಾಯಕಿ ಕವಿತಾ ಜಾಮೀನು ತೀರ್ಪು ಇಂದು

3.5 ತಿಂಗಳಿಂದ ಜೈಲಲ್ಲಿರುವ ಮಾಜಿ ಸಿಎಂ ಪುತ್ರಿ

ದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ತೆಲಂಗಾಣದ ಬಿಆರ್‌ಎಸ್ ನಾಯಕಿ ಕೆ.ಕವಿತಾ ಜಾಮೀನು ಅರ್ಜಿಗಳ ಕುರಿತ ಆದೇಶವನ್ನು ದೆಹಲಿ ಹೈಕೋರ್ಟ್ ಸೋಮವಾರ ಪ್ರಕಟಿಸುವ ಸಾಧ್ಯತೆಯಿದೆ.

ಜಾಮೀನು ಕೋರಿ ಕವಿತಾ ಸಲ್ಲಿಸಿದ್ದ ಎರಡು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸ್ವರಣಾ ಕಾಂತ ಶರ್ಮಾ ಮೇ 28ರಂದು ಆದೇಶ ಕಾಯ್ದಿರಿಸಿದ್ದು, ಜು.1ರ ಮಧ್ಯಾಹ್ನ 2.30ಕ್ಕೆ ಆದೇಶ ಪ್ರಕಟಿಸಲಿದ್ದಾರೆ. ಭ್ರಷ್ಟಾಚಾರ ಆರೋಪದಲ್ಲಿ ಸಿಬಿಐ, ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಹೂಡಿರುವ ಪ್ರಕರಣಗಳಲ್ಲಿ ಜಾಮೀನು ಕೋರಿ ಕವಿತಾ ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣಾ ನ್ಯಾಯಾಲಯ ವಜಾಗೊಳಿಸಿತ್ತು. ಅದನ್ನು ಪ್ರಶ್ನಿಸಿ

ಮೇ 6ರಂದು ಕವಿತಾ ದೆಹಲಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಈ ಪ್ರಕರಣಗಳಲ್ಲಿನ ಒಟ್ಟು 50 ಆರೋಪಿಗಳಲ್ಲಿ ಕವಿತಾ ಒಬ್ಬರೇ ಮಹಿಳೆ. ಹಾಗಾಗಿ ಅವರಿಗೆ ಜಾಮೀನು ನೀಡಬೇಕೆಂದು ಕವಿತಾ ಪರ ವಕೀಲರು ವಾದಿಸಿದ್ದಾರೆ. ಆದರೆ ಆರೋಪಿ ಮಹಿಳೆ ಹೆಚ್ಚು ಪ್ರಭಾವಿ. ಸಾಕ್ಷಿಗಳ ಮೇಲೆ ಪ್ರಭಾವ ಬೀರುವಷ್ಟು ಶಕ್ತಿಶಾಲಿ ಎಂದು ವಾದಿಸಿರುವ ಸಿಬಿಐ ಮತ್ತು ಇ.ಡಿ ಪರ ವಕೀಲರು, ಜಾಮೀನಿಗೆ ವಿರೋಧಿಸಿದ್ದಾರೆ.

ಟಿವಿ ಚರ್ಚೆಯಲ್ಲಿ ಹಿನ್ನಡೆಯಾಗಿದ್ದೇ ಕಾರಣ
ಅಧ್ಯಕ್ಷೀಯ ಚುನಾವಣೆ ಅಭ್ಯರ್ಥಿ; ಬೈಡೆನ್ ಬದಲು ಮಿಷೆಲ್ ಒಬಾಮ?

ವಾಷಿಂಗ್ಟನ್: ವರ್ಷಾಂತ್ಯದ ಅಮೆರಿಕ ಅಧ್ಯಕ್ಷೀಯ ಚುನಾವಣೆ ರಂಗೇರುತ್ತಿದ್ದು, ಸಿಎನ್‌ಎನ್ ಸುದ್ದಿಸಂಸ್ಥೆ ಶುಕ್ರವಾರ ಆಯೋಜಿಸಿದ್ದ ಚರ್ಚಾಕೂಟದಲ್ಲಿ ರಿಪಬ್ಲಿಕ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಪ್ರಶ್ನೆಗಳಿಗೆ ಉತ್ತರಿಸಲು ಹಾಲಿ ಅಧ್ಯಕ್ಷ, ಡೆಮಾಕ್ರಟಿಕ್ ಅಭ್ಯರ್ಥಿ ಜೋ ಬೈಡೆನ್ ತಡವರಿಸಿದರು. ಇದು ಸಾಮಾಜಿಕ ಜಾಲತಾಣದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಹಾಗಾಗಿ, ಡೆಮಾಕ್ರಟಿಕ್ ಪಕ್ಷದವರು ಬೈಡೆನ್ ಬದಲು ಬೇರೆ ಅಭ್ಯರ್ಥಿ ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ಪತ್ನಿ ಮಿಶೆಲ್ ಒಬಾಮಾ ಡೆಮಾಕ್ರಟಿಕ್ ಪಕ್ಷದಿಂದ ಅಧ್ಯಕ್ಷೀಯ ಅಭ್ಯರ್ಥಿ ಆಗುವ ಸಾಧ್ಯತೆಯಿದೆ ಎಂದು ಸಂಸದ ಟೆಡ್‌ಕ್ರೂಜ್ ಸುಳಿವು ನೀಡಿದ್ದಾರೆ. ಟಿವಿ ಚರ್ಚೆ ವೇಳೆ ಟ್ರಂಪ್ ವಾಗ್ದಾಳಿಗೆ ತಕ್ಕ ಪ್ರತ್ಯುತ್ತರ ನೀಡುವಲ್ಲಿ ಬೈಡೆನ್ ವಿಫಲವಾದರು. ಇದು

ಡೆಮಾಕ್ರಟಿಕ್ ಪಕ್ಷದ ನಾಯಕರ ಅಸಮಾಧಾನಕ್ಕೆ ಕಾರಣವಾಗಿದೆ. ರಿಪಬ್ಲಿಕನ್ನರೂ ಕೂಡಾ 'ಮೊದಲು ನಿಮ್ಮ ಅಭ್ಯರ್ಥಿ ಬದಲಿಸಿ' ಎಂದು ಕುಟುಕುತ್ತಿದ್ದಾರೆ. ಬೈಡೆನ್ ಅವರನ್ನು ಬದಲಿಸುವುದಾದರೆ ಅಭ್ಯರ್ಥಿಯಾಗಲು ಮಿಶೆಲ್ ಒಬಾಮಾ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬೈಡೆನ್ ಬೆಂಬಲಕ್ಕೆ ನಿಂತಿರುವ ಮಾಜಿ ಅಧ್ಯಕ್ಷ ಒಬಾಮಾ, 'ಟಿವಿ ಚರ್ಚೆ ವೇಳೆ ಕೆಲವೊಮ್ಮೆ ಹೀಗಾಗುವುದು ಸಹಜ' ಎಂದಿದ್ದಾರೆ.

ಪತ್ರಿಕೆ, ಪತ್ರಕರ್ತರು, ರಾಜಕಾರಣಿಗಳ ವಿರುದ್ಧ ಖಾಸಗಿ ದೂರು

ಇವಿಎಂ ಹ್ಯಾಕ್ ವರದಿ: ದೂರು

ಮುಂಬೈ: ಭಾರತದಲ್ಲಿ ಚುನಾವಣೆಗಳನ್ನು ನಡೆಸಲು ಭಾರತೀಯ ಚುನಾವಣಾ ಆಯೋಗ ಬಳಸುತ್ತಿರುವ ವಿದ್ಯುನ್ಮಾನ ಮತಯಂತ್ರ(ಇವಿಎಂ)ಗಳನ್ನು ಸರಾಗವಾಗಿ 'ಅನ್‌ಲಾಕ್'(ತೆರೆಯಬಹುದು) ಮಾಡಬಹುದು ಎಂದು ಸುದ್ದಿ ಪ್ರಕಟಿಸಿದ ಮಹಾರಾಷ್ಟ್ರದ ಪತ್ರಿಕೆ, ಅದನ್ನು ಬರೆದ ಪತ್ರಕರ್ತ ಹಾಗೂ ಮಾಹಿತಿ ನೀಡಿದ ರಾಜಕಾರಣಿ ವಿರುದ್ಧ ದೂರು ದಾಖಲಾಗಿದೆ.

ಇವಿಎಂ ಮೊಬೈಲ್ ಫೋನ್ ಬಳಸಿಯೇ ಅನ್‌ಲಾಕ್ ಮಾಡಬಹುದು ಎಂಬ ವರದಿ 'ಮಿಡ್ ಡೇ' ಜೂ.16ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಇದೇ ವರದಿ ಆಧರಿಸಿ ಜಾಲತಾಣಗಳಲ್ಲಿ ಚರ್ಚೆಗಳಾಗಿದ್ದವು. ಹಲವರು ಬೆಂಬಲಿಸಿದ್ದರು. ಬಳಿಕ ಟಿವಿಗಳಲ್ಲಿಯೂ ಚರ್ಚೆಗಳಾಗಿದ್ದವು. ರಾಜಕಾರಣಿಗಳೂ ವರದಿ ದೃಢೀಕರಿಸಿ ಮಾತನಾಡಿದ್ದರು.

ಈ ಹಿನ್ನೆಲೆಯಲ್ಲಿ ಇವಿಎಂ ವಿರುದ್ಧ ತಪ್ಪು ಮಾಹಿತಿ ಹರಡುತ್ತಿರುವ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲು ಪೊಲೀಸರಿಗೆ ನಿರ್ದೇಶನ ನೀಡುವಂತೆ ಕೋರಿ ವಕೀಲ ವಿವೇಕಾನಂದ ದಯಾನಂದ್ ಗುಪ್ತಾ ಎಂಬವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಇಂಡಿಯ ಟುಡೆ ಪತ್ರಕರ್ತ ರಾಜದೀಪ್ ಸರ್ದೇಸಾಯಿ, 'ಮಿಡ್ ಡೇ' ಆಂಗ್ಲಪತ್ರಿಕೆಯ ವರದಿಗಾರ ಶಿರೀಷ್ ವಕತಾನಿಯ, ಶಿವಸೇನೆ(ಉದ್ಧವ್ ಬಣ) ಸಂಸದೆ ಪ್ರಿಯಾಂಕಾ ಚತುರ್ವೇದಿ, ಕಾಂಗ್ರೆಸ್ ಸಾಮಾಜಿಕ ಮಾಧ್ಯಮ ವಿಭಾಗ ಮುಖ್ಯಸ್ಥೆ ಸುಪ್ರಿಯಾ ಶ್ರೀನಾಥೆ, ಎನ್‌ಸಿಪಿ(ಶರದ್ ಬಣ) ಶಾಸಕ ಜಿತೇಂದ್ರ ಅಹವಾದ್, ಕಾಂಗ್ರೆಸ್ ನಾಯಕರಾದ ಸರಳ್ ಪಟೇಲ್ ಮತ್ತು ಅರ್ಪಿತ್ ಶರ್ಮಾ ಹಾಗೂ ಯು-ಟ್ಯೂಬರ್ ಧ್ರುವ ರಾಟಿ ವಿರುದ್ಧ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿ 'ಎಫ್‌ಐಆರ್' ದಾಖಲಿಸಲು ನಿರ್ದೇಶನ ಕೋರಿದ್ದಾರೆ. ಇದೇ ಸಂಗತಿಯನ್ನು ತಮ್ಮ 'ಎಕ್ಸ್' ಖಾತೆಯಲ್ಲೂ ಭಾನುವಾರ ಹಂಚಿಕೊಂಡಿದ್ದಾರೆ.

ತ.ನಾಡು 10 ಕಡೆ ಎನ್‌ಐಎ ದಾಳಿ; ಇಬ್ಬರು ಶಂಕಿತರ ಸೆರೆ

ಚೆನ್ನೈ: 'ಹಿಜ್ಬ್ ಉತ್ ತಹ್ರೀರ್' ಅಂತಾರಾಷ್ಟ್ರೀಯ ಇಸ್ಲಾಮಿಕ್ ಸಂಘಟನೆ ನಂಟು ಹೊಂದಿದ ಪ್ರಕರಣದಲ್ಲಿ ಎನ್‌ಐಎ ಅಧಿಕಾರಿಗಳ ತಂಡ, ಭಾನುವಾರ ತಮಿಳುನಾಡಿನ 10 ಕಡೆ ದಾಳಿ ನಡೆಸಿದೆ. ಇದೇ ವೇಳೆ ಇಬ್ಬರು ಶಂಕಿತ ಉಗ್ರರನ್ನು ಕೂಡ ಬಂಧಿಸಲಾಗಿದೆ.

ದೇಶ ವಿರೋಧಿ ಚಟುವಟಿಕೆಗಳಿಗೆ ಸಂಬಂಧಿಸಿ ಮೇ ತಿಂಗಳಲ್ಲಿ 'ಹಿಜ್ಬ್ ಉತ್ ತಹ್ರೀರ್' ಸಂಘಟನೆಗೆ ಸೇರಿದ 6 ಮಂದಿ ಬಂಧಿಸಲಾಗಿದ್ದು, ಅವರು ನೀಡಿದ ಮಾಹಿತಿ ಮೇರೆಗೆ ತಮಿಳುನಾಡಿನಲ್ಲಿ ಭಾನುವಾರ ಅಬ್ದುಲ್ ರಹಮಾನ್ ಮತ್ತು ಮುಜಿಬುರ್ ರೆಹಮಾನ್ ಎಂಬವರನ್ನು ಬಂಧಿಸಲಾಗಿದೆ. ಈರೋಡ್ ಜಿಲ್ಲೆಯಲ್ಲಿ 2 ಕಡೆ, ತಂಜಾವೂರ್ ಸೇರಿ ಒಟ್ಟು 10 ಕಡೆ ದಾಳಿ ನಡೆಸಿ, ಶೋಧ ಕೈಗೊಳ್ಳಲಾಗಿದೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

2021ರಲ್ಲಿ ಮೊಹಮ್ಮದ್ ಇಕ್ಬಾಲ್ ಎಂಬಾತ ಫೇಸ್‌ಬುಕ್ ಖಾತೆ ಮೂಲಕ ಆಕ್ಷೇಪಾರ್ಹ ಪೋಸ್ಟ್ ಹಾಕಿದ್ದ. ಈತ ಕಾಶ್ಮೀರದ ಪ್ರತ್ಯೇಕತಾವಾದಿ ಹಾಗೂ

'ಹಿಜ್ಬ್ ಉತ್ ತಹ್ರೀರ್' ಸಂಘಟನೆಗೆ ಸೇರಿದವನು ಎಂದು ತಿಳಿದು ಬಂದಿತ್ತು. 2022ರಲ್ಲಿ ಬಾವಾ ಬಹ್ರುದ್ದಿನ್ ಮತ್ತು ಜಿಯಾವುದ್ದೀನ್ ಬಕಾವಿ ಎಂಬ ಇಬ್ಬರ ವಿರುದ್ಧವೂ ಚಾರ್ಜ್‌ಶೀಟ್ ಸಲ್ಲಿಕೆಯಾಗಿತ್ತು.

ಇವರು ಯುವಕರನ್ನು ಸೆಳೆದು ಇಸ್ಲಾಮಿಕ್ ರಾಜ್ಯವನ್ನು ಸ್ಥಾಪಿಸಿ ತಕಿ -ಅಲ್-ದಿನ್-ಅಲ್-ನಭಾನಿ ಅವರು ಬರೆದಿರುವ ಸಂವಿಧಾನ ಜಾರಿಗೊಳಿಸುವಲ್ಲಿ ಯತ್ನಿಸುತ್ತಿದ್ದರು ಎಂದು ತಿಳಿದುಬಂದಿದೆ.

ಗರ್ಭಿಣಿಯರು, ಮಕ್ಕಳ ಸಜೀವ ದಹನ | ಒಬ್ಬ ಯೋಧ ಸೇರಿ 3 ಭದ್ರತಾ ಸಿಬ್ಬಂದಿ ಬಲಿ

ನೈಜೀರಿಯ ಆತ್ಮಾಹುತಿ ಬಾಂಬ್ ದಾಳಿ-21 ಬಲಿ

ನೈಜೀರಿಯ: ನೈಜೀರಿಯಾದಲ್ಲಿನ ಈಶಾನ್ಯ ಭಾಗದಲ್ಲಿನ ಬೋರ್ನೊ ರಾಜ್ಯದಲ್ಲಿ ಮಹಿಳಾ ಆತ್ಮಹತ್ಯಾ ಬಾಂಬರ್‌ಗಳು ಮದುವೆ ಛತ್ರಗಳು ಮತ್ತು ಆಸ್ಪತ್ರೆಗಳನ್ನು ಗುರಿಯಾಗಿಸಿಕೊಂಡು ಶನಿವಾರ (ಸ್ಥಳೀಯ ಕಾಲಮಾನ) 4 ಕಡೆ ಸರಣಿ ದಾಳಿ ನಡೆಸಿದ್ದಾರೆ. ಮತ್ತೊಂದೆಡೆ ಗ್ವಾಜೋ ನಗರದಲ್ಲಿ ಕಾವಲು ಪಡೆ ಮೇಲೆ ಉಗ್ರ ದಾಳಿಯಾಗಿದೆ. ಪರಿಣಾಮ ಒಟ್ಟು 21 ಜನರು ಸಾವನ್ನಪ್ಪಿದ್ದಾರೆ, 42 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ 19 ಮಂದಿ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ.

ಗ್ವೋಜಾ ಪಟ್ಟಣದಲ್ಲಿ ಮದುವೆ, ಅಂತ್ಯಕ್ರಿಯೆ ಮತ್ತು ಆಸ್ಪತ್ರೆಗಳನ್ನು ಗುರಿಯಾಗಿಸಿ ಭಯೋತ್ಪಾದಕ ದಾಳಿಗಳು ನಡೆದಿವೆ. ಈ ಪ್ರದೇಶದಲ್ಲಿ ಒಂದೂವರೆ ದಶಕದಷ್ಟು ದೀರ್ಘ ಕಾಲದಿಂದ ಬೋಕೋ ಹರಾಮ್ ಉಗ್ರ ಸಂಘಟನೆ ನಡೆಸುತ್ತಿರುವ ಇಸ್ಲಾಮಿಕ್ ಸಂಘರ್ಷದ ಪರಿಣಾಮವೇ ಈ ಉಗ್ರ ದಾಳಿ ಎನ್ನಲಾಗಿದೆ. ಬೋರ್ನೊದಲ್ಲಿನ 15 ವರ್ಷಗಳ ಇಸ್ಲಾಮಿಕ್ ಹೋರಾಟ ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಂಡಿದೆ ಮತ್ತು ಲಕ್ಷಾಂತರ ಜನರ ಸ್ಥಳಾಂತರಕ್ಕೆ ಕಾರಣವಾಗಿದೆ. ನೈಜೀರಿಯ ಸೇನಾಪಡೆ ಕಾರ್ಯಾಚರಣೆಗಳನ್ನು ನಡೆಸುತ್ತಾ ಉಗ್ರಗಾಮಿ ಗುಂಪುಗಳನ್ನು ದುರ್ಬಲಗೊಳಿಸಲು ಶ್ರಮಿಸುತ್ತಿದೆ. ಸರಣಿ ಸ್ಫೋಟಗಳಲ್ಲಿ ಮಕ್ಕಳು, ಗರ್ಭಿಣಿಯರು ಸೇರಿದಂತೆ 18 ಜನರು ಜೀವ ಕಳೆದುಕೊಂಡಿದ್ದಾರೆ. ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ದಾಳಿ ಹೊಣೆಯನ್ನು ಯಾವುದೇ ಭಯೋತ್ಪಾದಕ ಗುಂಪು ಹೊತ್ತುಕೊಂಡಿಲ್ಲ. ಪೊಲೀಸ್ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ಬೋರ್ನೊ ತುರ್ತುಸ್ಥಿತಿ ನಿರ್ವಹಣಾ ಸಂಸ್ಥೆ ಮುಖ್ಯಸ್ಥ ಬಾರ್ಕಿಂಡೊ ಸೈದು ಹೇಳಿದ್ದಾರೆ.

ದಾಳಿ ಹೇಗಾಯಿತು?

ಬೋರ್ನೊ ನಗರದಲ್ಲಿ ಶನಿವಾರ ಮಧ್ಯಾಹ್ನ 3.45ರ ವೇಳೆ ಮಹಿಳೆಯೊಬ್ಬಳು ಬೆನ್ನಮೇಲೆ ಮಗುವೊಂದನ್ನು ಕಟ್ಟಿಕೊಂಡು ನಡೆಯುತ್ತಾ ಬಂದವಳೇ ವಾಹನಗಳ ನಿಲುಗಡೆ ಪ್ರದೇಶದಲ್ಲಿ ನಿಂತು ತನ್ನನ್ನೇ ಸ್ಫೋಟಿಸಿಕೊಂಡಳು. ಸ್ಫೋಟದ ತೀವ್ರತೆ ನೋಡಿದರೆ ಐಇಡಿ ಬಳಸಿರುವ ಸಾಧ್ಯತೆ ಇದೆ ಎಂದು ಬೋರ್ನೊ ಪೊಲೀಸ್ ವಕ್ತಾರ ನಹುಮ್ ಕೆನ್ನೆತ್ ಡಾಸೊ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಇನ್ನೊಂದೆಡೆ, ಬೋರ್ನೊ ಆಸ್ಪತ್ರೆಗೆ ನುಗ್ಗಿದ ಮತ್ತೊಬ್ಬ ಮಹಿಳೆ ಆತ್ಮಾಹುತಿ ಬಾಂಬ್ ದಾಳಿ ನಡೆಸಿದ್ದಾಳೆ. ಬೇರೆಡೆ ಮದುವೆ ಸಮಾರಂಭ ಹಾಗೂ ಅಂತ್ಯಕ್ರಿಯೆ ನಡೆಯುತ್ತಿದ್ದ ಕಡೆಯೂ ಆತ್ಮಾಹುತಿ ಬಾಂಬ್ ದಾಳಿಗಳು ನಡೆದಿವೆ. ಗರ್ಭಿಣಿಯರು, ಪುಟ್ಟ ಮಕ್ಕಳು, ಮಹಿಳೆಯರು, ಪುರುಷರು ಈ ಸರಣಿ ಆತ್ಮಾಹುತಿ ಬಾಂಬ್ ದಾಳಿಗಳಲ್ಲಿ ಜೀವ ಕಳೆದುಕೊಂಡಿದ್ದಾರೆ ಎಂದು ಬೋರ್ನೊ ರಾಜ್ಯ ತುರ್ತುಸ್ಥಿತಿ ನಿರ್ವಹಣಾ ಸಂಸ್ಥೆಯ ಮುಖ್ಯಸ್ಥ ಬಾರ್ಕಿಂಡೊ ಸೈದು 'ಎಎಫ್‌ಪಿ' ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಭದ್ರತಾ ಪಡೆ 3 ಸಿಬ್ಬಂದಿ ಬಲಿ

ಮತ್ತೊಂದೆಡೆ ಗ್ವಾಜಾ ನಗರದಲ್ಲಿನ ಭದ್ರತಾ ಪಡೆಯ ಕಾವಲು ಶಿಬಿರದ ಮೇಲೆಯೂ ಭಯೋತ್ಪಾದಕ ದಾಳಿ ನಡೆದಿದ್ದು, ಒಬ್ಬ ಯೋಧ ಮತ್ತು ಕಾವಲು ಕರ್ತವ್ಯದಲ್ಲಿದ್ದ ಇಬ್ಬರು ಸಿಬ್ಬಂದಿ ಸಾವಿಗೀಡಾಗಿದ್ದಾರೆ.

ಮಹಾ ಚುನಾವಣೆ: ಎಂವಿಎ ಜಂಟಿ ಸ್ಪರ್ಧೆ

ಪುಣೆ: ಮುಂಬರುವ ಅಕ್ಟೋಬರ್‌ನಲ್ಲಿ ನಡೆಯಲಿರುವ ಮಹಾರಾಷ್ಟ್ರ ವಿಧಾನ ಸಭೆ ಚುನಾವಣೆಯಲ್ಲಿ ಮಹಾವಿಕಾಸ್ ಅಘಾಡಿ(ಎಂವಿಎ) ಮಿತ್ರಪಕ್ಷಗಳಾದ ಶಿವಸೇನೆ(ಉದ್ಧವ್ ಬಣ), ಎನ್‌ಸಿಪಿ(ಶರದ್ ಬಣ) ಮತ್ತು ಕಾಂಗ್ರೆಸ್ ಜಂಟಿಯಾಗಿಯೇ ಸ್ಪರ್ಧಿಸಲಿವೆ ಎಂದು ಎನ್‌ಸಿಪಿ ಹಿರಿಯ ನಾಯಕ ಶರದ್ ಪವಾರ್ ಹೇಳಿದ್ದಾರೆ.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿ, ಸೀಟು ಹಂಚಿಕೆ ಮಾತುಕತೆ ಶೀಘ್ರ ಪ್ರಾರಂಭವಾಗಲಿದೆ ಎಂದು ಎನ್‌ಸಿಪಿ(ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ. ಇತ್ತೀಚಿನ ಲೋಕಸಭೆ ಚುನಾವಣೆಯಲ್ಲಿ ಮೈತ್ರಿಕೂಟ ಭಾಗವಾಗಿದ್ದ ಸಣ್ಣ ಮಿತ್ರಪಕ್ಷಗಳ ಹಿತಾಸಕ್ತಿಯನ್ನು ವಿಧಾನಸಭೆ ಚುನಾವಣೆಯಲ್ಲಿಯೂ ರಕ್ಷಿಸುವುದು ಮಹಾರಾಷ್ಟ್ರದ ಪ್ರಮುಖ ಪ್ರತಿಪಕ್ಷಗಳ ಜವಾಬ್ದಾರಿ. ಎಂವಿಎ ಸಾಮೂಹಿಕ ನಾಯಕತ್ವದಲ್ಲಿ ರಾಜ್ಯದ ಜನರೆದುರು ಹೋಗಲಿದೆ. ರಾಜ್ಯದಲ್ಲಿ ಬದಲಾವಣೆ ತರುವುದು ಎಂವಿಎ ಹೊಣೆಯಾಗಿದೆ ಎಂದರು.

ವಿಶ್ವಚಾಂಪಿಯನ್ ಭಾರತಕ್ಕೆ 125 ಕೋಟಿ ಬಹುಮಾನ

ದೆಹಲಿ: ಭಾರತ ವಿಶ್ವಕಪ್ ಗೆದ್ದಿರುವ ಬೆನ್ನಲೇ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಭಾರತ ತಂಡಕ್ಕೆ 125 ಕೋಟಿ ಬಹುಮಾನ ಘೋಷಿಸಿದೆ. ವಿಶ್ವದ ಶ್ರೀಮಂತ ಕ್ರಿಕೆಟ್ ಬೋರ್ಡ್ ಎನ್ನಿಸಿಕೊಳ್ಳುವ ಬಿಸಿಸಿಐ ಭಾರತ ವಿಶ್ವಕಪ್ ಗೆದ್ದ ಒಂದು ದಿನದ ಬಳಿಕ ಈ ಘೋಷಣೆ ಮಾಡಿದೆ. ವಿಶ್ವಕಪ್ ಗೆದ್ದ ಭಾರತಕ್ಕೆ ಬಹುಮಾನವಾಗಿ 20.42 ಕೋಟಿ ರು. ನೀಡಿದೆ ಎನ್ನಲಾಗಿದ್ದು, ಅದಲ್ಲದೇ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಬರೋಬ್ಬರಿ 125 ಕೋಟಿ ಬಹುಮಾನ ಘೋಷಿಸಿದೆ. ಈ ಬಹುಮಾನವು ಸಂಪೂರ್ಣ ತಂಡ ಅಂದರೆ ಆಟಗಾರರನ್ನು ಸೇರಿಸಿ ಕೋಚ್, ಸ್ಟಾಫ್‌ಗಳಿಗೂ ಸೇರಿದೆ.

ಈ ಬಗ್ಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಭಾರತ ತಂಡವವು ವಿಶ್ವಕಪ್ ಅನ್ನು ಗೆದ್ದಿರುವ ನಿಟ್ಟಿನಲ್ಲಿ ಬಿಸಿಸಿಐನಿಂದ 125 ಕೋಟಿ ಬಹುಮಾನ ಘೋಷಿಸುತ್ತೇನೆ. ಭಾರತ ತಂಡವು ವಿಶ್ವಕಪ್‌ನಲ್ಲಿ ನಿರೀಕ್ಷಿತ ಪ್ರದರ್ಶನ, ಕೌಶಲ್ಯ ಹಾಗೂ ಸ್ಪೋರ್ಟ್ಸ್‌ಮನ್ಸ್ ಸ್ಪಿರಿಟ್ ತೋರಿದೆ. ಟಿ20 ವಿಶ್ವಕಪ್‌ನಲ್ಲಿ ತೋರಿರುವ ಪ್ರದರ್ಶನಕ್ಕಾಗಿ ಭಾರತದ ಆಟಗಾರರಿಗೂ, ಕೋಚ್‌ಗಳಿಗೂ, ಸಹಾಯಕ ಸಿಬ್ಬಂದಿಗಳಿಗೂ ಅಭಿನಂದನೆಗಳು ಎಂದು ಬರೆದುಕೊಂಡಿದ್ದಾರೆ.

ಭಾರತ ತಂಡಕ್ಕೆ ಈಗಾಗಲೇ 20.42 ಕೋಟಿ ಬಹುಮಾನ ದೊರತಿದೆ. ಇದಾದ ಬಳಿಕವು ಬಿಸಿಸಿಐ ದೊಡ್ಡ ಮೊತ್ತ ಘೋಷಣೆ ಮಡಿದ್ದು, ಎಲ್ಲರ ಹುಬ್ಬೇರುವಂತೆ ಮಾಡಿದೆ. ಪ್ರಮುಖವಾಗಿ ಯಾವುದೇ ದೇಶ ಘೋಷಣೆ ಮಾಡದ ಮೊತ್ತವನ್ನು ಭಾರತ ಮಾಡಿದೆ. ಅದಲ್ಲದೆ, ಈ ಹಿಂದೆ ಗೆದ್ದಿದ್ದ 2007 ಹಾಗೂ 2011ರಲ್ಲಿ ಘೋಷಿಸಿದ್ದ ಮೊತ್ತದಕಿಂತ ಈ ಬಾರಿಯ ಬಹುಮಾನ ದೊಡ್ಡದಾಗಿದೆ.

ಹುಟ್ಟುಹಬ್ಬದ ಗಿಫ್ಟ್ ಎಂದ ಧೋನಿ

ಬೆಂಗಳೂರು: ಹಲವು ದಿನಗಳಿಂದ ಮಾಯವಾಗಿದ್ದ ಭಾರತ ತಂಡದ ಮಜಿ ನಾಯಕ ವಿಶ್ವಕಪ್ ಗೆಲ್ಲುತ್ತಿದ್ದಂತೆ. ಪ್ರತ್ಯಕ್ಷರಾಗಿದ್ದಾರೆ. ಐಪಿಎಲ್ ಮುಗಿದ ನಂತರ ಮಾಜಿ ನಾಯಕ ಧೋನಿ ಎಲ್ಲೂ ಕಂಡಿರಲಿಲ್ಲ. ಅದರಲ್ಲೂ ಸಾಮಾಜಿಕ ಜಾಲತಾಣದಿಂದ ಯಾವಾಗಲೂ ದೂರವಿರುವ ಧೋನಿ ಇದೀಗ ವಿಶ್ವಕಪ್ ಗೆದ್ದ ನಂತರ ಪೋಸ್ಟ್ ಮಾಡಿದ್ದು, ವೈರಲ್ ಆಗಿದೆ.

ಭಾರತ ವಿಶ್ವಕಪ್ ಗೆದ್ದ ಬಳಿಕ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿಕೊಂಡ ಅವರು, ಪ್ರತಿಕೂಲ ಸಂದರ್ಭದಲ್ಲಿ ಶಾಂತತೆಯನ್ನು ಕಾಯ್ದುಕೊಂಡಿದ್ದಕ್ಕಾಗಿ ತಂಡದ ಆಟಗಾರರನ್ನು ಅಭಿನಂದಿಸಿದ್ದಾರೆ. ಮುಂದಿನ ತಿಂಗಳ ಆರಂಭದಲ್ಲಿ 43 ನೇ ವರ್ಷಕ್ಕೆ ಕಾಲಿಡಲಿರುವ ಧೋನಿ, ವಿಶ್ವಕಪ್ ಅನ್ನು ಮನೆಗೆ ತಂದಿದ್ದಕ್ಕಾಗಿ ದೊಡ್ಡ ಧನ್ಯವಾದಗಳು. ಇದೇ ನನ್ನ ಹುಟ್ಟುಹಬ್ಬದ ಉಡುಗೊರೆ ಎಂದು ಬರೆದುಕೊಂಡಿದ್ದಾರೆ.

ಟಿ20ಯಲ್ಲಿ ಯುವಕರ ದರ್ಬಾರ್

ಬೆಂಗಳೂರು: ಟಿ20 ವಿಶ್ವಕಪ್‌ನಲ್ಲಿ ಭಾರತ ಭರ್ಜರಿ ಗೆಲುವು ಸಾಧಿಸಿದ್ದು, ಈ ಟೂರ್ನಿಯ ಬಳಿಕ ಭಾರತದ ಮೇರು ಆಟಗಾರರಾದ ರೋಹಿತ್ ಶರ್ಮ, ವಿರಾಟ್ ಕೊಹ್ಲಿ ಹಾಗೂ ಜಡೇಜಾ ಟಿ20 ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಭಾರತ ತಂಡವನ್ನು ಯುವಕರು ಮುನ್ನಡಿಸಬೇಕಾಗಿದೆ. ಭಾರತ ತಂಡದಲ್ಲಿ ಇದ್ದ ಹಿರಿಯ ಆಟಗಾರರು ಅಂತಾರಾಷ್ಟ್ರೀಯ ಟಿ20ಯಿಂದ ನಿವೃತ್ತರಾಗಿದ್ದು, ತಂಡದ ಜವಾಬ್ದಾರಿಯನ್ನುಯುವಕರ ಹೆಗಲಿಗೆ ಹಾಕಿದ್ದಾರೆ. ಭಾರತದ ರನ್ ಮಶಿನ್, ಹಿಟ್‌ಮ್ಯಾನ್, ಜಡೇಜಾ ನಿವೃತ್ತರಾದ ತಂಡದ ಅತ್ಯಂತ ಹಿರಿಯ ಆಟಗಾರರಾಗಿದ್ದಾರೆ. ಈ ನಿಟ್ಟಿನಲ್ಲಿ ಟಿ20 ತಂಡದಲ್ಲಿ ಯುವಕರದ್ದೇ ದರ್ಬಾರ್ ಆಗಲಿದೆ. ತಂಡದ ಉಪನಾಯಕನಾಗಿದ್ದ ಹಾರ್ದಿಕ್ ಪಾಂಡ್ಯ ಅವರಿಗೆ ನಾಯಕನ ಪಟ್ಟ ಕಟ್ಟುವ ಸಾಧ್ಯತೆಯಿದೆ. ಅದಲ್ಲದೇ, ಭಾರತದ ಕೋಚ್ ಹುದ್ದೆಗೆ ರಾಹುಲ್ ದ್ರಾವಿಡ್ ವಿದಾಯ ಹೇಳಿದ್ದು, ನೂತನ ಕೋಚ್ ಗೌತಮ್ ಗಂಭೀರ್ ಆಗಲಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಅವರು ಕೋಚ್ ಆದರೆ ಅವರಿಗೆ ಯುವಕರ ತಂಡ ಕಟ್ಟುವ ಜವಾಬ್ದಾರಿ ಇರಲಿದೆ.

ಫಾಲೋ ಆನ್ ಭೀತಿಯಲ್ಲಿ ಆಫ್ರಿಕಾ

ಚೆನ್ನೈ: ದಕ್ಷಿಣ ಆಫ್ರಿಕಾ ವನಿತೆಯರ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ತನ್ನ ಹಿಡಿತ ಮುಂದುವರಿಸಿದ ಭಾರತ ತಂಡ ಸುಲಭ ಗೆಲುವಿನತ್ತ ಸಾಗಿದೆ. ಸ್ಪಿನ್ನರ್ ಸ್ನೇಹ್ ರಾಣಾ ಬೌಲಿಂಗ್ ದಾಳಿಗೆ ಬೆಚ್ಚಿದ ದಕ್ಷಿಣ ಆಫ್ರಿಕಾ ದಿಢೀರ್ ಕುಸಿತ ಕಂಡಿದೆ. ಎರಡನೇ ದಿನದಾಟದ ಅಂತ್ಯಕ್ಕೆ ನಾಲ್ಕು ವಿಕೆಟ್ ನಷ್ಟಕ್ಕೆ 236 ರನ್ ಗಳಿಸಿದ್ದ ಆಫ್ರಿಕಾ, ಭಾನುವಾದ ಮುಕ್ತಾಯಕ್ಕೆ ಕೇವಲ 30 ರನ್ ಒಟ್ಟುಗೂಡಿಸಿ ಸರ್ವಪತನ ಕಂಡಿದೆ. ಭರ್ಜರಿ ದಾಳಿ ಸಂಘಟಿಸಿದ ಸ್ನೇಹ್ ರಾಣಾ ಎಂಟು ವಿಕೆಟ್ ಕಿತ್ತರು. ದಕ್ಷಿಣ ಆಫ್ರಿಕಾ ಫಾಲೋ ಆನ್ ಭೀತಿಯಲ್ಲಿದೆ. 69 ರನ್ ಗಳಿಸಿ ಬ್ಯಾಟಿಂಗ್ ಕಾಯ್ದುಕೊಂಡಿದ್ದ ಮರಿಜಾನೆ ಕಪ್ಪ್ 74 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕ್ಲರ್ಕ್ 39 ರನ್ ಗಳಿಸಿದರು. ಕೊನೆಯಲ್ಲಿ ದ.ಆಫ್ರಿಕಾ ತಂಡವು 266 ರನ್ ಗಳಿಗೆ ಸರ್ವಪತನ ಕಂಡಿದೆ. ಭಾರತದ ಪರ ಸ್ನೇಹ್ ರಾಣಾ ಎಂಟು ವಿಕೆಟ್ ಪಡೆದರು. ಎರಡು ವಿಕೆಟ್ ದೀಪ್ತಿ ಶರ್ಮಾ ಪಡೆದರು. ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ ಆರು ವಿಕೆಟ್ ನಷ್ಟಕ್ಕೆ 603 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ದಕ್ಷಿಣ ಆಫ್ರಿಕಾ 266 ರನ್ ಗೆ ಆಲೌಟಾಗಿ 337 ರನ್ ಹಿನ್ನಡೆ ಅನುಭವಿಸಿದೆ.

ವಿಶ್ವಕಪ್ ಬಳಿಕ ಕೊಹ್ಲಿ, ದ್ರಾವಿಡ್, ರೋಹಿತ್, ಜಡೇಜಾ ವಿದಾಯ

ಭಾರತಕ್ಕೆ ನಾಲ್ಕು ಶಾಕ್

ಬ್ರಿಡ್ಜಟೌನ್: ಭಾರತ ವಿಶ್ವಕಪ್ ಗೆದ್ದಿರುವ ಬೆನ್ನಲೇ ಭಾರತದ ರನ್ ಮಶಿನ್ ವಿರಾಟ್, ಹಿಟ್‌ಮ್ಯಾನ್ ಹಾಗೂ ರವೀಂದ್ರ ಜಡೇಜಾ ಟಿ20 ಕ್ರಿಕೆಟ್‌ನಿಂದ ವಿದಾಯ ಹೇಳಿದ್ದಾರೆ. ವಿಶ್ವಕಪ್ ಗೆದ್ದ ನಂತರದ ಸಂದರ್ಶನದಲ್ಲಿ ಮಾತನಾಡಿದ್ದ ಕೊಹ್ಲಿ, ತಾವು ನಿವೃತ್ತರಾಗುವುದನ್ನು ಹೇಳಿದರೆ, ಪಂದ್ಯದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ನಾಯಕ ರೋಹಿತ್ ಶರ್ಮ ವಿದಾಯ ಘೋಷಿಸಿದ್ದಾರೆ. ಇನ್ನು ಭಾರತದ ಆಲ್ ರೌಂಡರ್ ರವೀಂದ್ರ ಜಡೇಜಾ ಸಾಮಾಜಿಕ ಜಾಲತಾಣದ ಮೂಲಕ ವಿದಾಯ ಘೋಷಿಸಿದ್ದಾರೆ. ಈ ಬಾರಿಯ ವಿಶ್ವಕಪ್‌ನಲ್ಲಿ ಆರಂಭಿಕರಾಗಿದ್ದ ಕೊಹ್ಲಿ, ನಾಯಕನಾಗಿದ್ದ ರೋಹಿತ್ ಶರ್ಮ ಮತ್ತು ಆಲ್‌ರೌಂಡರ್ ಆಗಿದ್ದ ಜಡೇಜಾ ನಿವೃತ್ತರಾಗಿದ್ದಾರೆ. ಟಿ20 ಮಾದರಿಯಲ್ಲಿ ಮಾತ್ರ ನಿವೃತ್ತರಾಗಿರುವ ಇವರು, ಟೆಸ್ಟ್ ಹಾಗೂ ಏಕದಿನದಲ್ಲಿ ಮುಂದುವರಿಯಲಿದ್ದಾರೆ.

ರವೀಂದ್ರ ಜಡೇಜಾ

ಸರ್ ರವೀಂದ್ರ ಜಡೇಜಾ ಎಂದು ಕರೆಯಲ್ಪಡುವ ಆಲ್ ರೌಂಡರ್ ಜಡೇಜಾ ಅಂತಾರಾಷ್ಟ್ರೀಯ ಟಿ20 ಮಾದರಿಗೆ ವಿದಾಯ ಹೇಳಿದ್ದಾರೆ. ಬಲಿಷ್ಠ ಆಲ್‌ರೌಂಡರ್ ಆಗಿರುವ ಅವರು, ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಗಮನ ಸೇಳೆದಿದ್ದಾರೆ. 2009ರಂದು ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಅವರು, ವಿಶ್ವಕಪ್ ಗೆದ್ದ ಬೆನ್ನಲೇ ವಿದಾಯ ಘೋಷಿಸಿದ್ದಾರೆ.

ರೋಹಿತ್ ಶರ್ಮ

ಟೀಂ ಇಂಡಿಯಾದ ಹಿಟ್‌ಮ್ಯನ್ ಎಂಬ ಬಿರುದು ಪಡೆದಿರುವ ರೋಹಿತ್ ಶರ್ಮ ಭಾರತಕ್ಕೆ ಮೊದಲಿಗೆ ಸ್ಪಿನ್ನರ್ ಆಗಿ ಬಂದಿದ್ದರು. ಆದರೆ 2014ರ ಸಂದರ್ಭದಲ್ಲಿ ನಾಯಕನಾಗಿದ್ದ ಧೋನಿ ಅವರನ್ನು ಬ್ಯಾಟಿಂಗ್‌ಗೆ ಇಳಿಸಿ ಓಪ್ನರ್ ಮಾಡಿದ್ದರು. ಟಿ20 ಮಾದರಿಯಲ್ಲಿ ವಿಶೇಷವಾಗಿ ಬ್ಯಾಟಿಂಗ್ ಮಾಡುವ ಅವರು, 2007ರ ಟಿ20 ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಈಗ ದ.ಆಫ್ರಿಕಾ ವಿರುದ್ಧ ಕೊನೆಯ ಟಿ20 ಕ್ರಿಕೆಟ್ ಪಂದ್ಯವಾಗಿದೆ.

ದಾಖಲೆಗಳು: ಭಾರತದ ಪರ 151 ಪಂದ್ಯಗಳನ್ನು ಆಡಿರುವ ಅವರು, 4231 ರನ್ ಗಳಿಸಿದ್ದು, ಗರಿಷ್ಠ ರನ್ ಬಾರಿಸಿದ ನಾಯಕರಾಗಿದ್ದಾರೆ. ಅಲ್ಲದೆ, ನಾಯಕನಾಗಿ ವಿಶ್ವಕಪ್ ಗೆದ್ದ ಎರಡನೇ ಆಟಗಾರರಾಗಿದ್ದಾರೆ. 205 ಸಿಕ್ಸ್ ಬಾರಿಸಿದ ಅವರು ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಆಟಗಾರರಾ ಗಿದ್ದಾರೆ.

ಟಿ20 ವಿಶ್ವಕಪ್‌ನಲ್ಲಿ ಗೆಲುವು: 2007(ಆಟಗರ), 2024 ನಾಯಕ

ಇದು ನನ್ನ ಕೊನೆಯ ಟಿ20 ಪಂದ್ಯವಾಗಿದೆ. ಇದೇ ನನ್ನ ಕೊನೆಯ ಆಟವಾಗಿದೆ. ನಾನು ಟಿ20 ಕ್ರಿಕೆಟ್ ಆಡಲು ಪ್ರಾರಂಭಿಸಿದ ದಿನದಿಂದಲೂ ಆನಂದಿಸುತ್ತಿದ್ದೇನೆ. ಈ ಸ್ವರೂಪಕ್ಕೆ ವಿದಾಯ ಹೇಳಲು ಉತ್ತಮ ಸಮಯ. ನಾನು ಇದರ ಪ್ರತಿ ಕ್ಷಣವನ್ನು ಪ್ರೀತಿಸುತ್ತೇನೆ. ನಾನು ಕಪ್ ಗೆಲ್ಲಲು ಬಯಸಿದ್ದೆ. ಅದು ಈಗ ನಿಜವಾಗಿದೆ.

-**ರೋಹಿತ್ ಶರ್ಮ**, ಭಾರತದ ನಾಯಕ

ವಿರಾಟ್ ಕೊಹ್ಲಿ

ಭಾರತದ ರನ್ ಮಶಿನ್ ಎಂದು ಕರೆಯಲ್ಪಡುವ ಕಿಂಗ್ ವಿರಾಟ್ ಕೊಹ್ಲಿ ಅವರು, 2010ರ 12 ಜೂನ್ ರಂದು ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ತಮ್ಮ ಕ್ಲಾಸಿಕ್ ಆಟದ ಮೂಲಕವೇ ಪ್ರಸಿದ್ಧರಾಗಿರುವ ಇವರು, ಟಿ20 ಮಾದರಿಯಲ್ಲಿ ಮೊದಲನೇ, ಎರಡನೇ ಹಾಗೂ ಮೂರನೇ ಕ್ರಮಾಂಕದಲ್ಲಿ ಆಡದ್ದಾರೆ. ದ.ಆಫ್ರಿಕಾ ವಿರುದ್ಧದ ಪಂದ್ಯವು ಅವರ ಕೊನೆಯ ಪಂದ್ಯವಾಗಿದೆ.

ದಾಖಲೆಗಳು: ಭಾರತದ ವಿರಾಟ್ ಕೊಹ್ಲಿ ವಿಶ್ವದಲ್ಲಿ ಟಿ20ಯಲ್ಲಿ ಅತಿರನ್ ಬಾರಿಸಿದ ಬ್ಯಾಟರ್ ಆಗಿದ್ದಾರೆ. ಅದಲ್ಲದೆ, ವಿಶ್ವಕಪ್‌ನಲ್ಲೂ ಭಾರತದ ಪರ ಅತಿ ಹೆಚ್ಚು ರನ್ ಬಾರಿಸಿದ ಆಟಗಾರರಾಗಿದ್ದಾರೆ. ಟಿ20 ಇತಿಹಾಸದಲ್ಲಿ ಭರ್ಜರಿ ಪ್ರದರ್ಶನ ನೀಡಿದ ಅವರು, ಎರಡು ಬಾರಿ ವಿಶ್ವಕಪ್ ಸರಣಿಶ್ರೇಷ್ಠ ಆಟಗಾರರಾಗಿದ್ದಾರೆ.

ಭಾರತಕ್ಕಾಗಿ ಇದು ನನ್ನ ಕೊನೆಯ ಟಿ20 ಪಂದ್ಯವಾಗಿದೆ. ನಾವು ವಿಶ್ವಕಪ್ ಅನ್ನು ಎತ್ತಲು ಬಯಸಿದ್ದೇವು, ನಾನು ನಿವೃತ್ತಿ ಯೋಚನೆ ಹೊಂದಿದ್ದೇನೆ, ಇದು ಬಹಿರಂಗ ರಹಸ್ಯವಾಗಿತ್ತು. ನಾವು ಸೋತಿದ್ದರೂ ಇದನ್ನೇ ಹೇಳುತ್ತಿದ್ದೆ. ಮುಂದಿನ ಪೀಳಿಗೆಗೆ ಟಿ20 ಕ್ರಿಕೆಟ್ ಅನ್ನು ಮುಂದಕ್ಕೆ ಕೊಂಡೊಯ್ಯುವ ಸಮಯವಾಗಿದೆ.

-**ವಿರಾಟ್ ಕೊಹ್ಲಿ**, ಮಾಜಿ ನಾಯಕ

ಟಿ20ಯಲ್ಲಿ ರೋಹಿತ್

ಪಂದ್ಯ	ಇನ್ನಿಂಗ್ಸ್	ರನ್	ಗರಿಷ್ಠ ಸ್ಕೋರ್	ಸರಾಸರಿ	ಸ್ಟ್ರೈಕ್‌ರೇಟ್	50/100
159	151	4231	121	31.34	148.89	32/5

ಟಿ20ಯಲ್ಲಿ ಕೊಹ್ಲಿ

ಪಂದ್ಯ	ಇನ್ನಿಂಗ್ಸ್	ರನ್	ಗರಿಷ್ಠ ಸ್ಕೋರ್	ಸರಾಸರಿ	ಸ್ಟ್ರೈಕ್‌ರೇಟ್	50/100
125	117	4188	122	48.7	137.04	38/1

ಟಿ20ಯಲ್ಲಿ ಜಡೇಜಾ (ಬ್ಯಾಟಿಂಗ್)

ಪಂದ್ಯ	ಇನ್ನಿಂಗ್ಸ್	ರನ್	ಗರಿಷ್ಠ	ಸರಾಸರಿ	ಸ್ಟ್ರೈಕ್‌ರೇಟ್
74	41	515	46	21.46	127.16

ಬೌಲಿಂಗ್

ಪಂದ್ಯ	ಇನ್ನಿಂಗ್ಸ್	ಬಾಲ್‌ಗಳು	ರನ್‌ಗಳು	ಮೆಡನ್	ವಿಕೆಟ್	ಸರಾಸರಿ	ಬೆಸ್ಟ್
74	74	1356	1612	4	54	29.85	15/3

ಕೋಚ್ ಆಗಿ ರಾಹುಲ್ ದ್ರಾವಿಡ್

ಮಾದರಿ	ಪಂದ್ಯ	ಗೆಲುವು	ಸೋಲು	ಟೈ	ಡ್ರಾ	ವಿನ್ನಿಂಗ್ ಶೇ.
ಟೆಸ್ಟ್	24	14	7	0	3	58.33
ಏಕದಿನ	53	36	14	0	3	72
ಟಿ20	71	52	16	2	1	75.36
ಒಟ್ಟು	148	102	37	2	7	68.70

ರಾಹುಲ್ ದ್ರಾವಿಡ್

ಬಿಸಿಸಿಐನ ನಿಯಮದ ಪ್ರಕಾರ ರಾಹುಲ್ ದ್ರಾವಿಡ್ ಅವರ ಕೋಚ್ ಅವಧಿ ಮುಕ್ತಾಯಗೊಂಡಿದ್ದು, ಅವರೂ ಸಹ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

ಕ್ರಿಕೆಟ್ ವಾಲ್ ಖ್ಯಾತಿಯ ಕನ್ನಡಿಗ ರಾಹುಲ್ ದ್ರಾವಿಡ್ ಭಾರತದ ಪರ ಆಟಗಾರ ನಾಗಿ ಭರ್ಜರಿ ಕೊಡುಗೆ ನೀಡಿದ್ದರು. ಅದರಲ್ಲೂ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ವಿಶೇಷ ಹೆಸರು ಗಳಿಸಿದ್ದರು. 2003ರಲ್ಲಿ ಭಾರತ ಫೈನಲ್‌ಗೇರಿದ್ದಾಗ ಭಾರತವನ್ನು ಗೆಲ್ಲಿಸಲು ಭಾರೀ ಪ್ರಯತ್ನ ಮಾಡಿದ್ದರು.

ಅದಲ್ಲದೆ, ಇದೀಗ ಕೋಚ್ ಅವಧಿಯಲ್ಲೂ ಸಾಧನೆ ಮಾಡಿದ ಅವರು ವಿಶ್ವಕಪ್ ಮುಗಿದ ಬೆನ್ನಲೇ ವಿದಾಯ ಘೋಷಿಸಿದ್ದಾರೆ.

20 ತಂಡಗಳ ನಡುವೆ ನಡೆದ 55 ಪಂದ್ಯಗಳ ಬಳಿಕ ವಿಶ್ವ ಚಾಂಪಿಯನ್ ಭಾರತ | ಯಶಸ್ವಿಗೊಂಡ 2024ನೇ ವಿಶ್ವಕಪ್ | ರೋಚಕವಾಗಿದ್ದ ವಿಶ್ವಸಮರ

ಕಾಯ್ದು ಬೆಂದ ಭಾರತಕ್ಕೆ ಸಂದ ವಿಶ್ವ ಕಿರೀಟ

ಬ್ರಿಡ್ಜಟೌನ್: 17 ವರ್ಷ ಕಾಯ್ದ ಬಳಿಕ ಭಾರತಕ್ಕೆ ವಿಶ್ವ ಕಿರೀಟ ಒಲಿದಿದೆ. 20 ತಂಡಗಳ ನಡುವೆ ನಡೆದ 55 ಪಂದ್ಯಗಳ ಬಳಿಕ ಭಾರತ ವಿಶ್ವಚಾಂಪಿಯನ್ ಪಟ್ಟ ಮೂಡಿಗೇರಿಸಿಕೊಂಡಿದೆ. ಈ ಹಿನ್ನಲೆಯಲ್ಲಿ ಇಡೀ ಭಾರತದಲ್ಲಿ ಭರ್ಜರಿ ಸಂಭ್ರಮಾಚರಣೆ ನಡೆದಿದೆ. ಪ್ರಮುಖವಾಗಿ ಫೈನಲ್ ಪಂದ್ಯದಲ್ಲಿ ಭಾರತ ತೋರಿದ್ದ ಪ್ರದರ್ಶನ ಎಲ್ಲೆಡೆ ಮೆಚ್ಚುಗೆಗೆ ಕಾರಣವಾಗಿದೆ. ಇಡೀ ವಿಶ್ವಕಪ್‌ನಲ್ಲಿ ಭಾರತ ಭರ್ಜರಿ ಪ್ರದರ್ಶನ ನೀಡಿದ್ದು, ಪ್ರತಿಫಲ ದೊರೆತಿದೆ.

1983, 2007, 2011ರ ಬಳಿಕ ಭಾರತ ವಿಶ್ವಕಪ್ ಗೆದ್ದಿದ್ದು, ಇತಿಹಾಸ ಬರೆದಿದೆ. ಈ ಬಾರಿಯ ವಿಶ್ವಕಪ್‌ನಲ್ಲಿ ಭಾರತ ವಿಭಿನ್ನ ಪ್ರದರ್ಶನ ತೋರಿದೆ. ಭಾರತ ವಿಶ್ವಕಪ್ ಗೆದ್ದಿರುವುದು ಒಂದೆಡೆ ಆದರೆ ಮೊದಲನೇ ಬಾರಿಗೆ ವಿಶ್ವಕಪ್ ಆಯೋಜಿಸಿದ್ದ ಅಮೆರಿಕ ಹಾಗೂ ಎರಡನೇ ಬಾರಿಗೆ ಆಯೋಜಿಸಿದ್ದ ವೆಸ್ಟ್ ಇಂಡೀಸ್ ಶ್ಲಾಘನೀಯ ಕಾರ್ಯ ವಹಿಸಿವೆ. ವಿಶ್ವ ಕಪ್ ಎಂದರೆ ರೋಚಕ ಪಂದ್ಯಗಳ ಒಕ್ಕೂಟ ಎನ್ನ ಬಹುದು. ಅದರಂತೆ ಈ ಬಾರಿಯ ವಿಶ್ವಕಪ್‌ನಲ್ಲಿ ರೋಚಕ ಪಂದ್ಯಗಳೂ ಕಂಡಿವೆ.

ಫೈನಲ್ ಭಾರತ ಹಾಗೂ ದ.ಆಫ್ರಿಕಾ

ವಿಶ್ವಕಪ್‌ನ ನಿರ್ಣಾಯಕ ಪಂದ್ಯವು ಭಾರೀ ರೋಚಕವಾಗಿತ್ತು. ಪ್ರಮುಖವಾಗಿ ಚೋಕರ್ ಪಟ್ಟ ಕಟ್ಟಿಕೊಂಡ ದ.ಆಫ್ರಿಕಾ ಹಾಗೂ 17 ವರ್ಷಗಳಿಂದ ಗೆದ್ದಿರದ ಭಾರತದ ನಡುವಣ ಪಂದ್ಯವು ರೋಚಕವಾಗಿತ್ತು. 177 ರನ್ ಬೆನ್ನಟ್ಟಿದ ದ.ಆಫ್ರಿಕಾ ಇನ್ನಿಂಗ್ಸ್‌ನ ಆರಂಭದಲ್ಲಿ ಭಾರತ ಪಾರಮ್ಯ ವಹಿಸಿತ್ತು. ಆರಂಭಿಕ ಓವರ್‌ಗಳಲ್ಲಿ ಭಾರತ ದ.ಆಫ್ರಿಕಾದ ಪ್ರಮುಖ ರಡು ವಿಕೆಟ್ ಪಡೆದು ಹಿಡಿತ ಸಾಧಿಸಿತ್ತು. ಆದರೆ ಮಧ್ಯಮ ಕ್ರಮಾಂಕದಲ್ಲಿ ಬಂದ ಕ್ಲಾಸೆನ್ ಭಾರತದ ಸ್ಪಿನ್ನರ್‌ಗಳನ್ನು ಕ್ಲಾಸ್ ತೆಗೆದುಕೊಂಡಿದ್ದರು. ಆದರೆ ಡೆತ್ ಓವರ್‌ಗಳಲ್ಲಿ ಭಾರತದ ವೇಗಿಗಳು ಮತ್ತೆ ಪಾರಮ್ಯ ವಹಿಸಿದ್ದರು. ಪರಿಣಾಮ 30 ಬಾಲ್‌ಗಳಲ್ಲಿ 31 ರನ್ ಬೇಕಿದ್ದ ದ.ಆಫ್ರಿಕಾಗೆ ಕೊನೆಯ ಓವರ್‌ನಲ್ಲಿ 16 ರನ್ ಬೇಕಾಯಿತು. ಮೊದಲ ಎಸೆತದಲ್ಲಿ ಸೂರ್ಯ ಹಿಡಿದ ಕ್ಯಾಚ್ ಮರಿಯುವಂತಿಲ್ಲ, ಕೊನೆ ಎಸೆತದವರೆಗೂ ಬಂದ ಪಂದ್ಯದಲ್ಲಿ ಭಾರತ 7 ರನ್ ಗಳಿಂದ ಗೆಲುವು ಸಾಧಿಸಿತು.

ಅಫ್ಘಾನಿಸ್ತಾನ ಹಾಗೂ ಬಾಂಗ್ಲಾ

ಸೂಪರ್ 8ನಲ್ಲಿ ಅಫ್ಘಾನಿಸ್ತಾನವು ಪವಾಡ ಮಾಡಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಅಫ್ಘಾನಿಸ್ತಾನವು 115 ರನ್ ಗಳಿಸಿತ್ತು. ಮಳೆ ಬಂದ ಕಾರಣ ಬಾಂಗ್ಲಾ ತಂಡಕ್ಕೆ 19 ಓವರ್‌ಗಳಲ್ಲಿ 114 ರನ್ ಬೇಕಿತ್ತು. ಪಂದ್ಯದಲ್ಲಿ ಕೊನೆಯವರೆಗೂ ಹಿಡಿತ ಸಾಧಿಸಿತ್ತು. ಆದರೆ, ಕೊನೆಯಲ್ಲಿ ನವೀನ್ ಉಲ್ ಹಕ್ ಅವರು ಕಿತ್ತ ಬ್ಯಾಕ್ ಟು ಬ್ಯಾಕ್ ವಿಕೆಟ್‌ನಿಂದಾಗಿ ಬಾಂಗ್ಲಾ 105ಕ್ಕೆ ಸರ್ವಪತ್ನ ಕಂಡಿತ್ತು.

ಭಾರತ ಹಾಗೂ ಪಾಕಿಸ್ತಾನ

ವಿಶ್ವಕಪ್‌ನ ಲೀಗ್ ಹಂತದಲ್ಲಿ ಭಾರತ ಹಾಗೂ ಪಾಕಿಸ್ತಾನ ಕದನವು ರೋಚಕ ರೋಚಕವಾಗಿತ್ತು. ಬ್ಯಾಟಿಂಗ್‌ನಲ್ಲಿ ಕುಸಿದಿದ್ದ ಭಾರತ ಕೇವಲ 119 ರನ್ ಗಳಿಸಿತ್ತು. ಅದನ್ನು ಬೆನ್ನುಹತ್ತಿದ್ದ ಪಾಕಿಸ್ತಾನ ತಂಡ ಆರಂಭದಲ್ಲೇ ಸ್ಫೋಟಕ ಬ್ಯಾಟಿಂಗ್ ಮಾಡಿತ್ತು. ಆದರೆ ಭಾರತದ ಬೌಲರ್‌ಗಳು ತೋರಿದ್ದ ಪ್ರದರ್ಶನದಿಂದ ಪಾಕ್ ಬೆಚ್ಚಿಬಿದ್ದಿತ್ತು. ಬುಮ್ರಾ ಅವರ ಮಾರಕ ಬೌಲಿಂಗ್‌ಗೆ ತತ್ತರಿಸಿದ್ದ ಪಾಕಿಸ್ತಾನ 20 ಓವರ್‌ಗಳಲ್ಲಿ 113 ಗಳಿಸಲಷ್ಟೇ ಶಕ್ತವಾಗಿತ್ತು.

ಬೆಸ್ಟ್ ಬ್ಯಾಟರ್‌ಗಳು

ಬ್ಯಾಟರ್	ಪಂದ್ಯ	ರನ್	ಸರಾಸರಿ
ರೆಹ್ಮದ್ದುಲ್ಲಾ ಗುರ್ಬಾಜ್	8	281	35.12
ರೋಹಿತ್ ಶರ್ಮ	8	257	36.71
ಟ್ರಾವಿಸ್ ಹೆಡ್	7	255	42.50

ಬೆಸ್ಟ್ ಬೌಲರ್‌ಗಳು

ಬೌಲರ್	ಪಂದ್ಯ	ವಿಕೆಟ್	ಸರಾಸರಿ
ಫಜಲ್ ಫಾರೂಕಿ	9	17	8.94
ಅರ್ಶ್‌ದೀಪ್	8	17	10.12
ಜಸ್‌ಪ್ರೀತ್ ಬೂಮ್ರಾ	8	15	11.86

ಟ್ರೋಫಿಯನ್ನು ಭಾವುಕರಾಗಿ ಮುದ್ದಾಡಿದ ರಾಹುಲ್.

ದ.ಆಫ್ರಿಕಾ ಹಾಗೂ ನೇಪಾಳ

ಮೊದಲ ಬಾರಿಗೆ ವಿಶ್ವಕಪ್ ಆಡಿದ್ದ ನೇಪಾಳ ಹರಿಣರ ಬೆವರಿಳಿಸಿತ್ತು. ಲೀಗ್ ಹಂತದ ಪಂದ್ಯದಲ್ಲಿ ಮೊದಲಿಗೆ ಬ್ಯಾಟಿಂಗ್ ಮಾಡಿದ್ದ ದ.ಆಫ್ರಿಕಾ ನೇಪಾಳದ ಬಿಗಿ ಬೌಲಿಂಗ್ ದಾಳಿಗೆ ಸಿಲುಕಿ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 115 ರನ್ ಗಳಿಸಿತ್ತು. ಅದನ್ನು ಬೆನ್ನುಹತ್ತಿದ್ದ ನೇಪಾಳವು ಭರ್ಜರಿ ಬ್ಯಾಟಿಂಗ್ ಪ್ರದರ್ಶನ ತೋರಿತ್ತು. ಆದರೆ ಕೊನೆಯ ಎಸೆತದಲ್ಲಿ ದ.ಆಫ್ರಿಕಾ ಕೇವಲ 1 ರನ್‌ನಿಂದ ದೆದ್ದಿತ್ತು.

ಪಾಕಿಸ್ತಾನ ಹಾಗೂ ಅಮೆರಿಕ

ಕ್ರಿಕೆಟ್ ಶಿಶುಗಳಾದ ಅಮೆರಿಕ ಹಾಗೂ ಪಾಕಿಸ್ತಾನ ನಡುವಣ ಪಂದ್ಯವು ರೋಚಕವಾಗಿತ್ತು. ಇದೇ ಮೊದಲು ಬಾರಿಗೆ ಆಡಿದ ಅಮೆರಿಕ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಅಮೆರಿಕದ ಬಿಗಿ ಬೌಲಿಂಗ್ ದಾಳಿಯಿಂದಾಗಿ ಪಾಕ್ 159 ರನ್ ಗಳಿಸಿತ್ತು. ಅದನ್ನು ಬೆನ್ನುಹತ್ತಿದ್ದ ಅಮೆರಿಕ 159 ರನ್ ಗಳಿಸಿತ್ತು. ಆದರೆ ಸೂಪರ್ ಓವರ್‌ನಲ್ಲಿ ಅಮೆರಿಕವು ರೋಚಕವಾಗಿ 5 ರನ್‌ನಿಂದ ಗೆದ್ದಿತ್ತು.

ರೋಹಿತ್ ಶರ್ಮ ಬ್ರಿಡ್ಜ್‌ಟೌನ್‌ನ ಮಣ್ಣು ಸವಿಯುವ ಮೂಲಕ ಸ್ಮರಣೀಯವಾಗಿಸಿದ್ದಾರೆ.

ಕುಣಿದು ಕುಪ್ಪಳಿಸಿದ ಭಾರತದ ಅಭಿಮಾನಿಗಳು.

ಸಂಭ್ರಮಾಚರಣೆ

ಟಿ20 ವಿಶ್ವಕಪ್ ಅನ್ನು ಭಾರತ ಎರಡನೇ ಬಾರಿಗೆ ಗೆದ್ದ ಬೆನ್ನಲೆ, ಎಲ್ಲಡೆ ಭರ್ಜರಿ ಸಂಭ್ರಮಾಚರಣೆ ಮೂಡಿ ಬಂದಿತ್ತು. ಸಾಮಾನ್ಯಾವಾಗಿ ಭಾರತದ ಮನೆಮನೆಗಳಲ್ಲಿ ಖುಷಿಯ ಕಹಳೆ ಮೂಡಿತ್ತು. ಆದರೆ ಭಾರತದ ಆಟಗಾರರು ವಿಭಿನ್ನವಾಗಿ ಆಚರಿಸಿಕೊಂಡಿದ್ದಾರೆ. ಪ್ರಮುಖವಾಗಿ ಟ್ರೋಫಿ ನೀಡುವ ಸಂದರ್ಭದಲ್ಲಿ ಭಾರತದನ ನಾಯಕ ರೋಹಿತ್ ಶರ್ಮ ಮೆಸ್ಸಿ ಅವರ ಸ್ಟೈಲ್‌ನಲ್ಲಿ ಟ್ರೋಫಿಯನ್ನು ಪಡೆದರು. ಭಾವುಕರಾಗಿದ್ದ ಪ್ರತಿಯೊಬ್ಬ ಆಟಗಾರರೂ ಕಣ್ಣಲ್ಲಿ ನೀರಿತ್ತು. ತಂಡದ ಪ್ರತಿಯೊಬ್ಬ ಆಟಗಾರ ರೊಂದಿಗೆ ವಿಶೇಷವಾಗಿ ಸಂಭ್ರಮ ಮಾಡಿದ ನಾಯಕ ರೋಹಿತ್ ಶರ್ಮ ಪ್ರತಿಯೊಬ್ಬ ಆಟಗಾರನನ್ನು ತಬ್ಬಿ ಕೊಂಡು ಧನ್ಯವಾದ ತಿಳಿಸಿದ್ದಾರೆ. ಡ್ರೆಸ್ಸಿಂಗ್ ರೂಮ್‌ನಲ್ಲಿ ಸಂಭ್ರಮಾಚರಣೆ ಮುಗಿಲು ಮುಟ್ಟಿತ್ತು. ಪರಂಪರೆಯಂತೆ ಮೆಡಲ್ ಅನ್ನು ಜಯ್ ಶಾ ಅವರು ಪಂದ್ಯ ಗೆಲ್ಲಿಸಿದ್ದ ಸೂರ್ಯಕುಮಾರ್ ಯಾದವ್ ಅವರ ಕ್ಯಾಚ್‌ಗೆ ಚಪ್ಪಾಳೆ ತಟ್ಟಿ ಮೆಡಲ್ ಹಾಕಿದರು.

ಬಹುಮಾನ ಮೊತ್ತ

ಗೆದ್ದ ತಂಡ ▶▶ ಭಾರತ
20.42 ಕೋಟಿ

ರನ್ನರ್‌ಅಪ್ ▶▶ ದ.ಆಫ್ರಿಕಾ
10.6 ಕೋಟಿ

ಸೆಮಿಫೈನಲಿಸ್ಟ್‌ಗಳಿಗೆ ▶▶ ಇಂಗ್ಲೆಂಡ್, ▶▶ ಅಫ್ಘಾನಿಸ್ತಾನ
6.56 ಕೋಟಿ

ರಾಹುಲ್ ಸೆಲೆಬ್ರೇಶನ್

ಭಾರತದ ಕೋಚ್ ಅವಧಿಯನ್ನು ಮುಗಿಸಿರುವ ರಾಹುಲ್ ದ್ರಾವಿಡ್ ಅವರು ವಿಶ್ವಕಪ್ ವಿಜಯವನ್ನು ವಿಭಿನ್ನವಾಗಿ ಆಚರಿಸಿದ್ದಾರೆ. ಮೊದಲಿಗೆ ಭಾವುಕರಾಗಿದ್ದ ಅವರು, ಟ್ರೋಫಿ ನೀಡುವ ಸಂದರ್ಭದಲ್ಲಿ ಅಗ್ರೆಸ್ಸಿವ್ ಆಗಿ ಕಣಿಸಿಕೊಂಡಿದ್ದಾರೆ. ವಿಶೇಷವಾಗಿ ಗಮನ ಸೇಳೆದಿದ್ದೆಂದರೆ, ಅಗ್ರೆಸ್ಸಿವ್ ಕಿಂಗ್ ಎಂದು ಕರೆಯಲಾಗುವ ಕೊಹ್ಲಿ ಕೂಲ್ ಆಗಿ ದ್ರಾವಿಡ್ ಅವರಿಗೆ ಟ್ರೋಫಿ ಹಸ್ತಾಂತರಿಸಿದ್ದರು.

ಯಾವಾಗಲೂ ಕೂಲ್ ಆಗಿದ್ದ ರಾಹುಲ್ ದ್ರಾವಿಡ್ ಭಾವುಕತೆಯಿಂದ ಟ್ರೋಫಿಯನ್ನು ಅಗ್ರೆಸ್ಸಿವ್ ಆಗಿ ಮುದ್ದಾಡಿದರು. ಬಳಿಕ ಪ್ರತಿಕ್ರಿಯೆ ನೀಡಿದ ಅವರು, ನಾನು ತಂಡದ ಆಟಗಾರನಾಗಿದ್ದಾಗ ವಿಶ್ವಕಪ್ ಗೆಲ್ಲಿಸಲು ಪ್ರಯತ್ನ ಪಟ್ಟಿದ್ದೆ. ಅದನ್ನು ನನ್ನ ಹುಡುಗರು ಮಾಡಿಕೊಟ್ಟಿದ್ದಾರೆ ಎಂದರು.

ಪ್ರಧಾನಿ ಸಂದರ್ಶನ

ಭಾರತ ವಿಶ್ವಕಪ್ ಗೆದ್ದ ತಕ್ಷಣವೇ ಕ್ರಿಕೆಟ್ ದಿಗ್ಗಜರು, ರಾಜಕೀಯ ದುರೀಣರು ಸೇರಿ ವಿವಿಧ ಗಣ್ಯರು ಭಾರತ ತಂಡವನ್ನು ಕರೆ ಮಾಡಿ ಶುಭಹಾರೈಸಿದ್ದಾರೆ. ಪ್ರಮುಖವಾಗಿ ಪ್ರಧಾನಿ ಮೋದಿ ಗೆದ್ದ ನಂತರ ವಿಡಿಯೋ ಮೂಲಕ ಭಾರತವನ್ನು ಹಾರೈಸಿದ್ದರು.

ಅದಲ್ಲದೇ, ರಾತ್ರಿ ವೇಳೆ ಭಾರತದ ನಾಯ ರೋಹಿತ್ ಶರ್ಮ, ಕೊಹ್ಲಿ ಹಾಗೂ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಕರೆ ಮಾಡಿ ಶುಭಹಾರೈಸಿದ ಅವರು, ಎಲ್ಲರಿಗೂ ವಿಶೇಷ ಅಭಿನಂದನೆ ತಿಳಿಸಿದ್ದಾರೆ.

ಏಳು ತಿಂಗಳ ಹಿಂದೆ ಭಾರತ ಏಕದಿನ ವಿಶ್ವಕಪ್‌ನಲ್ಲಿ ಸೋಲಿನ ನಂತರ ಎಲ್ಲರಿಗೂ ಸಮಾಧಾನ ಮಾಡಿದ್ದ ಮೋದಿ ಇದೀಗ ವಿಶೇಷ ಅಭಿನಂದನೆ ಸಲ್ಲಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಬಿಹಾರ: ಸೇತುವೆ ಕುಸಿತ 10 ದಿನದಲ್ಲಿ 6ನೇ ಘಟನೆ

ಬಿಹಾರ: ರಾಜ್ಯದಲ್ಲಿ ಸೇತುವೆ ಕುಸಿತ ಘಟನೆಗಳು ಮುಂದುವರೆದಿದ್ದು ಭಾನುವಾರ ಆರನೇ ಸೇತುವೆ ನೀರಿನ ಅಬ್ಬರಕ್ಕೆ ಕುಸಿದಿದೆ. 10 ದಿನದಲ್ಲಿ ಬರೊಬ್ಬರಿ 6 ಸೇತುಗೆಳು ಕುಸಿತದಿಂದ ಬಿಹಾರ ಭಾರಿ ಸುದ್ದಿಯಾಗಿದೆ. ಠಾಕೂರ್‌ಗಂಜ್ ಬ್ಲಾಕ್‌ನ ಖೋಷಿ ದಾಂಗಿ ಗ್ರಾಮದಲ್ಲಿ ಬುಂದ್ ನದಿಗೆ ಕಟ್ಟಲಾಗಿದ್ದ ಸೇತುವೆ ಕುಸಿದು ಬಿದ್ದಿದೆ. 2007-08ರಲ್ಲಿ ಸಂಸದರ ನಿಧಿಯಲ್ಲಿ ಈ ಸೇತುವೆ ನಿರ್ಮಾಣ ಮಾಡಲಾಗಿತ್ತು. ಆದರೆ ಮಳೆ ಹಿನ್ನೆಲೆ ನೀರಿನ ಸೆಳೆತಕ್ಕೆ ಸೇತುವೆ ಕುಸಿದಿದೆ. ಈ ಸೇತುವೆ ಸುಮಾರು 4 ಪಂಚಾಯತ್‌ಗಳನ್ನು ಸಂಪರ್ಕಿಸುತ್ತಿದ್ದು, ಸಂಪೂರ್ಣ ಬಿದ್ದು ಹೋದರೆ 50-60 ಸಾವಿರ ಜನರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಶನಿವಾರ ಮಧುಬಾನಿ ಪ್ರದೇಶದಲ್ಲಿ 3 ಕೋಟಿ ವೆಚ್ಚದ ನಿರ್ಮಾಣ ಹಂತದ ಸೇತುವೆ ಕುಸಿತಗೊಂಡಿತ್ತು. ಇದಕ್ಕೂ ಮೊದಲು ಅರಾರಿಯಾ, ಸಿವಾನ್, ಪೂರ್ವ ಚಂಪಾರನ್ , ಕಿಶನ್‌ಗಂಜ್ ಪ್ರದೇಶದಲ್ಲಿ ಸೇತುವೆಗಳು ಕುಸಿದು ಬಿದ್ದಿತ್ತು. ಈ ಘಟನೆಗಳು ಬಿಹಾರದಲ್ಲಿ ಕಾಮಗಾರಿ ಗುಣಮಟ್ಟದ ಪ್ರಶ್ನೆ ಎತ್ತಿದೆ ಜತೆಗೆ ರಾಜಕೀಯ ಗಲಾಟೆಗೂ ಕಾರಣವಾಗಿದೆ.

ಪೆರಿಫೆರಲ್ ರಿಂಗ್ ರೋಡ್‌ನಲ್ಲಿ ಲೇಔಟ್?

ಬೆಂಗಳೂರು: ಪೆರಿಫೆರಲ್ ರಿಂಗ್ ರಸ್ತೆಯಲ್ಲಿ ಹೊಸದಾಗಿ ಆರು ಲೇಔಟ್‌ಗಳನ್ನು ಅಭಿವೃದ್ಧಿಪಡಿಸಲು ಬಿಡಿಎ ನಿರ್ಧರಿಸಿದ್ದು, ಇವುಗಳಲ್ಲಿ ವಿವಿಧ ರೀತಿಯ 50,000 ನಿವೇಶನಗಳು ಬರಲಿರುವುದರಿಂದ 3500 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದೆ. ಬಿಡಿಎಯ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿ, ಬಿಡಿಎ ನಿವೇಶಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಹೊಸದಾಗಿ 50,000 ನಿವೇಶನ ಅಭಿವೃದ್ಧಿಗೆ ನಿರ್ಧರಿಸಲಾಗಿದೆ. ಎರಡು ದಿನಗಳಿಂದ ಹಿಂದೆಯೇ ನಿರ್ಧರಿಸಲಾಗಿದ್ದು, ಬಿಡಿಎ ತಾತ್ವಿಕ ಒಪ್ಪಿಗೆ ನೀಡಿದೆ. ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿ ಗುರುತಿಸುವಿಕೆಯೊಂದಿಗೆ ಪ್ರಾಥಮಿಕ ಕಾರ್ಯಗಳು ಈಗಾಗಲೇ ಆರಂಭಗೊಂಡಿದೆ ಎಂದು ತಿಳಿಸಿದರು. ಭೂಮಿ ಕಳೆದುಕೊಂಡವರಿಗೆ 40:60 ಯೋಜನೆ ಆಧಾರದ ಮೇಲೆ ಪರಿಹಾರ ನೀಡಲಾಗುವುದು, ಈ ಯೋಜನೆಯಂತೆ ಬಿಡಿಎಗೆ ಭೂಮಿ ನೀಡುವವರಿಗೆ ಅದೇ ಲೇಔಟ್ ನಲ್ಲಿ ಅಭಿವೃದ್ಧಿಪಡಿಸಲಾದ ಶೇ. 40 ರಷ್ಟು ಭೂಮಿಯನ್ನು ನೀಡಲಾಗುವುದು, ಉಳಿದ ಶೇ.60ರಷ್ಟು ಭೂಮಿಯನ್ನು ಬಿಡಿಎ ಉಳಿಸಿಕೊಳ್ಳಲಿದೆ. ಸ್ವಾಧೀನಪಡಿಸಿಕೊಂಡ ಪ್ರತಿ ಎಕರೆ ಭೂಮಿಗೆ 9,583 ಚದರ ಅಡಿ ಅಭಿವೃದ್ಧಿ ಹೊಂದಿದ ಜಮೀನು ನೀಡಲಾಗುವುದು ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

ಬೆಂ.ನಗರ ವಿವಿಯಲ್ಲಿ ಪ್ರಾಕೃತಿಕ ಗತ ವೈಭವ

ಬೆಂಗಳೂರು: ಬೆಂಗಳೂರು ನಗರ ವಿವಿಯ ಪ್ರದೇಶ ವಿಶಿಷ್ಟ ಗಿಡಮರಗಳ ಆಗರವಾಗಿದ್ದು, ಜತೆಗೆ ಹೊಸದಾಗಿ ಗಿಡ ಮರಗಳನ್ನು ನೆಟ್ಟು ಮತ್ತು ಸವಿಸ್ತಾರವಾದ ಪರಿಚಯ ಫಲಕಗಳನ್ನು ಹಾಕಿ ಪಾಕೃತಿಕ ಗತ ವೈಭವನ್ನು ವಿದ್ಯಾರ್ಥಿಗಳಿಗೆ ಮತ್ತು ಜನರಿಗೆ ಪರಿಚಯ ಮಾಡಿಕೊಡಲು ವಿಶ್ವವಿದ್ಯಾಲಯ ಮುಂದಾಗಿದೆ. ಈ ನಿಟ್ಟಿನಲ್ಲಿ ಹೊಸ ಹೊಸ ಬೆಂಚ್‌ಗಳನ್ನು ಹಾಕಿ ಲಾನ್ ಅಭಿವೃದ್ಧಿ ಮಾಡಲಾಗುತ್ತಿದ್ದು, ಬೇರೆ ಬೇರೆ ರಾಜ್ಯಗಳಿಂದ ದೇಶ ವಿದೇಶಗಳಿಂದ ಮರಗಳನ್ನು ತರಿಸಿ ಅದನ್ನು ನೆಟ್ಟು ಹಳೆಯ ಮರ ಗಿಡಗಳನ್ನು ಪುನರ್ ಜೀವನ ಗೊಳಿಸುವ ಕೆಲಸ ಭರದಿಂದ ಸಾಗಿದೆ. ಎಸ್‌ಟಿಪಿ ಪ್ಲಾಂಟ್ ಗಳನ್ನು ಕೂಡ ಹಸದಾಗಿ ಅಳವಡಿಸಲಾಗುತ್ತಿದೆ. 30 ರೈನ್ ವಾಟರ್ ರಿಚಾರ್ಜ್ ಪಿಟ್‌ಗಳನ್ನು ಕೂಡ ನಿರ್ಮಾಣ ಮಾಡಲಾಗುತ್ತಿದ್ದು ನಗರದ ಅಂತರ್ಜಲ ವೃದ್ಧಿಗೆ ಮುಂದಾಗಿದೆ. ಗಿಡ ಮರಗಳ ಅಡಿಟ್ ಕೂಡ ನೆಡೆಸಿ, 100 ವರ್ಷಗಳಷ್ಟು ಹಳೆಯ ಪಾಲ್ಮ್ ಮರಗಳು, 150 ವರ್ಷದ ಆಲದ ಮರ ವಿವಿ ಆವರಣದಲ್ಲಿ ಇದ್ದು ಅದನ್ನು ಮತ್ತಷ್ಟು ವರ್ಷಗಳ ಕಾಲ ಬಾಳುವಂತೆ ಮಾಡುವ ಕೆಲಸವನ್ನು ಹಲವು ಸಂಘ ಸಂಸ್ಥೆಗಳ ಸಹಾಯದಿಂದ ಮಾಡಲಾಗುತ್ತಿದೆ. ಹೊಸ ಎನ್ವಿರಾನ್ ಮೆಂಟಲ್ ಮತ್ತು ಕ್ಲೈಮೇಟ್ ಚೇಂಜ್ ವಿಭಾಗದಿಂದ ಸಾಕಷ್ಟು ಮರ ಗಿಡಗಳ ಹೆಸರನ್ನಿಡುವ ಕೆಲಸವನ್ನು ಈಗಾಗಲೇ ಮಾಡಲಾಗಿದೆ. ಒಟ್ಟಾರೆ ಹಸರೀಕರಣ ಮತ್ತು ರೈನ್ ವಾಟರ್ ಹಾರ್ವೆಸ್ಟಿಂಗ್ ಗೆ ಒಟ್ಟು ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದೆ.

ಅಮರನಾಥ: ಮೊದಲ ತಂಡದ ದರ್ಶನಕ್ಕೆ ತೆರೆ

ಶ್ರೀನಗರ: ಪವಿತ್ರ ಅಮರನಾಥ ಯಾತ್ರೆಗೆ ಚಾಲನೆ ದೊರೆತಿದೆ. . ಯಾತ್ರೆಯ ಮೊದಲ ದಿನವಾದ ಶನಿವಾರ 14 ಸಾವಿರ ಭಕ್ತರು ಅಮರನಾಥನ ದರ್ಶನ ಮುಗಿಸಿ ಮರಳಿದ್ದಾರೆ. ಇನ್ನೂ ಸಾವಿರಾರು ಮಂದಿ ದರ್ಶನಕ್ಕಾಗಿ ತಮ್ಮ ಯಾತ್ರೆ ಆರಂಭಿಸಿದ್ದಾರೆ. ಹಿಮದಲ್ಲಿ ರೂಪುಗೊಂಡ ಶಿವಲಿಂಗದ ದರ್ಶನಕ್ಕಾಗಿ ಭಕ್ತಾದಿಗಳಲ್ಲಿ ಉತ್ಸಾಹ ಕಂಡುಬಂದಿತು. ಹಿರಿಯರು ಊರುಗೋಲುಗಳನ್ನು ಹಿಡಿದು ಬೆಟ್ಟ ಹತ್ತುತ್ತಿದ್ದರೆ, ಯುವ ಸಮೂಹವು ಚಾರಣದ ಉಡುಪು ತೊಟ್ಟಿತ್ತು. ಎಲ್ಲರೂ ದೇವರ ನಾಮಸ್ಮರಣೆ ಮಾಡುತ್ತ ಸಾಗಿದರು. ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಸ್ಥಳೀಯರು ಅಂಗಡಿಗಳನ್ನು ತೆರೆದಿದ್ದರು.

{ಶಿವರಾಜ್ ಕುಮಾರ್} ನಟ

ಮನುಷ್ಯನ ಹಣೆಬರಹವನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಇಂತಹ ಘಟನೆಗಳು ನಡೆಯುತ್ತಿರುತ್ತವೆ. ಏನೂ ಮಾಡಲು ಸಾಧ್ಯವಿಲ್ಲ. ಇಂತಹ ಘಟನೆಗಳು ಆದಾಗ ತುಂಬಾ ನೋವಾಗುತ್ತದೆ. ರೇಣುಕಾಸ್ವಾಮಿ ಕುಟುಂಬಕ್ಕೆ, ದರ್ಶನ್ ಅವರ ಕುಟುಂಬಕ್ಕೆ ನೋವಾಗುತ್ತದೆ. ದರ್ಶನ್ ಅವರ ಮಗನ ಬಗ್ಗೆ ಬೇಸರ ಆಗುತ್ತಿದೆ. ನಾವು ಎಲ್ಲವನ್ನೂ ಎದುರಿಸಬೇಕು. ನ್ಯಾಯ ಏನಿದೆಯೋ ಅದೇ ಆಗುತ್ತದೆ.

ಪ್ರತಿ ತಿಂಗಳು ನಿಗಮಗಳ ಬ್ಯಾಂಕ್ ಬ್ಯಾಲೆನ್ಸ್ ಪರಿಶೀಲಿಸಬೇಕು | ನೋಂದಾಯಿತ ಕಚೇರಿಯಿರುವ ನಗರದಲ್ಲಿಯೇ ಬ್ಯಾಂಕ್ ಠೇವಣಿ ಇಡಬೇಕು | ಎಂಡಿ, ಸಿಇಒ, ಕಾರ್ಯದರ್ಶಿಗಳಿಗೆ ಜವಾಬ್ದಾರಿ ಹಂಚಿಕೆ

ಹಗರಣದ ಬೆನ್ನಲ್ಲೇ ಎಚ್ಚೆತ್ತ ಸರಕಾರ; ಹಣಕಾಸು ನಿರ್ವಹಣೆ ಮಾರ್ಗಸೂಚಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರಿ ಮುಜುಗರ ಉಂಟುಮಾಡಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಬೆನ್ನಲ್ಲೇ, ಎಚ್ಚೆತ್ತಿರುವ ರಾಜ್ಯ ಸರಕಾರ ನಿಗಮ ಮಂಡಳಿ, ವಿಶ್ವವಿದ್ಯಾಲಯ, ಸಾರ್ವಜನಿಕ ಸಂಸ್ಥೆಗಳ ಹಣಕಾಸು ನಿರ್ವಹಣೆಗೆ ಮಾರ್ಗಸೂಚಿ ಬಿಡುಗಡೆಗೊಳಿಸಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಎಲ್ಲಾ ನಿಗಮ, ಸಾರ್ವಜನಿಕ ಸಂಸ್ಥೆ, ಮಂಡಳಿ, ವಿಶ್ವವಿದ್ಯಾಲಯ, ಸರಕಾರಿ ವೈದ್ಯಕೀಯ ಕಾಲೇಜುಗಳಿಗೆ ಸಮರ್ಪಕವಾಗಿ, ಎಚ್ಚರಿಕೆಯಿಂದ ಹಣಕಾಸು ನಿರ್ವಹಣೆ ಮಾಡುವಂತೆ ಸಲಹೆ ಸೂಚನೆ ನೀಡಿದೆ.

ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಎಲ್ಲಾ ನಿಗಮಗಳು, ಸಾರ್ವಜನಿಕ ಸಂಸ್ಥೆ, ಮಂಡಳಿ, ವಿ.ವಿ.ಗಳು, ಸರಕಾರಿ ವೈದ್ಯಕೀಯ ಕಾಲೇಜುಗಳಿಗೆ ಬ್ಯಾಂಕ್ ಠೇವಣಿ, ಖಾತೆಯಲ್ಲಿರುವ ಮೊತ್ತವನ್ನು ಸಮರ್ಪಕವಾಗಿ ನಿರ್ವಹಿಸುವ ನಿಟ್ಟಿನಲ್ಲಿ ನಿರ್ದೇಶನವಿರುವ ಸುತ್ತೋಲೆ ಹೊರಡಿಸಿದ್ದಾರೆ. ನಿಗಮ -ಮಂಡಳಿಗಳ ವ್ಯವಸ್ಥಾಪಕ ನಿರ್ದೇಶಕರು, ಸಿಇಓಗಳು, ಕಾರ್ಯದರ್ಶಿ ಸೇರಿದಂತೆ ವಿವಿಧ ಹಂತದಲ್ಲಿ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗಿದೆ. ಒಂದು ವೇಳೆ ಜವಾಬ್ದಾರಿಗಳಲ್ಲಿ ಎಲ್ಲಿಯೇ ಲೋಪವಾದರೂ, ಆ ಅಧಿಕಾರಿಯನ್ನೇ ಹೊಣೆಯನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಎಂಡಿ, ಸಿಇಓ ಜವಾಬ್ದಾರಿಗಳೇನು?: ಪ್ರತಿ ತಿಂಗಳು ಸಂಸ್ಥೆಗಳ ಎಲ್ಲಾ ಖಾತೆಗಳಲ್ಲಿನ ಬ್ಯಾಂಕ್ ಬ್ಯಾಲೆನ್ಸ್, ಆರಂಭಿಕ ಬ್ಯಾಲೆನ್ಸ್, ಕ್ಲೋಸಿಂಗ್ ಬ್ಯಾಲೆನ್ಸ್ ಪರಿಶೀಲಿಸಬೇಕು. ಪಾವತಿ ಮಾಡಲಾದ ಮೊತ್ತದ ಬಗ್ಗೆ ಪರಿಶೀಲನೆ ನಡೆಸುವಂತೆ ಸೂಚನೆ ನೀಡಲಾಗಿದೆ. ನಿಗಮ, ಮಂಡಳಿ, ಸಂಸ್ಥೆಗಳ ಎಲ್ಲಾ ಟರ್ಮ್ ಡಿಪಾಸಿಟ್ ಖಾತೆಯಲ್ಲಿನ ಪ್ರಧಾನ ಮೊತ್ತ, ಮೆಚ್ಯೂರಿಟಿ ಅವಧಿ, ಬಡ್ಡಿ ದರ, ಪಾವತಿಯಾದ ಬಡ್ಡಿಯ ವಿವರಗಳನ್ನು ಪರಿಶೀಲಿಸಲು ಸೂಚಿಸಲಾಗಿದೆ. ಆಂತರಿಕ ಆಡಿಟರ್‌ನಿಂದ ಮಾಸಿಕವಾಗಿ ಭೌತಿಕ ದೃಢೀಕರಣ ಮಾಡಲು ಸೂಚಿಸಲಾಗಿದೆ.

ಆಡಿಟರ್‌ಗಳಿಗೆ ನಿಗಮ, ಮಂಡಳಿ, ಸಂಸ್ಥೆಗಳ ಬದಲು ಬ್ಯಾಂಕ್‌ಗಳಿಂದಲೇ ದೃಢೀಕರಣ ನೀಡುವುದನ್ನು ಖಚಿತಪಡಿಸಬೇಕು. ಒಂದು ವೇಳೆ ಬ್ಯಾಂಕ್ ಬ್ಯಾಲೆನ್ಸ್ ಮತ್ತು ನಿಗಮಗಳು ನಿರ್ವಹಿಸಿರುವ ಲೆಕ್ಕಪತ್ರ ಮಾಹಿತಿಯಲ್ಲಿ ವ್ಯತ್ಯಾಸ ಕಂಡುಬಂದರೆ ಆ ಬಗ್ಗೆ ವಿಸ್ತೃತ ಪರಿಶೀಲನೆ ನಡೆಸಬೇಕು. ಮಂಡಳಿ ಸಭೆಯಲ್ಲಿ ಆಡಿಟರ್ ವರದಿಯನ್ನು ಮಂಡಿಸುವಂತೆ ನಿರ್ದೇಶನ ನೀಡಿದ್ದಾರೆ.

ಮಂಡಳಿ ಸಭೆಯಲ್ಲಿ ವರದಿ ಮಂಡನೆ: ನಿಗಮ ಮಂಡಳಿಗಳು ಪ್ರತಿಬೋರ್ಡ್ ಮೀಟಿಂಗ್‌ನಲ್ಲಿ ಪ್ರತಿ ಠೇವಣಿ ಖಾತೆಗಳ ಮಾಹಿತಿಯ ವರದಿಯನ್ನು ನೀಡಬೇಕು. ಆ ವರದಿಯನ್ನು ಹಿಂದಿನ ಮಂಡಳಿ ಸಭೆಯಲ್ಲಿ ಸಲ್ಲಿಸಲಾದ ವರದಿಗೆ ತುಲನೆ ಮಾಡಬೇಕು. ಈ ವರದಿಯಲ್ಲಿ ಪರಿಶೀಲನಾ ಪ್ರಕ್ರಿಯೆಯ ಮಾಹಿತಿಯೂ ಒಳಗೊಂಡಿರಬೇಕು. ಪರಿಶೀಲನೆ ವೇಳೆ ಯಾವುದಾದರೂ ಲೋಪಗಳು, ವ್ಯತ್ಯಾಸಗಳು ಕಂಡುಬಂದಿದೆಯೇ ಎಂಬುದರ ಬಗ್ಗೆ ವಿಶೇಷ ಗಮನ ಹರಿಸಬೇಕು ಎಂದು ಸೂಚನೆ ನೀಡಲಾಗಿದೆ.

ಟರ್ಮ್ ಡಿಪಾಸಿಟ್‌ಗೆ ಮಾರ್ಗಸೂಚಿಗಳು

- ಬ್ಯಾಂಕ್ ಠೇವಣಿಯಿಡುವ ಮೊತ್ತವನ್ನು ಆನ್ ಲೈನ್ ಮೂಲಕವೇ ವರ್ಗಾಯಿಸಬೇಕು.
- ನಿಗಮ, ಮಂಡಳಿಗಳ ನೋಂದಾಯಿತ ಕಚೇರಿಯಿರುವ ನಗರದಲ್ಲಿಯೇ ಬ್ಯಾಂಕ್ ಶಾಖೆಯಲ್ಲಿ ಠೇವಣಿಯಿಡಬೇಕು.
- ಪ್ರತಿ ಠೇವಣಿಗಳಿಗೆ ಸಂಬಂಧಿಸಿದ ಪ್ರಮಾಣಪತ್ರವನ್ನು ಬ್ಯಾಂಕ್‌ಗಳಿಂದ ಪಡೆಯಬೇಕು.
- ಅವಧಿ ಮುಗಿದ ಬಳಿಕ ಬಡ್ಡಿಸಹಿತ ಠೇವಣಿ ಮೊತ್ತ ಯಾವ ಸಂಸ್ಥೆಗೆ ವರ್ಗಾವಣೆಯಾಗುವ ಖಾತೆ ಸಂಖ್ಯೆ ಪಡೆದಿರಬೇಕು.
- ಠೇವಣಿ ಮೇಲಿನ ಬಡ್ಡಿ ಮೊತ್ತಕ್ಕೆ ಟಿಡಿಎಸ್ ಸಕಾಲದಲ್ಲಿ ಕಟ್ಟುವ ಬಗ್ಗೆ ಪರಿಶೀಲಿಸಬೇಕು.
- ಜಂಟಿ ಖಾತೆಯಲ್ಲಿ ಎಲ್ಲಾ ನಿಗಮ -ಮಂಡಳಿಗಳು ಠೇವಣಿ ಮೊತ್ತವನ್ನು ಇಡಬೇಕು.

ಯಶವಂತಪುರ, ದಂಡು ರೈಲ್ವೆ ನಿಲ್ದಾಣ ಮೇಲ್ದರ್ಜೆಗೆ



ಬೆಂಗಳೂರು: ಪುನರಾಭಿವೃದ್ಧಿ ಯೋಜನೆಯಲ್ಲಿ ನಗರದ ಯಶವಂತಪುರ ರೈಲ್ವೆ ನಿಲ್ದಾಣಕ್ಕೆ 367 ಕೋಟಿ ರು. ಮತ್ತು ಕಂಟೋನ್ಮೆಂಟ್ ರೈಲ್ವೆ ನಿಲ್ದಾಣಕ್ಕೆ 486 ಕೋಟಿ ರು. ಮೀಸಲಿಡಲಾಗಿದೆ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಪುನರಾಭಿವೃದ್ಧಿ ಯೋಜನೆಗಳ ಪರಿಶೀಲನೆ ನಡೆಸಿ ಮಾತನಾಡಿ, ಯಶವಂತಪುರ ಮತ್ತು ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಗಳು ಕರ್ನಾಟಕದ ರೈಲ್ವೇ ನೆಟ್‌ವರ್ಕ್‌ನಲ್ಲಿ ಪ್ರಮುಖ ಕೇಂದ್ರಗಳಾಗಿವೆ. ಈ ರೈಲ್ವೇ ನಿಲ್ದಾಣಗಳ ಮೂಲಸೌಕರ್ಯದ ಸಂಬಂಧ ಹೊಸ ಮಾನದಂಡಗಳನ್ನು ಸ್ಥಾಪಿಸಲು ಸಜ್ಜಾಗಿದ್ದೇವೆ. ಪ್ರಯಾಣಿಕರ ಸೌಕರ್ಯ, ಅನುಕೂಲತೆ, ಸುರಕ್ಷತೆ ಮತ್ತು ಪ್ರಯಾಣಿಕರಿಗೆ ಆರಾಮದಾಯಕ ಕಾಯುವ ಪ್ರದೇಶ, ಮಲ್ಟಿ-ಲೆವೆಲ್ ಪಾರ್ಕಿಂಗ್, ಮಕ್ಕಳಿಗಾಗಿ ಆಟದ ವಲಯ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ. ಸ್ಥಳೀಯ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡುವ ವ್ಯವಸ್ಥೆ ಸೇರಿದಂತೆ ಎರಡೂ ನಿಲ್ದಾಣಗಳನ್ನು ವಿಶ್ವ ದರ್ಜೆಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

ಸಕಾಲದಲ್ಲಿ ಕಾಮಗಾರಿ ಪೂರ್ಣಗೊಳಿಸಿ

ನಿಲ್ದಾಣದ ಆವರಣದೊಳಗೆ ಹೆಚ್ಚಿನ ಹಸಿರನ್ನು ಅಳವಡಿಸಲು, ಪ್ರಯಾಣಿಕರ ತಂಗುದಾಣಗಳಿಗೆ ಸೌಲಭ್ಯಗಳನ್ನು ವಿಸ್ತರಿಸಲು ಮತ್ತು ಯಶವಂತಪುರದ ಕಾಮಗಾರಿಯನ್ನು ಸಹ ಸಕಾಲದಲ್ಲಿ ಪೂರ್ಣಗೊಳಿಸಿ ನಿರ್ಮಾಣದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಈ ಸಂದರ್ಭದಲ್ಲಿ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅಧಿಕಾರಿಗಳಿಗೆ ತಿಳಿಸಿದರು.

ದೇವಾಲಯಗಳಲ್ಲಿ ಶೆಲ್ಟರ್ ನಿರ್ಮಾಣಕ್ಕೆ ನಿರ್ಧಾರ

ಬೆಂಗಳೂರು: ಮುಂದಿನ ತಿಂಗಳಿನಿಂದ ಮುಂಗಾರು ಮಳೆ ತೀವ್ರವಾಗುವ ಸೂಚನೆಯಿದ್ದು, ಮಳೆಗಾಲದಲ್ಲಿ ದೇವಾಲಯಗಳಿಗೆ ಆಗಮಿಸುವವರ ಸಂಖ್ಯೆ ಕಡಿಮೆಯಾಗುವುದರಿಂದ ಈ ಸಮಸ್ಯೆಗೆ ಪರಿಹಾರ ನೀಡಲು ಮುಜರಾಯಿ ಇಲಾಖೆ ನಿರ್ಧರಿಸಿದೆ.

ಹವಾಮಾನ ಇಲಾಖೆಯು ರಾಜ್ಯದಲ್ಲಿ ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಹೇಳಿದೆ. ಆಷಾಢ ಮುಗಿದು ಶ್ರಾವಣ ಆರಂಭವಾದಾಗ ಅಥವಾ ಮಳೆಗಾಲದಲ್ಲಿ ಜೋರು ಮಳೆಯಾಗುವಾಗ ದೇವಾಲಯಕ್ಕೆ ಆಗಮಿಸುವವರು ಸರತಿ ಸಾಲಿನಲ್ಲಿ ಗಂಟೆಗಟ್ಟಲೆ ನಿಲ್ಲಬೇಕಾಗಿ ಬರುತ್ತಿದ್ದು, ಈ ವೇಳೆ ಮಳೆಯಿಂದ ಒದ್ದೆಯಾಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಹೀಗಾಗಿ ಮಳೆಗಾಲದಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗುತ್ತದೆ. ಈ ಸಮಸ್ಯೆಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಪರಿಹಾರ ಸೂಚಿಸಿದ್ದು ಶೀಘ್ರದಲ್ಲೇ ಚಾಲ್ತಿಗೆ ಬರಲಿದೆ.

ಮಳೆಗಾಲದಲ್ಲಿ ಉಂಟಾಗುವ ಇಂತಹ ಸಮಸ್ಯೆ ನಿವಾರಣೆಗೆ ವಸಚಿವ ರಾಮಲಿಂಗಾರೆಡ್ಡಿ ಮುಜರಾಯಿ ಇಲಾಖೆಗೆ ದೇವಾಲಯಗಳಲ್ಲಿ ಶೆಲ್ಟರ್ ನಿರ್ಮಾಣಕ್ಕೆ ಸಲಹೆ ನೀಡಿದ್ದು, ರಾಜ್ಯದ ಮುಜರಾಯಿ ವ್ಯಾಪ್ತಿಯ ಎಲ್ಲಾ ದೇವಾಲಯಗಳ ಮುಂಭಾಗದಲ್ಲಿಯೂ ಶೆಲ್ಟರ್‌ಗಳನ್ನು ನಿರ್ಮಾಣ ಮಾಡಲಾಗುವುದು. ಬಿಸಿಲು ಹಾಗೂ ಮಳೆಯಿಂದ ರಕ್ಷಿಸಿಕೊಳ್ಳಲು ಶೆಲ್ಟರ್ ನಿರ್ಮಿಸುವಂತೆ ಮುಜರಾಯಿ ಇಲಾಖೆ ಸಲಹೆ ನೀಡಿದೆ. ಬಿಸಿಲಿನಿಂದ ರಕ್ಷಣೆಗೆ ದೇವಾಲಯಗಳಲ್ಲಿ ಶಾಮಿಯಾನ ವ್ಯವಸ್ಥೆ ಮಾಡಲಾಗಿದ್ದು, ಶೀಘ್ರದಲ್ಲೇ ದೇವಾಲಯದಲ್ಲಿ ಶೆಲ್ಟರ್‌ಗಳು ನಿರ್ಮಾಣವಾಗಲಿವೆ. ಇದರಿಂದ ವಯಸ್ಸಾದ ಹಾಗೂ ಮಕ್ಕಳಿಗೆ ಅನುಕೂಲವಾಗಲಿದೆ. ಮೊದಲನೇ ಹಂತದಲ್ಲಿ ಹೆಚ್ಚು ಮಳೆ ಬರುವ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ದೇವಾಲಯಗಳಲ್ಲಿ ಶೆಲ್ಟರ್ ನಿರ್ಮಿಸಲಾಗುವುದು.

ಬಿಸಿಲಿನಿಂದ ರಕ್ಷಿಸಲು ಭಕ್ತಾದಿಗಳಿಗೆ ದೇವಾಲಯಗಳಲ್ಲಿ ಶಾಮಿಯಾನ ವ್ಯವಸ್ಥೆ ಮಾಡಿದ್ದೆವು. ಈಗ ಮಳೆಗಾಲದಲ್ಲಿ ಭಕ್ತಾದಿಗಳಿಗಾಗಿ ದೇಗುಲದ ಮುಂಭಾಗದಲ್ಲಿ ಶೆಲ್ಟರ್ ನಿರ್ಮಿಸಲು ಸಲಹೆ ಕೊಟ್ಟಿದ್ದೇನೆ. ಅದರಂತೆ ದೇವಾಲಯದಲ್ಲಿ ಶೆಲ್ಟರ್‌ಗಳು ನಿರ್ಮಾಣವಾಗಲಿವೆ. ಇದರಿಂದ ವಯಸ್ಸಾದ ಹಾಗೂ ಮಕ್ಕಳಿಗೆ ಅನುಕೂಲವಾಗಲಿದೆ

-ರಾಮಲಿಂಗಾ ರೆಡ್ಡಿ, ಸಚಿವ

ಬೆಂಗಳೂರು ಯೂನಿವರ್ಸಿಟಿಯ ಸಾಯಿ ಕ್ರೀಡಾಂಗಣದಲ್ಲಿ 2024-25 ನೇ ಸಾಲಿನ ಕ್ರೀಡಾ ಕೂಟವನ್ನು ಬೆಂಗಳೂರು ಲಾ ಕಾಲೇಜು ವತಿಯಿಂದ ಆಯೋಜಿಸಲಾಗಿತ್ತು. ಕಾಲೇಜಿನ ನಿರ್ದೇಶಕರಾದ ಪ್ರಸನ್ನ ವಿ. ರಾಜು, ಪ್ರಾಂಶುಪಾಲರಾದ ದೇವಿಕಾ ಎಸ್. ಅಜೀಲ ಹಾಗೂ ಮುಖ್ಯ ಅತಿಥಿಗಳಾದ ಏಕಲವ್ಯ ಪ್ರಶಸ್ತಿ ಪುರಸ್ಕೃತೆ ವಿಜಯಕುಮಾರಿ ಜಿ.ಕೆ. ಅವರು ಉದ್ಘಾಟಿಸುವ ಮೂಲಕ ಕ್ರೀಡೋತ್ಸವಕ್ಕೆ ಚಾಲನೆ ನೀಡಿದರು.

ಗೋಲ್ಡ್ ಸ್ಮಗ್ಲಿಂಗ್-ಬೃಹತ್ ಜಾಲ ಸೆರೆ

ಚೆನ್ನೈ: ಕಳೆದ ಎರಡು ತಿಂಗಳಿನಿಂದ ಚಿನ್ನ ಕಳ್ಳ ಸಾಗಾಟ ಮಾಡುತ್ತಿದ್ದ ಬೃಹತ್ ಜಾಲವನ್ನು ಚೆನ್ನೈ ಕಸ್ಟಮ್ ಅಧಿಕಾರಿಗಳು ಭೇದಿಸಿದ್ದಾರೆ. ಈ ಗ್ಯಾಂಗ್ ಬರೊಬ್ಬರಿ 267 ಕೆಜಿ ತೂಕದ 167 ಕೋಟಿ ಮೌಲ್ಯದ ಚಿನ್ನವನ್ನು ಶ್ರೀಲಂಕಾ ದಿಂದ ಕಳ್ಳ ಸಾಗಾಟ ಮಾಡುವಲ್ಲಿ ತೊಡ ಗಿಸಿ ಕೊಂಡಿತ್ತು. ವಿಮಾನ ನಿಲ್ದಾಣದ ಟರ್ಮಿನಲ್‌ನಲ್ಲಿರುವ ಅಂಗಡಿಯೊಂದರ ನೌಕರನ ಚಲನವಲನದಲ್ಲಿ ಅನುಮಾನ ವ್ಯಕ್ತವಾಗಿದ್ದು ಆತನ ಮೇಲೆ ನಿಗಾ ಇರಿಸಲಾಗಿತ್ತು. ಚಿನ್ನ ಕಳ್ಳ ಸಾಗಾಟದ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ಮೇರೆಗೆ ಅಂಗಡಿ ನೌಕರನನ್ನ ವಿಚಾರಣೆಗೆ ಒಳಪಡಿಸಿದಾಗ ಆತನ ದೇಹದಲ್ಲಿ ಮೂರು ಬಂಡಲ್‌ನಷ್ಟು ಚಿನ್ನ ಅಡಗಿಸಿಟ್ಟಿರುವುದು ಪತ್ತೆಯಾಗಿದೆ. ಆತ ಶ್ರೀಲಂಕಾದಿಂದ ಬಂದ ಪ್ರಯಾಣಿಕನಿಂದ ಈ ಚಿನ್ನವನ್ನು ಪಡೆದು ಕೊಂಡಿರುವುದಾಗಿ ಬಾಯ್ಬಿಟ್ಟಿದ್ದಾನೆ. ವಿಚಾರಣೆಯಲ್ಲಿ ವಿಮಾನ ನಿಲ್ದಾಣದಲ್ಲಿನ ಅಂಗಡಿಯಲ್ಲಿ 8 ಜನರನ್ನು ಕಳ್ಳ ಚಿನ್ನ ಹೊತ್ತು ಬರುವ ಪ್ರಯಾಣಿಕರಿಂದ ಚಿನ್ನ ಪಡೆದುಕೊಳ್ಳುವ ಸಲುವಾಗಿಯೇ ನಿಯೋಜಿಸಿದ್ದರು ಎಂದು ತಿಳಿದು ಬಂದಿದೆ. ಈ 8 ಜನರು ಕಳ್ಳ ಮಾರ್ಗದಲ್ಲಿ ಪಡೆದ ಚಿನ್ನವನ್ನು ದೇಹದೊಳಗೆ ಅಡಗಿಸಿಟ್ಟು ವಿಮಾನ ನಿಲ್ದಾಣದಿಂದ ಹೊರ ಸಾಗಿಸುತ್ತಿದ್ದರು. ಇದೇ ಮಾದರಿಯಲ್ಲಿ 2 ತಿಂಗಳಲ್ಲಿ 267 ಕೆಜಿ 167 ಕೋಟಿ ಮೌಲ್ಯದ ಚಿನ್ನವನ್ನು ಯಶಸ್ವಿಯಾಗಿ ಸಾಗಾಟ ಮಾಡಿದ್ದಾರೆ.

ವೆಂಕಯ್ಯನಾಯ್ಡು ಜೀವನ; ಮೂರು ಕೃತಿ ಬಿಡುಗಡೆ ಮಾಡಿದ ಮೋದಿ

ದೆಹಲಿ: ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಜೀವನಾಧಾರಿತ 3 ಕೃತಿಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬಿಡುಗಡೆ ಮಾಡಿದರು. ವೆಂಕಯ್ಯನಾಯ್ಡು ಅವರ ಜನ್ಮದಿನಕ್ಕೆ ಒಂದು ದಿನ ಮುಂಚಿತವಾಗಿ ಹೈದರಾಬಾದ್‌ನ ಗಚಿಬೌಲಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ವರ್ಚುವಲ್ ಭಾಗಿಯಾಗಿದ್ದ ಪ್ರಧಾನಿ ಮೋದಿ ವಿಡಿಯೋ ಕಾನ್ಪರೆನ್ಸ್ ಮೂಲಕ ಪುಸ್ತಕ ಬಿಡುಗಡೆ ಮಾಡಿದರು.

ಹಿರಿಯ ಪತ್ರಕರ್ತ ಎಸ್.ನಾಗೇಶ್ ಕುಮಾರ್ ರಚಿಸಿರುವ 'ವೆಂಕಯ್ಯ ನಾಯ್ಡು-ಲೈಫ್ ಇನ್ ಸರ್ವಿಸ್, ಸೆಲೆಬ್ರೇಟಿಂಗ್ ಭಾರತ್(ಫೋಟೊ ಕ್ರಾನಿಕಲ್) ಮತ್ತು ಸಂಜಯ್ ಕಿಶೋರ್ ಬರೆದಿರುವ ಮಹಾನೇತಾ (ಲೈಫ್ ಅಂಡ್ ಜರ್ನಿ ಆಫ್ ಎಂ.ವೆಂಕಯ್ಯ ನಾಯ್ಡು) ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು. ಬಳಿಕ ಮಾತನಾಡಿ, 'ಜು.1 ವೆಂಕಯ್ಯ ಅವರ ಜನ್ಮದಿನ. 75 ವರ್ಷಗಳ ಅವರ ಜೀವನ ಪಯಣ ಅಸಮಾನ್ಯ ಸಾಧನೆಗಳಿಂದ ತುಂಬಿದೆ. ಅವರ ಜೀವನಧಾರಿತ ಪುಸ್ತಕಗಳನ್ನು ಬಿಡುಗಡೆ ಮಾಡುವ ಅವಕಾಶ ಪಡೆದಿದ್ದಕ್ಕೆ ಹರ್ಷವಾಗಿದೆ' ಎಂದಿದ್ದಾರೆ.

ಸಿಎಂ ಬದಲಾವಣೆ ಹೇಳಿಕೆ ವೈಯಕ್ತಿಕ; ಚಂದ್ರಶೇಖರ ಸ್ವಾಮಿ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕೆಂಬ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಜಗದ್ಗುರು ಚಂದ್ರಶೇಖರನಾಥ ಸ್ವಾಮೀಜಿ ಹೇಳಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಇದೀಗ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠ ಸ್ಪಷ್ಟನೆ ನೀಡಿದೆ. ನಾಡಪ್ರಭು ಕೆಂಪೇ ಗೌಡರ ಜಯಂತಿ ಕಾರ್ಯಕ್ರಮದಲ್ಲಿ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಲಾಗುತ್ತದೆ. 2023 ರಲ್ಲಿ ಸರಕಾರ ರಚಿಸುವ ಸಂದರ್ಭದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಟ್ಟದ ತೀರ್ಮಾ ನದಂತೆ ಸಿಎಂ ಸಿದ್ದರಾಮಯ್ಯ ಅವರು ಮುಂದಿನ ದಿನಗಳಲ್ಲಿ ಡಿಸಿಎಂ ಆದ ಡಿ.ಕೆ ಶಿವಕುಮಾರ್ ರವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಡಬೇಕೆಂಬ ವಿಷಯವನ್ನು ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳ ಮುಖೇನ ತಿಳಿದುಕೊಂಡಿದ್ದೇವೆ ಎಂದು ತಿಳಿಸಿದೆ. ಡಿಕೆಶಿ ಮುಖ್ಯಮಂತ್ರಿಯಾಗುವ ಹಾದಿ ಯನ್ನು ಸುಗಮಗೊಳಿಸಿಕೊಡಬೇಕೆಂದು ನಾವೇ ಯಾರ ಒತ್ತಡವೂ ಇಲ್ಲದೇ ವೈಯಕ್ತಿಕವಾಗಿ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇವೆ. ಈ ವಿಷಯ ಕಳೆದ 2-3 ದಿನಗಳಿಂದ ಬಹು ಚರ್ಚಿತವಾಗುತ್ತಿದ್ದು, ಡಿ.ಕೆ.ಶಿವಕುಮಾರ್ ನಮ್ಮ ಮೂಲಕ ವೇದಿಕೆಯಲ್ಲಿಯೇ ಮುಖ್ಯ ಮಂತ್ರಿ ಬದಲಾವಣೆಯ ಹೇಳಿಕೆಯನ್ನು ಉದ್ದೇಶಪೂರ್ವಕವಾಗಿಯೇ ಹೇಳಿಸಿದ್ದಾರೆ ಎಂಬ ವಿಷಯವು ಸತ್ಯಕ್ಕೆ ದೂರವಾಗಿದೆ ಎಂದು ಚಂದ್ರಶೇಖರನಾಥ ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ನ್ಯೂಸ್ ಪ್ಯಾಕೇಜ್

ಇಂದಿನಿಂದ 3 ನೂತನ ಕ್ರಿಮಿನಲ್ ಕಾನೂನು

ಜೀರೊ ಎಫ್‌ಐಆರ್, ಆನ್‌ಲೈನ್ ದೂರು | ನಾಗರಿಕ ಸ್ನೇಹಿ, ತ್ವರಿತ ನ್ಯಾಯ

ದೇಶದಲ್ಲಿ ಜುಲೈ 1ರಿಂದ 3 ನೂತನ ಕ್ರಿಮಿನಲ್ ಕಾನೂನುಗಳು ಜಾರಿಗೆ ಬಂದಿವೆ.

ಬ್ರಿಟಿಷರ ವಸಾಹತುಶಾಹಿ ಯುಗದ 3 ಅಪರಾಧ ಕಾನೂನುಗಳನ್ನು ಅಂತ್ಯಗೊಳಿಸಿ ನೂತನ ಕ್ರಿಮಿನಲ್ ಕಾನೂನುಗಳು ಜಾರಿಗೆ ತರಲಾಗಿದೆ. ಗೃಹ ಸಚಿವ ಅಮಿತ್ ಶಾ 'ಈ ಹೊಸ ಕಾನೂನುಗಳು ದಂಡದ ಕ್ರಮಕ್ಕೆ ಪ್ರಾಮುಖ್ಯತೆ ನೀಡುವುದಕ್ಕಿಂತ ನ್ಯಾಯ ಒದಗಿಸುವಲ್ಲಿ ಆದ್ಯತೆ ನೀಡುತ್ತವೆ' ಎಂದು ತಿಳಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, ಭಾರತೀಯ ಸಾಕ್ಷ್ಯ ಅಧಿನಿಯಮ ಎಂಬ ಮೂರು ಕಾನೂನುಗಳು ಬ್ರಿಟಿಷರ 'ಭಾರತೀಯ ದಂಡ ಸಂಹಿತಾ(ಐಪಿಸಿ), ಅಪರಾಧ ಪ್ರಕ್ರಿಯಾ ಸಂಹಿತಾ (ಸಿಆರ್‌ಪಿಸಿ), ಭಾರತೀಯ ಸಾಕ್ಷ್ಯ ಸಂಹಿತಾ ಕಾನೂನುಗಳನ್ನು ಬದಲಾಯಿಸಲಿವೆ. ಈ ಹೊಸ ಕಾನೂನುಗಳು ಕಳೆದ ವರ್ಷವೇ ಸಂಸತ್‌ನಲ್ಲಿ ಅನುಮೋದನೆಗೊಂಡಿದ್ದು, ರಾಷ್ಟ್ರಪತಿಗಳ ಅಂಕಿತ ಕೂಡ ಪಡೆದುಕೊಂಡಿವೆ. ಲೋಕಸಭೆ ಚುನಾವಣೆ ಬಳಿಕ ಜಾರಿಗೊಂಡಿವೆ.

ಜೀರೋ ಎಫ್‌ಐಆರ್, ಆನ್‌ಲೈನ್ ಮೂಲಕ ಪೊಲೀಸ್ ದೂರು ದಾಖಲು, ಎಸ್‌ಎಂಎಸ್‌ನಂತಹ ವಿದ್ಯುನ್ಮಾನ ಸಂದೇಶಗಳ ಮೂಲಕ ಸಮನ್ಸ್ ಜಾರಿ, ಘೋರ ಅಪರಾಧ ದೃಶ್ಯಗಳ ಕಡ್ಡಾಯ ವಿಡಿಯೋಗ್ರಫಿ ಮೂಲಕ ಈ ಹೊಸ ಕಾನೂನುಗಳು ಆಧುನಿಕ ನ್ಯಾಯ ವ್ಯವಸ್ಥೆಯನ್ನು ಪರಿಚಯಿಸುತ್ತವೆ.

ನೂತನ ಕ್ರಿಮಿನಲ್ ಕಾನೂನು ಪ್ರಮುಖಾಂಶಗಳು

- ಭಾರತೀಯ ಸಾಕ್ಷ್ಯ ಅಧಿನಿಯಮವನ್ನು 3 ಭಾಗಗಳಾಗಿ ವಿಂಗಡಿಸಲಾಗಿದ್ದು, 11 ಅಧ್ಯಾಯಗಳನ್ನು ಒಳಗೊಂಡಿದೆ.
- ಜೀರೋ ಎಫ್‌ಐಆರ್ ಪರಿಚಯದ ಮೂಲಕ ಅಪರಾಧ ನಡೆದ ಠಾಣೆ ವ್ಯಾಪ್ತಿಯ ಜತೆಗೆ ಯಾವುದೇ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಬಹುದಾಗಿದೆ.
- ಕ್ರಿಮಿನಲ್ ಪ್ರಕರಣಗಳ ತೀರ್ಪು ವಿಚಾರಣೆ ಮುಗಿಸಿದ 45 ದಿನಗಳೊಳಗಾಗಿ ನೀಡಬೇಕು ಹಾಗೂ ಮೊದಲ ವಿಚಾರಣೆಯ 60 ದಿನಗಳ ಒಳಗೆ ಆರೋಪ ಪಟ್ಟಿ ದಾಖಲಿಸಬೇಕು
- ಅತ್ಯಾಚಾರ ಸಂತ್ರಸ್ತೆಯ ಹೇಳಿಕೆಗಳನ್ನು ಮಹಿಳಾ ಅಧಿಕಾರಿಗಳು ಆಕೆಯ ಗಾರ್ಡಿಯನ್ ಅಥವಾ ಸಂಬಂಧಿಕರ ಎದುರು ಪಡೆಯಬೇಕು ಹಾಗೂ ಮೆಡಿಕಲ್ ವರದಿಗಳು 7 ದಿನಗಳೊಳಗಾಗಿ ದಾಖಲಿಸಬೇಕು. ಈ ಹೇಳಿಕೆಗಳ ಆಡಿಯೋ, ವಿಡಿಯೋ ರೆಕಾರ್ಡ್ ಕಡ್ಡಾಯ.
- ಸಂಘಟಿತ ಅಪರಾಧಗಳು ಹಾಗೂ ಭಯೋತ್ಪಾದನೆ ಕೃತ್ಯಗಳನ್ನು ವ್ಯಾಖ್ಯಾನಿಸಲಾಗಿದ್ದು , ಎಲ್ಲಾ ಕಾರ್ಯಾಚರಣೆ ಹಾಗೂ ಅಪರಾಧಕ್ಕೆ ಸಂಬಂಧಿಸಿದ ಸಾಕ್ಷ್ಯ ಸಂಗ್ರಹ ಮತ್ತು ಆರೋಪಿಗಳನ್ನು ವಶಕ್ಕೆ ಪಡೆಯುವ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣ ಕಡ್ಡಾಯವಾಗಿದೆ.
- ಮಕ್ಕಳು ಹಾಗೂ ಮಹಿಳೆಯರ ವಿರುದ್ಧದ ಅಪರಾಧಗಳಿಗೆ ವಿಶೇಷ ಅಧ್ಯಾಯ ಸೇರಿಸಲಾಗಿದ್ದು, ಅಕ್ರಮ ಮಕ್ಕಳ ಮಾರಾಟ ಹಾಗೂ ಖರೀದಿಯನ್ನು ಘೋರ ಅಪರಾಧ ಎಂದು ಪರಿಗಣಿಸಲಾಗಿದೆ. ಅಪ್ರಾಪ್ತರ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಯೋಗ್ಯ ಎಂದು ಪ್ರಸ್ತಾಪಿಸಲಾಗಿದೆ.
- ಹಳೆಯ ಕಾನೂನಿನಲ್ಲಿದ್ದ ಕೆಲವು ಸೆಕ್ಷನ್‌ಗಳನ್ನು ಒಗ್ಗೂಡಿಸಲಾಗಿದ್ದು , ಭಾರತೀಯ ದಂಡ ಸಂಹಿತೆಯಲ್ಲಿದ್ದ 511 ಸೆಕ್ಷನ್‌ಗಳನ್ನು 358ಕ್ಕೆ ಇಳಿಸಲಾಗಿದೆ.
- ಮದುವೆಯ ಸುಳ್ಳು ಭರವಸೆಯ ಮೇಲೆ ಲೈಂಗಿಕ ಸಂಬಂಧಗಳನ್ನು ಬೆಳೆಸಿದ ನಂತರ ಮಹಿಳೆಯರನ್ನು ದೂರ ಮಾಡುವ ಪ್ರಕರಣಗಳಿಗೆ ಹೊಸ ನಿಬಂಧನೆಯನ್ನು ಮಾಡಲಾಗಿದೆ.
- ಹೊಸ ಕಾನೂನಿನ ಅನ್ವಯ ಆಸ್ಪತ್ರೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳಲ್ಲಿ ಸಂತ್ರಸ್ತರಿಗೆ ಉಚಿತ ಪ್ರಥಮ ಚಿಕಿತ್ಸೆ ಅಥವಾ ವೈದ್ಯಕೀಯ ಚಿಕಿತ್ಸೆಯನ್ನು ಖಚಿತಪಡಿಸಲಾಗಿದೆ.
- ಹೊಸ ಕಾನೂನುಗಳ ಅಡಿಯಲ್ಲಿ, ಮಹಿಳೆಯರ ವಿರುದ್ಧದ ಅಪರಾಧದಗಳಲ್ಲಿ ಸಂತ್ರಸ್ತರು ತಮ್ಮ ಪ್ರಕರಣದ ಪ್ರಗತಿಯ ಬಗ್ಗೆ 90 ದಿನಗಳೊಳಗಾಗಿ ಎಲ್ಲಾ ಮಾಹಿತಿಯನ್ನು ಪಡೆಯುವ ಹಕ್ಕು ಹೊಂದಿರುತ್ತಾರೆ. ಇದರಿಂದ ತನಿಖೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸವನ್ನು ಹೊಸ ಕಾನೂನು ಖಚಿತಪಡಿಸುತ್ತದೆ.
- ಸಮನ್ಸ್‌ಗಳನ್ನು ಈಗ ವಿದ್ಯುನ್ಮಾನವಾಗಿ ಸಲ್ಲಿಸಬಹುದಾಗಿದೆ. ಈ ಮೂಲಕ ಕಾನೂನು ಪ್ರಕ್ರಿಯೆಗಳನ್ನು ತ್ವರಿತಗೊಳಿಸಬಹುದು, ಕಾಗದ ಪತ್ರ ಕೆಲಸಗಳನ್ನು ಕಡಿಮೆ ಮಾಡಬಹುದು ಮತ್ತು ಪ್ರಕರಣದಲ್ಲಿ ಭಾಗಿಯಾದವರ ಮಧ್ಯೆ ಸಮರ್ಥ ಸಂವಹನಕ್ಕೆ ಅವಕಾಶ ಕಲ್ಪಿಸಬಹುದಾಗಿದೆ.
- ಆರೋಪಿ ಮತ್ತು ಸಂತ್ರಸ್ತ ಇಬ್ಬರೂ ಎಫ್‌ಐಆರ್, ಪೊಲೀಸ್ ವರದಿ, ಚಾರ್ಜ್ ಶೀಟ್, ದಾಖಲಿಸಲಾದ ಹೇಳಿಕೆ, ತಪ್ಪೊಪ್ಪಿಗೆ ಸೇರಿ ಸಂಬಂಧ ಪಟ್ಟ ದಾಖಲೆಗಳ ಪ್ರತಿಯನ್ನು 14 ದಿನಗಳೊಳಗೆ ಪಡೆಯಲು ಅಧಿಕಾರ ಹೊಂದಿರುತ್ತಾರೆ.
- ಪ್ರಕರಣಗಳ ವಿಚಾರಣೆಯಲ್ಲಿ ಅನಗತ್ಯ ವಿಳಂಬ ತಪ್ಪಿಸಲು ಹಾಗೂ ಸಕಾಲಿಕ ನ್ಯಾಯ ವಿತರಣೆಗೆ ಗರಿಷ್ಠ ಎರಡು ವಿಚಾರಣೆ ಮುಂದೂಡಿಕೆಯನ್ನು ಮಾತ್ರ ನೀಡುತ್ತದೆ.
- ಸಾಕ್ಷಿಗಳ ಸುರಕ್ಷತೆ ಮತ್ತು ಸಹಕಾರವನ್ನು ಸಾಧಿಸುವ ನಿಟ್ಟಿನಲ್ಲಿ, ಕಾನೂನು ಪ್ರಕ್ರಿಯೆಗಳ ವಿಶ್ವಾಸಾರ್ಹತೆ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಎಲ್ಲಾ ರಾಜ್ಯ ಸರ್ಕಾರಗಳು ಸಾಕ್ಷಿ ರಕ್ಷಣೆ ಯೋಜನೆಗಳನ್ನು ಜಾರಿಗೆ ತರುವುದನ್ನು ಕಡ್ಡಾಯಗೊಳಿಸಲಾಗಿದೆ.
- 'ಲಿಂಗ' ಪದದ ವ್ಯಾಖ್ಯಾನವು ತೃತೀಯ ಲಿಂಗ ವ್ಯಕ್ತಿಗಳನ್ನೂ ಒಳಗೊಂಡಿದ್ದು, ಸಮಾನತೆಯನ್ನು ಉತ್ತೇಜಿಸುತ್ತದೆ.
- 15 ವರ್ಷದ ಒಳಗಿನ ಹಾಗೂ 60 ವರ್ಷ ಮೇಲ್ಪಟ್ಟವರು, ಅನಾರೋಗ್ಯಕ್ಕೆ ಒಳಗಾದವರು ಹಾಗೂ ವಿಶೇಷಚೇತನ ವ್ಯಕ್ತಿಗಳಿಗೆ ಪೊಲೀಸ್ ಠಾಣೆಗೆ ಭೇಟಿ ನೀಡುವುದಕ್ಕೆ ವಿನಾಯಿತಿ ನೀಡಲಾಗಿದ್ದು ಅವರಿದ್ದ ಸ್ಥಳದಲ್ಲೇ ಪೊಲೀಸ್ ನೆರವನ್ನು ಪಡೆಯಬಹುದಾಗಿದೆ.

ಈ ಕಾನೂನು ಭಾರತೀಯರಿಂದ ಭಾರತೀಯರಿಗಾಗಿ, ಭಾರತದ ಸಂಸತ್ ರಚಿಸಿದೆ. ಹೊಸ ಕಾನೂನಿನ ದೇಹ, ಆತ್ಮ, ಚೈತ್ಯನ್ಯ ಎಲ್ಲವೂ ಭಾರತ. ನ್ಯಾಯ ಎಂಬುದು ಸಂತ್ರಸ್ತ ಮತ್ತು ಅಪರಾಧಿ ಇಬ್ಬರನ್ನೂ ಒಳಗೊಂಡ ಒಂದು ಭಾವಣೆ.ಈ ಹೊಸ ಕಾನೂನು ಭಾರತೀಯ ನೀತಿಯೊಂದಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ನ್ಯಾಯವನ್ನು ಒದಗಿಸುತ್ತದೆ' ಎಂದು ಅಮಿತ್ ಶಾ ಹೇಳಿದ್ದಾರೆ.

ನಾಗರಿಕ ಮೊದಲು, ಗೌರವ ಮೊದಲು ಮತ್ತು ನ್ಯಾಯ ಮೊದಲು' ಎಂಬ ಮಂತ್ರದ ಮೇಲೆ ಹೊಸ ಕ್ರಿಮಿನಲ್ ಕಾನೂನು ರೂಪಿಸಲಾಗಿದೆ. ಪೊಲೀಸರು ಇನ್ನು ದಂಡದ ಜತೆ ಅಲ್ಲ ಮಾಹಿತಿ ಜತೆ ಕೆಲಸ ಮಾಡಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೊಸ ಕಾನೂನನ್ನು ವ್ಯಾಖ್ಯಾನಿಸಿದ್ದಾರೆ.

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಅಶ್ವಿನಿ, ಕೃಷ್ಣಪಕ್ಷ, ದಶಮಿ,
ಯೋಗ ಸುಕರ್ಮ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್,
ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಜಜ್ಜಿದ ಮುಟ್ಟಿದರೆ ಮುನಿ ಗಿಡದ ಎಲೆಗಳನ್ನು ಒಂದು ಲೋಟ ನೀರಿಗೆ ಹಾಕಿ ಚೆನ್ನಾಗಿ ಕುದಿಸಿ ಕಷಾಯ ಮಾಡಿಕೊಳ್ಳಿ. ಈ ಕಷಾಯವನ್ನು ಕುಡಿಯುವುದರಿಂದ ಮುಟ್ಟಿನ ಸಮಯದಲ್ಲಿ ಅಧಿಕ ರಕ್ತ ಸ್ರಾವ, ಮೂಲವ್ಯಾಧಿ ಸಮಸ್ಯೆ ನಿವಾರಣೆಯಾಗುವುದು.

ಸೌಂದರ್ಯ ಸೂತ್ರ

ಭೃಂಗರಾಜ ಸಸಿಗಳನ್ನು ಒಣಗಿಸಿ ಚೂರ್ಣ ಮಾಡಿ ಆರ್ಗಾನಿಕ್ ಬೆಲ್ಲ ಸೇರಿಸಿ ಡಬ್ಬಿಯಲ್ಲಿ ಇಟ್ಟಿರಿ. ಈ ಚೂರ್ಣವನ್ನು 3-5 ಗ್ರಾಂನಷ್ಟು ಹಸು ತುಪ್ಪದೊಂದಿಗೆ ಎರಡು ಹೊತ್ತು ಸೇವಿಸುತ್ತಿದ್ದರೆ ಉದುರಿದ ಕೂದಲು ಚೆನ್ನಾಗಿ ಬೆಳೆಯುವುದು

ಗುಲಾಬಿ ಹೂವಿನ ಸುವಾಸನೆಯನ್ನು ಆಸ್ವಾದಿಸುತ್ತಿರುವ ಅಪರೂಪದ ಈ ಛಾಯಾಚಿತ್ರವನ್ನು ಆಸ್ಟ್ರೇಲಿಯಾದ ವನ್ಯಜೀವಿ ಛಾಯಾ ಗ್ರಾಹಕ ಉಲಿಯನ್ ರಾಡ್ ಕ್ಲಿಕ್ಕಿಸಿದ್ದಾರೆ. ಈ ಅದ್ಭುತ ದೃಶ್ಯವನ್ನು ತನ್ನ ಕ್ಯಾಮರಾದಲ್ಲಿ ಸೆರೆಹಿಡಿಯಲು ಉಲಿಯನ್ ಗಂಟೆಗಟ್ಟಲೆ ಕಾದಿದ್ದಾರೆ. ಅವರ ಪ್ರಕಾರ ವನ್ಯಜೀವಿಗಳ ಚಿತ್ರ ತೆಗೆಯುವುದು ನಿಜಕ್ಕೂ ಸವಾಲಿನ ವಿಷಯ. ಹಾಗೆಯೇ ಅನುಭವದಿಂದ ಮೂಸೆ ಯಿಂದ ಹೊರ ಬಂದ ಅವರ ಮಾತುಗಳು; ಕಾಡು ಪ್ರಾಣಿಗಳ ಛಾಯಾಚಿತ್ರ ತೆಗೆಯುವ ಸಂದರ್ಭದಲ್ಲಿ ತಾಳ್ಮೆಯಿಂದಿರಿ ಮತ್ತು ಪ್ರಾಣಿಗಳನ್ನು ಬೆನ್ನಟ್ಟ ಬೇಡಿ, ಅವು ನಿಮ್ಮ ಬಳಿಗೆ ಬರಲಿ.

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಪಾಪಿಕೊಂಡ ರಾಷ್ಟ್ರೀಯ ಉದ್ಯಾನವನವು ಯಾವ ರಾಜ್ಯದಲ್ಲಿದೆ?

- ಎ. ಕರ್ನಾಟಕ
- ಬಿ. ತಮಿಳುನಾಡು
- ಸಿ. ಸಿಕ್ಕಿಂ
- ಡಿ. ಆಂಧ್ರ ಪ್ರದೇಶ

ಉತ್ತರ: ಡಿ. ಆಂಧ್ರ ಪ್ರದೇಶ

ಮಾಹಿತಿ

ಆಂಧ್ರ ಪ್ರದೇಶ ಸರ್ಕಾರವು ಪಾಪಿಕೊಂಡ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಡ್ಗಿಚ್ಚು ತಡೆಗಟ್ಟಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ತಾಂತ್ರಿಕ ನೆರವು ಪಡೆಯುತ್ತಿದೆ. ಈ ಕಾಡ್ಗಿಚ್ಚಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪೂರ್ವ ಘಟ್ಟಗಳ ಕೆಲವು ಪ್ರದೇಶಗಳು ಹಾಳಾಗುತ್ತಿವೆ. ಇಲ್ಲಿ ಮುಖ್ಯವಾಗಿ ಗೋದಾವರಿ ನದಿ ಹರಿಯುತ್ತದೆ. ಈ ಪ್ರದೇಶವನ್ನು 1978ರಲ್ಲಿ ವನ್ಯಜೀವಿ ಅಭಯಾರಣ್ಯವಾಗಿ ಸ್ಥಾಪಿಸಲಾಯಿತು ಮತ್ತು 2008ರಲ್ಲಿ ರಾಷ್ಟ್ರೀಯ ಉದ್ಯಾನವನಕ್ಕೆ ನವೀಕರಿಸಲಾಯಿತು. ಇದು ಬರ್ಡ್‌ಲೈಫ್ ಇಂಟರ್‌ನ್ಯಾಷನಲ್‌ನಿಂದ ಪ್ರಮುಖ ಪಕ್ಷಿ ಮತ್ತು ಜೀವವೈವಿಧ್ಯ ಪ್ರದೇಶ ಎಂದು ಗುರುತಿಸಲ್ಪಟ್ಟಿದೆ. ಈ ಪ್ರದೇಶದಲ್ಲಿ ವಿಶೇಷವಾಗಿ 'ಕಂಚು ಮೇಖಾ' ಎಂಬ ವಿಶಿಷ್ಟ ಕುಬ್ಜ ಮೇಕೆ ತಳಿಗಳು ಕಂಡುಬರುತ್ತವೆ.

ದಿನ ಭವಿಷ್ಯ

ಮೇಷ ನಿಮ್ಮ ಕೋಪದ ಸ್ವಭಾವವು ಕುಟುಂಬ ಸದಸ್ಯರನ್ನು ತೊಂದರೆಗೊಳಿಸಬಹುದು. ವೈಯಕ್ತಿಕ ಮತ್ತು ಆರ್ಥಿಕ ಪಕ್ಷವನ್ನು ಬಲಪಡಿಸಲು ಪ್ರಮುಖ ಯೋಜನೆಗಳನ್ನು ಮಾಡುವಿರಿ.

ವೃಷಭ ಮನೆ ನಿರ್ವಹಣೆ, ಸುಧಾರಣೆ ಕಾರ್ಯಗಳಲ್ಲಿ ಖರ್ಚು ಮಾಡಲಾಗುವುದು. ಮಕ್ಕಳೊಂದಿಗೆ ಕುಳಿತು ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ.

ಮಿಥುನ ವ್ಯವಹಾರದಲ್ಲಿ ಅನುಭವಿಗಳಿಂದ ಸಲಹೆ ಪಡೆದರೆ ಏಳ್ಗೆ ಸಾಧ್ಯ. ಕೌಟುಂಬಿಕ ವಾತಾವರಣ ಆಹ್ಲಾದಕರವಾಗಿರಬಹುದು.

ಕಟಕ ಆಧ್ಯಾತ್ಮಿಕತೆಯಿಂದ ಮಾನಸಿಕ ಸಂತೋಷ. ಬಯಸಿದ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವ ಮೂಲಕ ಮನಸ್ಸಿಗೆ ಸಂತೋಷ.

ಸಿಂಹ ನೀವು ಬೆಳೆಯಬೇಕಾದರೆ ಸ್ವಲ್ಪ ಸ್ವಾರ್ಥಿಗಳಾಗಿರಬೇಕು. ಜೀವನದಲ್ಲಿ ಎಲ್ಲ ಇದ್ದರೂ, ಸ್ವಲ್ಪ ಒಂಟಿತನವನ್ನು ಅನುಭವಿಸಬೇಕಾಗಬಹುದು.

ಕನ್ಯಾ ನಕಾರಾತ್ಮಕತೆಯು ನಿಮ್ಮನ್ನು ಆವರಿಸಲು ಬಿಡಬೇಡಿ ಮತ್ತು ನಿಮ್ಮನ್ನು ಕಾರ್ಯನಿರತವಾಗಿರಿಸಿ ಕೊಳ್ಳಿ.

ತುಲಾ ದೈಹಿಕ ಮತ್ತು ಮಾನಸಿಕವಾಗಿ ಸಕಾರಾತ್ಮಕತೆಯನ್ನು ಅನುಭವಿಸುವಿರಿ. ಇದು ಪ್ರಮುಖ ನಿರ್ಧಾರ ಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ.

ವೃಶ್ಚಿಕ ಯುವಕರು ತಮ್ಮ ಅರ್ಹತೆಗೆ ತಕ್ಕಂತೆ ಸರಿ ಯಾದ ಫಲಿತಾಂಶವನ್ನು ಪಡೆಯುತ್ತಾರೆ. ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಸ್ವಲ್ಪ ಸಮಯ ಕಳೆಯಿರಿ.

ಧನು ಕೆಲಸದ ಸ್ಥಳದಲ್ಲಿ ವ್ಯಾಪಾರ ಚಟುವಟಿಕೆಗಳು ಇಂದು ಸ್ವಲ್ಪ ನಿಧಾನವಾಗಬಹುದು. ಕೌಟುಂಬಿಕ ವಾತಾವರಣ ಆಹ್ಲಾದಕರ.

ಮಕರ ವಾರದ ಮೊದಲ ದಿನ ಹಣದ ವ್ಯವಹಾರದಲ್ಲಿ ಜಾಗರೂಕರಾಗಿರಬೇಕು. ನೀವು ನ್ಯಾಯಾಲಯದ ಮೊರೆ ಹೋಗುವ ಸಂದರ್ಭ ಬರಬಹುದು.

ಕುಂಭ ಇಂದು ಪ್ರಾಪಂಚಿಕ ಸೌಕರ್ಯಗಳ ಸಾಧನ ಗಳಲ್ಲಿ ಹೆಚ್ಚಳ ಕಂಡು ಬರುತ್ತದೆ. ವ್ಯಾಪಾರ ಕ್ಷೇತ್ರದಲ್ಲಿ ಅನುಕೂಲಕರ ಲಾಭದಿಂದ ಸಂತೋಷ ಪಡೆಯುವಿರಿ.

ಮೀನ ನಿಮ್ಮ ಆರ್ಥಿಕ ಸ್ಥಿತಿಯು ಬಲವಾಗಿರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು ಇಂದು ಕಠಿಣ ಪರಿಶ್ರಮ ಪಡಬೇಕಾಗಬಹುದು.

• ಕೆ.ಬಿ.ಸಂತೋಷ್ ಗುರೂಜಿ

ಅನಸೂಯೆಯ ಮಹಾ ಪತಿವ್ರತಾ ಧರ್ಮ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ತಂದೆ ಕರ್ದಮ ಮುನಿ ತಾಯಿ ದೇವಹೂತಿಯವರಲ್ಲಿ ಒಂಬತ್ತನೇ ಮಗಳಾಗಿ ಜನಿಸಿದವಳು ಅನುಸೂಯ. ಆಕೆಯ ಪತಿ ಅತ್ರಿ. ಸಪ್ತಋಷಿಗಳಲ್ಲಿ ಒಬ್ಬ. ಆಕೆಗೆ ಬ್ರಹ್ಮ ಮಾನಸಪುತ್ರ ದತ್ತಾತ್ರೇಯ, ಚಂದ್ರ, ದುರ್ವಾಸರು ಈಕೆಯ ಪುತ್ರರು. ಅನಸೂಯ ಮಹಾ ಪತಿವ್ರತೆ. ಆಕೆಯ ಪತಿವ್ರತಾ ಧರ್ಮವನ್ನು ಪರೀಕ್ಷಿಸಲು ಒಮ್ಮೆ ತ್ರಿಮೂರ್ತಿಗಳು ಬಂದರು. ಭಿಕ್ಷೆ ಹಾಕಲು ತಾಯಿ ಅನುಸೂಯ ಬಾಗಿಲಿಗೆ ಬಂದಾಗ ಅವರು, ನೀನು ನಿರ್ವಸ್ತ್ರದಿಂದ ಭಿಕ್ಷೆ ಹಾಕಿದರೆ ಸ್ವೀಕರಿಸುವೆವು ಎಂದರು.

ಪತಿವ್ರತೆ ಅನಸೂಯ ಸ್ವಲ್ಪವೂ ಧೃತಿಗೆಡಲಿಲ್ಲ. ತನ್ನ ಪತಿಯ ಪಾದ ತೊಳೆದು ಆ ನೀರನ್ನು ಆ ತ್ರಿಮೂರ್ತಿಗಳ ಮೇಲೆ ಪ್ರೋಕ್ಷಣೆ ಮಾಡಿದಳು. ಆ ಕೂಡಲೇ ಅವರೆಲ್ಲಾ ಶಿಶುಗಳಾದರು. ಆಗ ಅನಸೂಯ ಅವರನ್ನು ಎತ್ತಿಕೊಂಡು ನಿರ್ವಸ್ತ್ರಳಾಗಿ ತನ್ನ ಎದೆ ಹಾಲನ್ನೇ ಕೊಟ್ಟಳು. ಅಂಥ ಪತಿವ್ರತೆ ಈ ತಾಯಿ. ತ್ರಿಮೂರ್ತಿಗಳ ಪತ್ನಿಯರಾದ ಲಕ್ಷ್ಮಿ, ಸರಸ್ವತಿ, ಪಾರ್ವತಿಯರು ತಮ್ಮ ಪತಿಯಂದಿರಿಗೆ ಆದ ಗತಿಯನ್ನು ನೋಡಿ, ಮರಳಿ ಅವರಿಗೆ ಮೊದಲಿನ ರೂಪ ಬರುವಂತೆ ಮಾಡಿದರು. ಒಬ್ಬ ಪತಿವ್ರತೆಗಿರುವ ಸಾತ್ವಿಕ ಶಕ್ತಿಯನ್ನು ಈ ಘಟನೆ ನಿರೂಪಿಸುತ್ತದೆ.

ಋಷಿಗಳಾದ ಅತ್ರಿಗಳಿಗೆ ಒಂದು ಕಾಲಿರಲಿಲ್ಲ. ಪತ್ನಿ ಅನುಸೂಯ ಅವರನ್ನು ಎತ್ತಿಕೊಂಡು ಹೋಗುತ್ತಿರುವಾಗ ಅತ್ರಿಯ ಪಾದ ದಾರಿಯಲ್ಲಿ ತಪಸ್ಸಿಗೆ ಕುಳಿತಿರುವ ಋಷಿಯೋರ್ವನಿಗೆ ತಗಲಿದವು. ಆ ಋಷಿ ಕೋಪೋದ್ರಿಕ್ತನಾಗಿ ನಾಳೆ ಸೂರ್ಯ ಉದಯವಾಗುವುದರೊಳಗಾಗಿ ಅವನು ಸತ್ತು ಹೋಗಲಿ ಎಂದು ಶಾಪ ಕೊಟ್ಟನು. ಆಗ ಪತಿವ್ರತೆ ಅನುಸೂಯ, ಭಕ್ತಿಯಿಂದ ಸೂರ್ಯ ಉದಯವಾಗದಂತೆ ಸೂರ್ಯನನ್ನು ಪ್ರಾರ್ಥಿಸಿದಳು. ಸರಿ ಪತಿವ್ರತೆಯ ಧರ್ಮದಂತೆ ಸೂರ್ಯ ಉದಯವಾಗಲೇ ಇಲ್ಲ. ಲೋಕವೆಲ್ಲಾ ಅಲ್ಲೋಲ ಕಲ್ಲೋಲವಾಯಿತು. ಅನಸೂಯೆಯನ್ನು ಎಲ್ಲರೂ ಬಂದು ಬೇಡಿಕೊಂಡರು. ಆಗ ಆ ಶಾಪ ಕೊಟ್ಟ ಋಷಿಯೂ ಬಂದನು. ಅವನ ಶಾಪವನ್ನು ಮರಳಿ ಪಡೆದ ಮೇಲೆ ಸೂರ್ಯ ದೇವ ಪ್ರತ್ಯಕ್ಷನಾದನು. ಹೀಗಾಗಿ ಅನುಸೂಯಳನ್ನು ಮಹಾಪತಿವ್ರತೆ ಎಂದು ಇಂದಿಗೂ ಪೂಜಿಸುತ್ತಾರೆ. ತನ್ನ ವೈವಾಹಿಕ ಜೀವನದಲ್ಲಿ ಕಾಯ್ದುಕೊಂಡ ನಿಷ್ಠೆ ಪ್ರೇಮ ಭಕ್ತಿ ಇದೆಲ್ಲದರಿಂದ ಸಾಮಾನ್ಯ ಸ್ತ್ರೀ ಆದ ಅನುಸೂಯೆ ಕೂಡ ಮಹಾಪತಿವ್ರತೆಯ ಸ್ಥಾನಕ್ಕೆ ಏರಿದಳು. ಆಕೆಯ ಪತವ್ರತಾ ಧರ್ಮ ಅದೆಷ್ಟು ಶುದ್ಧವಾಗಿತ್ತು ಎಂದರೆ ತ್ರಿಮೂರ್ತಿಗಳು ಕೂಡ ಆಕೆಯನ್ನು ಮಣಿಸಲಾಗಲಿಲ್ಲ. ಅವರನ್ನೇ ಶಿಶುವಾಗಿಸಿಕೊಂಡು ಹಾಲುಣಿಸಿದ ಮಹಾತಾಯಿಯಾದಳು.

ನಾವು ಎಂತಹ ಸಾಮಾನ್ಯರಾದರೂ ಮಾಡುವ ಕೆಲಸದಲ್ಲಿ ನಿಷ್ಠೆ, ಪ್ರಾಮಾಣಿಕತೆ ಇದ್ದಾಗ ನಮ್ಮ ಅಸ್ತಿತ್ವಕ್ಕೆ ಒಂದು ಬೆಲೆ. ಒಬ್ಬ ಸಾಮಾನ್ಯ ಗುಮಾಸ್ತರು ಕೂಡ ಲಂಚಕ್ಕೆ ಕೈ ದೊಡ್ಡದೇ ತಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಿದಾಗ, ಅವರು ಯಾವ ಮೇಲಾಧಿಕಾರಿಯ ಮುಂದೆಯೂ ತಲೆಬಗ್ಗಿಸಿ ನಿಲ್ಲಬೇಕಾದ ಅವಶ್ಯಕತೆ ಇರುವುದಿಲ್ಲ. ಯಾರ ಮುಲಾಜಿಗೂ ಕೂಡ ಅವರು ಬೀಳುವುದಿಲ್ಲ.

ಬದುಕಿನಲ್ಲಿ ನಾವು ಸುಲಭದ ಹಣಕ್ಕಾಗಿ, ಐಷಾರಾಮಿ ಬದುಕಿಗಾಗಿ ಆಸೆಪಟ್ಟು ಅಡ್ಡದಾರಿ ಹಿಡಿದಾಗ ನಮ್ಮ ಗೌರವವನ್ನು ನಾವೇ ಕಳೆದುಕೊಳ್ಳುತ್ತೇವೆ. ಒಂದಿಷ್ಟು ಪುಡಿಗಾಸನ್ನು ನೀಡಿದ ಅಪರಿಚಿತರು ಸಹ ನಮ್ಮನ್ನು ತೃಣವಾಗಿ ಕಾಣುತ್ತಾರೆ. ಜೀವನವಿಡೀ ಕಷ್ಟಪಟ್ಟು ಗಳಿಸಿದ ವಿದ್ಯೆ, ಪದವಿ , ಅನುಭವ ಇದು ಯಾವುದಕ್ಕೂ ಬೆಲೆ ಇರುವುದಿಲ್ಲ. ಒಂದಷ್ಟು ಸಾವಿರ ರೂಪಾಯಿಗಳು ನಮ್ಮ ಇಡೀ ಜೀವನದ ಬೆಲೆಯನ್ನೇ ಕಳೆದುಬಿಡುತ್ತವೆ. ಆದ್ದರಿಂದಲೇ ಯಾರಿಂದಲಾದರೂ ಅನಗತ್ಯವಾಗಿ ಸಹಾಯ ಪಡೆಯುವಾಗ, ಹಣ ಪಡೆದುಕೊಳ್ಳುವಾಗ ನೂರು ಬಾರಿ ಯೋಚನೆ ಮಾಡಿ. ಆ ಹಣ, ಸಹಾಯ ಹೆಚ್ಚು ದಿನ ನಮಗೆ ಉಪಯೋಗವಾಗದೆ ಇರಬಹುದು. ಆದರೆ ಆ ಒಂದು ನಡವಳಿಕೆಯಿಂದ ನಮ್ಮ ವ್ಯಕ್ತಿತ್ವದ ಮೇಲೆ ಬಿದ್ದ ಕಪ್ಪು ಚುಕ್ಕೆ ಜೀವನವಿಡಿ ನಮ್ಮನ್ನು ನೆರಳಾಗಿ ಕಾಡುತ್ತದೆ.

ನಾವು ಪ್ರಾಮಾಣಿಕರಾಗಿ ಇದ್ದಾಗ ಮಾತ್ರ ಯಾರಿಗೂ ಕೂಡ ಹೆದರುವ ಅಗತ್ಯವಿರುವುದಿಲ್ಲ. ಯಾರು ಕೂಡ ನಮ್ಮನ್ನು ಅನಗತ್ಯವಾಗಿ ಮಣಿಸಲು ಸಾಧ್ಯವಿರುವುದಿಲ್ಲ. ಈ ಆತ್ಮ ಗೌರವವನ್ನು ನಾವೆಲ್ಲರೂ ಉಳಿಸಿಕೊಳ್ಳೋಣ.

ಒಂದೊಳ್ಳೆ ಮಾತು

ಅತ್ಯಂತ ಚಿಕ್ಕ ಅಣು ಕಾರ್ ನ್ಯಾನೋ!

ಕಾರ್ ಎಂದ ತಕ್ಷಣ ನಾನಾ ವಿನ್ಯಾಸದ, ಕಂಪನಿಗಳ ಬಣ್ಣಬಣ್ಣದ ಮನಮೋಹಕ ಕಾರುಗಳು ನಿಮ್ಮ ಸ್ಮೃತಿಪಟಲದಲ್ಲಿ ಖಂಡಿತ ಮೂಡಿ ಬರುತ್ತವೆ. ಆದರೆ ಇಲ್ಲಿ ಈಗ ಹೇಳಹೊರಟಿರುವುದು ಪ್ರಪಂಚದ ಅತ್ಯಂತ ಚಿಕ್ಕ, ಹಗುರ, ಹೊಗೆಯುಗುಳದ, ಗದ್ದಲ ರಹಿತ ನಾಲ್ಕು ಗಾಲಿಯ ಅಣು ಗಾತ್ರದ ನ್ಯಾನೋ ಕಾರ್ ಬಗ್ಗೆ. ಈ ಅಣು ನ್ಯಾನೋ ಕಾರನ್ನು ನೋಡಲು ಅತ್ಯಂತ ಶಕ್ತಿಶಾಲಿ ಸೂಕ್ಷ್ಮದರ್ಶಕ ಯಂತ್ರವೇ ಬೇಕಾಗಬಹುದು. ಇಂತಹ ಅತ್ಯಂತ ಸೂಕ್ಷ್ಮ ಅಣುಕಾರನ್ನು ಡಚ್ ವಿಜ್ಞಾನಿಗಳು ರೂಪಿಸಿದ್ದಾರೆ. ಅಣುವೆನ್ನುವುದು ಅತ್ಯಂತ ಚಿಕ್ಕ ಕಣವಾಗಿದ್ದು ಪರಮಾಣುಗಳಿಂದ ರಚನೆಗೊಂಡಿರುತ್ತದೆ. ಇಂತಹ ಒಂದು ಸಂಕೀರ್ಣ ಅಣುವಿನಿಂದ ಈ ನ್ಯಾನೋ ಕಾರ್ ತಯಾರಿಸಲ್ಪಟ್ಟಿದೆ. ಈ ಕಾರ್‌ನ ತಯಾರಿಕೆಗಾಗಿ ವಿಜ್ಞಾನಿಗಳು ರಾಸಾಯನಿಕ ವಸ್ತುವಾದ ಬ್ಯೂಟೈಲ್ ಮೀಥೈಲ್ ಸಲ್ಫೈಡ್‌ನ ಒಂದು ಅಣುವನ್ನು ತೆಗೆದುಕೊಂಡಿದ್ದಾರೆ. ಈ ಒಂದು ಅಣುವಿನ ಆಕಾರ ಏ ಆಕೃತಿಯಲ್ಲಿದ್ದು ಇದು ವಾಹನದ ಮೂಲ ಚೌಕಟ್ಟಿನಂತೆ ವರ್ತಿಸುತ್ತದೆ. ಇದರ ನಾಲ್ಕು ಮೂಲೆಗಳಲ್ಲಿರುವ ಜಲಜನಕದ ಪರಮಾಣುಗಳು ಚಕ್ರಗಳಂತೆ ವರ್ತಿಸುತ್ತವೆ. ಇದರ ಗಾತ್ರ 42 ನ್ಯಾನೋಮೀಟರ್‌ಗಳು! ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ನಮ್ಮ ಕೂದಲಿನ ವ್ಯಾಸದ (ದಪ್ಪದ) ಸುಮಾರು 60,000ಕ್ಕಿಂತಲೂ ಕಡಿಮೆ. ಇದಕ್ಕೆ ಎರಡು ಅಕ್ಷ ಚಕ್ರ ಗೂಟಗಳಿದ್ದು, ನಮ್ಮ ಕಾರಿನಂತೆಯೇ ನಾಲ್ಕು ಚಕ್ರಗಳಿವೆ.

ಚಾಲನೆಯ ತತ್ವ

ಈ ನ್ಯಾನೋ ಕಾರ್ ಚಾಲನೆಯ ತತ್ವಕ್ಕೆ ಸ್ಫೂರ್ತಿ ನಮ್ಮ ದೇಹದಲ್ಲಿ ಓಡಾಡುವ ಪ್ರೋಟೀನ್ ಕಣಗಳು! ಇವೂ ಕೂಡ ಪುಟಾಣಿ ಜೈವಿಕ ಕಾರ್‌ಗಳೇ. ಈ ಕಾರ್‌ಗಳಿಗೆ ರಾಸಾಯನಿಕ ಶಕ್ತಿಯಿಂದ ಇಂಧನ ಪೂರೈಕೆಯಾಗುತ್ತದೆ. ಇದೇ ತತ್ವವನ್ನು ಬಳಸಿ ಅಣು ನ್ಯಾನೋ ಕಾರ್‌ನ್ನು ತಯಾರಿಸಲಾಗಿದೆ. ಇದಕ್ಕೆ ಬೇಕಾದ ಅಣುವನ್ನು ಸಂಶ್ಲೇಷಿಸಿ ತಯಾರಿಸಲಾಗಿದೆ. ಈ ಅಣುವಿನ ನಾಲ್ಕು ತುದಿಗಳಲ್ಲಿರುವ ಜಲಜನಕ ಪರಮಾಣುಗಳೇ ನಾಲ್ಕು ಚಕ್ರಗಳು. ಇವುಗಳಲ್ಲಿರುವ ಎಲೆಕ್ಟ್ರಾನ್‌ಗಳ ಚಕ್ರಗಳಿಗೆ ಚಾಲನೆಯ ಶಕ್ತಿಯನ್ನು ಒದಗಿಸುತ್ತವೆ. ಈ ಚಕ್ರಗಳಿಗೆ 500 ಮಿಲಿ ವೋಲ್ಟ್‌ಗಳಷ್ಟು ವಿದ್ಯುತ್ ಚಾಲಕಬಲವನ್ನು ಪೂರೈಸಬೇಕಾಗುತ್ತದೆ.

ಇದರ ವಿಶೇಷಗಳು

ಸದ್ಯಕ್ಕೆ ಈ ಕಾರು ತಾಮ್ರ ಲೋಹದ ಮೇಲೆ ಒಂದೇ ದಿಕ್ಕಿನಲ್ಲಷ್ಟೇ ಚಲಿಸಬಲ್ಲದು. ಹಿಮ್ಮುಖ ಚಲನೆ ಸಾಧ್ಯವಿಲ್ಲ ಅಂದರೆ ರಿವರ್ಸ್ ಗೇರ್ ಇಲ್ಲ. ಈ ಅಣುವಿನ ಮಧ್ಯಭಾಗ ಒಂದು ಅಕ್ಷದಂತೆ ವರ್ತಿಸುವುದರಿಂದ ಈ ಕಾರು ಒಂದೇ ದಿಕ್ಕಿನಲ್ಲಿ ಚಲಿಸುತ್ತದೆ. ಈ ಈ ಕಾರನ್ನು ತಾಮ್ರದ ಮೇಲ್ಮೈ ಮೇಲೆ ಇಟ್ಟಾಗ ವಿದ್ಯುತ್ ರೈಲನ್ನು ಹಳಿಗಳ ಮೇಲೆ ಇಟ್ಟಂತೆ ಆಗುತ್ತದೆ. ಇದರಲ್ಲಿರುವ ಇಂಗಾಲ ಮತ್ತು ಜಲಜನಕಗಳು ಕೈಗಳಂತೆ ನಿಯಂತ್ರಕ ಕೆಲಸಗಳನ್ನು ನಿರ್ವಹಿಸುತ್ತವೆ. ಇದರ ಚಕ್ರಗಳಲ್ಲಿರುವ ನಾಲ್ಕು ಜಲಜನಕ ಪರಮಾಣುಗಳು, ಚಲನೆಯ ಕಾರ್ಯವನ್ನು ಮುಂದುವರೆಸುತ್ತವೆ. ಒಮ್ಮೆ ವಿದ್ಯುತ್ ಪೂರೈಕೆಯಾದರೆ ಇದರ ಪರಮಾಣು ಗಾಲಿಗಳು ಕೇವಲ ಅರ್ಧ ಸುತ್ತನ್ನು ಮಾತ್ರ ಪೂರೈಸುತ್ತವೆ. ಮುಂದಿನ ಅರ್ಧ ಸುತ್ತಿಗೆ ಪುನಃ ವಿದ್ಯುತ್ತಿನ ಪೂರೈಕೆಯಾಗಬೇಕು. ಚಕ್ರಗಳ ಹತ್ತು ಸುತ್ತುಗಳಿಂದ ಈ ಕಾರು ಚಲಿಸುವ ದೂರ ಕೇವಲ



ವಿಜ್ಞಾನ ವಿಸ್ಮಯ
ಕೆ. ನಟರಾಜ್

6 ನ್ಯಾನೋ ಮೀಟರ್‌ಗಳು !

ಪರಿಮಿತಿಗಳು

ನ್ಯಾನೋ ಕಾರುಗಳ ನಿಯಂತ್ರಣ ತುಂಬಾ ಕಷ್ಟ. ಏಕೆಂದರೆ ಇವುಗಳ ಮೇಲೆ ಗುರುತ್ವವಾಗಲೀ ತೂಕವಾಗಲೀ ವರ್ತಿಸುವುದು ಅಸಾಧ್ಯ. ಇವುಗಳು ಪರಿಮಿತಿಯ ಉಷ್ಣತೆಯಲ್ಲಿ ಕೆಲಸ ಮಾಡುತ್ತವೆ. ಅಲ್ಲದೆ ಈ ಕಾರ್ಯ ನಿರ್ವಹಣೆಗೆ ಶೂನ್ಯ ವಾತಾವರಣದ ಅವಶ್ಯಕತೆಯನ್ನು ಪೂರೈಸುವುದೂ ಒಂದು ಸವಾಲು. ಇವುಗಳು ಒಂದೇ ದಿಕ್ಕಿನಲ್ಲಿ ಮಾತ್ರ ಚಲಿಸುವ ಸಾಮರ್ಥ್ಯವನ್ನು ಹೊಂದಿದ್ದು ಬೇಕಾದ ದಿಕ್ಕಿಗೆ ತಿರುಗುವಂತೆ ಮಾಡಲು ಸಾಧ್ಯವಿಲ್ಲದಿರುವುದು ಮತ್ತು ಹಿಮ್ಮುಖ ಚಲನೆ ಇಲ್ಲದಿರುವುದು ಇದರ ಮಿತಿಗಳು.

ಪ್ರಯೋಜನಗಳು

ಈ ಕಾರುಗಳ ಗಾತ್ರ ಕೇವಲ ಒಂದು ಅಣುವಾಗಿದ್ದು, ಎಂತಹ ಸೂಕ್ಷ್ಮ ಪ್ರದೇಶಗಳಲ್ಲೂ ಇವುಗಳನ್ನು ಚಲಿಸುವಂತೆ ಮಾಡಬಹುದು. ಬೇಕಾದ ಸೂಕ್ಷ್ಮ ಪ್ರದೇಶಕ್ಕೆ ಅಗತ್ಯವಾದ ಸೂಕ್ಷ್ಮ ಕಣಗಳನ್ನು ತಲುಪಿಸುವ ವ್ಯವಸ್ಥೆ ಕಲ್ಪಿಸಬಹುದು. ಇದರಿಂದಾಗಿ ಈ ನ್ಯಾನೋ ಕಾರುಗಳು ಮುಂದೆ ವೈದ್ಯಕೀಯ ಕ್ಷೇತ್ರದಲ್ಲಿ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆಯಲಿವೆ. ಮುಂದೆ ಈ ಕಾರುಗಳನ್ನು ವಿದ್ಯುತ್‌ನ ಬದಲಾಗಿ ಬೆಳಕಿನ ಶಕ್ತಿ ಅಥವಾ ಲೇಸರ್ ಬೆಳಕನ್ನು ಬಳಸಿ ಚಲಿಸುವಂತೆ ಪ್ರಯತ್ನಗಳೂ ನಡೆಯಲಿವೆ.

ಪ ದ ಬಂ ಧ



ಎಡದಿಂದ ಬಲಕ್ಕೆ
2. ಆಕಾಶವಾಣಿಗೆ ಮತ್ತೊಂದು ಹೆಸರು (3)
4. ಎರಡಕ್ಷರದ ನಕಲು (2)
5. ಸೇನಾಪತಿಗೆ ಮತ್ತೊಂದು ಹೆಸರು (4)
6. ಚಾಡಿಕೋರನಿಗೆ ಮತ್ತೊಂದು ಹೆಸರು (3)
7. ಎರಡಕ್ಷರದ ಮತ್ತೊಂದು ಕಾಡು (2)
10. ಅಸ್ತವ್ಯಸ್ತವಾದ ಕುದುರೆ (3)
12. ವಾದ್ಯಗಳನ್ನು ಬಾಜಿಸು (3)
13. ಕೆಸರಿಗೆ ಮತ್ತೊಂದು ಹೆಸರು (3)
14. ಮನದ ಬಲವಾದ ಆಸೆ (3)
16. ಮರಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡುವ ಕತ್ತೆ ತಿರುಗಿ ಬಂದಿದೆ (2)
19. ತಿರುಗಿ ಬಂದಿರುವ ಅಡುಗೆಯವನು (3)
20. ಮನೆಗೆಲಸದ ಪರ್ಯಾಯ ಪದ (4)
21. ಕಡೆಯದಾಗಿ ತೆಗೆದುಕೊಂಡ ಸಾಲ (2)
22. ಸುಡುವಿಕೆ ಅಸ್ತವ್ಯಸ್ತವಾಗಿ ಬಂದಿದೆ (3)

ಮೇಲಿನಿಂದ ಕೆಳಕ್ಕೆ
1. ಪರಿಮಾಣಕ್ಕೆ ಇನ್ನೊಂದು ಹೆಸರು (3)
2. ತೋರಿಕೆಗಾಗಿ ಹೇಳುವ ನುಡಿ (4)
3. ಲೇಖಕನಿಗೆ ಹೀಗೆಯೂ ಹೇಳಬಹುದು (4)
4. ಓಂಕಾರವೆಂಬ ಮಂತ್ರ (3)
8. ಕಾಡಿನ ಮಧ್ಯಭಾಗ (4)
9. ಅತಿಯಾಗಿ ನೀಡಿದ ಒಪ್ಪಿಗೆ (4)
11. ಹಿಂದಿಯಿಂದ ಬಂದಿರುವ ಬಡವ (3)
14. ಬರವಣಿಗೆಯಲ್ಲಿ ಬಿಟ್ಟುಹೋದ ಭಾಗವನ್ನು ಸೇರಿಸಿದುದನ್ನು ಸೂಚಿಸುವ ಚಿನ್ಹೆ (4)
15. ಬಳ್ಳಿಯ ಮಂಟಪವಿದು (4)
17. ಚತುರನೂ ಖದೀಮನೂ (3)
18. ಜೀವಿಗಳ ಬಾಹ್ಯವಾದ ಆಕಾರ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ನಾಕ 3. ಕಾತರ 5. ಪಲ್ಲಿ 6. ಲಡಾಯಿ 7. ಸಮ್ಮತಿ 8. ಹಬೆ 9. ತನು 11. ರಶ್ಮಿ 12. ಆಮಿಷ 13. ಶಂಕೆ 15. ಹಾಳು 16. ಅತ್ತಿಗೆ 17. ಆಳು 18. ರಮ 21.ಹಣ 22. ಳಿವಹಾ 23. ಗಮಾರ 24. ಹಗೆ 25. ಕುವರ 26. ಟಿರಾ

ಮೇಲಿನಿಂದ ಕೆಳಕ್ಕೆ: 2. ಕಲಬೆರಕೆ 3. ಕಾಯಿಲೆ 4. ರಸನಿಮಿಷ 5. ಪತಿತ 10. ನುಸುಳು 13. ಶಂಬರ 14. ಮುತ್ತಿಗೆಹಾಕು 15. ಹಾಳುಹರಟೆ 19. ಮಳಿಗೆ 20. ನಗರ.

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಫ್ರಾನ್ಸ್‌ನ ಲೂವ್ ಮ್ಯೂಸಿಯಂ



ಫ್ರಾನ್ಸ್‌ನ ಲೂವ್ ಮ್ಯೂಸಿಯಂ ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ತಾಣವಾಗಿದೆ. ವರ್ಷಕ್ಕೆ ಒಂದು ಕೋಟಿಗೂ ಹೆಚ್ಚು ಜನರು, ಈ ಮ್ಯೂಸಿಯಂ ವೀಕ್ಷಿಸಲು ಆಗ ಮಿಸುತ್ತಾರೆ. ಮೋನಾಲೀಸಾ ಚಿತ್ರ ಸೇರಿದಂತೆ ಪ್ರದರ್ಶನಕ್ಕೆ ಇಟ್ಟಿರುವ 35000 ವಸ್ತುಗಳನ್ನು ಚಕಚಕನೆ ನೋಡುತ್ತಾ ಹೋಗಲು 200 ದಿನಗಳೇ ಬೇಕಾಗಬಹುದು. ಪ್ರದರ್ಶನಕ್ಕೆ ಇಡದ ವಸ್ತುಗಳೇ ಸುಮಾರು ಮೂರೂವರೆ ಲಕ್ಷದಷ್ಟು ಇವೆ!

ಪುಸ್ತಕ ಲೋಕ

ನೀ ದೂರ ಹೋದಾಗ



ಫೌಝಿಯ ಸಲೀಂರವರ 'ನೀ ದೂರ ಹೋದಾಗ' ಕಾದಂಬರಿಯು ಮಂಗಳೂರಿನಲ್ಲಿರುವ ಮುಸ್ಲಿಂ ಸಮುದಾಯದ ಕಷ್ಟಗಳ ಬಗ್ಗೆ, ಸುಲಭ ಮತ್ತು ಆಸಕ್ತಿದಾಯಕವಾಗಿ ಓದಿಸುವಂತೆ ಮಾಡುತ್ತದೆ. ಮಧ್ಯಮ ಮತ್ತು ಕೆಳ ವರ್ಗದ ದೊಡ್ಡ ಮುಸ್ಲಿಂ ಕುಟುಂಬಗಳ ದೈನಂದಿನ ಹೋರಾಟದ ಸುತ್ತ ಕಥೆ ಸುತ್ತುತ್ತದೆ. ಕಥಾವಸ್ತುವು ಸಾಂಪ್ರದಾಯಿಕ ಅವಿಭಕ್ತ ಕುಟುಂಬದಲ್ಲಿನ ವಿಶಿಷ್ಟ ಸಮಸ್ಯೆಗಳನ್ನು ಮತ್ತು ಮುಸ್ಲಿಂ ಸಮುದಾಯದ ರಚನೆಯೊಳಗಿನ ಸೂಕ್ಷ್ಮ ಲಿಂಗ ಮಾತುಕತೆಗಳನ್ನು ಬಿಚ್ಚಿಡುತ್ತದೆ. ಆಧುನಿಕ ದಿನದ ವಿದ್ಯಾವಂತ ಮಹಿಳೆಯರ ನಿರೀಕ್ಷೆಗಳನ್ನು ತಲುಪಲು ಎದುರಿಸಬೇಕಾದ ಸಮಸ್ಯೆಗಳ ಕುರಿತು ಈ ಕೃತಿಯು ವಿವರಿಸುತ್ತದೆ. ಅಚ್ಚುಕಟ್ಟಾದ ನಿರೂಪಣೆಯಿದ್ದು, ಓದುಗರ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳುವಂತಿದೆ.

ಟ್ವೀಟ್‌ಮೆಂಟ್

ವಿರಾಜ್ ಸೇಠ್: ಟ್ವಿಟ್ಟರ್ ಎಲ್ಲರಿಗೂ ವಿನ್ರಮವಾಗಿದೆ ಗುರು! ನಿಜವಾಗ್ಲೂ ಪ್ರಜಾಸತ್ತಾತ್ಮಕ ವೇದಿಕೆ.

ಮನೀಶ್ ಪಾಂಡೇ: ಎಕ್ಸ್ ಅಂತಾ ಹೇಳುವುದನ್ನು ಯಾವಾಗ ಶುರುಮಾಡ್ತೀರೋ? ಎಲಾನ್ ಅಣ್ಣ ಕಂಪನಿಯನ್ನ ಖರೀದಿ ಮಾಡಿದ, ಆದರೆ, ಬ್ರಾಂಡ್ ಆಗಿ ಮಾಡೋಕೆ ಆಗೇಇಲ್ಲ!

ಈ ದಿನ ಇತಿಹಾಸ



- 1938- ಭಾರತದ ಖ್ಯಾತ ಕೊಳಲುವಾದಕ, ಸಂಗೀತ ನಿರ್ದೇಶಕ ಹರಿಪ್ರಸಾದ್ ಚೌರಾಸಿಯಾ ಜನನ.
- 1881 - ದೂರವಾಣಿಯಲ್ಲಿ ಮೊದಲ ಅಂತರರಾಷ್ಟ್ರೀಯ ಕರೆ ಮಾಡಲಾಯಿತು.
- 1997 - ದೇಶದ ಮೊದಲ ವಿಜ್ಞಾನ ನಗರವನ್ನು ಕೋಲ್ಕತ್ತಾದಲ್ಲಿ ಸ್ಥಾಪಿಸಲಾಯಿತು.
- ರಾಷ್ಟ್ರೀಯ ವೈದ್ಯರ ದಿನ

ಚಿತ್ರಸ್ಫೂರ್ತಿ

ಮಾವನ್ನು ಹಾಗೇ ತಿನ್ನದಿರಿ!

• ನಾರಾಯಣಸ್ವಾಮಿ ಸಿ.ಎಸ್

ಬಗೆ ಬಗೆಯ ಮಾವಿನ ಹಣ್ಣುಗಳು ಮಾರುಕಟ್ಟೆಗೆ ಬಂದಿವೆ. ಆ ಹಣ್ಣು ನಾಲಿಗೆಯಲ್ಲಿ ನೀರೂರಿಸುವಂತಿದ್ದರೂ, ಹಾಗೆಯೇ ಬಾಯಿಗೆ ಹಾಕಿಕೊಂಡರೆ, ಅನಾರೋಗ್ಯಕ್ಕೆ ಈಡಾಗುವುದಂತೂ ಖಚಿತ. ಅದಕ್ಕೋಸ್ಕರ ಮಾವಿನ ಹಣ್ಣನ್ನು ಕತ್ತರಿಸುವ ಮೊದಲು ಕೇವಲ ತೊಳೆಯುವ ಮೊದಲು, ನೀರಿನಲ್ಲಿ ನೆನೆಹಾಕಿ. ಮಾವಿನ ಹಣ್ಣುಗಳು ಫೈಟಿಕ್ ಆಮ್ಲ ಎಂದು ಕರೆಯಲ್ಪಡುವ ನೈಸರ್ಗಿಕ ಅಣುವನ್ನು ಹೊಂದಿರುತ್ತವೆ. ಇದು ಹಲವಾರು ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳಲ್ಲಿ ಕಂಡುಬರುತ್ತದೆ. ಆದ್ದರಿಂದ, ಮಾವಿನಹಣ್ಣನ್ನು ಕೆಲವು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿದಾಗ, ದೇಹದಲ್ಲಿ ಶಾಖವನ್ನು ಉಂಟು ಮಾಡುವ ಹೆಚ್ಚುವರಿ ಫೈಟಿಕ್ ಆಮ್ಲವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಕೆಲವರಿಗೆ ಮಾವಿನ ಹಣ್ಣು

ತಿಂದಾಗ ತಲೆನೋವು, ಮಲಬದ್ಧತೆ ಸಮಸ್ಯೆ ಉಂಟಾಗುವುದು, ಈ ರೀತಿ ನೀರಿನಲ್ಲಿ ನೆನೆಹಾಕಿ ಮಾವಿನ ಹಣ್ಣು ತಿನ್ನುವುದರಿಂದ ಆ ಸಮಸ್ಯೆ ಉಂಟಾಗುವುದಿಲ್ಲ. ರಾಸಾಯನಿಕಗಳನ್ನು ಹೋಗಲಾಡಿಸುತ್ತದೆ.

ಫಲಾಮೃತ

ರಾಸಾಯನಿಕದ ಬಳಕೆ ತಿಳಿಯುವುದು ಹೇಗೆ?

ನೋಡಿದಾಗ ಆಕರ್ಷಕ ಬಣ್ಣದಿಂದ ಕಾಣಿಸುತ್ತದೆ. ನೋಡಿದರೆ ಹಣ್ಣಾಗಿದೆ ಎಂದು ತೋರುತ್ತದೆ. ಆದರೆ ನೀವು ಅದರ ತೊಟ್ಟು ನೋಡಿ ತಿಳಿಯಬಹುದು. ನೈಸರ್ಗಿಕವಾಗಿ ಹಣ್ಣಾಗಿದ್ದರೆ ಮೊದಲು ತೊಟ್ಟಿನ ಭಾಗ ಹಣ್ಣಾಗುವುದು, ಬಣ್ಣ ಬದಲಾಗುವುದು. ಹಣ್ಣಿನ ರುಚಿ ನೋಡಿಯೂ ತಿಳಿಯಬಹುದು. ಮಾವಿನ ಹಣ್ಣು ನೈಸರ್ಗಿಕವಾಗಿ ಹಣ್ಣಾದರೆ ಅದರ ರುಚಿ ತುಂಬಾ ಚೆನ್ನಾಗಿರಲಿದೆ. ಆದರೆ ಈ ರೀತಿ ರಾಸಾಯನಿಕ ಹಾಕಿದ ಹಣ್ಣು ತುಂಬಾ ಹುಳಿ-ಹುಳಿ ಇರುತ್ತದೆ. ಅಲ್ಲದೆ ರಸವೂ ಕಡಿಮೆ ಇರುತ್ತದೆ.

ಇನ್ನು ನಮ್ಮದೇ ತೋಟದಲ್ಲಿರುವ ಮಾವಿನ ಗಿಡದಿಂದ ತಂದ ಮಾವಿನ ಹಣ್ಣಾದರೆ ಯಾವುದೇ ರಾಸಾಯನಿಕದ ಭಯವಿರುವುದಿಲ್ಲ. ಆದರೆ ಮಾರುಕಟ್ಟೆಯಿಂದ ತರುವ ಹಣ್ಣುಗಳಲ್ಲಿ ರಾಸಾಯನಿಕ ಬಳಸುವುದು ಸಾಮಾನ್ಯ. ಆದ್ದರಿಂದ ಮಾವಿನಹಣ್ಣುಗಳನ್ನು ಸ್ವಲ್ಪ ಹೊತ್ತು ನೀರಿನಲ್ಲಿ ನೆನೆಹಾಕಿದರೆ ರಾಸಾಯನಿಕ ಕೂಡ ಹೋಗಲಾಡಿಸಬಹುದು. ಮಾವಿನ ಹಣ್ಣು ಬೇಗನೆ ಹಣ್ಣಾಗಲಿ, ಆಕರ್ಷಕ ಬಣ್ಣದಲ್ಲಿ ಕಾಣಿಸಲಿ ಎಂದು ಕ್ಯಾಲ್ಸಿಯಂ ಕಾರ್ಬೈಡ್, ವಾಸ್ಪರ್ಸ್ ಹೈಡ್ರೈಡ್ ಈ ಬಗೆಯ ರಾಸಾಯನಿಕ ಬಳಸುತ್ತಾರೆ. ಇವುಗಳನ್ನು ತಿನ್ನುವುದರಿಂದ ಕ್ಯಾನ್ಸರ್‌ನಂಥ ಭಯಾನಕ ಕಾಯಿಲೆ ಬರಬಹುದು

‘ನಿಮ್ಮನ್ನು ಕಂಡುಕೊಳ್ಳಲು ಉತ್ತಮ ಮಾರ್ಗವೆಂದರೆ ಇತರರ ಸೇವೆಯಲ್ಲಿ ನಿಮ್ಮನ್ನು ಕಳೆದುಕೊಳ್ಳುವುದು.’

– ಮಹಾತ್ಮ ಗಾಂಧಿ

ವಿಶ್ವವಾಣಿ

ಆರಾಮ

@vishwavaninews

ಬೆಂಗಳೂರು
ಸೋಮವಾರ
01|07|2024

ಅನುದಿನವೂ ವಿರಾಮಕ್ಕೆ ಒಂದು ನೆಪ

ವೈದ್ಯೋ ನಾರಾಯಣೋ ಹರಿ...

ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಶುಭಾಶಯಗಳು

ಖುಷಿಯ ಯಶದ ರೂವಾರಿಗಳು

ಮೂವರು ವೈದ್ಯೆಯರ ಯಶೋಗಾಥೆ

ಮಹಿಳೆ ಇವತ್ತು ಕೇವಲ ತನ್ನ ಕುಟುಂಬಕ್ಕಷ್ಟೇ ಸೀಮಿತವಾಗಿಲ್ಲ. ಜತೆಗೆ ಸಮಾಜಕ್ಕೂ ತನ್ನದೇ ಆದ ಕೊಡುಗೆ ನೀಡುತ್ತಿದ್ದಾಳೆ. ವೈದ್ಯಲೋಕದಲ್ಲೂ ತನ್ನದೇ ಆದ ಛಾಪನ್ನು ಮೂಡಿಸುತ್ತಿದ್ದಾಳೆ. ಬೆಂಗಳೂರಿನ ಪ್ರತಿಷ್ಠಿತ ಆಸ್ಪತ್ರೆ ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ನಲ್ಲಿರುವ ಮೂವರು ಹಿರಿಯ ಮಹಿಳಾ ವೈದ್ಯೆಯರು ಇದಕ್ಕೆ ಸೂಕ್ತ ಉದಾಹರಣೆ. ಡಾ. ರಶ್ಮಿ ಯೋಗೀಶ್,

ಡಾ. ರೂಪಾ ರಾಜಶೇಖರ್, ಡಾ. ರೂಪಾ ವೆರ್ಣೇಕರ್ ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ.

ಡಾ. ರಶ್ಮಿ ಯೋಗೀಶ್

ಡಾ. ರಶ್ಮಿ ಯೋಗೀಶ್ ಅವರು ಅತ್ಯಂತ ಶ್ರಮಶೀಲ ಮತ್ತು ಪ್ರಾಮಾಣಿಕ ವೈದ್ಯೆಯಾಗಿದ್ದಾರೆ. ತಾಯಿಯಾಗಲು ಶ್ರಮಿಸುತ್ತಿರುವ ಪ್ರತಿಯೊಬ್ಬ ಹೆಣ್ಣಿಗೂ ಅವರು ಆಶಾಕಿರಣ. ಅವರ ಬೆಳಗು ಆರಂಭವಾಗುವುದು ಪ್ರಾರ್ಥನೆ ಮತ್ತು ವ್ಯಾಯಾಮದೊಂದಿದೆ. ಬೆಳಗ್ಗೆ ಏಳುಗಂಟೆಗೆ ತಮ್ಮ ಕಾಯಕವನ್ನು ಆರಂಭಿಸುತ್ತಾರೆ. ಹತ್ತು ಗಂಟೆಯವರೆಗೆ ನಿರಂತರವಾಗಿ ಶಸ್ತ್ರಚಿಕಿತ್ಸೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ನಂತರ ಅವರು ಮುಂದಿನ 12 ಗಂಟೆಗಳ ಕಾಲ ಹೊರರೋಗಿಗಳೊಂದಿಗೆ ಸಲಹೆ-ಸಂವಹನ ನಡೆಸುತ್ತಾರೆ. ಜತೆಗೆ ಸ್ವತಃ ತಾವೇ ಅಲ್ಟ್ರಾಸೌಂಡ್ ಸ್ಕ್ಯಾನ್‌ಗಳನ್ನು ಮಾಡಿ, ಅತ್ಯಂತ ಕಷ್ಟಕರವಾದ ಸಮಸ್ಯೆಗಳನ್ನು ಪತ್ತೆ ಹಚ್ಚಿ, ಅದಕ್ಕೆ ಸೂಕ್ತ ಚಿಕಿತ್ಸೆಯನ್ನೂ ನೀಡುತ್ತಾರೆ.

ಡಾ. ರಶ್ಮಿ ಯೋಗೀಶ್ ಅವರು ಐವಿಎಫ್, ಜೆನೆಟಿಕ್ಸ್, ರೀಪ್ರಡಕ್ಟಿವ್ ಎಂಡೋಕ್ರೈನಾಲಜಿ, ಲ್ಯಾಪರೊಸ್ಕೋಪಿ, ನೂವ್ಲೆವರ್ ಮೆಡಿಸಿನ್, ಅಲ್ಟ್ರಾಸೋನೋಗ್ರಫಿ ಮತ್ತು ರೊಬೊಟಿಕ್ ಲ್ಯಾಪರೊಸ್ಕೋಪಿಕ್ ಸರ್ಜರಿಗಳಲ್ಲಿ ತಮ್ಮ ಸುಧಾರಿತ ತರಬೇತಿಯನ್ನು ಪಡೆದಿದ್ದಾರೆ. ಹಾಗೆಯೇ ಇವುಗಳಲ್ಲಿ ಪರಿಪೂರ್ಣತೆಯನ್ನೂ ಸಾಧಿಸಿದ್ದಾರೆ. ಈಕೆ ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ನ ಸಂಸ್ಥಾಪಕರು ಮತ್ತು ಮುಖ್ಯ ವೈದ್ಯಕೀಯ ನಿರ್ದೇಶಕರು ಹೌದು. ಇವರು ಭಾರತ ಮತ್ತು ವಿದೇಶಗಳಲ್ಲಿ ಹಲವಾರು ಉನ್ನತ ದರ್ಜೆಯ ಆಸ್ಪತ್ರೆಗಳಲ್ಲಿ ಕೆಲಸ ಮಾಡಿರುವ ಅನುಭವವನ್ನು ಹೊಂದಿದ್ದಾರೆ. ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್, ಭಾರತದ ಅತ್ಯುತ್ತಮ ಐವಿಎಫ್ ಕೇಂದ್ರಗಳಲ್ಲಿ ಒಂದು ಎಂದು ಗುರುತಿಸಿಕೊಂಡಿರುವುದರ ಹಿಂದೆ ಇವರ ಶ್ರಮ ಮಹತ್ತರವಾದದ್ದು. ನಮ್ಮ ದೇಶವಷ್ಟೇ ಅಲ್ಲದೆ ವಿದೇಶಗಳಿಂದಲೂ ಮಾತೃತ್ವದ ಕನಸನ್ನು ನನಸಾಗಿಸಿಕೊಳ್ಳಲು ಇಲ್ಲಿಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ.

ಡಾ. ರಶ್ಮಿ ಅವರು 2018ರಲ್ಲಿ ಖುಷಿ ಫರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ನ್ನು ಆರಂಭಿಸುವ ಮೂಲಕ ಹೊಸದೊಂದು ಸಾಹಸದತ್ತ ದಿಟ್ಟ ಹೆಜ್ಜೆಯನ್ನು ಇಟ್ಟರು. ತಾವು ತುಂಬು ಗರ್ಭಿಣಿಯಾಗಿದ್ದ ಸಂದರ್ಭದಲ್ಲಿ ಈ ಸಂಸ್ಥೆ ಸ್ಥಾಪಿಸಿದ ಇವರು, ಮಹಿಳೆಯರು ತಮ್ಮ ಕುಟುಂಬದ ಕಾಳಜಿಯ ಜತೆಗೆ ವೃತ್ತಿಜೀವನದಲ್ಲೂ ಯಶಸ್ವಿಯಾಗಬಹುದು ಎನ್ನುವುದನ್ನು ಸಾಬೀತು ಪಡಿಸಿದರು. ಇದೀಗ ಅವರ ಮಗಳು ಮತ್ತು ಖುಷಿ ಐವಿಎಫ್ ಸೆಂಟರ್ ಇಬ್ಬರೂ ಒಂದೇ ವಯಸ್ಸಿನವರು. ಡಾ. ರಶ್ಮಿಯವರಿಗೆ ಇಂಜಿನಿಯರಿಂಗ್ ಓದುತ್ತಿರುವ ಒಬ್ಬ ಮಗ ಮತ್ತು ಒಂದನೇ ತರಗತಿಯಲ್ಲಿ ಓದುತ್ತಿರುವ ಮಗಳಿದ್ದು, ಖುಷಿಯನ್ನು ತನ್ನ ಮೂರನೇ ಮಗು ಎಂದೇ ಪರಿಗಣಿಸುತ್ತಾರೆ. ಆಕೆ ಮೂವರಿಗೂ ತಮ್ಮಿಂದಾದಷ್ಟು ನ್ಯಾಯ ಒದಗಿಸಲು ಪ್ರಯತ್ನಿಸುತ್ತಾರೆ. ಹಾಗೆಯೇ ಇವರ ಸಾಧನೆಗೆ ಪತಿ ಹಾಗೂ ತಾಯಿಯೂ ಬೆಂಬಲವಾಗಿ ನಿಂತಿದ್ದಾರೆ. ಇದರಿಂದಾಗಿ ತನ್ನ ಜೀವನ ಸುಲಭವಾಗಿದೆ ಎಂದು ಡಾ. ರಶ್ಮಿಯವರು ತನ್ನ ಕುಟುಂಬದ ಸಹಕಾರವನ್ನು ಸ್ಮರಿಸುತ್ತಾರೆ.

ಡಾ ರಶ್ಮಿಯವರ ಪತಿ ಡಾ.ಯೋಗೀಶ್ ವಿಜಯಕುಮಾರ್ ಅವರು ಯುಕೆಯಲ್ಲಿ ವೈದ್ಯಕೀಯ ತರಬೇತಿ ಪಡೆದಿದ್ದು, ಇದೀಗ ಮಣಿಪಾಲ್ ಗ್ರೂಪ್ ಆಫ್ ಹಾಸ್ಪಿಟಲ್‌ಗಳಲ್ಲಿ ಮೊಣಕಾಲಿನ ಕೀಲು ಬದಲಿ ಶಸ್ತ್ರಚಿಕಿತ್ಸಕರಾಗಿದ್ದಾರೆ.

ಡಾ. ರಶ್ಮಿಯವರ ತಾಯಿ 88 ವರ್ಷ ವಯಸ್ಸಿನವರಾಗಿದ್ದರೂ, ಆರೋಗ್ಯವಂತರಾಗಿದ್ದು, ಮನೆಯ ಸಂಪೂರ್ಣ ಜವಬ್ದಾರಿಯನ್ನು ನಿರ್ವಹಿಸುತ್ತಾರೆ. ಜತೆಗೆ ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ಗಳಲ್ಲಿ ಎಲ್ಲಾ ಉದ್ಯೋಗಿಗಳನ್ನು ನೋಡಿಕೊಳ್ಳುತ್ತಾರೆ. ವೈದ್ಯರ ಜೀವನವು ಒತ್ತಡದಿಂದ ಕೂಡಿರುತ್ತದೆ. ಈ ಸಂದರ್ಭದಲ್ಲಿ, ಮನೆಯಲ್ಲಿ ಬೆಂಬಲ ನೀಡುವ ಜನರಿದ್ದರೆ, ತನ್ನ ವೃತ್ತಿಯನ್ನು ಅದ್ಭುತವಾದ ಅನುಭವವನ್ನಾಗಿ ಮಾಡಬಹುದು ಎಂಬುದು ಡಾ. ರಶ್ಮಿಯವರ ಮನದಾಳದ ಮಾತು.

ಡಾ.ರೂಪಾ ರಾಜಶೇಖರ್

ಡಾ. ರೂಪಾ ರಾಜಶೇಖರ್ ಅವರು ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ಗಳ ಮತ್ತೊಂದು ಆಧಾರಸ್ತಂಭವಾಗಿದ್ದಾರೆ. ಇವರು ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ, ಫಲವತ್ತತೆ ತಜ್ಞೆ, ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸಕಿಯಾಗಿದ್ದಾರೆ. ಜತೆಗೆ ಸೌಂದರ್ಯವರ್ಧಕ ಸ್ತ್ರೀರೋಗ ಶಾಸ್ತ್ರ ಮತ್ತು ಸೌಂದರ್ಯ ವೈದ್ಯಶಾಸ್ತ್ರದಲ್ಲಿ ಪರಿಣಿತರು. ಈ ಎಲ್ಲಾ ಕ್ಷೇತ್ರಗಳಿಗೆ ಬೇಕಾದ ಕೌಶಲ್ಯಗಳನ್ನು ಕರಗತ ಮಾಡಿಕೊಂಡಿದ್ದಾರೆ. ತುಂಬಾ ನುರಿತ ವೈದ್ಯೆಯಾಗಿರುವ ಇವರು, ಯುವ ಜನತೆಗೆ ಸ್ಪೂರ್ತಿ. ತಾನು ಹಿರಿಯ ವೈದ್ಯೆಯೆಂಬ ಅಹಂನ್ನು ಎಲ್ಲೂ ತೋರಿಸದೆ, ಎಲ್ಲರೊಳಗೆ ಒಂದಾಗಿ ಬೆರೆಯುತ್ತಾರೆ. ಕುಟುಂಬ ಜೀವನದಲ್ಲಿ ಯಶಸ್ವಿ ತಾಯಿಯೆನಿಸಿಕೊಂಡಿರುವ ಈಕೆ, ಒಬ್ಬ ಪ್ರತಿಭಾನ್ವಿತ ಮಗಳ ತಾಯಿ. ಡಾ. ರೂಪಾ ರಾಜಶೇಖರ್ ಪುತ್ರಿ, ಎಂಬಿಬಿಎಸ್ ಹಾಗೂ ಎಂಡಿಯಲ್ಲಿ ಉಚಿತ ಸೀಟನ್ನು ಪಡೆದುಕೊಂಡಿದ್ದು ಈಗ, ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಜನರಲ್ ಮೆಡಿಸಿನ್‌ನಲ್ಲಿ ಎಂಡಿ ಮಾಡುತ್ತಿದ್ದಾರೆ. ಡಾ. ರೂಪಾ ಅವರ ಸಾಧನೆಗೆ ಅವರ ಪತಿ ಡಾ.ಶೈಲೇಂದ್ರ ಹಾಗೂ ತಂದೆ ಬೆನ್ನಾಗಿ ನಿಂತು, ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ.

ಹೆಣ್ಣು ಅಬಲೆಯಲ್ಲ ಸಬಲೆ ಅನ್ನುವುದನ್ನು ವಿವಿಧ ರೀತಿಯಲ್ಲಿ ನಿರೂಪಿಸುತ್ತಲೇ ಬಂದಿದ್ದಾಳೆ. ತನ್ನ ಕುಟುಂಬವನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಳಜಿ ವಹಿಸುವ ವಾತ್ಸಲ್ಯಮಯಿ, ಇದೀಗ ವೈದ್ಯೆಯೆಂಬ ಹುದ್ದೆಯ ಮೂಲಕ ಸಮಾಜವನ್ನೂ ಪೊರೆಯುತ್ತಿದ್ದಾಳೆ. ಕುಟುಂಬ ಹಾಗೂ ವೃತ್ತಿ ಜೀವನ ಎರಡನ್ನೂ ಸರಿದೂಗಿಸಿಕೊಂಡು, ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿರುವ ಮಹಿಳಾ ವೈದ್ಯಯರನ್ನು, ವೈದ್ಯರ ದಿನದಂದು ಪರಿಚಯಿಸುತ್ತಿದ್ದೇವೆ. ಇದು ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ನ ಮೂವರು ಹಿರಿಯ ವೈದ್ಯೆಯರ ಯಶಸ್ಸಿನ ಕತೆ.

ಡಾ.ರೂಪ ವೆರ್ಣೇಕರ್

ಡಾ. ರೂಪ ವೆರ್ನೆಕರ್ ಹಿರಿಯ ಒಬಿಜಿ ಸಲಹೆಗಾರ್ತಿ, ಫಲವತ್ತತೆ ತಜ್ಞೆ ಮತ್ತು ಸೌಂದರ್ಯವರ್ಧಕ ಸ್ತ್ರೀರೋಗ ತಜ್ಞೆಯಾಗಿದ್ದು, ಹಗಲಿನ ವೇಳೆಯಲ್ಲಿ ಖುಷಿ ಐವಿಎಫ್‌ನಲ್ಲಿ ಮತ್ತು ಸಾಯಂಕಾಲ ಅರಿಕೆರೆಯಲ್ಲಿರುವ ಸ್ವಂತ ಚಿಕಿತ್ಸಾಲಯದಲ್ಲಿ ಇಂದಿನ ಸ್ತ್ರೀರೋಗ ಸಮಸ್ಯೆಗಳಿಗೆ ಚಿಕಿತ್ಸೆ ನೀಡುತ್ತಾರೆ. ಮಹಿಳೆಯರ ಸಮಸ್ಯೆಗಳಿಗೆ ಕಿವಿಯಾಗಿ ಅವರಿಗೆ ಸಹಾಯ ಮಾಡುವಲ್ಲಿ ಅಪಾರ ಆಸಕ್ತಿಯನ್ನು ಹೊಂದಿ ದ್ದಾರೆ. ಜತೆಗೆ ಖುಷಿಯಲ್ಲಿರುವ ಎಲ್ಲಾ ಉದ್ಯೋಗಿಗಳಿಗೆ, ಉತ್ತಮ ಬೆಂಬಲವನ್ನೂ ನೀಡುತ್ತಿದ್ದಾರೆ. ಇವರಿಗೆ ಯುಕೆಯ ಪ್ರತಿಷ್ಠಿತ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮಾಡುತ್ತಿರುವ ಒಬ್ಬ ಪುತ್ರನಿದ್ದಾನೆ. ಇವರು ತನ್ನ ಎಲ್ಲಾ ಯಶಸ್ಸಿಗೆ, ಉದ್ಯಮಿಯಾಗಿರುವ ಪತಿ ಸೂರಜ್ ಹಾಗೂ ಅತ್ತೆ ಮಾವ ಕಾರಣವೆಂದು ಅವರ ಬೆಂಬಲವನ್ನು ನೆನೆಯುತ್ತಾರೆ. ತಮ್ಮ ಕುಟುಂಬ ಹಾಗೂ ವೃತ್ತಿ ಜೀವನ ಎರಡನ್ನೂ ಸಮತೋಲನದಲ್ಲಿಟ್ಟುಕೊಳ್ಳುವ ವೈದ್ಯರು, ಎರಡೂ ಕಡೆ ಯಶಸ್ಸನ್ನು ಗಳಿಸುತ್ತಾರೆ ಎನ್ನುವುದು ಅವರ ಅನುಭವದ ಮಾತು. ಖುಷಿ ಪರ್ಟಿಲಿಟಿ ಮತ್ತು ಐವಿಎಫ್ ಸೆಂಟರ್‌ಗಳ ಯಶಸ್ಸು, ಖ್ಯಾತಿಯ ಹಿಂದೆ ಈ ಮೂವರು ಹಿರಿಯ ವೈದ್ಯೆಯರ ಪಾತ್ರ ಮಹತರ್ತವಾದದ್ದು. ಸಂಸ್ಥೆ ಮತ್ತು ಕುಟುಂಬ ಎರಡೂ ಕಡೆ ಸಂಬಂಧಗಳನ್ನು ಸುಂದರವಾಗಿ ಹೆಣೆಯುವ ಮೂಲಕ ತಮ್ಮ ಜೀವನದಲ್ಲೂ, ಈ ಮೂವರು ವೈದ್ಯೆಯರು ಖುಷಿಯನ್ನು ಕಂಡುಕೊಳ್ಳುತ್ತಿದ್ದಾರೆ.

ವಿಶಿಷ್ಟ ಸಾಧಕ ವೈದ್ಯ ಡಾ. ಅಮಿತ್ ಜೈನ್

ವೈದ್ಯರನ್ನು ಸಾಕ್ಷಾತ್ ಭಗವಂತನ ರೂಪವೆಂದೇ ಪರಿಗಣಿಸಲಾಗುತ್ತದೆ. ಜೀವವನ್ನೇ ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿ, ಜೀವನದ ದಿಕ್ಕನ್ನು ದೇವತೆಗಳಂತೆ ಬದಲಾಯಿಸಿ ಹೊಸ ಬದುಕನ್ನು ನೀಡುವವರೆ ವೈದ್ಯರು. ಹಾಗೆಯೇ ಇತ್ತೀಚಿನ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಕಂಡೂ ಕೇಳರಿಯದ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಒದಗಿಸುತ್ತಿದ್ದಾರೆ. ಬೆಂಗಳೂರು ಮೂಲದ ಶಸ್ತ್ರಚಿಕಿತ್ಸಕ ಡಾ. ಅಮಿತ್ ಜೈನ್ ಇಂಥ ವೈದ್ಯರಲ್ಲಿ ಒಬ್ಬರೆಂದು ಗುರುತಿಸಿಕೊಂಡಿದ್ದಾರೆ.

ತಮ್ಮ ಚಿಕಿತ್ಸಾ ವಿಧಾನದ ಮೂಲಕ ವಿಶ್ವ ದಾಖಲೆಯನ್ನೆ ಸೃಷ್ಟಿಸಿದವರು ಡಾ. ಅಮಿತ್ ಜೈನ್. "ದಿ ಡಾಕ್ ವೂ ರಾಕ್ಡ್" ಎಂದೇ ಕರೆಯಲ್ಪಡುವ ಇವರು ಭಾರತದ ಆಧುನಿಕ ಮಧುಮೇಹ ಕಾಲಿನ ಶಸ್ತ್ರಚಿಕಿತ್ಸೆಯ ಮೂಲ ಸಂಸ್ಥಾಪಕರಾಗಿದ್ದಾರೆ. ಹಾಗೆಯೇ ಅವರ ಸಂಸ್ಥೆಯು ಅತ್ಯುನ್ನತ ಮೂಲ ಆವಿಷ್ಕಾರಗಳ ಕೇಂದ್ರವಾಗಿ ಹೊಸ ವಿಶ್ವ ದಾಖಲೆಯನ್ನು ಸ್ಥಾಪಿಸಿದೆ. ಜುಲೈ 1 ರಂದು ಆಚರಿಸಲ್ಪಡುವ ವೈದ್ಯರ ದಿನದಂದು ಅವರ ಮಹೋನ್ನತ ಸಾಧನೆಯನ್ನು ಗುರುತಿಸಿ ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಕಾಲಿನ ಮಧುಮೇಹಕ್ಕೆ ಯಶಸ್ವಿ ಚಿಕಿತ್ಸೆ :

ಡಾ. ಅಮಿತ್ ಜೈನ್ ಅವರು ತನ್ನ ವಿಶಿಷ್ಟ ಸಾಧನೆಯಿಂದಾಗಿ ಮಾನ್ಯತೆ ಪಡೆದವರು, "ದಿ ಡಾಕ್ ವೂ ರಾಕ್ಡ್" ಎಂಬ ಹೆಸರಿನಿಂದ ಕರೆಯಲ್ಪಡುವ ಇವರಿಗೆ 2023ರಲ್ಲಿ ಇಂಡಿಯಾ ಪ್ರೌಡ್ ಅವಾರ್ಡ್ಸ್ ಅನ್ನು ನೀಡಿ ಗೌರವಿಸಲಾಗಿದ್ದು, ಚಾಮರಾಜಪೇಟೆಯಲ್ಲಿರುವ ಬೃಂದಾವನ್ ಏರಿಯಾನ್ ಆಸ್ಪತ್ರೆಯ ಅಮಿತ್ ಜೈನ್ ಇನ್ಸ್‌ಟಿಟ್ಯೂಟ್ ಆಫ್ ಡಯಾಬಿಟಿಕ್ ಫೂಟ್ ಅಂಡ್ ವೂಂಡ್ ಕೇರ್‌ನಲ್ಲಿ ಹಿರಿಯ ಸಲಹೆಗಾರ ಹಾಗೂ ಶಸ್ತ್ರಚಿಕಿತ್ಸಕರಾಗಿರುವ ಇವರು, ವೈದ್ಯಕೀಯ ಲೋಕದಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಕಾಲಿನ ಮಧುಮೇಹದಿಂದ ಬಳಲುತ್ತಿರುವವರಿಗೆ ಯಶಸ್ವಿ ಚಿಕಿತ್ಸೆ ನೀಡುವ ಮೂಲಕ ಹೆಸರುವಾಸಿಯಾಗಿದ್ದಾರೆ.

ಸಾಧನೆಗೆ ಸಂದ ಪ್ರಶಸ್ತಿ ಗೌರವ:

ಡಾ. ಅಮಿತ್ ಜೈನ್ ಅವರು ವೈದ್ಯಕೀಯ ಕ್ಷೇತ್ರದಲ್ಲಿ ಕಾಲಿನ ಮಧುಮೇಹದ ತತ್ವ ಮತ್ತು ಅಧ್ಯಯನವನ್ನು ಮಾಡಿದ ಅತ್ಯಂತ ಕಿರಿಯ ವೈದ್ಯ ಎಂಬ ದಾಖಲೆಯನ್ನು ಕೂಡ ಹೊಂದಿದ್ದಾರೆ. ಇದಕ್ಕಾಗಿ ಅವರಿಗೆ ಕಾಲಿನ ಮಧುಮೇಹ ಕ್ಷೇತ್ರದ ಪಿತಾಮಹ ಎಂಬ ಪ್ರಸಿದ್ಧ ಬಿರುದನ್ನು ನೀಡಿ ಗೌರವಿಸಲಾಗಿದೆ. ಅಲ್ಲದೆ ಇವರ ಅಸಾಧಾರಣ ಸಾಧನೆಯು ವೈದ್ಯಕೀಯ ಕ್ಷೇತ್ರದಲ್ಲಿ ಗುರುತಿಸಲ್ಪಟ್ಟಿದೆ. ಅಷ್ಟೆ ಅಲ್ಲದೆ ವರ್ಲ್ಡ್ ರೆಕಾರ್ಡ್ಸ್ ಇಂಡಿಯನ್ ಬುಕ್ ಅಫ್ ರೆಕಾರ್ಡ್ಸ್, ವರ್ಲ್ಡ್ ರೆಕಾರ್ಡ್ ಇಂಡಿಯಾ, ಬೆಸ್ಟ್ ಆಫ್ ಇಂಡಿಯಾಸ್ ರೆಕಾರ್ಡ್, ವರ್ಲ್ಡ್ ರೆಕಾರ್ಡ್ ಬುಕ್ ಅಫ್ ಇಂಡಿಯಾ ಮತ್ತು ಇನ್ನೂ ಅನೇಕ ಪ್ರತಿಷ್ಠಿತ ದಾಖಲೆಗಳಲ್ಲಿ ಇವರ ಸಾಧನೆಯು ದಾಖಲಿಸಲ್ಪಟ್ಟಿದೆ. ಒಬ್ಬ ಶಸ್ತ್ರಚಿಕಿತ್ಸಕರಾಗಿ ಡಾ. ಜೈನ್ ಅವರ ಅಚಲವಾದ ಸಮರ್ಪಣೆ ಮತ್ತು ಅತ್ಯುತ್ತಮ ಸಾಧನೆ ಏಳು ವಿಶ್ವ ದಾಖಲೆಗಳ ಪಟ್ಟಿಯಲ್ಲಿ ಮೂಡಿರುವುದು ಅವರ ಯಶಸ್ಸಿನ ಹಿರಿಮೆಗೆ ಸಾಕ್ಷಿಯಾಗಿದೆ. ಈ ವಿಶ್ವ ದಾಖಲೆಗಳಿಗಾಗಿ, 2023ರ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಮತ್ತು ಇಂಡಿಯನ್ ಫ್ರೌಡ್ ಅವಾರ್ಡ್‌ನಿಂದ ಪ್ರತಿಷ್ಠಿತ ಪ್ರೈಡ್ ಆಫ್ ಇಂಡಿಯಾ 2023 ನ್ನು ನೀಡಿ ಇವರನ್ನು ಗೌರವಿಸಲಾಯಿತು.

ಅಮಿತ್ ಜೈನ್ ಅವರ ಇನ್ಸ್‌ಟಿಟ್ಯೂಟ್ ಆಫ್ ಡಯಾಬಿಟಿಕ್ ಫೂಟ್ ಸಂಸ್ಥೆಯು ವೈದ್ಯಕೀಯ ಚಿಕಿತ್ಸಾ ಕ್ಷೇತ್ರದಲ್ಲಿ ಹೊಸ ರೀತಿಯ ವಿಶ್ವ ದಾಖಲೆಯನ್ನು ಸೃಷ್ಟಿಸಿದೆ. ಈ ಮೂಲಕ ಬೃಂದಾವನ್ ಏರಿಯಾನ್ ಆಸ್ಪತ್ರೆಯಲ್ಲಿರುವ ಅಮಿತ್ ಜೈನ್ ಅವರ ಡಯಾಬಿಟಿಕ್ ಫೂಟ್ ಮತ್ತು ವೂಂಡ್ ಕೇರ್ ಇನ್ಸಿಟ್ಯೂಟ್ ಪ್ರಪಂಚದಾದ್ಯಂತ ಹೆಸರು ಮಾಡಿದೆ. ಡಾ. ಜೈನ್ ಅವರ ಕ್ರಾಂತಿಕಾರಿ ಕೆಲಸ ಮತ್ತು ಅವರ ಸಮಾಜಿಕ ಲೋಕೋಪಕಾರಿ ಕಾರ್ಯದಿಂದಾಗಿ ಕಾಲಿನ ಮಧುಮೇಹದಂತಹ ನಿರ್ಲಕ್ಷಿತ ಕ್ಷೇತ್ರದ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಗಿದೆ. ಇವರ ಸಂಸ್ಥೆ ನಾವಿನ್ಯತೆ ಮತ್ತು ಶ್ರೇಷ್ಠತೆಗೆ ಸಾಕ್ಷಿಯಾಗಿದೆ.

ವೈದ್ಯರು ವಿಶೇಷವಾಗಿ, ಮಹಿಳೆಯರು ಕೆಲಸ ಮತ್ತು ಕೌಟುಂಬಿಕ ಜೀವನ ಎರಡನ್ನೂ ಸಮತೋಲನಗೊಳಿಸಬೇಕು. ಒಬ್ಬ ಮಹಿಳಾ ವೈದ್ಯೆಯು ತನ್ನ ಕೆಲಸ ಮತ್ತು ವೃತ್ತಿಯಲ್ಲಿ ಯಶಸ್ವಿಯಾದರೆ ಅದಕ್ಕೆ ಕಾರಣ ಅವರ ಕುಟುಂಬದ ನಿರಂತರ ಬೆಂಬಲ. ಆದ್ದರಿಂದ ಈ ವೈದ್ಯರ ದಿನದಂದು, ನಾವು ವೈದ್ಯರಿಗೆ ಮಾತ್ರವಲ್ಲದೆ ಅವರ ಕುಟುಂಬಗಳಿಗೂ ವಂದಿಸಬೇಕು. ಏಕೆಂದರೆ ಪ್ರತಿ ಕ್ಷಣ ಜೀವಗಳನ್ನು ಉಳಿಸಲಾಗುತ್ತಿದೆ, ವೈದ್ಯರ ಕುಟುಂಬದ ಸಹಕಾರದೊಂದಿಗೆ ಜೀವಗಳನ್ನು ಉಳಿಸುವಲ್ಲಿ ಪ್ರತಿ ಕ್ಷಣ ಮತ್ತೊಂದು ಕುಟುಂಬಕ್ಕೆ ಸಂತೋಷವನ್ನು ಸೃಷ್ಟಿಸುವುದಕ್ಕೆ ಕಾರಣವಾಗಿದೆ.

– ಡಾ.ರಶ್ಮಿ ಯೋಗೀಶ್, ಖುಷಿ ಫರ್ಟಿಲಿಟಿ -ಐವಿಎಫ್ ಸೆಂಟರ್‌ನ ಸಂಸ್ಥಾಪಕ ನಿರ್ದೇಶಕಿ, ಮುಖ್ಯ ಐವಿಎಫ್ ಸಮಾಲೋಚಕಿ

ಸಂಪರ್ಕ: 9008692449

ವಿಶ್ವ ವೈದ್ಯರ ದಿನಾಚರಣೆಯ ಶುಭಾಶಯಗಳು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತುಮಕೂರು

ಎನ್.ಹೆಚ್.ಎಂ. ಅಡಿಯಲ್ಲಿ

ಡೆಂಗಿ ಜ್ವರ ಮತ್ತು ಚಿಕುಂಗುನ್ಯ ತಡೆ ಕಾರ್ಯಕ್ರಮ

ಡೆಂಗಿ ಜ್ವರ ಮತ್ತು ಚಿಕುಂಗುನ್ಯ ತಡೆಗಟ್ಟಲು ಸಾರ್ವಜನಿಕರು ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳು

ಡೆಂಗಿ ಜ್ವರ: ಸೋಂಕಿತ ಈಡಿಸ್ ಸೊಳ್ಳೆ ಕಚ್ಚುವುದರಿಂದ ಡೆಂಗಿ ಜ್ವರವು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಈಡಿಸ್ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ. ಸೊಳ್ಳೆ ಕಚ್ಚಿದ 5-7 ದಿನಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. **ರೋಗ ಲಕ್ಷಣಗಳು:** ಇದ್ದಕ್ಕಿದಂತೆ ವಿಪರೀತ ಜ್ವರ, ಕಣ್ಣಿನ ಗುಡ್ಡೆಗಳ ಹಿಂಭಾಗದಲ್ಲಿ ನೋವು, ತೀವ್ರ ತಲೆನೋವು, ಮೈಕೈ & ಕೀಲು ನೋವು, ವಾಕರಿಕೆ ವಾಂತಿ, ಇವುಗಳ ಜೊತೆಗೆ *ತೀವ್ರ ಹೊಟ್ಟೆ ನೋವು, *ಬಾಯಿ, ಮೂಗು & ವಸಡುಗಳಲ್ಲಿ ರಕ್ತಸ್ರಾವದ ಗುರುತುಗಳು, *ಚರ್ಮದ ಮೇಲೆ ಅಲ್ಲಲ್ಲಿ ಕೆಂಪಾದ ಗಂಧೆಗಳು/ರಕ್ತಸ್ರಾವದ ಗುರುತುಗಳು, *ಕಪ್ಪು ಬಣ್ಣದ ಮಲ ವಿಸರ್ಜನೆ, *ವಿಪರೀತ ಬಾಯಾರಿಕೆ, *ತಣ್ಣನೆಯ ಬಿಳಿಚಿದ ಚರ್ಮ, *ಜ್ಞಾನ ತಪ್ಪುವುದು, *ರಕ್ತದ ಒತ್ತಡದ ಕುಸಿತ & ನಾಡಿ ಬಡಿತದ ಕುಸಿತ-ಇವು ಡೆಂಗಿ ರಕ್ತಸ್ರಾವ ಜ್ವರ & ಡೆಂಗಿ ಆಘಾತ ಜ್ವರದ ಲಕ್ಷಣಗಳು. ಡೆಂಗಿ ಜ್ವರಕ್ಕೆ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ. ಆದರೆ, ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆಯನ್ನು ಪಡೆಯದಿದ್ದಲ್ಲಿ ರೋಗ ಲಕ್ಷಣಗಳು ಉಲ್ಬಣಗೊಂಡು ಡೆಂಗಿ ರಕ್ತ ಸ್ರಾವ ಜ್ವರ (Dengue Hemorrhagic Fever-DHF) ಹಾಗೂ ಡೆಂಗಿ ಆಘಾತ ಜ್ವರ (Dengue Shock Syndrome-DSS) ದಿಂದ ಸಾವು ಸಂಭವಿಸಬಹುದು. ಆದ್ದರಿಂದ ಡೆಂಗಿ ಜ್ವರದ ಲಕ್ಷಣಗಳು ಕಂಡುಬಂದ ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ತೆರಳಿ ಸೂಕ್ತ ಚಿಕಿತ್ಸೆಯನ್ನು ಪಡೆಯಬೇಕು.

ಚಿಕನ್‌ಗುನ್ಯ: ಸೋಂಕಿತ ಈಡಿಸ್ ಜಾತಿಯ ಸೊಳ್ಳೆಗಳು ಕಚ್ಚುವುದರಿಂದ ಚಿಕುಂಗುನ್ಯ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಆದರೆ ಚಿಕುಂಗುನ್ಯ ಮಾರಣಾಂತಿಕವಲ್ಲ. **ರೋಗದ ಲಕ್ಷಣಗಳು:** ಇದ್ದಕ್ಕಿದ್ದಂತೆ ಜ್ವರ, ಕೀಲುಗಳಲ್ಲಿ ತೀವ್ರವಾದ ನೋವು ಮತ್ತು ಊತ ಕಾಣಿಸಿಕೊಳ್ಳುವುದು. ಚಿಕುಂಗುನ್ಯ ಸೋಂಕಿಗೆ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ. ಆದರೆ, ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ನೀಡಲಾಗುತ್ತದೆ. ಆದ್ದರಿಂದ, ಯಾವುದೇ ಜ್ವರವಿರಲಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯಬೇಕು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ರಕ್ತಪರೀಕ್ಷೆ ಹಾಗೂ ಚಿಕಿತ್ಸೆಯನ್ನು ಮಾಡಲಾಗುವುದು. **ಈಡಿಸ್ ಸೊಳೆಗಳ ಉತ್ಪತ್ತಿ ತಾಣಗಳು:** ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುವ ಈಡಿಸ್ ಸೊಳ್ಳೆಗಳು ಮನೆಗಳಲ್ಲಿನ ನೀರು ಶೇಖರಣಾ ಸಂಗ್ರಾಹಕಗಳಾದ, ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್, ಡ್ರಂ, ಹೂ ಕುಂಡಗಳ ಕೆಳಗಿನ ತಟ್ಟೆಗಳು, ಏರ್-ಕೂಲರ್, ರೆಫ್ರಿಜರೇಟರಿನ De-frost Tray ಗಳಲ್ಲಿ ಹಾಗೂ ಮನೆಯ ಸುತ್ತ-ಮುತ್ತಲಿನ ಪರಿಸರದಲ್ಲಿ ಬಿಸಾಡಿದ ಒಡೆದ ಬಾಟಲಿ, ಟೈರು, ಪ್ಲಾಸ್ಟಿಕ್ ಗ್ಲಾಸ್, ಎಳೆನೀರಿನ ಚಿಪ್ಪು ಹಾಗೂ ಇತರ ಘನತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾದ ಮಳೆಯ ನೀರಿನಲ್ಲಿ ಈಡಿಸ್ ಸೊಳ್ಳೆಗಳು ಹೇರಳವಾಗಿ ಉತ್ಪತ್ತಿಯಾಗುತ್ತವೆ. ಆದ್ದರಿಂದ,



ಮಾಡಬೇಕಾದ್ದು: 1) ಮನೆಯಲ್ಲಿರುವ ಎಲ್ಲಾ ನೀರಿನ ಸಂಗ್ರಾಹಕಗಳು ಮತ್ತು ಮೇಲ್ಚಾವಣಿಯಲ್ಲಿರುವ ತೊಟ್ಟಿಯ ನೀರನ್ನು ಕನಿಷ್ಠ ವಾರಕ್ಕೊಮ್ಮೆ ಖಾಲಿ ಮಾಡಿ, ಉಜ್ಜಿ ತೊಳೆದು, ಒಣಗಿಸಿ ನೀರನ್ನು ಮತ್ತೆ ತುಂಬಿಸಿ ಭದ್ರವಾಗಿ ಮುಚ್ಚಳಿಕೆಯಿಂದ ಮುಚ್ಚುವುದು. 2) ಮನೆಯ ಸುತ್ತ-ಮುತ್ತಲಿನ ಪರಿಸರದಲ್ಲಿನ ಒಡೆದ ಬಾಟಲಿ, ಟಿನ್, ಟೈರು ಇತ್ಯಾದಿ ಘನತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರವಹಿಸುವುದು. ಘನತ್ಯಾಜ್ಯ ವಸ್ತುಗಳನ್ನು ಬೋರಲಾಗಿಡುವುದು ಮತ್ತು ಶೀಘ್ರವಾಗಿ ಸೂಕ್ತ ವಿಲೇವಾರಿ ಮಾಡಬೇಕು. 3) ಏರ್ ಕೂಲರ್‌ಗಳಲ್ಲಿ ನೀರನ್ನು ಕನಿಷ್ಠ ವಾರಕ್ಕೊಮ್ಮೆ ಬದಲಾಯಿಸಬೇಕು. 4) ಯಾವಾಗಲೂ ಮೈ ತುಂಬಾ ಬಟ್ಟೆ ಧರಿಸಬೇಕು. 5) ಹಗಲು ಹೊತ್ತಿನಲ್ಲಿ ನಿದ್ರಿಸುವ / ವಿಶ್ರಾಂತಿ ಪಡೆಯುವ ಗರ್ಭಿಣಿಯರು, ಮಕ್ಕಳು ಮತ್ತು ವಯಸ್ಸಾದವರು ತಪ್ಪದೆ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು. 6) ಡೆಂಗಿ ಜ್ವರ ಪೀಡಿತರೂ ಸಹ ತಪ್ಪದೆ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು. 7) ಜ್ವರ ಪೀಡಿತರು ಸಾಕಷ್ಟು ದ್ರವರೂಪದ ಆಹಾರಗಳನ್ನು ಸೇವಿಸುವುದು ಹಾಗೂ ಅಗತ್ಯ ವಿಶ್ರಾಂತಿಯನ್ನು ಪಡೆಯಬೇಕು. 8) ಮನೆಯ ಕಿಟಕಿ ಬಾಗಿಲುಗಳಿಗೆ ಸೊಳ್ಳೆ ನಿರೋಧಕ ಜಾಲರಿಗಳನ್ನು ಅಳವಡಿಸಬೇಕು. ಈಡಿಸ್ ಲಾರ್ವಾ ಸಮೀಕ್ಷೆ ಹಾಗೂ ಉತ್ಪತ್ತಿತಾಣ ಸಮೀಕ್ಷೆಗೆಂದು ಮನೆ ಭೇಟಿ ನೀಡುವ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಆಶಾ ಸ್ವಯಂಸೇವಕರು ನೀಡುವ ಸಲಹೆ-ಸೂಚನೆಗಳನ್ನು ಪಾಲಿಸಿ.

ನೆನಪಿರಲಿ: ಶಾಲಾ-ಕಾಲೇಜು, ಅಂಗನವಾಡಿ, ಸರ್ಕಾರಿ/ಖಾಸಗಿ ಕಛೇರಿಗಳು, ಬಸ್ ಡಿಪೋ ಇತ್ಯಾದಿಗಳಲ್ಲಿಯೂ ಈಡಿಸ್ ಸೊಳ್ಳೆಯ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡುವುದು ಅಗತ್ಯವಾಗಿದೆ. **ಮಾಡಬಾರದ್ದು:** 1) ಡೆಂಗಿ ಜ್ವರದ ಲಕ್ಷಣಗಳು ಕಂಡು ಬಂದಲ್ಲಿ ಸ್ವಯಂ ವೈದ್ಯ ಪದ್ಧತಿಯನ್ನು ಪಾಲಿಸದೆ, ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯಿರಿ, 2) ಡೆಂಗಿ ಜ್ವರದ ಲಕ್ಷಣಗಳಿದ್ದಲ್ಲಿ ಬ್ರೂಫಿನ್ ಅಥವಾ ಇತರ ನೋವು ನಿವಾರಕಗಳನ್ನು ಸೇವಿಸಬಾರದು, ಇದರಿಂದ ರಕ್ತಸ್ರಾವವಾಗುವ ಸಾಧ್ಯತೆಗಳಿವೆ.

“ಡೆಂಗಿ ಜ್ವರ /ಚಿಕುಂಗುನ್ಯ ಬಗ್ಗೆ ಭಯ ಬೇಡ, ಆದರೆ ಎಚ್ಚರವಿರಲಿ”

ಪ್ರಕಟಣೆ: ಐ.ಇ.ಸಿ. ವಿಭಾಗ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತುಮಕೂರು